ಸಾಯಿಸುತೆ

# ಜನನೀ ಜನ್ಮಭೂಮಿ



894.814 308 3
SAI N97
ಗ್ರಂಥ ಸ್ವಾಮ್ಯ ವಿಭಾಗ

# ಜನನೀ ಜನ್ಮಭೂಮಿ

(ಸಾಮಾಜಿಕ ಕಾದಂಬರಿ)

**ಸಾಯಿಸುತೆ**

ಪ್ರಕಾಶಕರು:
**ವಾಸವಾಂಬ ಪ್ರಕಾಶನ**
ನಂ. 63, ಆರ್ಯನಗರ, ಸಾರಕ್ಕಿ ರಸ್ತೆ
**ಬೆಂಗಳೂರು 560 078**
(Phone: **6642996**)

META ENTERED

JANANEE JANMABHOOMI – a social novel by Smt. Saisuthe, I edn: March 1997; Published by Vasavamba Prakashana, No. 63, Aryanagar, Sarakki Road, Bangalore-78;
All rights reserved by the Authoress.
Pages: 200

ಪ್ರಥಮ ಮುದ್ರಣ: ಮಾರ್ಚ್ 1997
ಹಕ್ಕುಗಳು ಲೇಖಕಿಯದು.

83357 CR

ಅಧಿಕೃತ ಮಾರಾಟಗಾರರು:
**ಗೀತಾ ಏಜನ್ಸೀಸ್**
(ಸಗಟು ಪುಸ್ತಕ ವ್ಯಾಪಾರಿಗಳು)
ಬಳೇಪೇಟೆ ಚೌಕ, ಬೆಂಗಳೂರು – 53
(ದೂರವಾಣಿ: 2874226)

894.814 3C8

**ಬೆಲೆ: ರೂ. 50-00**

ಲಿಪಿ ಜೋಡಣೆ:
ಲೇಸರ್ ಲೈನ್ ಗ್ರಾಫಿಕ್ಸ್
ಬೆಂಗಳೂರು; Phone: 220 4008

ಮುದ್ರಣ:
ಜಗನ್ನಾಥ್ ಆಫ್‌ಸೆಟ್ ಪ್ರಿಂಟರ್ಸ್
ಸೌರಾಷ್ಟ್ರಪೇಟೆ, ಬೆಂಗಳೂರು 53

# ಎರಡು ಮಾತು

ಆತ್ಮೀಯ ಓದುಗರಲ್ಲಿ,

ಈ ಕಾದಂಬರಿ ಪ್ರಸಿದ್ಧ 'ಮಂಗಳ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಹರಿದು ಓದುಗರಿಂದ ಅಪಾರವಾದ ಮೆಚ್ಚುಗೆ ಹರಿದು ಬಂದಾಗ ದಿಗ್ಭ್ರಮೆಗೊಂಡಿದ್ದೆ. ಸೃಷ್ಟಿಯ ಮೂಲವಾದ ಹೆತ್ತವರ ಮತ್ತು ಮಗುವಿನ ಸಂಬಂಧ ಅತ್ಯಂತ ನೈಜವಾಗಿ ಮೂಡಿಬಂದಿದೆ. ರೂತ್ ನಾನೇ ಆಗಿದ್ದೆ. ಹರ್ಷಿಸಿದೆ, ಕಣ್ಣೀರಿಟ್ಟೆ. ನಂಗೂ ಹೆತ್ತವರ ಬಗ್ಗೆ ಗೊತ್ತಿಲ್ಲ. ಸಖೀಗೆ ಅಮ್ಮ ಸಿಕ್ಕಾಗ ನನಗೇ ಸಿಕ್ಕಷ್ಟು ಆನಂದಪಟ್ಟಿದ್ದೆ. ನಿಜವಾಗಿಯೂ ನನಗೆ ಅತ್ಯಂತ ಇಷ್ಟವಾದ ಕಾದಂಬರಿ. ನಾನು ಎಷ್ಟೋ ಸಲ ಅತ್ತಿದ್ದುಂಟು. ಓದಿದ್ದೇ ಓದಿದ್ದುಂಟು. ಇದನ್ನು ಬರೆದವರು ಒಬ್ಬ ಯುವ ಮಹಿಳಾ ಡಾಕ್ಟರ್. ಇಂಥ ಎಷ್ಟೋ ಪತ್ರಗಳಿಂದ ನನ್ನ ಲೆಟರ್ ಬಾಕ್ಸ್ ತುಂಬಿದಾಗ, ಸಾರ್ಥಕದ ಕಣ್ಣೀರನ್ನು ಹರಿಸಿದ್ದೆ.

ಈಗ ಈ ಕಾದಂಬರಿ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. 'ಮಂಗಳ'ದಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದ್ದ, ಆ ಪತ್ರಿಕೆಯ ಸಂಪಾದಕ ವರ್ಗದವರಿಗೂ, ಮುಖ್ಯವಾಗಿ ಶ್ರೀ ಬಾಬು ಕೃಷ್ಣಮೂರ್ತಿಯವರಿಗೂ, ಪ್ರಕಟಿಸುತ್ತಿರುವ ವಾಸವಾಂಬ ಪ್ರಕಾಶನದವರಿಗೂ, ಮುಖಚಿತ್ರ ಕಲಾವಿದರಾದ ಶ್ರೀ ಮೋನಪ್ಪನವರಿಗೂ ಮತ್ತು ಮುದ್ರಕರಾದ ಜಗನ್ನಾಥ್ ಆಫ್‌ಸೆಟ್ ಪ್ರಿಂಟರ್ಸ್‌ರವರಿಗೂ ನನ್ನ ವಂದನೆಗಳು.

ಧಾರಾವಾಹಿಯನ್ನು ಓದಿ ಪತ್ರ ಬರೆದ ಎಲ್ಲ ಓದುಗರಿಗೂ ಧನ್ಯವಾದಗಳು

**ಸಾಯಿಸುತೆ**

# ಸಾಯಿಸುತೆಯವರ ಕಾದಂಬರಿಗಳು

| | |
|---|---|
| ಪ್ರಿಯಸಖೀ | ಇಂದ್ರ ಧನಸ್ಸು |
| ನನ್ನ ಭಾವ ನಿನ್ನ ರಾಗ | ಅರುಣ ಕಿರಣ |
| ಶ್ಯಾನುಭೋಗರ ಮಗಳು | ಧವಳ ನಕ್ಷತ್ರ |
| ಸಪ್ತರಂಜನಿ | ಚಿರಬಾಂಧವ್ಯ |
| ಕೋಗಿಲೆ ಹಾಡಿತು | ಶುಭಮಿಲನ |
| ಕರಗಿದ ಕಾರ್ಮೋಡ | ಮಧುರಗಾನ |
| ಹೇಮಂತದ ಸೊಗಸು | ಕಾರ್ತೀಕದ ಸಂಜೆ |
| ರಾಧ ಮೋಹನಾ | ನಾಟ್ಯಸುಧಾ |
| ಬಣ್ಣದ ಚುಂಬಕ | ಮೂಡಿ ಬಂದ ಶಶಿ |
| ರಜತಾದ್ರಿಯ ಕನಸು | ಗಂಧರ್ವಗಿರಿ |
| ಶ್ರಾವಣ ಪೂರ್ಣಿಮ | ಬಿಳಿ ಮೋಡಗಳು |
| ಸುಮಧುರ ಸಂಗಮ | ಮಾನಸ ವೀಣಾ |
| ರಾಗ ಬೃಂದಾವನ | ಮುಗಿಲ ತಾರೆ |
| ಬೆಳದಿಂಗಳ ಚೆಲುವೆ | ಸ್ವಪ್ನ ಸಂಭ್ರಮ |
| ವಸಂತದ ಚಿಗುರು | ಶ್ವೇತ ಗುಲಾಬಿ |
| ಬಾಂದಳದ ನಕ್ಷತ್ರ | ಮಧುರ ಆರಾಧನ |
| ನೂರು ನೆನಪು | ಪಸರಿಸಿದ ಶ್ರೀಗಂಧ |
| ಭಾವ ಸರೋವರ | ಮೇಘವರ್ಷಿಣಿ |
| ಶ್ರೀರಸ್ತು ಶುಭಮಸ್ತು | ಮೌನ ಆಲಾಪನ |
| ಸ್ನೇಹ ಮಾಧುರಿ | ಆರಾಧಿತೆ |
| ಮಂಗಳ ದೀಪ | ನಿಶಾಂತ್ |
| ಇಬ್ಬನಿ ಕರಗಿತು | ಪಂಚವಟಿ |
| ಪೂರ್ಣೋದಯ | ಬಿರಿದ ನೈದಿಲೆ |
| ಪುಷ್ಕರಿಣಿ | ವಸುಂಧರ |

ಹೃದಯರಾಗ
ಜೀವನ ಸಂಧ್ಯ
ನಲಿದ ಸಿಂಧೂರ
ನಮ್ರತಾ
ಮಿಡಿದ ಶೃತಿ
ಸ್ವರ್ಣ ಮಂದಿರ
ಸುಮಧುರ ಭಾರತಿ
ಮಂದಾರ ಕುಸುಮ
ಸೊಬಗಿನ ಪ್ರಿಯದರ್ಶಿನಿ
ಪ್ರೇಮ ಸಾಫಲ್ಯ
ಮಮತೆಯ ಸಂಕೋಲೆ
ಮುಂಜಾನೆಯ ಮುಂಬೆಳಕು
ಹೊಂಬೆಳಕು
ಸುಪ್ರಭಾತದ ಹೊಂಗನಸು
ಚೈತ್ರದ ಕೋಗಿಲೆ
ಪ್ರೀತಿಯ ಹೂಬನ
ಬಾನು ಮಿನುಗಿತು
ಮಂಜಿನಲ್ಲಿ ಮಿಂದ ಪುಷ್ಪ
ಶರದೃತುವಿನ ಚಂದ್ರ
ಕಲ್ಯಾಣ ರೇಖೆ
ಅನುಬಂಧದ ಕಾರಂಜಿ
ಸಂಧ್ಯಾ ಗಗನ
ಮತ್ತೊಂದು ಬಾಡದ ಹೂ
ನಿಶೆಯಿಂದ ಉಷೆಗೆ
ಬಾಡದ ಹೂ
ವಿಧಿವಂಚಿತೆ
ಗಿರಿಧರ
ಮಿಂಚು
ಸಪ್ತಪದಿ
ನವಚೈತ್ರ
ಅಭಿಲಾಷ
ಡಾ।। ವಸುಧಾ
ಹಿಮಗಿರಿ ನವಿಲು
ವಿವಾಹ ಬಂಧನ
ಬೆಳ್ಳಿ ದೋಣಿ
ಅಮೃತ ಸಿಂಧು
ಸಮ್ಮಿಲನ

---

## ಮುಂದಿನ ಕಾದಂಬರಿಗಳು–

### *ಸ್ವರ್ಗದ ಹೂ*

*

### *ದಂತದ ಗೊಂಬೆ*

ಹೋಟಲ್ ಅಪ್ಪೋಲೋ ಇಂಟರ್‌ನ್ಯಾಷನಲ್‌ನಿಂದ ಹೊರ ಬಂದ ರೂತ್ ನಿಧಾನವಾಗಿ ನೋಟವನ್ನ ಮೇಲೆತ್ತಿದಾಗ ಕಪ್ಪನೆಯ ಮೋಡಗಳು ದಟ್ಟವಾಗಿ ವ್ಯಾಪಿಸಿಕೊಂಡು ವಾತಾವರಣವನ್ನು ಮಬ್ಬುಗೊಳಿಸಿದ್ದರೂ, ಅಲ್ಲಿಂದ ನೋಟವನ್ನು ಕೀಳಲಾರದೆ ಹೋದಳು. ಅಲ್ಲಿ ಕೂಡ ಹುಡುಕಾಟವಿತ್ತು. ಬಹುಶಃ ಅವಳ ಉದ್ದೇಶ ನೆರವೇರುವ ಹಾಗಿದ್ದರೇ, ಅಲ್ಲಿಗೆ ಕೂಡ ಹೋಗುತ್ತಿದ್ದಳು.

ಎಂದಿನಂತೆ ಅಮೆರಿಕನ್ ಶೈಲಿಯ ಪ್ಯಾಂಟು, ಶರಟು ಧರಿಸದೆ ಸಡಿಲವಾದ ಸೆಲ್ವಾರ್ ಕಮೀಜ್ ತೊಟ್ಟಿದ್ದು ಇಲ್ಲಿನ ಹವಾಮಾನಕ್ಕೆ ಹಾಯೆನಿಸಿತ್ತು. ಬಂದ ದಿನದಿಂದ ರಾಯ್ ಮನೆಗೆ ಹಲವು ಹತ್ತು ಸಲ ಫೋನ್ ಮಾಡಿದಾಗಲೂ ಒಂದೇ ಉತ್ತರ 'ಅವರು ಊರಿನಲ್ಲಿಲ್ಲ; ಎಂದು ಬರುತ್ತಾರೆಂದು ಗೊತ್ತಿಲ್ಲ'. ಈ ಸುದ್ದಿಯಿಂದ ವಿಚಲಿತಳಾಗಿದ್ದರೂ, ನಿರಾಶೆಗೊಂಡಿರಲಿಲ್ಲ.

ಟ್ಯಾಕ್ಸಿ ಹತ್ತಿದವಳು, ರಾಯ್ ಅವರ ವಿಳಾಸದ ಚೀಟಿಯನ್ನು ಟ್ಯಾಕ್ಸಿ ಡ್ರೈವರ್‌ಗೆ ಕೊಟ್ಟಳು. "ಅಲ್ಲಿಗೆ ತಲುಪಿಸಿ" ಅಮೆರಿಕನ್ ಶೈಲಿಯ ಇಂಗ್ಲಿಷ್‌ನಲ್ಲಿ ಹೇಳಿದಾಗ, ಚೀಟಿ ಮತ್ತು ರೂತ್‌ನ ಮುಖವನ್ನು ಬದಲಿಸಿ ಬದಲಿಸಿ ನೋಡಿ, ತೀರಾ ಹೊಸಬರೆಂದುಕೊಂಡು "ಯಸ್ ಮೇಡಮ್" ವಿಳಾಸದ ಚೀಟಿಯನ್ನು ಹಿಂದಿರುಗಿಸಿದ. ಬಹಳ ದೂರದ ಹಾದಿಯಲ್ಲ! ಯಾಕೋ ಈ ಯುವತಿ ಡಿಫರೆಂಟಾಗಿ ಕಂಡಳು. ಇದೇ ವೃತ್ತಿಯಾಗಿಸಿಕೊಂಡ ಟ್ಯಾಕ್ಸಿ ಡ್ರೈವರ್ ಎಷ್ಟೋ ಪ್ರಯಾಣಿಕರನ್ನ ಕಂಡಿದ್ದ. ಅದರಲ್ಲಿ ಬೆರಳೆಣಿಕೆಯಷ್ಟು ಜನ ನೆನಪಿನಲ್ಲಿ ಉಳಿದಿದ್ದರು, ತಮ್ಮ ವಿಶಿಷ್ಟವಾದ ಗುಣ, ಸ್ವಭಾವಗಳಿಂದ.

ಒಂದು ಕಡೆ ಟ್ಯಾಕ್ಸಿ ಕೆಟ್ಟು ನಿಂತಾಗ ಮುಜುಗರದಿಂದಲೇ ಇಳಿದ "ಸಾರಿ ಮೇಡಮ್, ಬರೀ ಐದು ನಿಮಿಷ" ಕೆಳಗೆ ಇಳಿದ ಐದು, ಹತ್ತು, ಹದಿನೈದು ನಿಮಿಷದಲ್ಲಿ ಕೂಡ ಸರಿ ಮಾಡಲಾಗದಾಗ ಕೈಗೆ ಅಂಟಿದ

ಆಯಿಲ್, ಮಸಿಯನ್ನು ಬಟ್ಟೆಗೊರೆಸಿಕೊಳ್ಳುತ್ತ ಬಂದವನು "ಎಕ್ಸ್‌ಕ್ಯೂಜ್ ಮಿ, ಮೇಡಮ್.... ಪೆಟ್ರೋಲ್ ಸರ್ಯಾಗಿ ಸಪ್ಲೈ ಆಗ್ತಾ ಇಲ್ಲ" ಹೇಳಿದ ಸಂಕೋಚದಿಂದ. ಅವನಿಗೆ ಟ್ಯಾಕ್ಸಿಯ ಬಗ್ಗೆ ವಿಪರೀತ ಮುತುವರ್ಜಿ. ಮನೆಗೆ ಸಂಜೆ ಗಾಡಿ ಒಯ್ಯುವಾಗಲೇ ಒಮ್ಮೆ ಮೆಕ್ಯಾನಿಕ್ ಬಳಿ ಒಯ್ಯುವುದು ಅವನ ರೂಢಿ.

"ದಟ್ಸ್ ಒಕೇ, ಆ ವಿಳಾಸದ ಮನೆ ತುಂಬ ದೂರಾನ?" ಕೇಳಗಿಳಿಸಿದಾಗ ರೂತ್ "ನೋ, ಮೇಡಮ್... ಇಲ್ಲೇ ಹತ್ತಿರದಲ್ಲಿ. ನೀವು ಅಲ್ಲೀವರ್ಗೂ ನಡ್ಯಬೇಕಲ್ಲ, ಅನ್ನೋ ಪೇಚಾಟ." ಬಹಳ ಮುಜುಗರದಿಂದ ಹೇಳಿದ. ತೀರಾ ಸರಳ ಮನುಷ್ಯ. ತನ್ನಿಂದ ಆಕೆಗೆ ತೊಂದರೆಯಲ್ಲ, ಎನ್ನುವ ಸಂಕೋಚ.

"ಬೇಡ, ನಂಗೆ ಮನೆ ತೋರಿಸಿದ್ರಾಯ್ತು!" ಪರ್ಸ್ ತೆಗೆದು ನೂರರ ನೋಟನ್ನ ಅವನ ಮುಂದೆ ಹಿಡಿದಾಗ ಮೀಟರ್ ನೋಡಿ ಮಿಕ್ಕಿದ್ದನ್ನ ಹಿಂದಿರುಗಿಸಿದಾಗ "ನೋ, ನೀನೇ ಇಟ್ಕೋ" ನಿರಾಕರಿಸಿದಳು.

ಭಾರತೀಯಳಾಗಿ ಕಂಡರೂ ಮಾತಿನ ರೀತಿ, ನಡಿಗೆಯಿಂದ ವಿದೇಶೀಯತೆಯನ್ನು ಗುರುತಿಸಬಹುದಿತ್ತು. ಪ್ರಾಮಾಣಿಕವಾಗಿ ಅವಳ ಜೊತೆಯಲ್ಲಿ ಬಂದು ಮನೆಯಲ್ಲಿ ಹುಡುಕಿ ಕೊಟ್ಟ.

"ಥ್ಯಾಂಕ್ಯು...." ಹೇಳಿದಳು ಕೃತಜ್ಞತೆಯಿಂದ. ನೋಟದಲ್ಲಿ ಸಹೃದತೆಯಿತ್ತು. ಅಚ್ಚರಿಯಿಂದ ತಬ್ಬಿಬ್ಬಾದ. ಅವನು ಕಂಡ ಪ್ರಯಾಣಿಕರಿಗಿಂತ ವಿಭಿನ್ನವಾಗಿ ಕಂಡಳು.

ಎತ್ತರದ ಗೇಟು, ಸ್ವಲ್ಪ ಹಳೆಯ ಮಾದರಿಯದು. ವಾಚ್‌ಮನ್ ಯಾರಾದರೂ ಇರಬಹುದೇನೋ ಎಂದು ನೋಟವರಿಸಿ ತಾನೇ ಗೇಟನ್ನು ಸರಿಸಿ ಒಳಗೆ ಅಡಿಯಿಟ್ಟಳು. ದೊಡ್ಡ ದೊಡ್ಡ ಮರಗಳ ಜೊತೆ, ಅಲಂಕಾರಿಕ ಗಿಡಗಳು ಕೂಡ ಇದ್ದವು. ಅಮೆರಿಕಾ ರೀತಿಯ ಕಟ್ಟಡವಲ್ಲ, ಅಚ್ಚ ಭಾರತೀಯ ವಿನ್ಯಾಸದ ಮನೆ.

ಹೆಂಚು ಹೊದಿಸಿದ್ದ ಹಳೆಯ ಶ್ರೀಮಂತ ಮನೆಯೇ. ಕಾಂಪೌಂಡ್‌ನ ನೆಲಕ್ಕಿಂತ ತುಸು ಎತ್ತರಕ್ಕೆ ಅಂದರೆ ಒಂಬತ್ತು ಮೆಟ್ಟಲನ್ನು ಹತ್ತಿ ಮುಂದಿನ ಚಿಕ್ಕ ಬಾಲ್ಕನಿಯನ್ನು ತಲುಪಬೇಕಿತ್ತು.

ಕಡೆಯ ಮೆಟ್ಟಲು ಮೇಲೆ ನಿಂತಳು. ಹಿತವಾಗಿತ್ತು ಗಾಳಿ, ವಾತಾವರಣ. ಅಲೌಕಿಕವಾದ ಸಂತೋಷ! ನಕ್ಷತ್ರಗಳ ಮಧ್ಯೆ

ವಿಹರಿಸಿದಂತೆ, ಮೋಡಗಳ ನಡುವೆ ಹಾರಾಡಿದಂತೆ. ಅರ್ಥವಾಗದ ಸಂಭ್ರಮ, ಎಚ್ಚೆತ್ತು ನಿಧಾನವಾಗಿ ಕಾಲಿಂಗ್ ಬೆಲ್ ಒತ್ತಿದಳು ಹುಡುಕಿ.

ಎರಡು ನಿಮಿಷದ ನಂತರ ಒಬ್ಬ ವ್ಯಕ್ತಿ ಒಂದು ಬಾಗಿಲು ತೆರೆದ. ನಾಮಧಾರಿ, ತಲೆಯ ಹಿಂಭಾಗದಲ್ಲಿ ಜುಟ್ಟು, ಹೊದ್ದಿದ್ದು ಕಡುಕೆಂಪಿನ ಅಂಚು ಇದ್ದ ಧೋತರ. ಕಣ್ಣು ಕಿರಿದುಗೊಳಿಸಿ ಕುತೂಹಲ ತುಂಬಿಕೊಂಡು ನೋಡಿದರು.

"ಹೇಳಿ, ಏನಾಗ್ಬೇಕಿತ್ತು?" ಕೇಳಿದರು. ಸ್ವರದಲ್ಲೇನು ಅನುನಯವಿರಲಿಲ್ಲ. "ಪ್ರೊಫೆಸರ್ ರಾಯ್ ಅವ್ರನ್ನ ಭೇಟಿಯಾಗ್ಬೇಕಿತ್ತು" ಹೇಳಿದಳು ಮೃದುವಾಗಿ. ಎತ್ತರಿಸಿ ಮಾತಾಡುವುದು ಅಮೆರಿಕನ್ನರ ಸ್ವಭಾವವಲ್ಲ. ಕಿವಿಯನ್ನ ಮುಂದು ಮಾಡಿದ ವ್ಯಕ್ತಿ ಹಣೆಯುಜ್ಜಿದ "ನೀವಾ, ಅವ್ರು ಊರಿನಲ್ಲಿಲ್ಲಾಂತ ಹೇಳಿದ್ನಲ್ಲ. ಫೋನ್‌ನಲ್ಲಿ ಕೂಡ ಇಷ್ಟೇ ಮೆತ್ತಗೆ ಮಾತಾಡ್ತೀರಾ! ನಮ್ಗೆ ಕೇಳಿಸ್ಬೇಕಲ್ಲ. ಸುಮ್ನೆ ಬರೋ ತೊಂದರೆ ಯಾಕೆ ತಗೊಂಡ್ರಿ?" ಸ್ವತಂತ್ರವಹಿಸಿ ಕೇಳಿಯೇಬಿಟ್ಟರು.

ರೂತ್, ಮಾತುಗಳಿಗಾಗಿ ಹುಡುಕಾಡಿದಳು. ಅವಳು ಇಂಡಿಯಾಗೆ ಬಂದು ಎಂಟು ದಿನಗಳಾಗಿತ್ತು. ಮೂರು ತಿಂಗಳ ಒಳಗೆ ಬಂದ ಕೆಲಸ ಮುಗಿಸಿಕೊಂಡು ಹಿಂದಿರುಗಬೇಕಿತ್ತು. ಹಿಂದಿನ ರಾತ್ರಿನು ಅವಳ ಡ್ಯಾಡಿ ಫೋನ್‌ನಲ್ಲಿ ಎಚ್ಚರಿಸಿದ್ದರು "ಡೋಂಟ್ ವರೀ ಮೈ ಚೈಲ್ಡ್. ಈಗ್ಲೂ ನಿನ್ನ ಪ್ರಯತ್ನ ಬಿಟ್ಟು ಹಿಂದಿರುಗು. ಇಲ್ಲಿ, ಒಮ್ಮೆ ಇಂಡಿಯಾ ಪ್ರೇಕ್ಷಣೀಯ ಸ್ಥಳಗಳ್ನ ಸುತ್ತಿ ಎಂಜಾಯ್ ಮಾಡು. ನಿನ್ನ ಮಮ್ಮಿ ಕೂಡ ಫೋನ್ ಮಾಡಿ ವಿಚಾರಿಸಿದ್ಳು" ಎಂದಿದ್ದರು.

ಅಲ್ಲಿಂದ ಆಸನಗಳ ಕಡೆ ಕೈ ತೋರಿಸಿದವಳು "ಕೂತ್ಕೋಬಹುದಾ?" ಕೇಳಿದಳು. ಇಷ್ಟವಿಲ್ಲದಿದ್ದರೂ ಹೆಣ್ಣು ಮಗಳೆಂಬ ರಿಯಾಯಿತಿಯಿಂದಲೋ ಏನೋ, ಕೂಡಲು ಸಮ್ಮತಿಸಿದರು. ಮೌನವಾಗಿ ಅಲಂಕರಿಸಿದಳು ಸೋಫಾದಲ್ಲಿ.

ಕತ್ತು ತುರಿಸುತ್ತ ಒಳಗೆ ಹೋದ ರಾಮಾಚಾರಿ ನೀರಿಡಿದು ಬಂದು ಅವಳ ಮುಂದಿಟ್ಟರು. ಬೋಳು ಹಣೆ, ಕೈಗಳು. ನಿರಾಭರಣಳಾಗಿದ್ದಳು. ಸೊಂಪಾದ ಕತ್ತರಿಸಿದ ಕೂದಲು. ವಿದೇಶದಲ್ಲಿ ಬೆಳೆದ ಹುಡುಗಿಯೆಂದು ಅವರಿಗೆ ಅನುಮಾನ ಬರಲಿಲ್ಲ. ಜಡೆ, ಗಂಟುಗಳು ಇತಿಹಾಸ ಸೇರಿ, ಈಗ ಕ್ರಾಪ್, ಬಾಬ್‌ಕಟ್, ಯು-ಕಟ್‌ಗಳ ಮೂಲಕ ಹೆಣ್ಣುಗಳು

ಅಲಂಕಾರಗೊಳ್ಳುತ್ತಿರುವುದು ಅಪರೂಪವಲ್ಲ. ಟಿ.ವಿ. ಸಿನಿಮಾಗಳಲ್ಲಿ ಕಾಣುತ್ತಿದ್ದ ಈ ರೂಪಗಳು ಎಲ್ಲೆಲ್ಲೂ ಕಾಣಬಹುದಿತ್ತು.

ಒಂದೆರಡು ಗುಟುಕು ನೀರು ಕುಡಿದಿಟ್ಟ "ಪ್ರೊಫೆಸರ್‌ನ ಅವಶ್ಯವಾಗಿ ಭೇಟಿ ಮಾಡ್ಬೇಕಿತ್ತು. ಪ್ಲೀಸ್ ಹೆಲ್ಪ್ ಮಿ" ಕೇಳಿಕೊಂಡಳು. ಮೂರು ತಿಂಗಳ ನಂತರ ಅವಳು ಭಾರತದಲ್ಲಿ ಉಳಿಯುವಂತಿರಲಿಲ್ಲ.

ಸ್ವಲ್ಪ ರೇಗಿತು ರಾಮಾಚಾರಿಗೆ "ನಿಮ್ಮ ಮಾತಿನ ಅರ್ಥವೇನು ಅಮ್ಮಣ್ಣಿ? ಪ್ರೊಫೆಸರ್ ಮನೆಯಲ್ಲಿದ್ದು ನಾನು ಇಲ್ಲ ಅಂದ್ನ? ಅಂಥ ಅಗತ್ಯವೇನು? ಸಾಕಷ್ಟು... ಜನರಿಗೆ ಅವ್ರು ಸಹಾಯ ಮಾಡಿದ್ದಾರೆ ಹೊರ್ತು, ಯಾರ ಸಾಲನು ಅವ್ರ ಮೇಲಿಲ್ಲ. ನಿಂದೇನು ಸಾಲ?" ಖಾರವಾಗಿಯೇ ಮಾತಾಡಿದ್ದು.

ತಕ್ಷಣ ಏನು ಹೇಳಲಾಗಲಿಲ್ಲ. ಎರಡುಮೂರು ಸಲ ಉಗುಳು ನುಂಗಿದ ನಂತರ ತಾನು ಎನ್ನುವಂತೆ ಎದೆಯ ಮೇಲೆ ಕೈಯಿಟ್ಟುಕೊಂಡು "ಸಾಲ ಕೊಡ್ಬೇಕು. ಅದು ತುಂಬ ಇಂಪಾರ್ಟೆಂಡ್ ಅಲ್ವಾ! ನಂಗೆ ನಿಮ್ಮ ಹೆಲ್ಪ್ ಬೇಕೇ ಬೇಕು" ವಿನಯವಿತ್ತು ದನಿಯಲ್ಲಿ.

ತಲೆಯ ಮೇಲೆ ಕೈಯಿಟ್ಟುಕೊಂಡರು. ಗೃಹಸ್ಥರಾಗಿದ್ದಾಗ ಪ್ರೊಫೆಸರ್ ರಾಯ್ ಜೀವನಕ್ಕೆ ಒಂದು ಟೈಮ್‌ಟೇಬಲ್ ಹಾಕಿಕೊಂಡಿದ್ದರು. ಈಗ ಒಂದು ರೀತಿಯ ಅಲೆದಾಟ. ಹೆಂಡತಿ ಸತ್ತು ಮಕ್ಕಳೆಲ್ಲ ದೊಡ್ಡವರಾಗಿ ಅತ್ತಿತ್ತ ಹಾರಿ ಹೋದನಂತರ. ಇದ್ದಕ್ಕಿದ್ದಂತೆ ಹೋಗೋ ಜನ ಹದಿನೈದು ತಿಂಗಳು ಬಿಟ್ಟು ಬರೋರು. ಆಮೇಲೆ ಕೆಲವು ದಿನ ಉಳಿಯೋರು ನಂತರ ಈ ಅಲೆದಾಟ.

ಸಾಲ ಕೊಡಲೇಬೇಕೆಂಬ ಮನಸ್ಸು ಹೊತ್ತು ಬಂದ ಯುವತಿಯ ಜೊತೆ ಸ್ವಲ್ಪ ಮೃದುವಾದ.

"ಹಣದ ರೂಪದ ಸಾಲವಾದ್ರೆ ಕೊಡದಿದ್ರೂ ತೊಂದರೆ ಇಲ್ಲ. ಈಗ ಅವ್ರಿಗೆ ಹಣದ ಅಗತ್ಯವೇನಿಲ್ಲ. ನೀನೇ ಇಟ್ಕೋ. ಆದ್ರೆ ಅವ್ರ ಬರುವಿನ ಬಗ್ಗೆ ನಾನೇನು ಹೇಳ್ಲಾರೆ. ಅಮ್ಮ ಸತ್ತ ಮೇಲೆ ದಿಕ್ಕು ದೆಸೆ ಇಲ್ಲದಂತಾಯ್ತು ಅವ್ರಿಗೆ. ನಾನೊಬ್ಬ ಮನೆ ಕಾವಲಿಗೇಂತ ಇದ್ದೀನಿ." ಬೇಸರದಿಂದ ತೋಡಿಕೊಂಡವ ಕಾಫೀ ತಂದುಕೊಟ್ಟರು.

ತೀರಾ ನಿರಾಶೆಯಾಯಿತು ಅವಳಿಗೆ. ಕತ್ತಲಲ್ಲಿ ಹುಡುಕಾಟ ಆರಂಭಿಸಿದ್ದಳು. ಅವರೊಬ್ಬ ದಾರಿ ತೋರಿಸುವ

ಮೋಂಬತ್ತಿಯಾಗಬಹುದೆನ್ನುವ ದೊಡ್ಡ ಆಸೆ ಇಟ್ಟುಕೊಂಡು ಇಂಡಿಯಾಗೆ ಬಂದಿದ್ದಳು.

ಎದ್ದು ನಿಂತು ಎರಡು ಕೈಗಳನ್ನು ಜೋಡಿಸಿದಳು. "ನಾನು ಖಂಡಿತವಾಗಿ ಅವ್ರನ್ನ ಭೇಟಿ ಮಾಡ್ಲೇಬೇಕು. ಅವ್ರು ಬಂದ ಕೂಡ್ಲೇ ಈ ನಂಬರ್‌ಗೆ ಡಯಲ್ ಮಾಡಿ. ಪ್ಲೀಸ್... ಪ್ಲೀಸ್...." ಹೋಟಲ್‌ನ ವಿಳಾಸದ ಕಾರ್ಡ್‌ನಲ್ಲಿ ತನ್ನ ರೂಂ ನಂಬರ್ ಗುರುತು ಮಾಡಿಕೊಟ್ಟಳು.

ರಾಮಾಚಾರಿ ತಲೆದೂಗಿದರು. ತೀರಾ ಮೃದುವಾಗಿ ಸರಳವಾಗಿ ಕಾಣುವ ಆ ಯುವತಿಯ ಬಗ್ಗೆ ಮರುಕವಾಯಿತು. ಅಂತು ಪ್ರೊಫೆಸರ್ ಬಂದ ಕೂಡಲೇ ಸುದ್ದಿ ಮುಟ್ಟಿಸುವ ಜವಾಬ್ದಾರಿ ಹೊತ್ತರು.

ನೀಳವಾಗಿ ಉದ್ದವಾಗಿ ಕಳೆಕಳೆಯಾಗಿ ಕಾಣುವ ಈ ಯುವತಿ ಸೀರೆಯುಟ್ಟರೆ ಚೆನ್ನಾಗಿ ಕಾಣುತ್ತಾಳೆಂದು ಕೊಂಡರಷ್ಟೆ, ಹೇಳಲಿಲ್ಲ. ಈಗಿನ ಯುವಕ ಯುವತಿಯರು ಹಿರಿಯರ ಮಾತುಗಳಿಗೆ ಗೌರವ ಕೊಡಲಾರದೆಂಬುದು ಬಲವಾದ ನಂಬಿಕೆ. ಅದಕ್ಕೆ ಅವರ ಸ್ವಂತ ಅನುಭವ ಕಾರಣ.

ಆ ಯುವತಿ ಗೇಟ್‌ನಿಂದ ಹೊರಗೆ ಹೊರಟಾಗ ಹೆಸರು ಕೇಳಬೇಕೆನಿಸಿತು "ನಿನ್ನ ಹೆಸರೇನಮ್ಮ?" ವಯಸ್ಸಿನ ಹಿರಿಯತನ ಇಲ್ಲಿ ಇಣಕಿತು. "ರೂತ್ ಕ್ಲಿಂಟನ್" ಎಂದಳು, ನಸುನಗೆಯಿಂದ. ದನಿತೀರಾ ಮೃದುವಾಗಿತ್ತು. ಅಮೆರಿಕನ್ನರು ಮೆಲುದನಿಯಲ್ಲಿ ಮಾತಾಡುತ್ತಾರೆ. ಪ್ರೊಫೆಸರ್ ರಾಯ್ ಒಮ್ಮೆ ಅಂದಿದ್ದರು ಮಾತಿನ ಸಂದರ್ಭದಲ್ಲಿ. ಅದು ನೆನಪಾಯಿತು.

ಮಧ್ಯಾಹ್ನದ ಬಿಸಿಲು ಚುರುಕ್ ಎಂದಾಗಲೇ ಒಳಗೆ ಹೋಗಿದ್ದು. ಪ್ರೊಫೆಸರ್ ಕಡೆಯ ದೂರದ ನೆಂಟಸ್ಥಿಕೆಯೇ ಇಲ್ಲಿಗೆ ಸೇರಿಸಿದ್ದು ಅವರನ್ನು. ಇಲ್ಲಿಗೆ ಬಂದು ಇಪ್ಪತ್ತೈದು ವರ್ಷಗಳೇ ಆಗಿಹೋಗಿತ್ತು. ಆಗಿನ ತುಂಬಿ ಮನೆ ಈಗ ಬರಿದು... ಬರಿದು. ಉಳಿದ ಪ್ರೊಫೆಸರ್‌ಗೂ ಓಡಾಟದ ಹುಚ್ಚು. ನೆನಪಾದಾಗಲೇ, ತನ್ನದೊಂದು ಮನೆ ಇದೆಯೆಂದು ಬರುತ್ತಿದ್ದದ್ದು. ಸದ್ಯಕ್ಕೆ ಇದ್ದಿದ್ದು ಒಬ್ಬರೇ.

ಊಟಕ್ಕೆ ಕೂತಾಗ ಅವರಿಗೆ ಅನ್ನಿಸಿತು, ಆ ಯುವತಿಯನ್ನಾದರೂ ನಿಲ್ಲಿಸಿಕೊಂಡು ಮಾಡಿದ ಅಡಿಗೆಯನ್ನು ಬಡಿಸಬಹುದಿತ್ತು. ಊಟ ಮುಗಿಸಿ ಏಳುವ ವೇಳೆಗೆ ಫೋನ್ ಬಂತು.

ಪ್ರೊಫೆಸರ್ ರಾಯ್ ತಂತಿಯ ಕೊನೆಯಲ್ಲಿದ್ದರು "ಹೇಗಿದ್ದಿ? ಮಳೆಯ ಸೀಸನ್, ಇಲ್ಲಿ ಎಡಬಿಡದೆ ಮಳೆ ಸುರೀತಾ ಇದೆ. ನನ್ನ ಕೋಣೆಯ ಆ ಕಡೆಯ ಕಿಟಕಿಗಳ್ನ ಭದ್ರಪಡಿಸು. ಮುಂಗಾರಿನ ಇರಚಲು ನೇರವಾಗಿ ಪುಸ್ತಕದ ಅಲಮಾರಿಗೆ ಸಿಡಿಯುತ್ತೆ" ಹೇಳಿದರು ಇವನಿಗೆ ಮಾತಾಡಲು ಅವಕಾಶ ಕೊಡದಂತೆ.

"ನಿಮ್ದು ಮುಗಿಯಿತಾ? ನಾನೊಂದಿಷ್ಟು ಹೇಳೋದಿದೆ. ಹುಡ್ಗೀ...ಅಂದರೇ ಒಬ್ಬ ಯುವತಿ ನಿಮ್ಮನ್ನ ಹುಡ್ಕಿಕೊಂಡ್ಬಂದಿದ್ದಾಳೆ. ಸ್ಟೂಡೆಂಟೇನೋ, ಅಥ್ವಾ ನಿಮ್ಹತ್ರ ಡಾಕ್ಟರೇಟ್ ಮಾಡೋಕೆ ಬಂದಿರಬೇಕೇನೋ, ಹೋಟಲ್‌ನಲ್ಲಿ ಇಳ್ಕೊಂಡ್ ಕಾಯ್ತ ಇದ್ದಾಳೆ. ನೀವು ಯಾವಾಗ ಬರ್ತೀರಾ?" ಕೇಳಿದ ರಾಮಾಚಾರಿ.

"ಗೊತ್ತಿಲ್ಲ, ಸದ್ಯಕ್ಕೆ ವೃತ್ತಿಯಿಂದ ವಿಶ್ರಾಂತಿಗೆ ಬಂದಿದ್ದೀನಿ. ನಾನು ಯಾರ್ಗೂ ಹೆಲ್ಪ್ ಮಾಡ್ಲಾರೆ. ಇಷ್ಟನ್ನ ನೀನೇ ಹೇಳು" ಫೋನಿಟ್ಟುಬಿಟ್ಟರು.

ಇದೇನು ಹೊಸದಲ್ಲ. ಬೇಸರದಿಂದ ಫೋನಿಟ್ಟರು. ಹೋಗುವಾಗ ಬಟ್ಟೆಬರೆಗಳ ಜೊತೆ ಒಂದಿಷ್ಟೂ ಪುಸ್ತಕಗಳನ್ನು ಒಯ್ಯುತ್ತಿದ್ದರು. ಎಲ್ಲಿಗೆಂದು ಯಾವಾಗಲೂ ಹೇಳುತ್ತಿರಲಿಲ್ಲ. ಅಕಸ್ಮಾತ್ ಕೇಳಿದರೆ ಅವರ ಉತ್ತರ ಒಂದೇ.

"ಬದುಕಿದ್ರೆ... ನಾನೇ ಬರ್ತೀನಿ. ಒಂದ್ವೇಳೆ ಸತ್ರೆ, ನಿಂಗೆ ಮೊದ್ಲು ವಿಷ್ಯ ಮುಟ್ಟೋದು. ಇಲ್ಲಿನ ವಿಳಾಸನೇ ನನ್ನ ಡೈರಿ, ಸೂಟ್‌ಕೇಸ್‌ನಲ್ಲಿರೋದು. ಅಂತಿಮ ಸಂಸ್ಕಾರ ನಿನ್ನ ಕೈಯಲ್ಲೇ."

ಇದನ್ನ ಒಂದೆರಡು ಸಲ ಕೇಳಿದ ನಂತರ ಆ ಬಗ್ಗೆ ಪ್ರಶ್ನಿಸುವುದನ್ನು ಬಿಟ್ಟಿದ್ದರು.

ಮತ್ತೆ ಅಂದಿನ ರಾತ್ರಿಯೇ ರೂತ್ ಕ್ಲಿಂಟನ್, ರಾಯ್ ಬಗ್ಗೆ ಪ್ರಶ್ನಿಸಿದಾಗ "ದಯವಿಟ್ಟು ಅವ್ರನ್ನ ನೋಡೋ ಆಕಾಂಕ್ಷೆ ಬಿಡಿ. ಎಂದು ಬರ್ತಾರೆ ಅನ್ನೋದು ಗೊತ್ತಿಲ್ಲ. ಅವ್ರದು ವಿರಕ್ತ ಬದ್ಕು." ತಿಳಿಸಿ ಕೈ ತೊಳೆದುಕೊಂಡರು. ರೂತ್ ಹಿಂದೆಗೆಯುವ ಸ್ಥಿತಿಯಲ್ಲಿ ಇರಲಿಲ್ಲ. ವರ್ಷಗಳ ಆಕಾಂಕ್ಷೆ, ಕನಸನ್ನ ನನಸು ಮಾಡಿಕೊಳ್ಳಲು ದೂರದ ಅಮೆರಿಕಾದಿಂದ ಇಲ್ಲಿಗೆ ಬಂದಿದ್ದಳು.

ಮಾರನೆಯ ದಿನ ಬೆಳಿಗ್ಗೆ ಬೆಳಿಗ್ಗೆಯೇ ಬಂದಳು. ಸ್ವಲ್ಪ

ಖಿನ್ನಳಾಗಿದ್ದಳು. ಸದ್ಯಕ್ಕೆ ಅವರೇ ಅವಳಿಗೆ ಅವರೇ ಸಹಾಯ ಮಾಡಬೇಕಿತ್ತು. ಕನಿಷ್ಟ ಒಂದಿಷ್ಟು ವಿವರಗಳನ್ನು ನೀಡಿದ್ದರೂ ಸಾಕಿತ್ತು.

ಯಾವುದೇ ಬಿಗುವು ತೋರದೆ ಆಹ್ವಾನಿಸಿದರು ರಾಮಾಚಾರಿ. ಒಂದಿಷ್ಟು ಕುತೂಹಲ, ನಾಲ್ಕು ಮಾತು ಆಡಬಹುದೆಂಬ ಸಂತಸ.

ನೀಲಿ ಪ್ಯಾಂಟು ತೊಟ್ಟು, ಹಳದಿ ಬಣ್ಣದ ಷರಟು ಹಾಕಿದ್ದಳು. ಬಹಳ ಅಂದವಾಗಿ ಕಂಡಳು.

"ಸ್ವಲ್ಪ ಪ್ರೊಫೆಸರ್ ಇರೋ ವಿಳಾಸ ಕೊಡಿ. ಅಲ್ಲೇ ಹೋಗಿ ಮೀಟ್ ಮಾಡ್ತೀನಿ" ಕೇಳಿದಳು. ತಲೆ ಅಡ್ಡಡ್ಡ ಆಡಿಸಿದರು "ಗೊತ್ತಿದ್ರೆ, ತಿಳ್ಸಬಹುದಿತ್ತು. ಆ ಅಭ್ಯಾಸ ಅವ್ರಿಗಿಲ್ಲ. ಫೋನ್ ಮಾಡಿದ ಕಡೇನೇ ಇಂದು ಕೂಡ ಇರ್ತಾರೆ, ಅನ್ನೋ ನಂಬ್ಕೇ ಇಲ್ಲ. ಟ್ರೈನ್‌ನಲ್ಲಿ ಹೋಗ್ತಾ ಇರೋವಾಗ ಹಿತವಾದ ವಾತಾವರಣವಿರೋ ಯಾವುದಾದ್ರೂ ನಿಲ್ದಾಣದಲ್ಲಿ ಇಳ್ಕೋತಾರೆ. ಬೇಸರವಾಗೋವರ್ಗೂ ಅಲ್ಲಿ ಇರ್ತಾರೆ. ಮತ್ತೆ ಇನ್ನೊಂದ್ಕಡೆಗೆ ಪ್ರಯಾಣ. ಹೀಗೆ ನಡೆದಿದೆ ಅವ್ರ ಜೀವನಚರಿ. ನೀನು ಅವ್ರನ್ನ ಭೇಟಿ ಮಾಡೋ ವಿಷ್ಯ ಬಿಡು" ನೇರವಾಗಿಯೇ ಹೇಳಿದರು.

ಖಿನ್ನತೆಯಾವರಿಸಿತು ಅವಳ ಮುಖದ ಮೇಲೆ. ಅವಳ ತಂದೆ ಕ್ಲಿಂಟನ್ "ದತ್ತು ಸ್ವೀಕಾರದ ಪತ್ರ ಕೂಡ ನಿನ್ನ ಮಮ್ಮಿಯ ಕೋಪಕ್ಕೆ ತುತ್ತಾಗಿದೆ. ರಾಯ್‌ರೊಂದಿಗೆ ಒಂದಿಷ್ಟು ದಿನಗಳ ಸ್ನೇಹವಿತ್ತು. ಖಂಡಿತ ಆ ಬಗೆಗಿನ ವಿವರಗಳ್ನ ಒದಗ್ಸಿಕೊಡ್ತಾರೆ" ಎಂದಿದ್ದರು. ಮುಂದೇನು ?

ಹೋಟಲ್ ಮ್ಯಾನೇಜರ್, ರಿಸೆಪ್ಷನಿಸ್ಟ್, ಟ್ಯಾಕ್ಸಿ ಡ್ರೈವರ್, ವೆಯಿಟರ್ ಮುಂತಾದವರಿಂದ ಸಿಟಿಯಲ್ಲಿರುವ ಅನಾಥಾಲಯಗಳ ಹೆಸರು, ವಿಳಾಸಗಳನ್ನು ಸಂಗ್ರಹಿಸಿದ್ದಳು. ಎಲ್ಲಿಂದ ಷುರು ಮಾಡುವುದು ? ಅವೆಲ್ಲದರ ಮಾಹಿತಿಗಳ ಸಂಗ್ರಹಣೆಗೆ ಹೆಚ್ಚು ಕಾಲ ಹಿಡಿಸಬಹುದು. ಆದರೆ ಇಂಥ ಅನಾಥಾಲಯವೇ ಎಂದು ತಿಳಿದರೇ ಒಂದಿಷ್ಟು ಸುಲಭ.

ರಾಮಾಚಾರಿಗೂ ಬೇಸರವೆನಿಸಿತು. ಏನು ಜರೂರೋ ಏನೋ, ರಾಯ್ ಮೇಲೆ ಕೋಪ ಬಂತು ಕೂಡ.

"ಕೂತ್ಕೋಮ್ಮ ಬಂದು, ಅಷ್ಟೊಂದು ನಿರಾಶಳಾಗೋಕೆ ಕಾರಣವಿಲ್ಲ, ಆ ಮನುಷ್ಯ ಇಂದು ನಾಳೆ ಬಂದರೂ ಹೆಚ್ಚಲ್ಲ. ಸದಾ ವಿದ್ಯಾರ್ಥಿಗಳ್ನ ಹಚ್ಚಿಕೊಳ್ಳುತ್ತಿದ್ದ ವ್ಯಕ್ತಿಗೆ ಇಂದು ನಿರಾಸಕ್ತಿ. ಬಹುಶಃ ಅವ್ರನ್ನ ಭೇಟಿಯಾದ್ರೂ ಪ್ರಯೋಜನವಿಲ್ಲ." ಕೂಡಿಸಿ ಒಳಗೆ ಹೋದರು.

ಪುಳಿಯೊಗರೆ ಬೆರೆಸಿಕೊಂಡು ಬಂದು ಕೊಟ್ಟರು.

"ತಗೊಮ್ಮ ಪ್ರತಿ ದಿನ ನಾನು ಮಾಡಿದ್ದು ನಾನೇ ತಿನ್ನಬೇಕು. ಯಾರಿಗಾದ್ರೂ ಕಾಯಬೇಕು. ಇಂದು ನೀನ್ಬಂದೇ" ಹೇಳಿದರು. ಹಿಂದಿನ ಸಲ ಬಂದಂಥ ಸಮಯದಲ್ಲಿನ ಬಿಗುವು ಇರಲಿಲ್ಲ ಅವರ ಕಂಠದಲ್ಲಿ.

ಸ್ಪೂನ್, ಫೋರ್ಕ್ ಬಳಸಿಯೇ ಅವಳಿಗೆ ಅಭ್ಯಾಸ. ಅತ್ತಿತ್ತ ನೋಡಿ ತಟ್ಟೆಯಲ್ಲಿನ ತಿಂಡಿಯ ಮೇಲೆ ನೋಟವರಿಸಿದಳು. ನ್ಯೂ ಯಾರ್ಕ್‌ನಲ್ಲಿದ್ದ ಒಂದು ಭಾರತೀಯ ಕುಟುಂಬದವರಲ್ಲಿ ಹೆಚ್ಚು ಪರಿಚಯ ಬೆಳೆಸಿಕೊಂಡಿದ್ದಳು. ಅವರ ನಡುವೆಯೇ ಕನ್ನಡ ಮಾತಾಡಲು ಕಲಿತಿದ್ದು. ಆದರೂ ತಿಂಡಿ ತಿನ್ನಲು ಕೈ ಬಳಕೆ ಅಪರೂಪವೇ.

ನೀರಿಡಿದು ಬಂದಾಗಲೂ ಹಾಗೆಯೇ ಕೂತಿದ್ದಳು. ಕೈಯಿಂದ ಸನ್ನೆ ಮಾಡಿ ಕಾರಣ ಕೇಳಿದಾಗ ತಟ್ಟನೆ ಹೇಳಲಾಗದೆ ಸನ್ನೆಯಿಂದಲೇ ಉತ್ತರ ನೀಡಿದಾಗ ನಕ್ಕುಬಿಟ್ಟ. ಆಶ್ಚರ್ಯ ಕೂಡ. ತಟ್ಟನೆ ತಳ್ಳಿಹಾಕಿದ ಮನಸ್ಸಿನಿಂದ. ಮಿನಿ ಫ್ರಾಕ್, ಪ್ಯಾಂಟ್ ಷರಟು ತೊಟ್ಟು ಇಂಗ್ಲಿಷ್ ಮಾತಾಡುತ್ತ ಓಡಿಯಾಡುವ ಯುವತಿಯರ ಸಂಖ್ಯೆ ಕಡಿಮೆ ಇರಲಿಲ್ಲ. ಭ್ರಮೆಯಲ್ಲಿ ಬೆಳೆದವರು. ನಾಗರಿಕತೆಯ ಅಮಲಿನಲ್ಲಿ ಬೆಳೆಸಿದ ತಂದೆ ತಾಯಂದಿರು.

"ಇದು ಪುಳಿಯೋಗರೇಂತ, ನಿಮ್ಮ ಮನೆಯಲ್ಲಿ ಮಾಡ್ತಾರೋ ಇಲ್ವೋ, ಗೊತ್ತಿಲ್ಲ. ಕೈಯಲ್ಲಿ ತಿಂದರೇನೇ ರುಚಿ. ಸಿಂಕ್‌ನಲ್ಲಿ ಕೈ ತೊಳ್ದು ಬಂದು ತಿನ್ನೋ ಪ್ರಯತ್ನ ಮಾಡು." ಗಟ್ಟಿಯಾಗಿ ಹೇಳಿದರು. ಅದೇ ಅಭ್ಯಾಸವು ಕೂಡ. ಸಂಪ್ರದಾಯದ ಸಂಕೋಲೆಯ ಮಧ್ಯೆ ನಿಂತ ಮನುಷ್ಯ ತಲೆಯ ಹಿಂಬದಿಯಲ್ಲಿ ಜುಟ್ಟು. ಹಣೆಯಲ್ಲಿ ಮೂರು ನಾಮ. ಕಚ್ಚೆ ಹಾಕಿ ಉಟ್ಟ ಪಂಚೆ. ಸೊಂಟಕ್ಕೆ ಸುತ್ತಿದ ಒಂದು ಮಡಿ ವಸ್ತ್ರ. ಷರಟು ಹೊರಗಡೆ ಹೋದಾಗ ಮಾತ್ರ ಹಾಕುತ್ತಿದ್ದುದು. ಜನಿವಾರ ಭೂಷಣ ಪ್ರಾಯವಾಗಿತ್ತು ಹೆಗಲಿನಿಂದ ತೂಗಿಬಿದ್ದು.

ಅವರವರೆಂದು ಯಾರು ಇಲ್ಲದ ಇಂಡಿಯಾಗೆ ಬಂದಿದ್ದಳು. ಇಷ್ಟು ಆತ್ಮೀಯತೆ, ಆಪ್ಯಾಯಮಾನ ಕೂಡ ಮರಳುಗಾಡಿನಲ್ಲಿ ಓಯಸಿಸ್‌ನಂತೆ. ಎದ್ದು ಹೋಗಿ ಅವರು ತೋರಿಸಿದ ಸಿಂಕ್‌ನಲ್ಲಿ ಕೈ ತೊಳೆದು ಬಂದಳು. ಬಿಸಿ ಬಿಸಿಯಾಗಿದ್ದ ಪುಳಿಯೋಗರೆ ಮುಟ್ಟುವಾಗ ಮೊದಲು ಮುಜುಗರವೆನಿಸಿದರೂ ಆಮೇಲೆ ಹಿತವಾಯಿತು. ಅಷ್ಟು ತಿಂದಿದ್ದು ಕೂಡ

ಕಷ್ಟವೆನಿಸಿತು. ಹಿತಮಿತವಾದ ಭೋಜನದ ಅಭ್ಯಾಸ ಅವಳಿಗೆ. ಖಾರ ಕೂಡ ಹೆಚ್ಚೆನಿಸಿತು. ಎರಡು ಮೂರು ಲೋಟ ನೀರು ಕುಡಿದಳು.

ದೊಡ್ಡ ಲೋಟದಲ್ಲಿ ಕಾಫೀ ತಂದಿಟ್ಟಾಗ ಬೆಚ್ಚಿದಳು. "ನೋ, ನಂಗೆ ಅಷ್ಟೆಲ್ಲ ಕುಡ್ಯೋಕ್ಯಾಗೊಲ್ಲ" ನಗುತ್ತ ಒಯ್ದರು ಅರ್ಧದಷ್ಟು ಹಿಡಿದು ಬಂದರು. ಆಮೇಲೆ ವಿರಾಮವಾಗಿ ಕೂತು ಪ್ರಶ್ನಿಸಿದರು.

"ಯಾವ ಊರು ?" ದೊಡ್ಡ ಕಲ್ಪನೆಯೇನು ಇರಲಿಲ್ಲ. ಸಹಜವಾದ ಕೇಳಿಕೆ. ಲೋಟ ಕೆಳಗಿಟ್ಟವಳು "ಅಮೆರಿಕಾ..." ಎಂದ ಕೂಡಲೇ ಆಶ್ಚರ್ಯದ ಜೊತೆ ಗಾಬರಿ ಕೆಲವು ಕ್ಷಣಗಳು ಮಾತ್ರ. ಆದರೆ ಪ್ರೊಫೆಸರ್ ಅಣ್ಣ ಐವತ್ತು ವರ್ಷದ ಹಿಂದೆಯೇ ಅಮೆರಿಕಾಗೆ ಹೋಗಿ ಅಲ್ಲೇ ಉಳಿದಿದ್ದರು. ಅವರ ಮಕ್ಕಳು, ಮೊಮ್ಮಕ್ಕಳು ಈಗ ಅಲ್ಲಿನ ನಾಗರಿಕರೇ. ಏನಿದು ಅಮೆರಿಕಾದ ವ್ಯಾಮೋಹ ? ಭಾರತದಲ್ಲಿ ಇಲ್ಲದ್ದು ಅಲ್ಲೇನಿದೆ ? ಕುತೂಹಲ, ಬೇಸರದ ಜೊತೆ ಒಂದಿಷ್ಟು ನೋವು ಕೂಡ. ಹಿಂದೂಸ್ಥಾನದಲ್ಲಿನ ಜನ ವಲಸೆ ಹೋಗಿ ಅಲ್ಲೊಂದು ಪುಟ್ಟ ಭಾರತ ಸೃಷ್ಟಿಯಾದೀತೆ ?

ಮತ್ತಷ್ಟು ಕುತೂಹಲ ರಾಮಾಚಾರಿಗೆ "ನಮ್ಮ ಪ್ರೊಫೆಸರ್ ಅಣ್ಣನ ಸಂಸಾರ ಫಿಲಿಡೆಲ್ಫಿಯಾದಲ್ಲಿ ಇದೆಯಂತೆ. ನೀನು ಕೂಡ ಅಲ್ಲೇನಾ ?" ಜನಿವಾರ ತೀಡುತ್ತ ಪದ್ಮಾಸನ ಹಾಕಿ ಕೂತರು ಆರಾಮಾಗಿ ಅಮೆರಿಕಾ ಬಗ್ಗೆ ತಿಳಿಯಲು.

"ಅಲ್ಲ, ನ್ಯೂ ಯಾರ್ಕ್‌ನಲ್ಲಿ ಇರೋದು. ನಮ್ಮ ಡ್ಯಾಡ್ ನ್ಯೂ ಜೆರ್ಸಿನಲ್ಲಿ. ಮಮ್ ಕೆನಡದ ಟೊರಾಂಟೋನಲ್ಲಿದ್ದಾರೆ."

ವಿವಾಹದ ಲಾಂಛನಗಳೇನಾದರೂ ಇದೆಯಾಂತ ಕೊರಳು ಕಾಲುಗಳನ್ನು ಹುಡುಕಿ ತಮ್ಮ ಮೂರ್ಖತನಕ್ಕೆ ಒಳಗೊಳಗೇ ನಕ್ಕರು. ತಲೆ ಕೆರೆದುಕೊಂಡರು. ಸ್ವಲ್ಪ ಮಾತಿನ ಚಪಲ ಜಾಸ್ತಿಯೇ. ಸಂಜೆಗಳಲ್ಲಿ ದೇವಸ್ಥಾನಕ್ಕೆ ಹೋದರೇ ಹತ್ತಕ್ಕೆ ಹಿಂದಿರುಗುತ್ತಿದ್ದುದು. ಮಾತಿಗೆ ಜನ ಸಿಗುತ್ತಿದ್ದರು ಅಲ್ಲಿ.

"ನಂಗೆ ಅರ್ಥವಾಗ್ಲಿಲ್ಲ. ನಿನ್ನ ತಂದೆ, ತಾಯಿ ಬೇರೆ ಬೇರೆ ಕಡೆ ಕೆಲ್ಸದಲ್ಲಿ ಇದ್ದಾರ ? ನೀನೊಂದ್ಕಡೆ....." ವ್ಯಥೆಯಿಂದ ನುಡಿದರು.

ವಿಷಾದ ಇಣಕಿತು ಅವಳ ಮುಖದ ಮೇಲೆ. ಎಂಟರ ವಯಸ್ಸಿನಲ್ಲಿ

ಅವರಿಬ್ಬರ ಡೈವೋರ್ಸ್ ಆಯಿತು. ಈಗ ಅವರಿಬ್ಬರು ವಿವಾಹಿತರು. ಅವರಿಗೆ ಈಗ ಸ್ವಂತದ ಮಕ್ಕಳು ಇದ್ದರು.

"ಡೈವೋರ್ಸ್ ತಗೊಂಡ್ ಬೇರೆ ಬೇರೆ ಮದ್ವೆಯಾಗಿದ್ದಾರೆ. ಅವರಲ್ಲಿಗೆ ನಾನು ಹೋಗೋದು ಅಪರೂಪ. ಮಮ್ಮಿ ಆಗಾಗ ಫೋನ್ ಮಾಡಿ ವಿಚಾರಿಸ್ಕೋತಾರೆ. ನಾನು ಆಗಾಗ ಹೋಗಿ ಡ್ಯಾಡಿನ ನೋಡ್ಕೊಂಡ್ಬರ್ತೀನಿ. ಅವ್ರಿಗೆ ನನ್ನಲ್ಲಿ ತುಂಬ ಪ್ರೀತಿ" ಹನಿಗಣ್ಣಾದಳು. ಕ್ಲಿಂಟನ್‌ಗೆ ಈಗ ಸ್ವಂತದ್ದೇ ಮೂರು ಮಕ್ಕಳು ಇದ್ದರು. ಆದರೂ ಕರ್ತವ್ಯದಿಂದ ವಂಚಿತರಾಗಿರಲಿಲ್ಲ!

ನೊಂದ ಮನಸ್ಸಿನಿಂದ ಎದ್ದೇಬಿಟ್ಟಳು. "ಅಂಕಲ್, ಪ್ಲೀಸ್, ನಾನು ಪ್ರೊಫೆಸರ್‌ನ ಮೀಟ್ ಮಾಡ್ದೇ ಇಂಡಿಯಾದಿಂದ ಹೋಗೋಕ್ಕಾಗೊಲ್ಲ. ಮೂರು ತಿಂಗ್ಳು ಮಾತ್ರ ನಂಗೆ ಇಲ್ಲಿರೋಕೆ ಅವಕಾಶ ಸಿಕ್ಕಿದೆ. ಒಂದಿಷ್ಟು ಹೆಲ್ಪ್ ಮಾಡಿ" ಮೊದಲೇ ನಯವಾದ ನಾಜೂಕಾದ ಸ್ವರವನ್ನು ಮತ್ತಷ್ಟು ಮೃದುವಾಗಿಸಿ ಹೇಳಿದಳು. ದೈನ್ಯತೆ ಇಣುಕಿತ್ತು ಅವಳ ಕೇಳಿಕೆಯಲ್ಲಿ.

ತಲೆದೂಗಿದರು. ಆದರೆ ನಿಸ್ಸಹಾಯಕರು. ಪ್ರೊಫೆಸರ್ ಎಂದೂ ಬರಬಹುದು, ಬಂದರೂ ಭೇಟಿ ಮಾಡಲು ಇಚ್ಛಿಸುವರೇ? ಹೆಂಡತಿ ಸತ್ತ ನಂತರ ಮುಕ್ತರಾದಂತೆ ವರ್ತಿಸುತ್ತಿದ್ದರು. ಇದೆಲ್ಲ ಹೇಗೆ ಸ್ಪಷ್ಟವಾಗಿ ಹೇಳುವುದು? ಹೇಳಿದರೂ ಅನುಭವಕ್ಕೆ ಬರದೇ ಎಷ್ಟು ಅರ್ಥವಾದೀತು?

ಹೊರಟವಳನ್ನು ಗೇಟಿನವರೆಗೂ ಬಂದು ಬೀಳ್ಕೊಟ್ಟರು. ನ್ಯೂ ಯಾರ್ಕ್‌ನಲ್ಲಿ ಬೆಳೆದವಳು. ಅಲ್ಲಿ 30, 40 ಅದಕ್ಕೂ ಮಿಕ್ಕಿ 100 ಅಂತಸ್ತಿನ ಕಟ್ಟಡಗಳು ಇದ್ದವು. ಅವಳು ವಾಸವಾಗಿದ್ದುದು ಕೂಡ ಮೂವತ್ತನೇ ಅಂತಸ್ತಿನ ಅಪಾರ್ಟ್‌ಮೆಂಟ್‌ನಲ್ಲಿ. ಅಲ್ಲಿನ ಪರಿಸರಕ್ಕಿಂತ ಭಾರತ ತೀರಾ ವಿಭಿನ್ನವಾಗಿ ಕಂಡಿತ್ತು. ಅವಳ ಬಳಿಯಲ್ಲೂ ಎರಡು ಕಾರುಗಳು ಇತ್ತು. ಒಂದನ್ನು ನಿಲ್ಲಿಸಿಕೊಳ್ಳಲು ಸ್ಥಳವಿಲ್ಲದೆ ತನ್ನ ಕೊಲೀಗ್‌ಗೆ ಕೊಟ್ಟುಬಿಟ್ಟಿದ್ದಳು. ಅವಳು ಕೆಲಸ ಮಾಡುವ ಆಫೀಸ್‌ನ ಕಾರಿಗೆ ಪಾರ್ಕಿಂಗ್‌ನ ಜಾಗದಲ್ಲಿ ಇತ್ತೀಚೆಗೆ ಸ್ಥಳ ದೊರೆತಿತ್ತು. ಅದು ಸೀನಿಯಾರಿಟಿಯ ಮೇಲೆ ಮತ್ತು ಇತ್ತೀಚೆಗೆ ಅಲ್ಲಿ ಕೆಲಸ ಮಾಡುವ ವ್ಯಕ್ತಿ ಬೇರೆ ಕಡೆ ಕೆಲಸಕ್ಕೆ ಹೋಗಿದ್ದರಿಂದ, ತೆರವಾದ ಪಾರ್ಕಿಂಗ್ ಜಾಗ ಇವಳಿಗೆ ಅಲಾಟ್ ಆಗಿತ್ತು. ಬಸ್ಸಿನಲ್ಲಿ ಬರುತ್ತಿದ್ದವಳು ಅಂದಿನಿಂದ ಕಾರಿನಲ್ಲಿ ಬರುತ್ತಿದ್ದಳು. ಕಾರು ಕೊಳ್ಳುವುದು, ಪಡೆಯುವುದು ಸುಲಭ. ಆದರೆ

ಪಾರ್ಕಿಂಗ್ ಮಾಡಲು ಜಾಗ ಸಿಗುವುದು ಕಷ್ಟ. ಮತ್ತು ಆ ಪಾರ್ಕಿಂಗ್‌ಗೆ ತೆರಬೇಕಾಗಿದ್ದ ಬಾಡಿಗೆ ದುಬಾರಿ.

ಅವಳಿಗಾಗಿ ಫೋನ್ ಕಾಲ್ ಕಾದಿತ್ತು ಹೊಟಲ್‌ನಲ್ಲಿ. ಅವಳ ಮಮ್ಮಿ ಡಯಾನ್ ಫೋನ್ ಮಾಡಿದ್ದರು. ಅರ್ಧ ಗಂಟೆಯ ನಂತರ ಮತ್ತೆ ಬಂತು ರಿಂಗ್. ಆಕೆ ಫೋನ್‌ನಲ್ಲಿಯೆ ತರಾಟೆಗೆ ತಗೊಂಡರು.

"ಏನು ನಿನ್ನ ಹುಚ್ಚಾಟ! ಇಲ್ಲೇನು ಕಮ್ಮಿ ಆಗಿತ್ತು? ಆಗಾಗ ನಾನು, ನಿನ್ನ ಡ್ಯಾಡಿ ವಿಚಾರಿಸ್ತಾನೇ ಇದ್ವಿ. ನೀನು ಒಬ್ಬ ಬಾಯ್ ಫ್ರೆಂಡ್‌ನ ಹುಡ್ಕಿಕೋಬೇಕಿತ್ತು. ಆ ಜನ ಎಲ್ಲಿದ್ದಾರೋ ಏನೋ ಸುಮ್ನೇ ಹುಡ್ಕಾಟ ನಿಲ್ಸಿ ಹಿಂದಿರುಗಿ ಬಾ" ಅಮೆರಿಕನ್ ಶೈಲಿಯ ಆಂಗ್ಲ ಭಾಷೆಯಲ್ಲಿಯೇ ಬುದ್ಧಿ ಹೇಳಿದರು.

"ಓಕೆ, ಮಾಮ್, ನಂಗೆ ಇಲ್ಲಿ ಉಳ್ಕೋ ಇಚ್ಛೆಯೇನು ಇಲ್ಲ. ಬಹುಶಃ ಅವ್ರು ಆದರಿಸಿಯಾರೆಂಬ ಕನಸು ಕೂಡ ಇಲ್ಲ ಜಸ್ಟ್ ಕ್ಯೂರಿಯಾಸಿಟಿ... ಒಮ್ಮೆ ನೋಡ್ಬೇಕು ಅಷ್ಟೆ." ತೋಡಿಕೊಂಡಳು.

ಡಯಾನ ಕ್ಲಿಂಟನ್‌ನಿಂದ ಬೇರೆಯಾಗಿ ಇನ್ನೊಂದು ಮದುವೆಯಾದ ನಂತರವು ಆಗಾಗ ಇವಳನ್ನು ವಿಚಾರಿಸುತ್ತಿದ್ದಳು. ಹುಟ್ಟಿದ ಹಬ್ಬದ ಸಮಯಕ್ಕೆ ಬೆಲೆ ಬಾಳುವ ಉಡುಗೊರೆಗಳನ್ನು ಕಳುಹಿಸುವ ವಾಡಿಕೆ ಇತ್ತು. ನೆನಪು ಅಳಿಸದಂತಿರಲು ಇವು ಪ್ರಮುಖ ಕಾರಣಗಳು.

ಎರಡು ದಿನದ ಸತತ ಪ್ರಯತ್ನದ ನಂತರ ಇಪ್ಪತ್ತು ವರ್ಷಗಳ ಹಿಂದೆ ಇದ್ದ ಎರಡು ಅನಾಥಾಲಯಗಳಲ್ಲಿ ಒಂದನ್ನು ಮುಚ್ಚಿತ್ತು. ಇನ್ನೊಂದು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಅಲ್ಲಿಯೇ ಹುಡುಕಾಟ ಪ್ರಾರಂಭಿಸಬೇಕಿತ್ತು ರೂತ್ ಕ್ಲಿಂಟನ್.

ವಾರ್ಡನ್ ಶಾರದ ಅವರನ್ನು ಕಂಡಾಗ ಆಕೆ ಕೈಯಾಡಿಸಿಬಿಟ್ಟರು. "ನಾನ್ಬಂದು ಐದು ವರ್ಷವಾಯ್ತು. ಹಿಂದಿನ ಡಾಕ್ಯುಮೆಂಟ್ಸ್, ವಿವರಗಳ ಬಗ್ಗೆ ನಂಗೇನು ಗೊತ್ತಿಲ್ಲ. ಛೇರ್ಮನ್ ಅಂಡ್ ಫೌಂಡರ್‌ನ ಮೀಟ್ ಮಾಡಿ. ಅವ್ರಿಂದ ನಿಮ್ಗೇನಾದ್ರೂ ಹೆಲ್ಪ್ ಆಗುತ್ತೇನೊ ಗೊತ್ತಿಲ್ಲ."

ನಯ, ವಿನಯವಿಲ್ಲದ ಮಾತುಗಾರಿಕೆ, ವರ್ತಿಸುವ ರೀತಿ ಅವಳಲ್ಲಿ ಬೇಸರವನ್ನುಂಟು ಮಾಡಿತು.

"ಎಕ್ಸ್‌ಕ್ಯೂಜ್ ಮಿ. ಈ ಚಾಕಲೇಟುಗಳನ್ನಾದ್ರೂ ಮಕ್ಕಿಗೆ ಕೊಡ್ಬಹುದ?" ದನಿ ತಗ್ಗಿಸಿ ಕೇಳಿದಾಗ ಆಕೆಯ ಮುಖ ಮತ್ತಷ್ಟು ಗಂಟಾಯಿತು "ಕೊಟ್ಹೋಗಿ, ನಾವೇ ಕೊಡ್ತೀವಿ."

"ನಂಗೆ ಕೊಡೋ ಆಸೆ" ಎಂದಳು.

ಕಡೆಗೆ ಒಪ್ಪಿಗೆ ಸಿಕ್ಕಿತು. ಇಡೀ ಅನಾಥಾಶ್ರಮ ಸುತ್ತಿದಳು. ತೊಟ್ಟಿಲಲ್ಲಿದ್ದ ಇಪ್ಪತ್ತು ದಿನಗಳ ಹೆಣ್ಣು ಮಗುವಿನಿಂದ ಹಿಡಿದು ಹತ್ತರ ವಯಸ್ಸಿನ ಮಕ್ಕಳು ಕೂಡ ಇದ್ದರು. ಮೂರು ವಯಸ್ಸಿಗಿಂತ ಅಧಿಕ ವಯಸ್ಸಿನ ಮಕ್ಕಳನ್ನು ಅದೇ ಬಿಲ್ಡಿಂಗ್‌ನಲ್ಲಿ ಬೇರೆಡೆ ಇರಿಸಿದ್ದರು. ಪ್ರತಿಯೊಂದರಲ್ಲು ಒಂದಿಷ್ಟು ವ್ಯತ್ಯಾಸ. ಎಲ್ಲೆಡೆ ಸುತ್ತಿ ಬಂದಳು. ಕೂತ, ಬೆರಳು ಚೀಪುವಾ, ಬೋರಲು ಮಲಗಿದ ಮಕ್ಕಳನ್ನು ಕಂಡಾಗ ತಾನು ಇಂಥ ಸ್ಥಿತಿಯಲ್ಲಿಯೇ ಅನಾಥಾಶ್ರಮಕ್ಕೆ ಬಂದಿರಬಹುದು, ಅಥವಾ ಜನಿಸಿದ ಮಗುವನ್ನು ಬಟ್ಟೆಯಲ್ಲಿ ಸುತ್ತಿ ತಂದು ಅನಾಥಾಶ್ರಮಕ್ಕೆ ಕೊಟ್ಟಿರಬಹುದು. ಬೇರೆ ಕಾರಣಗಳು, ಸಂದರ್ಭಗಳು ಇಲ್ಲಿಗೆ ತಂದು ತಲುಪಿಸಿರಬಹುದು. ಅವಳ ಕಣ್ಣಂಚು ಒದ್ದೆಯಾಯಿತು.

ತೊಟ್ಟಿಲಿನಲ್ಲಿರುವ ಮಗುವನ್ನೆತ್ತಿಕೊಂಡಳು.

"ಮಕ್ಳಿಗೋಸ್ಕರ ಬಂದ್ರಾ?" ಜೊತೆಯಲ್ಲಿದ್ದ ಆಯಾ ಕೇಳಿದಳು "ಈ ಮಗು ಆಶ್ರಮಕ್ಕೆ ಬಂದು ಮೂರು ದಿನಗಳಾಯಿತಷ್ಟೆ. ದತ್ತಕ ಮಾಡ್ಕೊಳ್ಳಿ. ಅದಕ್ಕು ಈಗ ಕಾಯಿದೆ ಕಾನೂನುಗಳ್ನ ಬಿಗಿಗೊಳಿಸಿದ್ದಾರೆ. ಫಾರಿನ್ ಜನ ಒಟ್ಟು ಹತ್ತು ಮಕ್ಳನ್ನ ದತ್ತಕ ತಗೊಂಡ್ ಹೋದ್ರು" ವಿವರ ನೀಡಿದಳು.

ಹತ್ತೊಂಬತ್ತು ವರ್ಷಗಳ ಹಿಂದೆ ತಾನು ಈ ಆಶ್ರಮದಿಂದ ಕ್ಲಿಂಟನ್, ಡಯಾನ ದಂಪತಿಗಳ ಕರುಣೆಯ ಕೂಸಾಗಿ ಹೋಗಿರಬೇಕು. ಗಂಟಲುಬ್ಬಿತು. ಕೃತಜ್ಞತೆಯಿಂದ ನೆನೆದಳು ದಂಪತಿಗಳನ್ನು. ಈಗ ಬೇರ್ಪಟ್ಟು ಬದುಕುತ್ತಿದ್ದರೂ ಅವಳಿಗೆ ಅನ್ಯಾಯ ಮಾಡಿರಲಿಲ್ಲ.

ಅಂದು ಆಫೀಸ್ ಮುಚ್ಚಿದ್ದರಿಂದ ಮರುದಿನ ಮತ್ತೆ ಹೋದಳು ಬೆಳಿಗ್ಗೆ ಬೆಳಿಗ್ಗೆಯೇ. ಆಶ್ರಮದ ಪ್ರಾರ್ಥನೆಯ ಸಮಯ. ಅನಾಥಾಲಯದ ಫೌಂಡರ್, ಈಗಿನ ಪ್ರೆಸಿಡೆಂಟಾದ ಗಣಪತಿ ಆ ಸಮಯದಲ್ಲಿ ಹಾಜರಿದ್ದರು. ಹಸನ್ಮುಖರಾಗಿ ಬರ ಮಾಡಿಕೊಂಡರು.

"ಮಕ್ಳ ಜೊತೆ ಉಪಾಹಾರ ಮಾಡೋಕೆ ನಿಮ್ಗೆ ಅಭ್ಯಂತರ ಇಲ್ಲ

ತಾನೇ?" ಪ್ರಶ್ನಿಸಿದಾಗ ತಾನು ಕೂಡ ಇಲ್ಲಿನ ಮಗುವೆನ್ನಿಸಿ ವೇದನೆಯ ಮುಗುಳು ಅವಳ ತುಟಿಯಂಚನ್ನು ಅಲಂಕರಿಸಿತು.

ಒಗ್ಗರಣೆ ಹಾಕಿದ ಅವಲಕ್ಕಿ, ಹಾಲು ಸರಬರಾಜಾಯಿತು. ಗಣಪತಿಗಳು ಕೂಡ ಮಕ್ಕಳ ಮಧ್ಯೆ ಕೂತು ತಿಂದರು. ತೊಟ್ಟಿದ್ದು ಖಾದಿ ಜುಬ್ಬಾ, ಪೈಜಾಮ. ಶ್ರೀಮಂತಿಕೆಯ ಕುರುಹೆನಿಸಿದ್ದ ವಜ್ರದ ಉಂಗುರ. ಕುತ್ತಿಗೆಯಲ್ಲಿ ಸರ ಅಂಥದೇನು ಇರಲಿಲ್ಲ. ಕಪ್ಪುಗಣ್ಣಿನ, ಅರೆ ನೆರೆತ ಕೂದಲಿನ ಅರವತ್ತು ವರ್ಷ ಮೀರಿದ ವ್ಯಕ್ತಿ ಸರಳವಾಗಿ, ಸಂಶೋಧನೆಗೆ ಸರಿಯಾಗಿ ವ್ಯಕ್ತಿಯಾಗಿ ಕಂಡ.

ನಂತರ ಅನಾಥಾಶ್ರಮದ ಇಂಚು ಇಂಚು ಪರಿಚಯಿಸಿದರು. ಶ್ರದ್ಧೆ ಇತ್ತು, ಆಸಕ್ತಿ ಇತ್ತು. ಸಾರ್ಥಕ ಕಾರ್ಯ ಮಾಡುತ್ತಿದ್ದೇನೆಂಬ ಧನ್ಯತೆ ಕಂಡಿತು ಅವರಲ್ಲಿ.

ಒಂಬತ್ತು ತಿಂಗಳ ಹೆಣ್ಣು ಮಗುವನ್ನೊಂದು ತಂದು ಅವಳ ಮುಂದಿಡಿದಳು. "ಸಾಕಲಾರದೆ ಕೆಟ್ಟ ಭವಿಷ್ಯಕ್ಕೆ ಅಂಜಿ ಈ ಮಗುನ ಇಲ್ಲಿ ಬಿಟ್ಹೋದ್ರು. ತಾಯಿ ತಂದೆ ಇದ್ದು ಕೂಡ ಅನಾಥ ಮಗು" ನೋವಿನ ದನಿಯಲ್ಲಿ ನುಡಿದವರು ಆಯಾ ಕೈಯಲ್ಲಿ ಮಗುವನ್ನು ಕೊಟ್ಟರು.

ಆಶ್ರಮದ ಮುಂದಿನ ಆಫೀಸ್‌ಗೆ ಕರೆದೊಯ್ದರು. ಅದುವರೆಗೂ ಅವಳು ಬಂದ ಕಾರಣವಾಗಲೀ, ಯಾರೆಂದಾಗಲೀ ವಿಚಾರಿಸಿರಲಿಲ್ಲ. ವಾರ್ಡನ್, ಆಯಾಗಳ ಜೊತೆ ಒಬ್ಬ ಮ್ಯಾನೇಜರ್, ಒಬ್ಬ ಗುಮಾಸ್ತ, ಹೊರ ಕೆಲಸಕ್ಕೆ ಇಬ್ಬರು ಆಳುಗಳು ಇದ್ದರು. ಇಷ್ಟರ ಒಂದು ಚಿತ್ರಣವನ್ನು ಬಿಡಿಸಿಟ್ಟರು ಅವಳ ಮುಂದೆ. ಆದರ ಹಿಂದೆ ಗಣಪತಿಯವರ ಶ್ರಮ ಎದ್ದು ಕಾಣುತ್ತಿತ್ತು. ವಾರ್ಡನ್ ಒರಟುತನ, ಅಸಹನೆ ಕಾಡಿತು.

"ಡೋಂಟ್ ಮೈಂಡ್ ಸರ್, ಐ ವಾಂಟ್ ಸಮ್ ಇನ್‌ಫಾರ್ಮೇಷನ್" ಎಂದಾಗ ಕ್ಷಣ ಯೋಚಿಸಿದವರು "ಓಕೆ, ಬನ್ನಿ...." ದೊಡ್ಡ ಕಾಂಪೌಂಡ್‌ನ ಮಧ್ಯೆ ಇದ್ದ ರೂಮಿಗೆ ಕರೆದೊಯ್ದರು. ಅದು ಅಲ್ಲಿಗೆ ಬರುವ ವಿದೇಶಿ ಗೆಸ್ಟ್‌ಗಳಿಗಾಗಿ, ದತ್ತಕ ಪಡೆಯಲು ಬರುವ ಜನರಿಗಾಗಿ, ಡೊನೇಷನ್ ಕೊಡುವ ಜನರಿಗಾಗಿ ಸುಸಜ್ಜಿತಗೊಳಿಸಲಾಗಿತ್ತು.

ಕೂಡುವಂತೆ ಆಸನ ತೋರಿದ ಗಣಪತಿಗಳು. ಅವಳು ಕೂತ ನಂತರವೇ ತಾವು ಕೂತಿದ್ದು. ಇಷ್ಟು ವರ್ಷಗಳ ಬದುಕಿನ ಬಗ್ಗೆ ವಿರಕ್ತಿ ಹುಟ್ಟಿ ಇತ್ತೀಚಿನ ಒಂದೆರಡು ವರ್ಷಗಳಿಂದ ಬೇರೆ ರೀತಿಯ ಅಂದರೆ

ಸರಳವಾಗಿ, ಸಮಾಜಕ್ಕೆ ಉಪಕೃತರಾಗಿ ಮಾನವೀಯ ಗುಣಗಳಿಗೆ ಬದ್ಧರಾಗಿ ಜೀವನ ಕಳೆಯುತ್ತಿದ್ದರು. ಈಗಿನ ಜೀವನದ ರೀತಿಯೇ ಬೇರೆಯಾಗಿತ್ತು.

"ಹೇಳಿ, ಮೇಡಮ್, ಯಾವ್ದೇ ಸಂಕೋಚ ಬೇಡ. ಕೆಲವು ಸೀಕ್ರೆಟ್‌ಗಳ್ನ ಗೋಪ್ಯವಾಗಿ ಕಾಯ್ದಿಡಲಾಗುತ್ತೆ" ಭರವಸೆ ಇತ್ತರು.

ತಲೆ ಅಲುಗಿಸಿ ಮುಗುಳ್ನಗೆ ಬೀರಿದಳು. "ಹೇಳೋದೇನಿಲ್ಲ, ನಂಗೆ ನಿಮ್ಮಿಂದ ಕೆಲವು ವಿಷ್ಯಗಳ್ನ ತಿಳಿಯಬೇಕಿದೆ. ವಿದೇಶೀಯರು, ಕೆಲವು ವಿದೇಶೀ ಸಂಸ್ಥೆಗಳು ಇಲ್ಲಿನ ಅನಾಥಾಲಯಗಳಿಂದ ಮಕ್ಳನ್ನ ದತ್ತು ಪಡೆದಿದೆ. ಅದ್ರಲ್ಲಿ ಒಂದು ಮಗು...." ತಡವರಿಸಿದಳು. ಉದ್ವೇಗದಿಂದ ಅವಳ ಗಂಟಲು ಕಟ್ಟಿತು.

ಗಾಜಿನ ಹೂಜಿಯಿಂದ ಗ್ಲಾಸ್‌ಗೆ ನೀರು ಬಗ್ಗಿಸಿ ಅವಳ ಮುಂದಿಡಿದರು, "ರಿಲ್ಯಾಕ್ಸ್ ಮಗು, ಯಾಕೋ ಏನೋ ತೀರಾ ಗೌರವವಾಗಿ ಯಾಗ್ಲೀ, ಬಹುವಚನದಿಂದಲಾಗ್ಲೀ ಸಂಬೋಧಿಸೋಕೆ ಕಷ್ಟವಾಗುತ್ತೆ. ಮಗ್ಳು ತರಹ ಆತ್ಮೀಯವಾಗಿ ಮಾತಾಡಿಸ್ಲೇಕೊಂತ ಅನ್ನಿಸುತ್ತೆ. ಅಭ್ಯಂತರ ಇಲ್ಲ ತಾನೇ?" ಆರ್ದ್ರತೆಯಿಂದ ಕೇಳಿದರು. ಇಲ್ಲವೆಂದು ತಲೆಯಾಡಿಸಿದವಳು ನೀರು ಕುಡಿದಿಟ್ಟು ಕೃತಜ್ಞತೆಯಿಂದ ಅವರತ್ತ ನೋಡಿದಳು.

ತಾನು ಯಾರೆಂದು ಹೇಳದಿದ್ದರೂ ಹತ್ತೊಂಬತ್ತು ವರ್ಷಗಳ ಹಿಂದೆ ಕ್ಲಿಂಟನ್, ಡಯಾನ ದಂಪತಿಗಳು ದತ್ತು ಪಡೆದ ಒಂದು ಹೆಣ್ಣು ಮಗುವಿನ ಹಿನ್ನೆಲೆ, ತಂದೆ ತಾಯಿ, ಇತರ ವಿಷಯಗಳು ತಿಳಿಯಬೇಕೆಂದಳು.

ಅಷ್ಟರಲ್ಲಿ ಯಾರೋ ಬಂದಿದ್ದರಿಂದ ಗಣಪತಿಗಳು ಎದ್ದು ಹೋದರು. ಬಂದ ಮ್ಯಾನೇಜರ್ ತಮ್ಮ ಅನಾಥಾಲಯದ ಕೆಲವು ನಿಯಮ, ನಿಬಂಧನೆಗಳ ಪಟ್ಟಿಯನ್ನು ತಂದುಕೊಟ್ಟ.

"ಹತ್ತೊಂಬತ್ತು ವರ್ಷಗಳ ಹಿಂದಿನ ರಿಕಾರ್ಡ್ಸ್ ತೆಗೆದು ನೋಡ್ಬೇಕು. ಸಮಯ ಬೇಕಾಗುತ್ತೆ. ಅದಕ್ಕೂ ಕಾರಣ ಅಂದರೇ ಸಾಧಾರಣ ಕಾರಣ ನೀಡಿದರೇ ಯಾವ್ದೇ ಮಾಹಿತಿ ಸಿಗೊಲ್ಲ. ಕೆಲವನ್ನಂತು ಕೊಡೋಕ್ಕಾಗೊಲ್ಲ. ನಿಮ್ಮ ವಿವರ, ವಿಳಾಸ, ಕಾರಣ ಬರೆದಿಟ್ಟು ಹೋಗಿ. ಆ ರೆಕಾರ್ಡ್ಸ್ ಪರಿಶೀಲಿಸಿದ ಈ ತಿಂಗಳಿನ ಮೀಟಿಂಗ್‌ನಲ್ಲಿ ಇಟ್ಟು ತೀರ್ಮಾನ ಮಾಡ್ತೀವಿ. ಆಮೇಲೆ ಬಂದು ಭೇಟಿ ಮಾಡ್ಬಹ್ದು. ಅಥ್ವಾ ನಾವೇ ನಿಮ್ಗೆ 'ಹೌದು' ಅಥವಾ 'ಇಲ್ಲ' ಅನ್ನೋ ಇನ್‌ಫಾರ್ಮೇಷನ್ ಕೊಡ್ತೀವಿ."

ಚೀಲದಿಂದ ನಾಣ್ಯಗಳನ್ನು ಸುರಿದಂತೆ ಎಲ್ಲಾ ವಿಷಯವನ್ನು ಸುರಿದುಬಿಟ್ಟರು ಅವರು.

"ಮೀಟಿಂಗ್ ಯಾವಾಗ ?" ಕೇಳಿದಳು.

"ಮುಂದಿನ ವಾರ ಅಂದರೆ 8ನೇ ತಾರೀಖು ಭಾನುವಾರ. ಕೆಲವೊಮ್ಮೆ ಯಾವ್ದೇ ಮುಖ್ಯ ವಿಷಯುಗಳು ಇಲ್ಲದಾಗ ಕಮಿಟಿಯ ಅರ್ಧದಷ್ಟಾದ್ರೂ ಸದಸ್ಯರು ಭಾಗವಹಿಸದಿದ್ದಾಗ ಮೀಟಿಂಗ್‌ನ ಮುಂದೂಡಬಹ್ದು. ಯಾವುದೇ ನಿರ್ಧಾರ, ನಿರ್ಣಯುಗಳು ಅಂಗೀಕಾರವಾಗ್ಬೇಕಾದ್ರೆ ಅರ್ಧದಷ್ಟು ಸದಸ್ಯರು ಬೆಂಬಲ ಸೂಚಿಸ್ಬೇಕು." ಮ್ಯಾನೇಜರ್ ಅನಾಥಾಲಯದ ನಿಯುಮಗಳನ್ನು ತಿಳಿಸಿದರು.

ಚಿಂತಿಸಿದಳು. ತಮ್ಮ ಟೆಡ್ಡಿ ಅಂದರೆ ಕ್ಲಿಂಟನ್ ಈಗಿನ ಹೆಂಡತಿಯ ಮಗ ಮುಜುಗರದಿಂದ ಫೋನಾಯಿಸಿದ್ದ "ಬೇಗ ಹಿಂದಿರುಗು, ಈ ಸಲ ವೆಕೇಷನ್‌ನ ನಿನ್ನೊತೆ ಕಳೀಬೇಕೂಂತ ಇದ್ದೆ. ಡ್ಯಾಡಿ, ಮಾಮ್ ಕೂಡ ಇದನ್ನೆ ಹೇಳಿದ್ರು" ಉತ್ತರಿಸದೆ ರಿಸೀವರ್ ಇಟ್ಟಿದ್ದಳು. ನೂರು ಆಸೆ, ಆಕಾಂಕ್ಷೆ, ಕನಸುಗಳನ್ನೊತ್ತು ಭಾರತಕ್ಕೆ ಬಂದಿದ್ದಳು. ಒಂದೇ ಒಂದು ಸಲ ತನ್ನ ಜನ್ಮಕ್ಕೆ ಕಾರಣರಾದವರನ್ನು ಅಥವಾ ಕನಿಷ್ಟ ಹೆತ್ತ ತಾಯಿಯನ್ನಾದರೂ ನೋಡಿ ಹಿಂದಿರುಗಬೇಕೆಂದುಕೊಂಡಿದ್ದಳು. ಆದರೆ ತಾನು ಪಡೆದ ಬಂದ ಅವಧಿಯಲ್ಲಿ ಅದು ಪೂರ್ಣವಾಗಬಹುದು ಅನ್ನಿಸಲಿಲ್ಲ.

"ಮೇಡಮ್...." ಎಚ್ಚರಿಸಿದ ಮ್ಯಾನೇಜರ್.

ಕ್ಷಣ ಮೌನವಹಿಸಿದವನು ಒಂದು ಪ್ಯಾಡ್, ಡಾಟ್ ಪೆನ್ನನ್ನು ಅವಳ ಮುಂದಿಟ್ಟು "ಗುರುತು ಹಾಕಿ ಆಫೀಸ್‌ನಲ್ಲಿ ಕೊಟ್ಟಿಡಿ, ತರಕಾರಿ ಲಾರಿ ಬಂದಂಗಿದೆ." ಹೊರಗೆ ಹೋದ.

ಒಮ್ಮೆ ಗಣಪತಿಯುವರನ್ನು ಮೀಟ್ ಮಾಡಿ ಅವರ ಮುಂದೆಯೇ ಹೇಳುವುದು ಸರಿಯೆನಿಸಿತು. ಈ ಮೀಟಿಂಗ್‌ನಲ್ಲಿ ತೀರ್ಮಾನವಾಗದಿದ್ದರೇ ಅವಳಿಗೆ ಡೀಟೈಲ್ ಸಿಕ್ಕುವಂತಿರಲಿಲ್ಲ. ಮೊದಲ ಹತ್ತು ಮೆಟ್ಟಿಲು ಇಲ್ಲದೆಯೇ ಹನ್ನೊಂದನೇ ಮೆಟ್ಟಿಲಿಗೆ ಪಾದವೂರುವುದು ಕಷ್ಟವೆನಿಸಿತು.

ಐದು ನಿಮಿಷದಲ್ಲಿ ಮತ್ತೆ ಬಂದರು ಗಣಪತಿ. ಬಹುಶಃ ಅರ್ಧ ದಿನವನ್ನು ಕಳೆಯುತ್ತಿದ್ದುದು ಅನಾಥಾಲಯದಲ್ಲಿ ಡಾಕ್ಟರ್ ಬಂದಾಗ, ಊಟ, ತಿಂಡಿಯ ವೇಳೆಗಳಲ್ಲಿ ಎದುರಿಗೆ ಇರುತ್ತಿದ್ದರು. ಮಕ್ಕಳಲ್ಲಿ 'ಅನಾಥಭಾವ' ಮೂಡುವುದನ್ನು ಸಹಿಸರು.

"ಏನಾದ್ರೂ ಸಹಾಯವಾಯಿತಾ ?" ಕೇಳುತ್ತ ಅವಳೆದುರು ಕೂತರು. ಮ್ಲಾನವದನಳಾಗಿದ್ದಳು "ನಂಗೊಂದಿಷ್ಟು ಡೀಟೈಲ್ಸ್ ಬೇಕಿತ್ತು. ಅನಾಥಾಲಯದ ನಿಯಮಗಳ ಪ್ರಕಾರ ತಕ್ಷಣ ಸಿಗೊಲ್ಲ. ನಾನು ಮೂರು ತಿಂಗ್ಳು ಭಾರತದಲ್ಲಿರೋಕೆ ವೀಸಾ ಪಡೆದು ಬಂದಿರೋದು. ಅದ್ರಲ್ಲಿ ಅಮೂಲ್ಯವಾದ ಒಂಬತ್ತು ದಿನಗಳು ಕಳ್ದುಹೋಗಿದೆ" ಎಂದಳು ನೋವಿನ ಸ್ವರದಲ್ಲಿ.

ಗಣಪತಿಗಳ ಕಿವಿಗಳು ಚುರುಕಾಯಿತು. ಕಣ್ಣು ಅಗಲಿಸಿ ನೋಡಿದರು. ಅಮೆರಿಕಾದ ಕಳೆ ಮುಖದ ಮೇಲಿದ್ದರು ಭಾರತೀಯ ಹೆಣ್ಣೇ, ಅನುಮಾನವಾಗಲಿಲ್ಲ.

ಸರಸರನೆ ಪ್ಯಾಡ್ ಮೇಲೆ ಗುರುತು ಹಾಕಿ ಅವರ ಮುಂದೆ ಇಟ್ಟಳು. ಪೂರ್ಣ ವಿವರವಿತ್ತು ಅದರಲ್ಲಿ. ಆಶ್ಚರ್ಯವೇನು ಎನ್ನಿಸಲಿಲ್ಲ. ಇತ್ತೀಚೆಗೆ ಸ್ವೀಡನ್‌ನ ಒಂದು ಪರಿವಾರ ಇದೇ ಅನಾಥಾಲಯ ಒಂದು ಗಂಡು ಒಂದು ಹೆಣ್ಣು ಮಗುವನ್ನು ಕಾನೂನಿನ ರೀತ್ಯಾ ದತ್ತಕ ಮಾಡಿಕೊಂಡು ಕರೆದೊಯ್ದಿತ್ತು. ಇಂಥದ್ದು ಹಲವು ಸಲ ನಡೆದಿರಬಹುದು. ಆದರೆ ಬೆಳೆದ ಮಕ್ಕಳು ಯಾರು ಇಂಥ ಕುತೂಹಲದಿಂದ ತಮ್ಮ ಹುಟ್ಟಿನ ಬಗ್ಗೆ ತಲೆ ಕೆಡಿಸಿಕೊಂಡು ತಾಯಿತಂದೆಯರನ್ನು ಹುಡುಕಿಕೊಂಡು ಬಂದಿರಲಿಲ್ಲ. ಇದು ಅಪರೂಪವೆನಿಸಿ ಮುದಗೊಂಡರು.

ನಿಧಾನವಾಗಿ ತಲೆಯೆತ್ತಿದವರು ಅವಳಲ್ಲಿ ನೋಟ ನೆಟ್ಟರು "ಅಲ್ಲಿ ಸುಖವಾಗಿಲ್ವಾ ?" ಸ್ವಲ್ಪ ಹಿಂಜರಿಕೆ ಅವರ ಕಂಠದಲ್ಲಿ ಮೂಡಿತು.

"ನೋ ಸರ್... ನೋ, ಅಲ್ಲಿ ಸುಖವಾಗಿಯೇ ಇದ್ದೀನಿ. ನನ್ನ ಬೋರ್ಡಿಂಗ್‌ನಲ್ಲಿ ಬಿಟ್ಟು ಓದಿಸಿದ್ರು. ಸ್ವಂತ ಫ್ಲ್ಯಾಂಟ್ ತೆಗ್ದುಕೊಟ್ಟಿದ್ದಾರೆ ಡ್ಯಾಡ್. ಮಮ್ಮಿ ಕಾರು ಕೊಡ್ಸಿದ್ದಾರೆ. ನಾನೇ ಒಂದು ಸ್ವಂತ ಕಾರು ಕೊಂಡಿದ್ದೀನಿ. ಕೆಲ್ಸ ಇದೆ. ಬ್ಯಾಂಕ್ ಬ್ಯಾಲೆನ್ಸ್ ಇದೆ. ಆದ್ರೂ.... ಐ ಫೀಲ್ ಲೋನ್ಲಿ" ಕಣ್ಣೀರು ಸುರಿಸಿದಳು.

ಬಹುಶಃ ನೀನು ಇಂಡಿಯಾದಲ್ಲಿ ಇದ್ದಿದ್ದರೇ ಇಷ್ಟೊಂದು ಅನುಕೂಲ ಸಿಕ್ಕುತ್ತಿತ್ತೋ, ಇಲ್ಲವೋ ಎಂದುಕೊಂಡರೂ ಬಾಯಿ ಬಿಟ್ಟು ಹೇಳಲಿಲ್ಲ.

ಇದು ತಿಳಿಯುವುದರಿಂದ ಮತ್ತಷ್ಟು ಅಸುಖಿಯಾಗಬಹುದೆಂದು ಕೊಂಡರು. ತಮ್ಮ ಅನಾಥಾಲಯದಿಂದ ಹೋದ ಹುಡುಗಿ ಅಂಥ ದೊಡ್ಡ

ದೇಶದಲ್ಲಿ ಒಳ್ಳೆಯ ಬದುಕನ್ನು ಸಾಗಿಸುತ್ತಿದ್ದಳೆಂದು ತಿಳಿದು ಅವರಿಗೆ ಸಂತೋಷವೇ ಆಯಿತು.

"ಸಮಾಧಾನ ಮಾಡ್ಕೋ, ನೀನು ಅದೃಷ್ಟವಂತೆ. ಒಳ್ಳೆ ತಾಯ್ತಂದೆ ಸಿಕ್ರು. ಉತ್ತಮ ನಾಗರಿಕ ಬದ್ಕು ನಿಮ್ಮದಾಯ್ತು. ನಾವು ಎಷ್ಟೇ ಎಚ್ಚರವಹಿಸಿದ್ರೂ, ಕಾನೂನಲ್ಲಿ ಎಷ್ಟೇ ಬಿಗಿ ಇದ್ರೂ ದತ್ತಕ ಹೋದ ಮಕ್ಳು ಎಲ್ಲಾ ಸುಖವಾಗಿಲ್ಲ. ತಮ್ಮ ಹುಟ್ಟಿನ ಬಗ್ಗೆ ಕುತೂಹಲ ಸಹಜವೇ. ಆದ್ರೆ ಅದ್ರಿಂದ ಪ್ರಯೋಜನವಿಲ್ಲ. ಬೇಡವಾದ ಸಂತಾನಗಳೇ ಅನಾಥಾಲಯಕ್ಕೆ ಬರೋದು. ವಸ್ತುಸ್ಥಿತಿ ಹೀಗೆ. ಎಲ್ಲರ ಹಿನ್ನಲೇನು ನಮ್ಗೇ ತಿಳಿದಿರೋಲ್ಲ. ಎಲ್ಲೋ ಬೀದಿ ಪಾಲಾದ ಮಕ್ಳನ್ನ ಯಾರು ಯಾರೋ ಇಲ್ಲಿಗೆ ತಂದು ಸೇರಿಸ್ತಾರೆ. ಅವ್ರಿಗೂ ಆ ಮಕ್ಳುನ ಹೆತ್ತವ್ರ ಬಗ್ಗೆಯಾಗ್ಲಿ, ಅದರ ಸ್ಥಿತಿಗೆ ಕಾರಣರಾದವ್ರ ಬಗ್ಗೆಯಾಗ್ಲೀ ತಿಳಿದಿರೋಲ್ಲ" ಅರ್ಥವಾಗುವಂತೆ ಬಹಳ ಸ್ಪಷ್ಟವಾಗಿ ಹೇಳಿದರು.

ಈ ಮಾತುಗಳನ್ನು ಕ್ಲಿಂಟನ್ ಕೂಡ ಮಗಳಿಗೆ ಹೇಳಿದ್ದರು. ಆದರೂ ಅವಳ ಕನಸು, ಆಕಾಂಕ್ಷೆಯೆಲ್ಲಿ ಹೆತ್ತವರನ್ನು ಕಾಣುವುದು.

"ಪ್ಲೀಸ್, ಹೆಲ್ಪ್ ಮೀ ಸರ್... ನಾನು ಅದಕ್ಕೋಸ್ಕರ ಭಾರತಕ್ಕೆ ಬಂದಿದ್ದು. ನಿರಾಶೆಯೊತ್ತು ಹಿಂದಿರೋಗೋದು ಕಷ್ಟ. ಪ್ಲೀಸ್...." ರಿಕ್ವೆಸ್ಟ್ ಮಾಡಿಕೊಂಡಳು. ಕೆಂಪಗಾದ ಕೆನ್ನೆಗಳು, ಹನಿದುಂಬಿದ ಕಣ್ಣುಗಳು, 'ಸೃಷ್ಟಿ'ಯ ತಂತ್ರವೆನಿಸಿತು ಅವರಿಗೆ.

ಕ್ಲಿಂಟನ್‌ರ ಪತ್ರ, ಇಲ್ಲಿ ದತ್ತಕ ಪಡೆದ ನಂತರ ಆ ಮಗುವಿನೊಂದಿಗೆ ಪ್ರೊಫೆಸರ್ ರಾಯ್ ಮತ್ತು ಕ್ಲಿಂಟನ್ ದಂಪತಿಗಳು ತೆಗೆಸಿಕೊಂಡ ಹಳೆಯ ಫೋಟೋವನ್ನು ಅವರಿಗೆ ಇತ್ತಳು. ನಂಬಲು ಹುಡುಕಾಟಕ್ಕೆ ಒಂದಿಷ್ಟು ಇದೆಲ್ಲ ಸಹಾಯಕವೇ.

ತಕ್ಷಣ ಮ್ಯಾನೇಜರ್‌ನ ಕರೆಸಿ ಇಂದಿನ ರಾತ್ರಿಯೇ ತುರ್ತು ಮೀಟಿಂಗ್ ಕರೆಯಲು ಆಜ್ಞಾಪಿಸಿ ಹತ್ತೊಂಬತ್ತು ವರ್ಷಗಳ ಹಿಂದೆ ಅಂದರೆ 1976ನೇ ಇಸವಿಯ ಕಡತವನ್ನು ಹುಡುಕಿ ಡೀಟೈಲ್ ತಿಳಿಸಲು ಹೇಳಿದರು.

"ರೂತ್, ಮಧ್ಯಾಹ್ನದ ಊಟ ನಮ್ಮನೆಯಲ್ಲಿ ಮಾಡ್ಬಹುದಲ್ಲ. ಭಾರತೀಯ ಕುಟುಂಬ ಜೀವನ ಅನನ್ಯ ಅಭ್ಯಾಸಯೋಗ್ಯ. ಇಲ್ಲಿಗೆ ನೀನೇನು ಬೇರೆಯಲ್ಲ" ಅರ್ಥಗರ್ಭಿತವಾಗಿ ಹೇಳಿದರು ಗಣಪತಿ.

ಟಾಟಾ ಎಸ್ಟೇಟ್ ಕಾರು ಹತ್ತಿದರು. ಒಬ್ಬರ ಓಡಾಟಕ್ಕೂ ಅವರು

ಬಳಸುತ್ತಿದ್ದುದು ಇದೇ ಕಾರು. ಒಂದು ರೀತಿಯಲ್ಲಿ ಮೊಬೈಲ್ ವ್ಯಾನ್, ಆಂಬುಲೆನ್ಸ್ ಇದ್ದಂಗೆ. ರಸ್ತೆಯಲ್ಲಿ ಆಕಸ್ಮಿಕಗಳು ಜರುಗಿದಾಗ ಇವರ ಕಾರು ಮಾತ್ರವಲ್ಲ, ಡ್ರೈವರ್-ಕಮ್-ಹೆಲ್ಪರ್ ಆಗಲು ಅವರು ಸದಾ ಸಿದ್ಧ. ಆಕ್ಸಿಡೆಂಟಾದರೆ ಆ ಪೇಷಂಟ್‌ನ ಆಸ್ಪತ್ರೆಗೆ ಸೇರಿಸಿ, ಅಲ್ಲಿನ ಬಂದೋಬಸ್ತು ನೋಡಿಕೊಂಡು ಅವರ ಮನೆಯವರಿಗೆ ವಿಷಯ ಮುಟ್ಟಿಸಿ ಅಗತ್ಯವೆನಿಸಿದರೇ ತಮ್ಮ ರಕ್ತ ಕೊಟ್ಟು, ಇಲ್ಲ ಬೇರೆ ಗ್ರೂಪ್‌ನ ರಕ್ತ ಬೇಕೆನಿಸಿದರೆ ರಕ್ತದಾನಿಗಳನ್ನು ಹುಡುಕಿಕೊಂಡು ಅಲೆದಾಡಿ ಪೇಷಂಟ್ ಸ್ಥಿತಿಯನ್ನು ನೋಡಿಕೊಂಡೇ ಮನೆಗೆ ಹಿಂದಿರುಗುತ್ತಿದ್ದುದು. ಸಮಯದ ಪರಿವೆಯೇ ಇರುತ್ತಿರಲಿಲ್ಲ ಈ ಮನುಷ್ಯನಿಗೆ.

ರೋಡಿನಲ್ಲಿ ಗಕ್ಕನೆ ಕಾರು ನಿಂತಿತು. ಅವಸರವಸರವಾಗಿ ಇಳಿದ ಗಣಪತಿಗಳು ಇನ್ನೊಬ್ಬರ ಸಹಾಯದಿಂದ ಒಬ್ಬ ಹುಡುಗನನ್ನು ನಡೆಸಿಕೊಂಡು ಬಂದರು. ತಮ್ಮ ಸ್ವಂತ ಮಗನೇ ಪೆಟ್ಟು ತಿಂದಷ್ಟು ಗಾಬರಿಯಾಗಿದ್ದರು. ತಲೆ ಮತ್ತು ಮೊಣಕಾಲಿಗೆ ಪೆಟ್ಟಾಗಿ ರಕ್ತ ಬರುತ್ತಿತ್ತು ಅಷ್ಟೇ.

ಒಂದು ಕ್ಲಿನಿಕ್‌ನ ಮುಂದೆ ಕಾರು ನಿಂತಿತು. ಕ್ಷಮೆ ಯಾಚಿಸಿ ಇಳಿದು ಹೋದ ಹತ್ತು ನಿಮಿಷದಲ್ಲಿ ಬ್ಯಾಂಡೇಜ್ ಹಾಕಿಸಿಕೊಂಡು ಬಂದವರು ಅವನಿಂದ ವಿಳಾಸ ಪಡೆದು ಮನೆಗೆ ಸೇರಿಸಿದ ನಂತರವೇ ಕಾರು ಅವರ ಮನೆಯ ದಾರಿ ಹಿಡಿದಿದ್ದು.

ದೊಡ್ಡ ಗೇಟಿನ ವಾಚ್‌ಮನ್ ಅತ್ಯಂತ ಭಯ ಭಕ್ತಿಯಿಂದ ಸೆಲ್ಯೂಟ್ ಹೊಡೆದು ಗೇಟ್ ತೆರೆದ. ಕಾರು ಮುಂದಕ್ಕೆ ಹೋಯಿತು. ಕಾಂಪೌಂಡ್‌ನ ಆವರಣವೇ ಅತಿ ದೊಡ್ಡದು. ಒಂದರ ಮೇಲೊಂದರಂತೆ ಸಾವಿರಾರು ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಬಹುದಿತ್ತು. ನೀತಿ, ನಿಯಮ ಅನುಸರಿಸಿ ಪಾರ್ಕ್ ಮಾಡದೇ ಪ್ರಕೃತಿ ಸಹಜವಾದ ಕಾಡಿನಂತೆ ಬೆಳೆಸಿದ್ದರು.

"ವಂಡರ್‌ಫುಲ್ !" ಎಂದಳು ಇಳಿದ ಕೂಡಲೇ ಬರೀ ನಸು ನಕ್ಕರು. ಸಸ್ಯವೆಂದರೆ ಪ್ರಾಣ. ಸಿಕ್ಕ ಗಿಡಗಳನ್ನೆಲ್ಲ ತಂದು ನೆಟ್ಟಿದ್ದರು. ಅಪರಿಮಿತ ಪ್ರೇಮ. ಸೃಷ್ಟಿಯಲ್ಲಿನ ಪ್ರತಿಯೊಂದು ಆಹ್ಲಾದಕರವೆನ್ನುವ ಮನೋಭಾವ.

ಬಂಗ್ಲೆ ಅಲ್ಲ, ಅರಮನೆಯಂಥ ಮನೆ ಆಸನದ ವ್ಯವಸ್ಥೆಯಿಂದ ಹಿಡಿದು ಪ್ರತಿಯೊಂದು ಕಲಾತ್ಮಕವಾಗಿತ್ತು. ಸಂಪ್ರದಾಯಕ್ಕನುಗುಣವಾಗಿ.

ನಲ್ವತ್ತನೆಯ ವಯಸ್ಸಿನ ಅಥವಾ ಒಂದು ನಾಲ್ಕೈದು ವರ್ಷ ಹೆಚ್ಚಿರಬಹುದಾದ ಸ್ವಲ್ಪ ಬೊಜ್ಜು ಮೈನ ವ್ಯಕ್ತಿ ಎದುರಾದಾಗ ಪರಿಚಯಿಸಿದರು "ಇವ್ನು ನನ್ನ ಮೊದಲ ಮಗ. ಜಿಲ್ಲಾ ಕಮೀಷನರ್ ಆಗಿದ್ದಾನೆ." ಆ ವ್ಯಕ್ತಿ ಕೂಡ್ಲೇ ಅಂತಸ್ತಿನ 'ಅಹಂ' ತೋರಿಸದೆ ಪರಿಚಯದ ನಗೆ ಬೀರಿ ಒಂದೆರಡು ಮಾತುಗಳನ್ನಾಡಿ ಹೊರಟ.

ನಲವತೆದು ಜನರಿದ್ದ ಒಟ್ಟು ಕುಟುಂಬ. ಅಂದು ರಜೆಯ ದಿನವಾದುದ್ದರಿಂದ ಹೆಚ್ಚು ಕಡಿಮೆ ನಾಲ್ಕು ಐದು ಜನರನ್ನು ಬಿಟ್ಟು ಮಿಕ್ಕವರೆಲ್ಲ ಇದ್ದರು. ಒಬ್ಬೊಬ್ಬರನ್ನಾಗಿ ಕರೆದು ಪರಿಚಯಿಸಿದರು. 'ಅಬ್ಬ' ಎನ್ನಿಸಿತು ಅವಳಿಗೆ.

ಅಷ್ಟರಲ್ಲಿ ಒಂದು ಫೋನ್ ಬಂತು "ಅರುಣ, ಡ್ರೈವರ್‌ನ ಕರೀ ಅರ್ಜೆಂಟಾಗಿ" ಹೇಳಿದರು ಗಣಪತಿ. ಅವನು ಇಲ್ಲವೆಂದಾಗ ತಕ್ಷಣ ಹೊರಟು ನಿಂತರು. "ಬೇಗ್ಬಂದ್ಬಿಡ್ತೀನಿ, ನಿಂಗೇನು ಬೇಜಾರಾಗೊಲ್ಲ. ನಮ್ಮ ಮನೆಯ ಪ್ರತಿಯೊಬ್ರು ಮಾತುಗಾರರು."

ರೂತ್ ಕ್ಲಿಂಟನ್ ಎದ್ದು ನಿಂತಳು "ಎಲ್ಲರನ್ನು ನೋಡಿದಾಯ್ತು" ಗಣಪತಿಯವರ ಹೆಂಡತಿ ಕೈ ಹಿಡಿದು ಕೂಡಿಸಿದರು. "ಬೇಗ್ಬಂದ್ಬಿಡ್ತಾರೆ, ನಮ್ಜೊತೆ ಊಟ ಮಾಡ್ದೇ ಹೇಗೆ ಹೋಗ್ತೀಯಾ? ಅಮೆರಿಕಾದ ಹುಡ್ಗೀ, ನಮ್ಗೂ ಕುತೂಹಲ."

ಆಕೆಯನ್ನೆ ನೋಡಿದಳು. ಗಂಡನಿಗೆ ತದ್ವಿರುದ್ಧದಂತಿತ್ತು ಆಕೆಯ ಆಭರಣದ ವೈಭವ. ಗಟ್ಟಿ ಕರೀಮಣಿಯ ಎರಡೆಳೆಯ ಚೈನು, ಅದರ ಜೊತೆ ನಾಲ್ಕು ಎಳೆಯ ಮೋಪಿನ ಚೈನು. ಅವೆರಡಕ್ಕಿಂತ ಶೋಭಿಸುತ್ತಿದ್ದುದು ಬಿಳಿ ಕಲ್ಲಿನ ಪದಕದ ಚೈನು. ಎರಡು ಕೈಗಳಲ್ಲು ಕೆಂಪು, ಪಚ್ಚೆಯ ಚಿನ್ನದ ಬಳೆಗಳ ನಡುವೆ ಒಂದೊಂದು ಗಾಜಿನ ಬಳೆ. ಎರಡು ಕೈಗಳಲ್ಲು ಒಟ್ಟು ಐದು ಉಂಗುರಗಳು. ಕಿವಿಯಲ್ಲಿ ವಜ್ರದೋಲೆ, ಮೂಗಿನ ಬೊಟ್ಟುಗಳ ವಜ್ರಗಳು 'ಫಳಕ್' ಎನ್ನುತ್ತಿದ್ದವು. ಗದ್ದದ ತುಂಬ ಹರಿಶಿನ, ಕಾಸಗಲ ಕುಂಕುಮ ಹಣೆಯಲ್ಲಿ. ಕರಿ, ಬಿಳಿ ಕೂದಲುಗಳು ತುರುಬು. ಅದರ ಮೇಲೊಂದು ಮಲ್ಲಿಗೆಯ ದಂಡೆ. ಸೊಂಟಕ್ಕೆ ಬಂಗಾರದ ಡಾಬು, ಹೆಜ್ಜೆ ಹೆಜ್ಜೆಗೂ ಸದ್ದು ಮಾಡುವ ಕಾಲುಂಗುರ. ಯಾಕೋ ಏನೋ ಕಾಲು ಮುಟ್ಟಿ ನಮಸ್ಕಾರ ಮಾಡಬೇಕೆನಿಸಿತು, ಇದು ಭಾರತೀಯ ಪದ್ಧತಿ,

ಇಷ್ಟವೆನಿಸಿತು. ಬಿಂಕ ಬಿಗುವಿಾನದ ಪರದೆಗಿಂತ ಮನಸೋ ಇಚ್ಛೆ ನಡೆದುಕೊಳ್ಳುವುದೇ ಸರಿಯೆನಿಸಿತು.

ತಕ್ಷಣ ಸಂಕೋಚ ತೊರೆದು ಆಕೆಯ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡಿದಳು. ಬಗ್ಗಿ ಎತ್ತಿ ಭುಜ ತಡವಿದರು. ಅವರ ಹಿಂದೆ ಸುತ್ತಲೂ ಒಂದು ಹಿಂಡು. ಮರಿ ಮಕ್ಕಳನ್ನು ಕಂಡ ಅಜ್ಜಿ ಆಕೆ ದೊಡ್ಡ ಸಂಸಾರ ಒಡತಿಯನ್ನು ಭಾವನಾತ್ಮಕ ಸಂಬಂಧಗಳು ಅತ್ಯಂತ ಮೃದುವಾಗಿ ಒಳ್ಳೆಯವಳನ್ನಾಗಿ ಮಾಡಿತ್ತು.

ನಾಲ್ಕರ ಸುಮಾರಿಗೆ ಒಂದಿದ್ದು ಗಣಪತಿಗಳು. ಮೌನವಾಗಿ ಸ್ನಾನಕ್ಕೆ ಹೋದರು. ಅರುಂಧತಿ ಆಕಾಶದತ್ತ ನೋಟ ಹರಿಸಿದಳು "ಯಾರದೋ ಪಯಣಕ್ಕೆ ಅಜ್ಜ ಸಾರಥಿಯಾಗಿದ್ದರೇನೋ" ಮಾತನ್ನ ತೇಲಿಸಿದಳು. ಆಮೇಲೆ ಸಂಗತಿ ತಿಳಿದಿದ್ದು - ಯಾರದೇ ಶವ ತಮ್ಮ ವಾಹನದಲ್ಲಿ ಸಾಗಿಸಲು ಸಿದ್ಧ ಗಣಪತಿಗಳು. ಜಾತಿ, ಧರ್ಮ, ಮತಗಳ ಭೇದವಿಲ್ಲ ಅವರಿಗೆ ಬಹುಶಃ ಅದನ್ನೆಲ್ಲ ಮೀರಿ ಬೆಳೆದಿದ್ದರು.

ಅರ್ಧ ಗಂಟೆಯ ನಂತರ ಅವಳ ಮುಂದೆ ಬಂದು ಕೂತವರು ಅಕ್ಕರೆಯಿಂದ ಕ್ಷಮೆ ಯಾಚಿಸಿದರು "ಕ್ಷಮಿಸಮ್ಮ ರೂತ್, ಒಂದು ಅರ್ಜೆಂಟ್ ಕೆಲ್ಸದ ಮೇಲೆ ಹೋಗ್ಬೇಕಾಗಿ ಬಂತು."

ಆ ವೇಳೆಗೆ ಒಂದು ದೊಡ್ಡ ಲೋಟದ ತುಂಬ ನೀರು ತಂದಿಟ್ಟರು ಸೊಸೆ "ಕೆಲವು ನಿಯಮಗಳನ್ನಾದ್ರೂ ನಮಗಾಗಿ ಉಲ್ಲಂಘಿಸಿ, ಯಾವು ಯಾವ್ದೋ ಕಾರಣಗಳಿಗೆ ಊಟ ಬಿಟ್ಟರೇ?" ಬೇಸರವಿತ್ತು ಆಕೆಯ ದನಿಯಲ್ಲಿ.

ಇಡೀ, ಲೋಟ ನೀರು ಖಾಲಿ ಮಾಡಿಟ್ಟರು. "ನಿಯಮ ಅಂಥದೇನಿಲ್ಲ, ಯಾಕೋ ತಟ್ಟೆಯ ಮುಂದೆ ಕೂಡೋ ಇರಾಧೆ ಇಲ್ಲ. ಎಲ್ಲರದು ಊಟ ಆಯ್ತು ತಾನೇ?" ಮಿಕ್ಕವರ ಬಗ್ಗೆ ವಿಚಾರಿಸಿಕೊಂಡರಷ್ಟೆ.

ವಂಶಪಾರಂಪರ್ಯ ವಜ್ರಗಳ ವ್ಯಾಪಾರಿಗಳು. ಬಹುಶಃ ಮೂಲ ಆಸ್ತಿ, ವಜ್ರಾಭರಣಗಳು ಬೆಲೆ ಕಟ್ಟಲು ಕೂಡ ಕಷ್ಟ. ಒಂದು ಹಂತದವರೆಗೂ ಬಿಗಿ ಧೋರಣೆಯ ಕಟ್ಟಾ ವ್ಯಾಪಾರಿ ಮನೋಭಾವದ ಗಣಪತಿಗಳು ಬದಲಾಗಿದ್ದು ಈಚೆಗೆ. ಸರಿಯಾಗಿ ಹೇಳಬೇಕೆಂದರೆ ಆರು ವರ್ಷಗಳ ಹಿಂದೆ ಒಂದು ಮಧ್ಯಾಹ್ನ ಏಕಾಏಕಿ ಮನೆಗೆ ಬಂದವರು,

ಕೈಗಳಲ್ಲಿನ ವಜ್ರದ ಉಂಗುರಗಳು, ಕುತ್ತಿಗೆಯಲ್ಲಿದ್ದ ಸರ, ಚಿನ್ನದ ವಾಚ್ ಚೈನ್‌ನಲ್ಲಿ ಕೂಡಿಸಿದ ಅತಿ ಬೆಲೆ ಬಾಳುವ ರೋಲೆಕ್ಸ್ ಗಡಿಯಾರವನ್ನು ಬಿಚ್ಚಿಟ್ಟರು. ಅದನ್ನು ಕೊಂಡಾಗ ಗಡಿಯಾರದಷ್ಟು ಭಾಗವನ್ನು ಉಳಿಸಿಕೊಂಡು ಅದಕ್ಕೆ ಹೊಂದಿಕೆಯಾಗುವಂಥ ಗಟ್ಟಿ ಚಿನ್ನದ ಚೈನ್ ಮಾಡಿಸಿ ತೀರಾ ಸಣ್ಣ ಸಣ್ಣ ಎಂಟು ಡೈಮಂಡ್‌ಗಳನ್ನು ಅಲ್ಲಲ್ಲಿ ಹುದುಗಿಸಿದ್ದರು ಕಲಾತ್ಮಕವಾಗಿ. ಆ ವಾಚ್‌ನ ಕಟ್ಟುತ್ತಿದ್ದವರು ಅವರೊಬ್ಬರೇ. ಹೆಮ್ಮೆ ಒಂದು ರೀತಿಯ ಅಹಂಭಾವ ತಾನು ಅಂಥ ವಾಚ್‌ನ ಒಡೆಯನೆಂದು. ಅವರ ಮಟ್ಟಿಗೆ ಅದೇನು ಅಂಥ ಬೆಲೆ ಬಾಳುವ ವಿನೂತನ ವಸ್ತುವಲ್ಲ. ಲಕ್ಷ ಲಕ್ಷ ಬಾಳುವಂಥ ವಜ್ರಗಳನ್ನು ಹುದುಗಿಸಿದ್ದ ನಗಗಳು ಅವರ ತಿಜೋರಿಯಲ್ಲಿತ್ತು, ಆದರೂ ಅದರ ಮೇಲೆ ವಿಶೇಷ ಮಮಕಾರ. ಅದನ್ನೆಲ್ಲ ಕಿತ್ತೆಗೆದು ತ್ಯಾಗ ಮಾಡಿದ್ದರು. ಸಾಕಷ್ಟು ಕಾಲದಿಂದ ಹೊಂದಿಕೊಂಡಿದ್ದ. ಉಂಗುರಗಳನ್ನು ಬೆರಳುಗಳಿಂದ ಬೇರ್ಪಡಿಸಲು ಸಾಕಷ್ಟು ಶ್ರಮಪಟ್ಟಿದ್ದರು.

ಮುಕ್ತ ಭಾವದಿಂದ ಊಟಕ್ಕೆ ಕೂತಾಗ ಬಲಗೈನಲ್ಲಿದ್ದ, ಸದಾ ಇರುತ್ತಿದ್ದ ಎರಡು ವಜ್ರದ ಉಂಗುರಗಳು ಕಾಣೆಯಾದಾಗ ಬಡಿಸುತ್ತಿದ್ದ ಸೊಸೆ ಆತಂಕಗೊಂಡರು. ಅವುಗಳು ಸದಾ ಅವರ ಬೆರಳುಗಳಲ್ಲಿ ಇರುತ್ತಿದ್ದವು. ಎಂದೂ ಬಿಚ್ಚಿಡುತ್ತಿರಲಿಲ್ಲ.

"ಮಾವ..... ಒಂದ್ಮಾತು" ಎಂದವಳು ನಿಲ್ಲಿಸಿದಾಗ ನಸುನಕ್ಕರು "ಅರ್ಥವಾಯ್ತು, ನಾನೇ ತೆಗ್ದು ಇಟ್ಟಿದ್ದೀನಿ. ಸಿಹಿ, ತುಪ್ಪ ಏನು ಬಡಿಸ್ಬೇಡ, ಬರೀ ಅನ್ನ ಸಾರು ಸಾಕು" ಎಂದವರು ಕೈ ಮುಗಿದು ಕೂತರು. ಹೊಟ್ಟೆ ತುಂಬಿಸಿಕೊಳ್ಳಲು ಮತ್ತು ಜಿಹ್ವಾ ಚಾಪಲ್ಯ ತೀರಿಸುವ ಪದಾರ್ಥಗಳಾಗಿ ಕಾಣಲಿಲ್ಲ ಅನ್ನ. ಸಾಕ್ಷಾತ್ ಭಗವಂತ ಸದ್ದಿಲ್ಲದೆ ತಟ್ಟೆಯಲ್ಲಿ ಕೂತಿದ್ದ. ಆ ಕ್ಷಣ ಅವರ ಮನದಲ್ಲಿದ್ದುದ್ದು ಆ ಭಾವನೆ.

ಮನೆಯುವರಿಗೆಲ್ಲ ಗಾಬರಿ, ಯಾರು ಸ್ಪಷ್ಟವಾಗಿ ಪ್ರಶ್ನಿಸಲಾರದೆ ಹೋದಾಗ ಅವರೇ ಹೇಳಿದರು.

"ಕೆಲವು ವ್ಯಾಮೋಹಗಳ್ನ ಬಿಟ್ಟು ಮನುಷ್ಯನಾಗಿ ಬಾಳಬೇಕೂಂತ ನಿಶ್ಚಯಿಸಿದ್ದೀನಿ. ಇನ್ನು ಮುಂದಿನ ದಿನಗಳಲ್ಲಿ ಇದುವರೆಗಿನ ಗಣಪತಿ ಇರೊಲ್ಲ. ಅವ್ನು ಪೂರ್ತಿ ಬೇರೆ."

ಆ ಕ್ಷಣವೇ ತಮ್ಮ ಸಮಸ್ತ ಆಸ್ತಿ ಪಾಸ್ತಿಯನ್ನು ಲೆಕ್ಕಾಚಾರವಾಗಿ

ವಹಿಸಿಕೊಟ್ಟು ಹತ್ತು ಪರ್ಸೆಂಟ್‌ನ ತಮ್ಮ ಸಲುವಾಗಿ ಉಳಿಸಿಕೊಂಡರು. ಸ್ವಂತದ ಬಳಕೆಗಾಗಿಯಲ್ಲ, ಅನಾಥಾಶ್ರಮ ಬಳಸುವ ವೆಹಿಕಲ್ ಬೇರೆಯವರ ಕಷ್ಟ ಸುಖಕ್ಕಾಗಿ ಬಳಸುತ್ತಿದ್ದರು. ಮನೆಯವರ ತಣ್ಣನೆಯ ಪ್ರತಿಭಟನೆ, ಮುಷ್ಕರ ಅವರನ್ನೇನು ಅಲುಗಿಸಲಿಲ್ಲ. ಈಗ ಗಣಪತಿಗಳು ಪೂರ್ತಿ ಬೇರೆ.

ಹೊಟಲ್‌ಗೆ ಹಿಂದಿರುಗಿದ ರೂತ್ ಹಾಸಿಗೆಯ ಮೇಲೆ ಕುಸಿದಳು. ಎಷ್ಟೋ ದಂಪತಿಗಳ ಫೋಟೊಗಳನ್ನು ಶೇಖರಿಸಿಟ್ಟಿದ್ದಳು. ಅವರಲ್ಲಿ ತನ್ನ ತಾಯಿ, ತಂದೆ ಹೇಗಿರಬಹುದು? ಇಂತಹ ನಿರಂತರ ಹುಡುಕಾಟ ಅವಳದು.

'ಯು ಲುಕ್ ವೆರಿ ಸ್ಮಾರ್ಟ್, ಬ್ಯೂಟಿಫುಲ್, ಪ್ರೆಟ್ಟಿ.' ಇಂಥ ಪದಗಳ ಬಳಕೆ ಅವಳ ಬಗ್ಗೆ ಆದಾಗ ಬೇರೆಯವರಂತೆ ತನ್ನ ರೂಪ, ಮೈಮಾಟದ ಬಗ್ಗೆ ಹೆಮ್ಮೆ ಅಭಿಮಾನ ಮೂಡುತ್ತಿರಲಿಲ್ಲ ವಿಷಾದ ಮೂಡುತ್ತಿತ್ತು ಕಣ್ಣುಗಳಲ್ಲಿ. ಕಾಣದ ತಾಯಿ ತಂದೆಯವರನ್ನು ಒಮ್ಮೆಯಾರೂ ನೋಡಬೇಕೆಂದು ತಹತಹಿಸುತ್ತಿದ್ದಳು. ಹತ್ತಿಕ್ಕಲಾರದೆ, ನಿದ್ರಿಸಲಾರದೆ ನಿದ್ದೆ ಮಾತ್ರೆಗಳಿಗೆ ಶರಣಾದದ್ದುಂಟು.

ಬೆಳಗಿನ ಜಾವ ನಿದ್ದೆ ಹತ್ತಿದ್ದು. ಮಂಪರು ಸರಿಯುವ ಮುನ್ನ ಫೋನ್ ಸದ್ದಾಯಿತು. ಕೈ ಚಾಚಿ ಎತ್ತಿಕೊಂಡರು.

"ಹಲೋ, ನಾನು ಗಣಪತಿ" ಪರಿಚಯದ ದನಿ. ಹೊದ್ದಿಕೆಯನ್ನು ಸರಿಸಿ ಎದ್ದು ಕೂತಳು. ಸಂತೋಷದಿಂದ ಅವಳ ಕೈ ಕಂಪಿಸುತ್ತಿತ್ತು. "ಹಲೋ..." ನಗು ಹರಿದು, ಬಂದ ನಂತರ "ನೀನು ಬಾಮ್ಮ ರೂತ್" ಫೋನಿಟ್ಟುಬಿಟ್ಟಳು.

ತಾಯಿಯನ್ನು ನೋಡಿಯೇಬಿಟ್ಟೆ ಎನ್ನುವಂಥ ಪುಳಕ, ರೋಮಾಂಚನ. ತನ್ನ ಹಾಗೆಯೇ ಇರಬಹುದು. ಫ್ರಾಕ್ ಹಾಗೆಲ್ಲ ಇಲ್ಲ. ಗಣಪತಿಗಳ ಸೊಸೆಯಂದಿರ ಹಾಗೇ ಸೀರೆ ಉಡಬಹುದು. ಈಗ ಆಕೆಗೆ ಬೇರೆ ಮಕ್ಕಳು ಇರಬಹುದು ತಾನೆ? ಕಣ್ತುಂಬಿತು. ಕ್ಲಿಂಟನ್, ಡಯಾನ ಬೇರೆಯಾದರೂ ಅವಳ ಬಗ್ಗೆ ನಿರಾಸಕ್ತಿಯನೇನು ತೋರಲಿಲ್ಲ. ಬೋರ್ಡಿಂಗ್, ಹಾಸ್ಟಲ್‌ನಲ್ಲಿಯೇ ಬೆಳೆದಿದ್ದು. ಅಮರಿಕಾದಂಥ ದೇಶದಲ್ಲಿ ಅಪರೂಪವಲ್ಲ. ಆದರೆ ಕೊರತೆ... ಕೊರತೆ... ಕೊರತೆ ಅವಳನ್ನು ಎಂದು ಸುಖಿಯಾಗಲು ಬಿಟ್ಟಿರಲಿಲ್ಲ.

ತರಿಸಿದ ಟೀ ಕೂಡ ಹಾಗೆಯೇ ಇಟ್ಟು ಹೊರಬಂದಳು. ಮೊದಲೇ ರಿಸೆಪ್ಷನಿಸ್ಟ್‌ಗೆ ಫೋನ್ ಮಾಡಿದ್ದರಿಂದ ರೆಡಿಯಾಗಿತ್ತು ಟ್ಯಾಕ್ಸಿ.

ಅವಳಿಗಾಗಿಯೇ ಕಾಯುತ್ತಿದ್ದ ಗಣಪತಿಗಳ ಮುಂದೆ ಹದಿನೆಂಟರ ಅಂಚಿನ ಅಥವಾ ಅದಕ್ಕಿಂತ ಸ್ವಲ್ಪ ಅಂದರೆ ಒಂದೆರಡು ವರ್ಷ ಹೆಚ್ಚಿರಬಹುದಾದ ಸ್ವಲ್ಪ ಕೃಶ ದೇಹದ ಯುವತಿಯೊಬ್ಬಳು ಕೂತಿದ್ದಳು.

ಮೊದಲು ಅವಳನ್ನೇ ಪರಿಚಯಿಸಿದ್ದು ರೂತ್‌ಗೆ "ಇವ್ಳು ತನುಜಾಂತ, ಪಿ.ಯು.ಸಿ.ವರ್ಗೂ ಓದಿದ್ದಾರೆ. ಸದ್ಗೃಹಸ್ಥ ಮನೆಯ ಹುಡ್ಗೀ. ಇವ್ಳ ತಂದೆ ಜ್ಯೂನಿಯರ್ ಇಂಜಿನಿಯರ್ ಶೀನಪ್ಪ, ತಾಯಿ ಲೀಲಾ ಒಂದು ಪ್ರೈವೆಟ್ ಸ್ಕೂಲಿನಲ್ಲಿ ಟೀಚರ್. ಇಬ್ಬರ ದುಡಿಮೆ, ಒಬ್ಳೇ ಮಗ್ಳು. ಆರ್ಥಿಕವಾಗಿ ಪರದಾಟವಿಲ್ಲ. ಮೂರು ತಿಂಗ್ಳ ಹಿಂದೆ ಮದ್ವೆ ಆಯ್ತು. ಇದು ಸಮಾಜಕ್ಕೆ ಗೊತ್ತಿರೋ ವಿಷ್ಯ. ಆದ್ರೆ, ಈ ಅನಾಥ ಆಶ್ರಮದಿಂದ ದತ್ತು ಪಡೆದ ಹುಡ್ಗೀ. ಇದ್ನ ಹೇಗೋ ತಿಳಿದ ತಾಳಿ ಕಟ್ಟಿದ ಪುಣ್ಯಾತ್ಮ ಇವ್ಳ ಜೊತೆಗೆ ಸಂಸಾರ ಮಾಡೋಕೆ ನಿರಾಕರಿಸ್ತ ಇದ್ದಾನೆ. ಇಲ್ಲಿ ಆಶ್ರಯ ಬೇಡಿ ಬಂದಿದ್ದಾಳೆ" ಇಡೀ ಚಿತ್ರವನ್ನು ರೂತ್ ಮುಂದಿಟ್ಟರು. ಅವಳಿಗೆ ತಬ್ಬಿಬ್ಬು.

ನಿಧಾನವಾಗಿ ತಲೆಯೆತ್ತಿ ನಿಟ್ಟುಸಿರು ಚೆಲ್ಲಿದ ಗಣಪತಿಗಳು "ಇದು ಅಮೆರಿಕಾ ಅಲ್ಲ, ಭಾರತ ಯಾರು ವಿಧಿಸದಿದ್ರೂ ಜನ ಕಟ್ಟುಪಾಡುಗಳಿಂದ ಬಂಧಿತರು. ಧಾರಾಳ ಮನಸ್ಸು ಕೂಡ ಕಡ್ಮೇನೇ ಅದ್ರಿಂದ ಈ ಅನಾಥಾಲಯದಿಂದ ಒಂದಿಷ್ಟು ಉಪಕಾರವಾಗ್ಬಹುದೇ ವಿನಃ ತೊಂದರೆಯಾಗೋದು ಯಾರ್ಗೂ ಇಷ್ಟವಿಲ್ಲ" ಎಂದವರು ತನುಜಳ ಕಳಿಸಿ ನಂತರ ಇವಳತ್ತ ತಿರುಗಿದಾಗ ಗೊಂಬೆಯಂತೆ ಕೂತಿದ್ದಳು.

"ನಿನ್ನ ಆಸೆ, ನೋವು ಎಲ್ಲಾ ಅರ್ಥವಾಗುತ್ತೆ. ಇದ್ವರ್ಗೂ ಯಾವ ತಾಯ್ತಂದೆಯರು ತಮ್ಮ ಮಗುವನ್ನ ಅರಸ್ಕೊಂಡ್ ಅನಾಥಾಶ್ರಮಕ್ಕೆ ಬಂದಿದ್ದಿಲ್ಲ. ಪರಿತ್ಯಕ್ತ ಮಕ್ಕಳೇ ಇಲ್ಲಿ ಬೆಳೀತಾ ಇರೋದು. ಈಗ್ಲೂ ನಿಂಗೆ ನಿಮ್ಮಪ್ಪ, ಅಮ್ಮನ್ನ ನೋಡೋ ಆಸೆನಾ ?" ಯೋಚಿಸುವಂತೆ ಕೇಳಿದರು.

ಅವಳು ಒಂದು ಹೆಜ್ಜೆ ಕೂಡ ಹಿಮ್ಮೆಟ್ಟಿರಲಿಲ್ಲ. ಆದರೂ ಅರ್ಥ ಮಾಡಿಕೊಂಡಳು. "ಪ್ಲೀಸ್, ನನ್ನಿಂದ ಅವ್ರಿಗೇನು ತೊಂದರೆ ಆಗೊಲ್ಲ. ಆದ್ರೆ ನಾನು ಅವ್ರನ್ನ ನೋಡ್ಬೇಕು, ಜಸ್ಟ್ ಕ್ಯೂರಿಯಾಸಿಟಿ ಅಂದ್ಕೊಳ್ಳಿ. ಹೆತ್ತ ತಾಯಿನ ನೋಡ್ಬೇಕೂಂತ ಅಂದ್ಕೊಳ್ಳೋದು ತಪ್ಪಾ? ನಂಗೆ ದಯವಿಟ್ಟು ಸಹಾಯ ಮಾಡಿ. ಅವ್ರನ್ನ ನೋಡಿ ಅಮೆರಿಕಾಗೆ

ಹಿಂದಿರುಗಿಬಿಡ್ತೀನಿ.'' ಎರಡು ಕೈಗಳನ್ನು ಜೋಡಿಸಿದಳು. ಕಣ್ಣಿಂದ ಮುತ್ತುಗಳಂತೆ ಹರಿಯಿತು ಕಣ್ಣೀರಿನ ಬಿಂದುಗಳು.

ಸೃಷ್ಟಿಯ ಬೆರಗಿನ ಮೂಲ ಉದ್ದೇಶ ಕಂಡಂತಾಯಿತು ಅವರಿಗೆ ತಲೆದೂಗಿದರು. ತಕ್ಷಣ ಮ್ಯಾನೇಜರ್‌ಗೆ ಬುಲಾವ್ ಹೋಯಿತು. ಹತ್ತೊಂಬತ್ತು ವರ್ಷದ ಹಿಂದಿನ ರೆಕಾರ್ಡ್ಸ್ ಹಿಡಿದು ಬಂದು ಅವರ ಮುಂದಿಟ್ಟು ಹೋದರು. ಆಗ ಗಣಪತಿಯ ತಂದೆ ಇದ್ದರು. ಈ ಅನಾಥಾಶ್ರಮ ಅವರ ಕನಸಿನ ಕೂಸೇ.

ಆ ವರ್ಷ ದತ್ತಕ ಪಡೆದ ಮಕ್ಕಳ ವಿವರ ತೆಗೆದು ನೋಡಿದರು. ಇಡೀ ವರ್ಷದಲ್ಲಿ ಈ ಅನಾಥಾಶ್ರಮದಿಂದ ಯಾರು ದತ್ತಕ ಪಡೆದಿರಲಿಲ್ಲ. ಸ್ವದೇಶಿಯರಾಗಲೀ, ವಿದೇಶಿಯರಾಗಲೀ. ಅದನ್ನೇ ರೂತ್ ಮುಂದಿಟ್ಟರು.

ಅನಾಥಾಶ್ರಮ ಷುರುವಾದಂದಿನಿಂದ ಇಂದಿನವರೆಗೂ ಪ್ರತಿ ಮಗು ಬಂದಾಗಲೂ ಅದರ ಫೋಟೋ, ಮಚ್ಚೆ, ಬ್ಲಡ್ ಗ್ರೂಪ್ ಜೊತೆ ಬಂದ ಸಮಯ, ತಂದು ಕೊಟ್ಟವರ ಹೆಸರು, ವಿಳಾಸವಿರಲಿಲ್ಲ ಕೆಲವಕ್ಕೆ. ಅನಾಥಾಶ್ರಮದ ಮುಂಬಾಗಿಲು, ಹುಲ್ಲಿನ ಹಾಸು ಮೇಲೆ ಮಲಗಿಸಿ ಹೋದ ಸಮಯ, ಮಿಕ್ಕ ವಿವರದ ಸಂಪೂರ್ಣ ದಾಖಲಾತಿ ಇತ್ತು.

"ಕ್ಯಾನ್ಸರ್‌ನಿಂದ ನರಳುತ್ತಿದ್ದ ಪರಿಮಳ ತನ್ನ ಎರ್ಡು ಮಕ್ಕುನ ಅನಾಥಾಶ್ರಮಕ್ಕೆ ಒಪ್ಪಿಸಿದ್ದಾಳೆ. ಒಂದೆರಡು ಅಪರೂಪದ ಕೇಸುಗಳ್ನ ಬಿಟ್ರೆ, ಅವರಿವ್ರ ಕೈಯಿಂದ ಬಂದು ಸೇರಿದ ಮಕ್ಳೇ'' ಹೇಳಿದರು ಗಣಪತಿ.

ಕ್ಲಿಂಟನ್, ಡಯಾನ, ಪ್ರೊಫೆಸರ್‌ರೊಂದಿಗಿನ ತನ್ನ ಫೋಟೋವನ್ನು ಎಲ್ಲಾ ಮಕ್ಕಳ ಪಕ್ಕದಲ್ಲಿರಿಸಿ ನೋಡಿದಳು. ಮೋಡಗಳು ಆವರಿಸಿ ಬೆಳಕು ಮಾಯವಾಯಿತು.

"ಸಾರಿ....'' ಎಂದರು ಗಣಪತಿಗಳು. ಅವಳ ಹೆತ್ತವರು ಸಿಗುವ ಹಾಗಿದ್ದರೇ ಯಾವ ಸಹಾಯಕ್ಕೂ ರೆಡಿ "ನಮ್ಮ ತಂದೆ ಸಾಯೋ ಮೊದ್ಲು ನಾನು ಅನಾಥಾಲಯದ ಕಡೆ ಗಮನ ಹರಿಸಿದ್ದೇ. ನಂತರದ ದಿನಗಳಲ್ಲಿ ಕೂಡ ಕರ್ತವ್ಯ ಎನ್ನುವಂತೆ ನಿಭಾಯಿಸುತ್ತಿದ್ದೆ. ಇತ್ತೀಚೆಗೇನೆ ವಿಪರೀತದ ಅಟ್ಯಾಚ್‌ಮೆಂಟ್'' ಹೇಳಿಕೊಂಡರು.

ರೂತ್ ಅಳುವಿನ ಮುಖದಲ್ಲಿ ನಗುವನ್ನು ತುಂಬಿಕೊಂಡು ಬೀಳ್ಕೊಡಲು ಎದ್ದಳು. ಅಷ್ಟರಲ್ಲಿ ಉಪಾಹಾರದ ಬೆಲ್ ಆಯಿತು.

"ನಾನು ಬ್ರೇಕ್‌ಫಾಸ್ಟ್ ಇಲ್ಲೇ ತಗೋತೀನಿ'' ಮೃದುವಾಗಿ

ಹೇಳಿದಳು. "ಖಂಡಿತ...." ಡೈನಿಂಗ್ ಹಾಲ್‌ಗೆ ಬಂದರು. ಹಾದು ಹೋಗುವಾಗ ಅವಳ ಗಮನ ಹರಿದಿದ್ದು ತೊಟ್ಟಿಲುಗಳ ಕಡೆಗೆ. ಎಲ್ಲಾ ತುಂಬಿ ಬಂದೇ ಒಂದು ಖಾಲಿ ಇತ್ತು. ಅದು ಇಂದೋ ನಾಳೆಯೋ ಬಂದು ತುಂಬಬಹುದು. ಯಾವ ಹೆಣ್ಣು ಹೆರುವ ಮಗುವೋ ಆಧುನಿಕ ವೈದ್ಯ ವಿಜ್ಞಾನ ಬೆಳೆದು ಅಪರಿಮಿತ ಕುಟುಂಬ ಯೋಜನೆಯ ಪ್ರಚಾರದ ನಂತರವು ಇಂಥ ಶಾಪಗ್ರಸ್ತ ಸಂತಾನಗಳು ಭೂಮಿಗೆ.

ಒಂದು ಚಿಕ್ಕ ಮಗು ರಚ್ಚೆ ಹಿಡಿದಿತ್ತು. ಸಂತೈಯಿಸಲಾರದೆ ಪರದಾಡುತ್ತಿದ್ದ ಆಯಾ ಕೈಯಿಂದ ಗಣಪತಿಗಳು ಮಗುವನ್ನು ಇಸಿಕೊಂಡು ಸಂತೈಸಿದರು. ಕೆಲವು ನಿಮಿಷಗಳಲ್ಲಿ ಸ್ತಬ್ಧವಾಯಿತು. ಒದ್ದೆಯ ಕೆನ್ನೆಗಳ ಮೇಲೆ ಜಗವನ್ನೇ ಮರೆಸಿಬಿಡುವಂಥ ನಗುವಿನ ನರ್ತನ. ತಾನೇ ಆ ಮಗುವಾದಂಥ ಅನುಭವ ಅವಳಿಗೆ.

ಬಗ್ಗಿ ಕೆನ್ನೆ ತಟ್ಟಿದಳು. ಮಿಂಚಿನಂತೆ ನಕ್ಕಿತು. ತನ್ನ ಕುತ್ತಿಗೆಯಲ್ಲಿನ ಸರವನ್ನು ತೆಗೆದು ಅದರ ಕುತ್ತಿಗೆಗೆ ಹಾಕಿದಳು "ಮಗುನೇ ಇದು ಇರ್ಲೀ, ನಾನು ಇಂಡಿಯಾಗೆ ಬಂದ ನೆನಪಿಗಾಗಿ" ಗದ್ಗದವಾಯಿತು ಅವಳ ಕಂಠ.

ಅಲ್ಲೇ ಬ್ರೇಕ್‌ಫಾಸ್ಟ್ ಮುಗಿಸಿ ವಿದಾಯ ಹೇಳಿ ಹೊರಗೆ ಬಂದಳು. ಬಹುಶಃ ಅವಳು ಮತ್ತೊಂದು ಅನಾಥಾಶ್ರಮಕ್ಕೆ ಬರುವ ಸಾಧ್ಯತೆ ಇರಲಿಲ್ಲ.

ಮುಖ ಮೇಲೆತ್ತಿ ನಿಟ್ಟುಸಿರು ಚಿಮ್ಮಿದಳು.

ಫೋನ್‌ನಲ್ಲಿ ರೂತ್‌ನ ಸಂಪರ್ಕಿಸಲು ಪ್ರಯತ್ನಿಸಿ ಕೊನೆಗೆ ಅವಳನ್ನು ಅರಸಿಕೊಂಡು ತಾವೇ ಬಂದರು ರಾಮಾಚಾರಿ ಅವಳು ಉಳಿದುಕೊಂಡಿದ್ದ ಹೋಟಲ್‌ಗೆ. ಇಂಥ ದೊಡ್ಡ ಹೋಟಲ್‌ಗಳ ಸಂಪರ್ಕ ಅವರಿಗೆ ಕಮ್ಮಿಯೇ.

ರಿಸೆಪ್ಷನಿಸ್ಟ್ ಕೌಂಟರ್‌ನಲ್ಲಿ ವಿಚಾರಿಸಿದಾಗ ಫೋನೆತ್ತಿ ರೂತ್‌ನ ಸಂಪರ್ಕಿಸಿದಳು "ನಿಮ್ಮನ್ನ ಯಾರೋ ಹುಡ್ಕಿಕೊಂಡ್ಬಂದಿದ್ದಾರೆ, ಮೇಡಮ್" ರಿಸೀವರ್ ಇವರ ಕೈಗೆ ಬಂತು. "ಹಲೋ...." ಮೆಲುವಾದ ಸ್ವರ "ನಾನಮ್ಮ ರಾಮಾಚಾರಿ" ಹೇಳಿದರು.

"ಈಗ್ಬಂದೇ...." ಫೋನ್ ಇಟ್ಟೇಬಿಟ್ಟಳು.

ಲಿಫ್ಟ್‌ನಲ್ಲಿ ಇಳಿದವಳು ಧಾವಿಸಿದಳು "ಸಾರಿ ಸರ್, ಇಂದು ನಾನೇ

ಬರುವವಳಿದ್ದೆ" ಬೆಳ್ಳಗಿನ ಮುಖದಲ್ಲಿನ ನಿರಾಶೆಯ ಕಾರ್ಮೋಡ. ಸಪ್ಪಗೆ ಕಂಡಳು. "ಒಂದು ನ್ಯೂಸ್ ಕೊಡೋದಿತ್ತು. ರಾತ್ರಿ ಪ್ರೊಫೆಸರ್ ರಾಯ್ ಬರ್ತಾರೆ. ವಿಚಿತ್ರ ಮನೋಭಾವದ ಮನುಷ್ಯ. ಅದ್ಕೇ ನಿಂಗೆ ವಿಷ್ಯ... ಮುಟ್ಟಿಸ ಹೋಗೋಣಾಂತ್ಬಂದೆ. ಇನ್ನು ಬೇಗ್ನೆ ಬರಬಹ್ದು. ಅಕಸ್ಮಾತ್ ಬರ್ದೇನೇ ಇರ್ಬಹ್ದು ಕೂಡ. ಆದಷ್ಟು ಬಂದು ಪರೀಕ್ಷೆ ಮಾಡು, ನಿನ್ನ ಅದೃಷ್ಟದ ಬಗ್ಗೆ" ಹೊರಡಲು ಅನುವಾದರು.

"ಪ್ಲೀಸ್, ಬನ್ನಿ ಸರ್... ನನ್ನ ಗೆಸ್ಟ್ ಆಗಿ ಒಂದು ಕಪ್ ಕಾಫಿನಾದ್ರೂ ತಗೋಬಹ್ದು" ರಿಕ್ವೆಸ್ಟ್ ಮಾಡಿಕೊಂಡಳು ಅನುಮಾನಿಸುತ್ತಲೇ. ಮುಖದಲ್ಲಿದ್ದ ನಾಮಗಳು, ತಲೆಯ ಹಿಂಭಾಗದಲ್ಲಿದ್ದ ಕೂದಲಿನ ಪುಟ್ಟ ಗಂಟು ಸ್ವಲ್ಪ ಹಿಂಜರಿಯುವಂತೆ ಮಾಡುತ್ತಿತ್ತು.

ನಿಂತವರು ಅಡಿಯಿಂದ ಮುಡಿಯವರೆಗೂ ನೋಡಿ "ಎಲ್ಲಕ್ಕಿಂತ ವಿಶ್ವಾಸ, ಆತ್ಮೀಯತೆಯೇ ಹೆಚ್ಚು. ಆದ್ರೂ ಮನಸ್ಸು ಒಪ್ಪೊಲ್ಲ. ನೀನ್ಬಂದ್ರೆ ಜೊತೆಯಲ್ಲೇ ಹೋಗ್ಬಹ್ದು. ಬೇಕಾದ್ರೆ ಒಂದಿಷ್ಟು ಹೊತ್ತು ಕಾಯ್ತೀನಿ" ಎಂದರು.

ನಿಂತವರು ಅಡಿಯಿಂದ ಮುಡಿಯವರೆಗೂ ನೋಡಿ "ಎಲ್ಲಕ್ಕಿಂತ ವಿಶ್ವಾಸ, ಆತ್ಮೀಯತೆಯೇ ಹೆಚ್ಚು. ಆದ್ರೂ ಮನಸ್ಸು ಒಪ್ಪೊಲ್ಲ. ನೀನ್ಬಂದ್ರೆ ಜೊತೆಯಲ್ಲೇ ಹೋಗ್ಬಹ್ದು. ಬೇಕಾದ್ರೆ ಒಂದಿಷ್ಟು ಹೊತ್ತು ಕಾಯ್ತೀನಿ" ಎಂದರು.

ಸಡಗರ, ಸಂಭ್ರಮದಿಂದಲೇ ಲಿಫ್ಟ್‌ನೊಳಕ್ಕೆ ಹೋದಳು ರೂತ್. ಒಂಟಿಯಾಗಿ ಭಾರತಕ್ಕೆ ಬಂದಾಗ ಅವಳಿಗೇನು ಗಾಬರಿಯಾಗಲಿಲ್ಲ. ಆತಂಕ ಮೂಡಲಿಲ್ಲ. ಕಳೆದುಕೊಂಡಿದ್ದ ಅಮೂಲ್ಯವಾದುದ್ದನ್ನು ಪಡೆದಂತೆ ಹರ್ಷಿಸಿದ್ದಳು. ಯಾಕೆ ? ಅವಳ ಹುಟ್ಟು ಇಲ್ಲಿತ್ತು. ಭಾರತೀಯಳು. ಇಷ್ಟು ವರ್ಷ ಅಮೆರಿಕಾ ಸಾಕು ತಾಯಿಯಾಗಿ ಅವಳನ್ನು ಸಲಹಿತ್ತು. ಆದರೆ ಹೆತ್ತ ತಾಯಿಯ ಮೇಲಿನ ಮೋಹದಿಂದ ವಂಚಿತಳನ್ನಾಗಿ ಮಾಡಲು ಸಾಧ್ಯವಾಗಿರಲಿಲ್ಲ.

ರಾಮಾಚಾರಿ ರೂತ್ ಕೂಡಿಯೇ ಮನೆಗೆ ಬಂದಿದ್ದು. ಒಂದು ಆಶ್ಚರ್ಯ ಕಾದಿತ್ತು. ಪ್ರೊಫೆಸರ್ ರಾಯ್ ಸಣ್ಣ ಕಿಟ್, ಪುಸ್ತಕಗಳು ಇದ್ದ ಸಣ್ಣ ಲೆದರ್ ಬ್ಯಾಗ್, ಮತ್ತೊಂದಿಷ್ಟು ಲಗೇಜ್ ಮುಂದಿಟ್ಟುಕೊಂಡು ಮೆಟ್ಟಿಲು ಮೇಲೆ ಕೂತು ವ್ಯಾಸಂಗದಲ್ಲಿ ನಿರತರಾಗಿದ್ದರು, ಇವರು

ಬಂದಿದ್ದನ್ನು ಕೂಡ ಗಮನಿಸದೆ. ಫೋಟೋದಲ್ಲಿನ ರಾಯ್, ಈಗಿನ ರಾಯ್‌ನ, ಹೋಲಿಕೆ ಮಾಡುವುದು ಕಷ್ಟವೆನಿಸಿತು. ಅಂದಿನ ಕನ್ನಡಕಧಾರಿ, ಫುಲ್ ಸೂಟ್‌ನಲ್ಲಿದ್ದ ದಢೂತಿ ವ್ಯಕ್ತಿ ಈಗ ಕೃಶಕಾಯರಾಗಿದ್ದರು. ದವಡೆಯ ಹಲ್ಲುಗಳು ಬಿದ್ದು ಆಳಕ್ಕಿಳಿದ ಕೆನ್ನೆಗಳು ಬಣ್ಣಗೆಟ್ಟಿದ್ದವು. ಬಟ್ಟ ತಲೆ ಕಾಂತಿಹೀನ ಮುಖ. ಆದರೂ ಬೌದ್ಧಿಕ ಪ್ರಜ್ಞೆಯಿಂದ ಮುಕ್ಕಳಿಸುತ್ತಿತ್ತು ಮುಖ.

ರಾಮಾಚಾರಿ ತಲೆ ಕೆರೆದುಕೊಂಡು ಚಡಪಡಿಸಿದರು. "ಯಾವಾಗ್ಬಂದ್ರಿ ? ರಾತ್ರಿಗೆ ಬರ್ತೀನೀಂತ ಟೆಲಿಗ್ರಾಮ್ ಕೊಟ್ಟಿದ್ದರಲ್ಲ" ಆತುರದಿಂದ ಬೀಗ ತೆಗೆದು ಲಗೇಜ್ ಒಳಗೊಯ್ದರು. ರೂತ್‌ನ ನೋಡಿದರು ಪ್ರಶ್ನಿಸದೆ ಒಳಗೆ ಹೋದರು ರಾಯ್. ಬಹುಶಃ ಹೇಳಿದ್ದಕ್ಕಿಂತ ವಿಲಕ್ಷಣ ಸ್ಥಿತಿ ತಲುಪಿದ್ದಾರೆಂದುಕೊಂಡಳು.

ನಿಂತಲ್ಲಿಂದ ಅಲುಗಾಡಲಿಲ್ಲ. ಹೊರ ಬಂದ ರಾಮಾಚಾರಿಗಳು ಒಳಗೆ ಕರೆದೊಯ್ಯುತ್ತ "ನಿನ್ನ ಅದೃಷ್ಟ ಚೆನ್ನಾಗಿತ್ತು, ಬಂದಿದ್ದಾರೆ. ಒಂದಿಷ್ಟು ಪರಿಚಯದ ಕೆಲ್ಸ ಮುಗ್ಸಿದ ನಂತರ ಅದೇನೋ ಮಾತಾಡು ಮತ್ತೆ ಹೊರಡುವ ಮುನ್ನ, ಅಥ್ವಾ ಕೋಣೆ ಸೇರಿ ಪುಸ್ತಕ ಹಿಡ್ಯೋ ಮುನ್ನ. ಅದೇನಿದ್ಯೋ ಏನೋ ಪುಸ್ತಕಗಳಲ್ಲಿ ಜೀವ್ನದಲ್ಲಿ ಇಲ್ಲದ್ದು" ಗೊಣಗಿದರು. ಸರ್‍ರನೆ ಅವಳನ್ನು ಕೂಡಿಸಿ ಒಳಗೆ ಹೋದರು.

ಟೀಪಾಯಿ ಮೇಲಿದ್ದ ಪತ್ರಿಕೆಗಳನ್ನು ತಿರುವತೊಡಗಿದ್ದು ಅನಾಸಕ್ತಿಯಿಂದ ರೂತ್. ಎಷ್ಟೋ ವರ್ಷಗಳ ಹಂಬಲವನ್ನು ಸಾಕ್ಷಾತ್ಕರಿಸಿಕೊಳ್ಳಲು ಬಂದಿದ್ದಳು ಇಲ್ಲಿಗೆ. ಬಂದಾಗಿನ ಉತ್ಸಾಹ ಎಷ್ಟೋ ಕಡಿಮೆಯಾಗಿತ್ತು, ವಿಷಯುದ ಆಳಕ್ಕೆ ಇಳಿದಂತೆ. ಜನ್ಮ ಕೊಟ್ಟ ತಾಯಿಯನ್ನು ಕನಿಷ್ಟ ಒಮ್ಮೆ ನೋಡುವ ಅವಕಾಶ ತನಗೆ ಸಿಕ್ಕೀತೆ ? ಕಣ್ಣು ಮುಂದೆ ಮಂಜು ಹರಡಿಕೊಂಡು ಆಸೆ, ಕನಸುಗಳ ಮೇಲೆ ಚಾದರ ಹೊದ್ದಿಸಿದಂತಾಯಿತು.

ಸ್ನಾನ ಮುಗಿಸಿರಬೇಕು. ರೇಶಿಮೆಯ ಅಂಚಿದ್ದ ಮುಗುಟ ಉಟ್ಟ ರಾಯ್ ದೇವರ ಮನೆಗೆ ಹೋದರು ಮಂತ್ರ ಪಠಿಸುತ್ತ, ಅರ್ಧ ಗಂಟೆ, ಒಂದು ಗಂಟೆಯಾದರೂ ಹೊರಗೆ ಬರಲಿಲ್ಲ. ಎರಡು ಮೂರು ಸಲ ಓಡಾಡಿದರು. ಎಚ್ಚರಿಸಲು ನಾನಾ ಸದ್ದುಗಳನ್ನು ಮಾಡಲಾಯಿತು. ಕಡೆಗೆ

ಬೆಳ್ಳಿ ಲೋಟ ಕೆಳಗೆ ಬಿದ್ದಾಗ ರಾಯ್ ಹೊರಬಂದರೂ ಪ್ರಶ್ನಿಸಲು ಹೋಗಲಿಲ್ಲ.

"ನಿನ್ನ ಮಗ್ಳ ?" ವಿಚಾರಿಸಿದರು. ರಾಮಾಚಾರಿಯನ್ನು ಮೇಲಕ್ಕೂ ಕೆಳಕ್ಕೂ ನೋಡಿದ. "ನಂಗೆ ಮದ್ವೇನೆ ಆಗಿಲ್ವಲ್ಲ!" ನುಡಿದಾಗ ಹೌದೆಂದು ತಲೆದೂಗಿದವರು "ಒಂದಿಷ್ಟು ಮರೆವು, ವಸುಮತಿ ಯಾವಾಗ್ಬಂದ್ಲು ?" ಎನ್ನುತ್ತಲೇ ಕೋಣೆಗೆ ಹೋದರು.

ರಾಮಾಚಾರಿಗಳು ಹಿಂದೆಯೇ ಹೋದರು "ವಸುಮತಿಯೇನಲ್ಲ, ರೂತ್ ಕ್ಲಿಂಟನ್ ಅಂತ ಅಮೆರಿಕಾದಿಂದ ಇಲ್ಲಿಗೆ ನಿಮ್ಮನ್ನು ನೋಡೋ ಸಲುವಾಗೆ ಬಂದಿದ್ದಾರೆ. ಅದಕ್ಕಾಗಿ ಹೋಟಲ್‌ನಲ್ಲಿ ವಾಸ್ತವ್ಯ" ಪೀಠಿಕೆ ಸಲ್ಲಿಸಿದರು. ತಲೆಯ ಮೇಲೆ ಕೈಯಾಡಿಸಿಕೊಂಡರು ರಾಯ್ ಏನು ತೋಚಲಿಲ್ಲ.

"ಈಗ ರೆಸ್ಟ್ ಬೇಕು. ನಂಗೇನು ಮಾತಾಡೋಕೆ ಇಷ್ಟವಿಲ್ಲ. ನನ್ನಿಂದೇನು ಪ್ರಯೋಜನವಿಲ್ಲ, ಸುತರಾಂ, ಇದ್ನೆಲ್ಲ ನೀನೇ ಹೇಳ್ಬಿಡು. ಅನಾವಶ್ಯಕವಾದ, ಪ್ರಯೋಜನವಿಲ್ದ ಭೇಟಿಯಿಂದ ವೇಳೆ ಅಪವ್ಯಯವಷ್ಟೆ." ತಮ್ಮ ಅನಿಚ್ಛೆಯನ್ನು ವ್ಯಕ್ತಪಡಿಸಿದರು. ಆಶ್ಚರ್ಯವೆನಿಸಲಿಲ್ಲ ರಾಮಾಚಾರಿಗೆ. ಕೆಲವು ವರ್ಷಗಳಿಂದ ಇದು ರೂಢಿ. ತೀರಾ ಮಿತ್ರರೆನಿಸಿಕೊಂಡು ಜನ ಬಂದಾಗ ಒಮ್ಮೊಮ್ಮೆ ಪ್ರೀತಿ ವಿಶ್ವಾಸದಿಂದ ಮಾತಾಡಿದರು, ಕೆಲವೊಮ್ಮೆ ನಿರಾಕರಿಸಿಬಿಡುತ್ತಿದ್ದರು.

ಅಲ್ಲಿಂದ ಸರಿಯಲಿಲ್ಲ ರಾಮಾಚಾರಿ "ಅದು ಸರಿನೇ ಇರ್ಬಹ್ದು. ಅಮೆರಿಕಾದಿಂದ ಬರೀ ನಿಮ್ಮನ್ನ ನೋಡೋ ಸಲುವಾಗಿಯೇ ಬಂದಿರೋದಂತೆ. ಮುಖ್ಯವಾದ ಕೆಲ್ಸನೇ ಇರ್ಬಹ್ದು. ಸಾಕಷ್ಟು ಸಲ ನಮ್ಮ ಮನೆಗೆ ಸುತ್ತಿದ್ದಾಳೆ" ಒಂದು ಮಾತು ಹೆಚ್ಚಿಗೇನೇ ಹೇಳಿದರು ಅವರ ಮೂಡ ಕೂಡ ಸರಿಹೋಯಿತೇನೋ, ಸಮ್ಮತಿಸಿದರು.

ಹೊರಗೆ ಬಂದ ರಾಮಾಚಾರಿ ನಿಟ್ಟುಸಿರು ಚೆಲ್ಲಿದರು "ಮಾತಾಡೋಕೆ ಒಪ್ಕೊಂಡಿದ್ದಾರೆ. ಮನಸ್ಥಿತಿ ಕೆಡೋ ಮುನ್ನ ಮಾತಾಡ್ಬಹ್ದು" ರೂತ್‌ಗೆ ಹೇಳಿದರು.

ಸಡಿಲವಾದ ಜುಬ್ಬಾ, ಪೈಜಾಮ ತೊಟ್ಟು ಬೆಂಗಾಲಿಗಳ ಹಾಗೆ, ಹೊರ ಬಂದಾಗ ಅವರ ಮುಖದ ಮೇಲಿನ ಬೌದ್ಧಿಕ ಪ್ರತಿಭೆಗೆ ದಂಗಾದಳು. 'ಹೆಂಡತಿ ಬದುಕಿರೋವರೆಗೂ ಚೆನ್ನಾಗಿದ್ರು. ಆಮೇಲೆ ಒಂದು ತರಹ

ಆಗಿದ್ದು. ಎಲ್ಲದರ ಮೇಲೆ ಆಸಕ್ತಿ ಕಳೆದುಕೊಂಡಿದ್ದು' ರಾಮಾಚಾರಿ ಹೇಳಿದ್ದರು.

ವಿನಯದಿಂದ ಎದ್ದು ನಿಂತಾಗ ಕೂಡುವಂತೆ ಸನ್ನೆ ಮಾಡಿದವರು ರಾಮಾಚಾರಿ ಕಡೆಗೆ ತಿರುಗಿ ಕುಡಿಯಲು ಏನಾದರೂ ತರುವಂತೆ ಸನ್ನೆ ಮಾಡಿ ಅವಳತ್ತ ನೋಟ ಹರಿಸಿದಳು. ಆಲ್ಬರ್ಟ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕಿಯಾಗಿರುವ ವಸುಮತಿ ಕೂಡ ಹೀಗೆಯೇ ಇದ್ದಳು ಎಂದುಕೊಂಡರು. ಅವಳನ್ನು ನೋಡಿ ನಾಲ್ಕಾರು ವರ್ಷಗಳು ಆಗಿತ್ತು. ಆಗಾಗ ಪತ್ರ ಬರೆದು ಅವರನ್ನು ಆಹ್ವಾನಿಸುತ್ತಿದ್ದಳು. ಅದಕ್ಕೆ ಉತ್ತರ ಕೊಡುವ ಕಷ್ಟವನ್ನು ಕೂಡ ತೆಗೆದುಕೊಳ್ಳುತ್ತಿರಲಿಲ್ಲ ಇವರು. ಅವಳು ರಾಯ್ ಅಕ್ಕನ ಮಗಳು.

ಬೆಳ್ಳಿಯ ದೊಡ್ಡ ಸೈಜಿನ ಲೋಟಗಳಲ್ಲಿ ಹಾಲು ಬಂತು. ಘಮಘಮಿಸುವ ಸುವಾಸನೆಯ ಜೊತೆ ಹಾಲು ತುಂಬ ರುಚಿಯಾಗಿತ್ತು. ಸುಮಾರು ಅರ್ಧ ಲೀಟರ್ ಹಿಡಿಸುವ ಲೋಟ ನೋಡಿಯೇ ತನ್ನಿಂದ ಕುಡಿಯಲು ಸಾಧ್ಯವಿಲ್ಲವೆಂದುಕೊಂಡಿದ್ದ ರೂತ್ ಸ್ವಲ್ಪ ನಿಧಾನವಾಗಿಯಾದರೂ ಕುಡಿದಿಟ್ಟಳು ತೃಪ್ತಿಯಾಗಿ.

ರೂತ್‌ನ ತದೇಕಚಿತ್ತರಾಗಿ ನೋಡಿದ ಅವರ ಮುಖದ ಮೇಲೆ ಅರಳಿತು ನಗೆ "ನಿನ್ನ ವಯಸ್ಸಿನಲ್ಲಿ ನಮ್ಮ ವಸುಮತಿ ಕೂಡ ಹೀಗೆ ಇದ್ಲು. ಆದರೂ ನಿನ್ನಷ್ಟು ಸೌಮ್ಯಳಲ್ಲ, ಒಂದು ರೀತಿಯಲ್ಲಿ ತುಂಟತನವಿದ್ರೂ ಅಪಾರ ಪ್ರತಿಭಾವಂತೆ. ಅದ್ಕೇ ಅಮೆರಿಕನ್ ಡಾಲರ್ ಅವಳ್ನ ಕೈ ಬೀಸಿ ಕರೆಯಿತು. ಅಲ್ಲೇ ಸೆಟ್ಲ್ ಆದ್ಲು ಕೂಡ" ಹೇಳಿಕೊಂಡರು. ಅವರು ಮಾತಾಡುವ ರೀತಿಯಿಂದಲೇ ಲೌಕಿಕಕ್ಕೆ ಸ್ಪಂದಿಸುತ್ತಿದ್ದಾರೆಂದುಕೊಂಡಳು.

ರಾಯ್, ಕ್ಲಿಂಟನ್, ಡಯಾನ ತಾನು ಇದ್ದ ಒಂದು ಫೋಟೋವನ್ನು ಅವರ ಮುಂದಿಟ್ಟಳು. ಕನ್ನಡಕವನ್ನು ಮತ್ತಷ್ಟು ಹಿಂದಕ್ಕೆ ತಳ್ಳಿ ಫೋಟೋ ಎತ್ತಿಕೊಂಡರು. ಇಲ್ಲಿನ ವಿಶ್ವ ವಿದ್ಯಾಲಯಕ್ಕೆ ಬಂದ, ಮತ್ತು ತಾವು ಸೆಮಿನಾರ್‌ಗಳಲ್ಲಿ ಭಾಗವಹಿಸಲು ಹೊರದೇಶಗಳಿಗೆ ಹೋದಾಗ ಕೆಲವು ವಿದೇಶಿಯರ ಪರಿಚಯವಿತ್ತು. ಅವರಲ್ಲಿ ಕೆಲವರಂತು ತೀರಾ ನೆನಪಿನಲ್ಲಿ ಉಳಿಯುವಂಥವರು.

"ಅವರಿಬ್ರೂ ಕ್ಲಿಂಟನ್, ಡಯಾನ ದಂಪತಿಗಳು. ಹಿಂದೆ ಬಂದಾಗ ತಮ್ಮಲ್ಲಿ ಕೆಲವು ದಿನ ತಂಗಿದ್ದರು" ಅವರ ನೆನಪಿಗೆ ಸಹಾಯ ಮಾಡುವಂತೆ

ಹೇಳಿದಳು. ರಾಯ್ ನೆರವು ಅತ್ಯಗತ್ಯ. ಸರಿಯಾದ ಮಾಹಿತಿ ನೀಡದಿದ್ದರೇ ಎನ್ನುವ ಆತಂಕ ಕೂಡ.

ರಾಯ್ ಮುಖದಲ್ಲಿ ಕೂಡ ಪರಿಚಯ ಇಣಕಿತು. ಅವರುಗಳ ಸ್ನೇಹಮಯ ನಡವಳಿಕೆ ಮರೆಯುವಂಥದೇನಲ್ಲ. ಡಯಾನ ಇವರ ಹೆಂಡತಿಯಿಂದ ಸೀರೆಯುಡಲು ಕಲಿತು ಉಟ್ಟಿದ್ದು ಕೂಡ ನೆನ್ನೆ ಮೊನ್ನೆಯೆನ್ನುವಂತಿತ್ತು. ಇಂಥ ನೆನಪುಗಳೇ ಜೀವನವನ್ನು ಆರೋಗ್ಯಕರವಾಗಿ ಇಡುವಂಥದ್ದು.

"ನೆನಪಿದೆ...." ಎಂದಾಗ ಅವಳ ಏರುಪೇರಾದ ಎದೆಯ ಬಡಿತ ಮಾಮೂಲಿಗೆ ಬಂತು. ತಾಯಿ ತಂದೆಯರನ್ನು ಒಟ್ಟಿಗೆ ಕಂಡಂತೆ ಹರ್ಷಿಸಿದಳು. "ಆ ಫೋಟೊದಲ್ಲಿದ್ದ ಮಗು ನಾನೇ. ಇಲ್ಲಿನ ಒಂದು ಅನಾಥಾಲಯದಲ್ಲಿ ನನ್ನ ದತ್ತು ಪಡೆದಿದ್ದು." ಆವೇಗದಿಂದ ಹೇಳಿದಳು. ಆದರೂ ಅವಳ ಸ್ವರವೇನು ಏರಲಿಲ್ಲ. ಅಮೆರಿಕನ್ನರು ಬಹಳ ಮೆಲುವಾಗಿ ಸಂಭಾಷಿಸುತ್ತಾರೆ. ಅಲ್ಲಿಯೇ ಬೆಳೆದಿದ್ದರಿಂದ ಮಾತುಕತೆ, ರೀತಿ ನೀತಿ ಅಲ್ಲಿನ ಸಂಸ್ಕೃತಿಯನ್ನೇ ಅವಲಂಬಿಸಿತ್ತು.

ಒಂದೆರಡು ನಿಮಿಷ ಫೋಟೊ ನೋಡುತ್ತಿದ್ದವರು ಇಟ್ಟುಬಿಟ್ಟರು. ಆ ವಿಷಯವನ್ನೇ ಬಿಟ್ಟು ಆಲ್ಬರ್ಟ್ ವಿಶ್ವವಿದ್ಯಾಲಯದ ಬಗ್ಗೆ ಹೇಳತೊಡಗಿದರು. ಎಲ್ಲಾ ಸೌಕರ್ಯಗಳಿಂದ ಬೃಹದಾಕಾರದ ಕಟ್ಟಡ, ಲೈಬ್ರರಿ ಸಂಶೋಧನಾಲಯದ ಉತ್ತಮ ವ್ಯವಸ್ಥೆ. ಹೆಚ್ಚಿಗೆ ಅಲ್ಲಿನ ದಕ್ಷಿಣ ಭಾರತದವರೇ ಇರುವುದು. ತಾವು ಅಲ್ಲಿ ಭಾಗವಹಿಸಿದಾಗಿನ ಒಂದೆರಡು ತುಣುಕುಗಳನ್ನು ಸೇರಿಸಿ ಬಹಳ ದೀರ್ಘವಾಗಿ ಮಾತಾಡಿದರು. ಇತ್ತೀಚಿನ ದಿನಗಳಲ್ಲಿ ಈ ರೀತಿ ಮಾತಾಡುವುದು ಅಪರೂಪವಾಗಿತ್ತು. ಕಿವಿಯರಳಿಸಿ ಕೇಳಿದರು ರಾಮಾಚಾರಿ.

ಶಬ್ದ ಮಾಡಿ ರಾಮಾಚಾರಿಯನ್ನು ಕರೆದು ಊಟದ ಏರ್ಪಾಟಾಯಿತ ಎಂದು ವಿಚಾರಿಸಿದರು. ಹಿಂದಿನ ದಿನ ಮಧ್ಯಾಹ್ನ ಒಂದಿಷ್ಟು ಹಣ್ಣು ತಿಂದು ತಮ್ಮ ಊಟ ಮುಗಿಸಿದ್ದರು. ಶಿವಮೊಗ್ಗ ಸ್ಟೇಷನ್‌ನಲ್ಲಿ ರೈಲು ಹೋಗಿ ತಲುಪಲು ನಾಲ್ಕು ಗಂಟೆ ತಡ ಎಂದಾಗ ಟ್ಯಾಕ್ಸಿ ಮಾಡಿಕೊಂಡು ಬಂದಿದ್ದರು. ಒಂದಿಷ್ಟು ಪ್ರಯಾಣದ ಆಯಾಸದ ಜೊತೆ ಆಹಾರದ ಕೊರತೆಯಿಂದ ದೇಹ ಕೂಡ ಬಳಲಿತ್ತು.

ಐದೇ ನಿಮಿಷದಲ್ಲಿ ಎಲೆ ಹಾಕಿದೆಯೆಂದು ರಾಮಾಚಾರಿ ಹೇಳಿದಾಗ

ಮೇಲಿದ್ದವರು "ಊಟ ಮಾಡೋಕೆ ನಿಂಗೇನು ಅಭ್ಯಂತರವಿಲ್ವಾ?" ವಿಚಾರಿಸಿಯೇ ಕರೆದೊಯ್ದರು.

ಎರಡು ಮಣೆ ಇಟ್ಟು ಬಡಿಸಿದ್ದರು. ಇಂಥ ಪದ್ಧತಿಯನ್ನು ನ್ಯೂ ಯಾರ್ಕ್‌ನಲ್ಲಿದ್ದ ಭಾರತೀಯರು ಹಬ್ಬ, ಹರಿದಿನಗಳಲ್ಲಿ ಅನುಸರಿಸುತ್ತಿದ್ದರು. ಇದನ್ನು ನೋಡಿದ್ದಳು. ಸ್ಪೂನ್, ಫೋರ್ಕ್‌ಗಳ ಸಹಾಯವಿಲ್ಲದ ಊಟ. ಅಂದು ರಾಮಾಚಾರಿ ಕೊಟ್ಟ ಹುಳಿಯೋಗರೆ ನೆನಪು ಮಾಡಿಕೊಂಡು ಬೆರಳುಗಳನ್ನು ನೋಡಿಕೊಂಡಳು.

ಕೈಕಾಲು ತೊಳೆದು ಬಂದು ಆರಾಮಾಗಿ ಕೂತರು. ಸ್ವಲ್ಪ ಮುಜುಗರದಿಂದಲೇ ಊಟ ಮಾಡಿದಾಗ ಸ್ವಲ್ಪ ಶ್ರಮವೆನಿಸಿತು ಕೂಡ.

ಹೊರಗೆ ಆರಾಮಾಗಿ ಕೂತ ನಂತರ ಪ್ರಶ್ನಿಸಿದರು. "ಹೇಗಿದ್ದಾರೆ ಪೇರೆಂಟ್ಸ್? ಅಲ್ಲೇನಾದ್ರೂ ನಿಂಗೆ ಸಮಸ್ಯೆನಾ?" ಕೇಳಿದರು ಸಹಜವಾಗಿ.

"ಚೆನ್ನಾಗಿದ್ದಾರೆ. ನಂಗೇನು ಸಮಸ್ಯೆ ಇಲ್ಲ" ಎಂದವಳು ತಾನು ಬಂದ ಕಾರಣ ತಿಳಿಸಿದಳು. "ಈಗ ಡ್ಯಾಡಿ, ಮಮ್ಮಿ ಬೇರೆ ಬೇರೆಯಾಗಿ ಮದ್ವೆ ಆಗಿದ್ದಾರೆ. ಮಕ್ಳು ಇದ್ದಾರೆ... ಹಾಗೆಂದು ನನ್ನ ನೆಗ್ಲೆಕ್ಟ್ ಮಾಡ್ಲಿಲ್ಲ... ಡ್ಯಾಡಿ ಅಪಾರ್ಟ್‌ಮೆಂಟ್ ಕೊಡ್ಸಿದ್ರೆ ಮಮ್ಮಿ ಕಾರು ಪ್ರೆಸೆಂಟ್ ಮಾಡಿದ್ದಾರೆ. ಕೆಲ್ಸ ಇದೆ. ಸಂಬ್ಳ ಬರುತ್ತೆ. ಜೀವನ ನಿರ್ವಹಣೆಗೇನು ತೊಂದರೆ ಇಲ್ಲ. ಆದ್ರೆ ನಂಗೆ ನನ್ನ ಒರಿಜಿನಲ್ ಪೇರೆಂಟ್ಸ್‌ನ ನೋಡೋ ಆಸೆ. ಒಮ್ಮೆ ನೋಡಿದ್ರೆ ಸಾಕು; ಅವ್ರಿಂದ ನಾನೇನು ಬಯಸೊಲ್ಲ. ಒಂದ್ಸಲ ನೋಡಿದ್ರೆ ಸಾಕು, ಅಮೆರಿಕಾಗೆ ಹಿಂದಿರುಗಿಬಿಡ್ತೀನಿ" ಹೇಳಿದಳು. ಅವಳ ಸ್ವರದ ಕಂಪನದಿಂದಲೇ ರೂತ್‌ನ ಮಾನಸಿಕ ಒತ್ತಡವನ್ನು ಗುರ್ತಿಸಿದರು.

ಮಗುವನ್ನು ಒಯ್ಯುವಾಗ ಅನಾಥಾಶ್ರಮಕ್ಕೆ ಹೋಗಿದ್ದರಷ್ಟೆ, ಆಮೇಲೆ ಅದರ ವಿಷಯವೇ ಅವರಿಗೆ ತಿಳಿದಿರಲಿಲ್ಲ. ಈಗ ತಾವು ಯಾವ ವಿಧದಲ್ಲಿ ಸಹಾಯ ಮಾಡಬಹುದು? ಆಯಾಸದಿಂದ ಕಣ್ಣೆಳೆದುಕೊಂಡು ಹೋಗುತ್ತಿದ್ದರಿಂದ ರಾಮಾಚಾರಿನ ಕರೆದು ಆ ಅನಾಥಾಲಯವಿದ್ದ ಪ್ರದೇಶವನ್ನು ಮಾತ್ರ ಹೇಳಿದರು.

"ಸಾರಿ, ನಂಗೆ ಅನಾಥಾಲಯದ ಹೆಸರು, ವಿಳಾಸ ಒಂದೂ ನೆನಪಿಲ್ಲ. ಇಂಥ. ಪ್ರದೇಶದಲ್ಲಿ ಇರಬಹುದು ಅನ್ನೋ ಅಲ್ಪ ಸ್ವಲ್ಪ ಜ್ಞಾಪಕವಷ್ಟೆ. ರಾಮಾಚಾರಿಯಿಂದ ಅಲ್ಪಸ್ವಲ್ಪ ಸಹಾಯವಾಗ್ಬಹುದು. ಕರ್ಕೊಂಡ್ಹೋಗು" ತಮ್ಮ ಕೆಲಸ ಮುಗಿಯಿತೆನ್ನುವಂತೆ ಎದ್ದು ಹೋದರು. ನೆನಪುಗಳು

ಬಲವಾಗಿ ಕಾಡಿತ್ತು ಅವರನ್ನ. ತುಂಬಿದ ಮನೆ, ಬಿಟ್ಟ ಬಯಲು ಈಗ ಅಷ್ಟೊಂದು ಜೋಪಾನ ಮಾಡಿದ ಹೆಂಡತಿ ಇಲ್ಲವಾದ ಮೇಲೆ ಯಾರಿಗೂ ಬೇಕಿರಲಿಲ್ಲ! ಈಗ ಅವರಿಗೂ ಕೂಡ ಆಗಾಗ ಬಂದು ಹೋಗೋ ತಂಗುದಾಣ.

ಮತ್ತೆ ಮತ್ತೆ ವಿಚಾರಿಸಿಕೊಂಡು ಬಂದ ರಾಮಾಚಾರಿ ಪೇಲವ ಮುಖ ಮಾಡಿದರು. ವಿಷಯ ತಿಳಿದ ಮೇಲೆ ಅವರ ಮುಖದ ಮೇಲೆ ಇಣಕಿದ್ದು ವಿಷಾದ "ಅಮೆರಿಕಾದಂಥ ದೊಡ್ಡ ದೇಶಕ್ಕೆ ಹೋದೆ. ನಿನ್ನ ಅದೃಷ್ಟ. ಇಲ್ಲಿನ ಅಪ್ಪ ಅಮ್ಮಂದಿರ ಕನಸೇನೆಂದರೆ ಮಗನ್ನ ಅಮೆರಿಕಾಗೆ ಕಳ್ಳಬೇಕು. ಮಗ್ಳು ಇದ್ರೆ ಅಮೆರಿಕಾದಲ್ಲಿ ಕೆಲ್ಸದಲ್ಲಿರೋ ಗಂಡಿಗೆ ಕೊಟ್ಟು ಮದ್ವೆ ಮಾಡ್ಬೇಕು. ಅವೆರಡು ಆಗದವ್ರ ಪಾಲಿಗೆ ಅಮೆರಿಕಾ ಒಂದು ಸ್ವರ್ಗ ಅಷ್ಟೆ. ಸುಮ್ನೇ ನೀನ್ಯಾಕೆ ಇಲ್ಲಿಗ್ಬಂದೆ? ಬೇಡಾಂತ ಎಸ್ದ ತಾಯ್ತಂದೆಯರ್ನ ಹುಡ್ಕೋದು ಸುಲಭನಾ? ಇವೆಲ್ಲ ಯಾಕೆ?" ಬುದ್ಧಿ ಹೇಳಿದರು ಹಿರಿಯರು ಎನ್ನುವ ಅಧಿಕಾರವಹಿಸಿ ವ್ಯಂಗ್ಯವಲ್ಲ, ಕರುಣೆ.

ತಲೆ ತಗ್ಗಿಸಿ ಮೌನವಾಗಿ ಕೂತುಬಿಟ್ಟಳು. ಈ ಹುಡುಕಾಟವನ್ನು ನಿಲ್ಲಿಸಲೇ? ಇಂಪಾಜಿಬಲ್, ಅವಳ ಬದುಕಿನ ಧ್ಯೇಯವೇ ಅದು. ಅದರಿಂದ ಖಂಡಿತ ವಿಮುಖಳಾಗಳು.

"ನಾನು ಅಂಥ ನಿರ್ಧಾರಕ್ಕೆ ಬಂದ ಮರುಕ್ಷಣವೇ ಆತ್ಮಹತ್ಯೆ ಮಾಡ್ಕೋತೀನಿ ಅನ್ನೋ ಅನುಮಾನ! ಜೀವನದ ಗುರಿಯೇ ಈ ಹುಡುಕಾಟ." ದೃಢವಾಗಿ ನುಡಿದಳು. ಈ ಪ್ರಯತ್ನದಲ್ಲಿ ಯಾವ ರಿಸ್ಕ್‌ಗೂ ತಯಾರಿದ್ದಳು ಎಂಬುದು ಅವಳ ಮಾತಿನಿಂದ ವ್ಯಕ್ತವಾದಾಗ ರಾಮಾಚಾರಿ ಸಹಾನುಭೂತಿಗೊಂಡರು. "ನಿನ್ನಿಷ್ಟ, ನಾನು ಆ ಕಡೆಯಲ್ಲೆಲ್ಲ ಓಡಾಡ್ಲಿಲ್ಲ. ನನ್ನ ಓಡಾಟವೆಲ್ಲ ಈಗ ಪೂರ್ತಿ ಸೀಮಿತ. ನಂಗೆ ಸಂಜೆ ಮೇಲೆ ಪುರಸತ್ತು." ಕೂದಲಿಲ್ಲದ ನೆತ್ತಿಯ ಮೇಲೆ ಕೈಯಾಡಿಸಿದವರು ಒಳಗೆ ಹೋದರು.

ರೂತ್ ಕೆಲವು ಗಂಟೆಗಳನ್ನು ಅಪವ್ಯಯಿಸಲು ಸಿದ್ಧವಿಲ್ಲ. ಬರೀ ನಲ್ವತ್ತು ದಿನ ರಜೆ ಪಡೆದಿದ್ದಳು. ಮತ್ತೆ ರಜ ಸಿಕ್ಕುವಂತಿರಲಿಲ್ಲ. ನೌಕರಿ ಹೋಗಬಹುದು. ಮತ್ತೆ ನೌಕರಿ ಅರಸುವ ಪ್ರಯತ್ನ ಮಾಡಬೇಕು. ಒಂದು ದೊಡ್ಡ ಬಟ್ಟೆ ಮಿಲ್‌ನಲ್ಲಿ ಸೇಲ್ಸ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದುದು.

ಈಚೆಗೆ ಕಾರು ನಿಲ್ಲಿಸಲು ಪಾರ್ಕಿಂಗ್ ಜಾಗ ಸಿಕ್ಕಿತ್ತು. ಮತ್ತೆ ಹೊಸ ನೌಕರಿಯೆಂದರೆ ಕಾರು ಪಾರ್ಕಿಂಗ್‌ದು ಒಂದು ಸಮಸ್ಯೆಯಾಗಬಹುದು.

ರಾಮಾಚಾರಿ ಮೇಲುಕೋಟೆ ಅಂಚಿದ್ದ ಪಂಚೆಯೊಂದನ್ನು ಹೊದ್ದು ಬಂದರು "ರಾಯ್‌ರು ಮಲ್ಗಿದ್ದಾರೆ. ಒಂದೆರಡು ಗಂಟೆಗಳಾದ್ರೂ ಬೇಕಾಗುತ್ತೆ ಏಳೋಕೆ. ಆ ವೇಳೆಗೆ ಆ ಪ್ರದೇಶ ಹುಡುಕೋಕೆ ಸಾಧ್ಯವೇನೋ ನೋಡೋಣ" ಹೊರಟವರು ಹೊರಗಡೆಯಿಂದ ಡೋರ್ ಲಾಕ್ ಮಾಡಿದರು. ಮಧ್ಯೆ ರಾಯ್ ಏಳುವುದಿಲ್ಲ. ಎದ್ದಿದ್ದರೂ ಕಾಲಿಂಗ್ ಬೆಲ್ ಆದರೂ ಬಾಗಿಲು ತೆಗೆಯೊಲ್ಲ ಎದ್ದು ಬಂದು. ಅಕಸ್ಮಾತ್ ಯಾರಾದರೂ ಬಂದರೂ ವಿಚಾರಿಸೋಲ್ಲ. ಆದರಿಂದ ಈ ಪದ್ಧತಿ ಜಾರಿಯಲ್ಲಿತ್ತು ಕೆಲವೊಮ್ಮೆ.

ಟ್ಯಾಕ್ಸಿ ಹತ್ತಿ ಆ ಪ್ರದೇಶದ ವಿವರ ಹೇಳಿದ ಕೂಡಲೇ ಡ್ರೈವರ್ "ಚರ್ಚ್‌ಗೇಟ್ ಹತ್ರನೇ, ಹಿಂದೆ ಆ ಸುತ್ತಮುತ್ತಲಿನ ಆಸುಪಾಸಿನ ಜಾಗವೆಲ್ಲ ಸ್ಮಶಾನವಾಗಿತ್ತಂತೆ, ನಮ್ಮ ತಾತ ಹೇಳ್ತಾ ಇದ್ರು" ಎನ್ನುತ್ತ ಸ್ಟಾರ್ಟ್ ಮಾಡಿದ.

ಮೀಟರ್ ಇಪ್ಪತ್ತೊಂದು ಕಿಲೋಮೀಟರ್ ತೋರಿಸಿದಾಗ ಟ್ಯಾಕ್ಸಿ ನಿಂತಿತು. ಮೊದಲು ಇಳಿದ ಡ್ರೈವರ್. ಈಗ ಅತ್ಯಂತ ಜನಜಂಗುಳಿಯ ಪ್ರದೇಶ. ಷಾಪಿಂಗ್ ಕಾಂಪ್ಲೆಕ್ಸ್, ಹಲವು ಅಂತಸ್ತುಗಳ ಕಟ್ಟಡಗಳು ಮೇಲೆದ್ದು ಶ್ರೀಮಂತ ಪ್ರದೇಶವಾಗಿತ್ತು.

ಬಟ್ಟೆ ಅಂಗಡಿಯಿಂದ ಬಂದ ವ್ಯಕ್ತಿ ನೇರವಾಗಿ ಬಂದು ರಾಮಾಚಾರಿಗಳನ್ನು ಮಾತಾಡಿಸಿದರು. "ಏನು ಈ ಕಡೆ ಪ್ರಯಾಣ? ಹೇಗಿದ್ದಾರೆ, ನಮ್ಮ ಪ್ರೊಫೆಸರ್" ವಿಚಾರಿಸಿದರು.

ಅವರುಗಳ ಉಭಯಕುಶಲೋಪರಿಗಳ ಮಧ್ಯೆ ತಲೆ ಹಾಕದೆ ನಿಂತ ರೂತ್ ದೂರದವರೆಗೂ ನೋಟ ಹರಿಸುತ್ತಿದ್ದಳು. ತಾನು ಮಗುವಾಗಿದ್ದಾಗ ಇಲ್ಲಿನ ಗಾಳಿ ಕುಡಿದಿರಬೇಕು ಎಂದುಕೊಂಡಾಗ ಆಪ್ಯಾಯಮಾನ ಮೂಡಿತು. ಆ ಪರಿಸರದ ಬಗ್ಗೆ, ಮೊದಲ ಸಲ ಅಂತರಿಕ್ಷದಲ್ಲಿ ಕಾಲೂರಿದ ಗಗನಯಾತ್ರಿಯ ಅನುಭವ.

ರಾಮಾಚಾರಿಗಳು ಅನಾಥಾಶ್ರಮದ ಬಗ್ಗೆ ಅವರನ್ನೇ ವಿಚಾರಿಸಿದಾಗ ತಲೆಯಾಡಿಸಿಬಿಟ್ಟರು. "ಈ ಏರಿಯಾಗೆ ಬಂದು ಆರು ವರ್ಷದ ಮೇಲಾಯಿತು. ಹೆಚ್ಚಿನ ಓಡಾಟ ಇಲ್ಲಿಲ್ಲೇ. ಆದ್ರೆ ಎಂದೂ ಅನಾಥಾಶ್ರಮದ

ಬೋರ್ಡು ಕಂಡಿದ್ದೇ ಇಲ್ವಲ್ಲ?" ಎಂದರು. ಬಿ.ಡಿ.ಎ.ಯಿಂದ ಸೈಟು ಪಡೆದು ಮನೆ ಕಟ್ಟಿಕೊಂಡಿದ್ದ ವ್ಯಕ್ತಿ. ಈಚೆಗಂತು ಸಾಧಾರಣ ಜನ ಇಲ್ಲಿ ಸೈಟು ಕೊಳ್ಳುವಂತಿರಲಿಲ್ಲ. 30 × 40 ಅಡಿ ಸೈಟು, ಹತ್ತು ಲಕ್ಷಕ್ಕೆ ಮಾರಾಟವಾಗಿ ಹೊಸ ದಾಖಲೆ ನಿರ್ಮಿಸಿತ್ತು.

ಅಲ್ಲಿನ ಅಪಾರ್ಟ್‌ಮೆಂಟ್, ಷಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ವಿಚಾರಿಸಿದಾಗ ಇದೇ ಉತ್ತರದ ಜೊತೆ ಆಶ್ಚರ್ಯದಿಂದ ನೋಡುತ್ತಿದ್ದರು ಇವರುಗಳನ್ನು.

ಒಬ್ಬಾತನಂತು ಪ್ರಶ್ನಿಸಿಯೇಬಿಟ್ಟ. "ಈ ಹುಡ್ಗಾಟದ ಹಿಂದೆ ಏನೋ ರಹಸ್ಯವಿದೆ. ಆ ಪ್ರದೇಶದಲ್ಲಿ ನಿಧಿಯೇನಾದ್ರೂ ಹೂತಿಟ್ಟಿದ್ದೀನೀಂತ ಯಾರಾದ್ರೂ ಹೇಳಿದ್ರಾ?" ವ್ಯಂಗ್ಯಕ್ಕೆ ಬೇಸತ್ತರು.

"ತಲೆಹರಟೆ ಜನ!" ಗೊಣಗಿದರು ರಾಮಾಚಾರಿ.

ಅವಳತ್ತ ತಿರುಗಿದಾಗ ಚಿಂತಿತಳಾಗಿದ್ದವಳು ತಟ್ಟನೇ "ಆ ಟ್ಯಾಕ್ಸಿ ಡ್ರೈವರ್ ತಾತನನ್ನು ವಿಚಾರಿಸಿದ್ರೆ, ಈ ಪ್ರದೇಶದಲ್ಲಿ ಒಂದ್ಕಡೆ ಸ್ಮಶಾನವಿತ್ತೂಂತ ತಿಳಿದವ್ನಿಗೆ ಅನಾಥಾಶ್ರಮದ ಬಗ್ಗೇನು ಗೊತ್ತಿರುತ್ತೆ" ಈ ಕತ್ತಲಿನ ಹುಡುಕಾಟದಲ್ಲಿ ಮೋಂಬತ್ತಿಯ ಸಹಾಯ—ಕನಿಕರದಿಂದ ನೋಡಿದರು ರಾಮಾಚಾರಿ.

"ಈಗೆಲ್ಲಿಂತ ಹುಡುಕ್ತೀಯಾ! ಅದೂ... ಒಂಟಿಯಾಗಿ" ಎಂದಾಗ ಅವಳ ಮುಖದ ಮೇಲೆ ದಟ್ಟವಾಗಿ ವ್ಯಥೆಯು ನೆರಳಾಡಿತು. "ನಾನು ಬೋರ್ಡಿಂಗ್‌ಗೆ ಹೋದಾಗ ಎಂಟೇ ವರ್ಷ. ಆಗಾಗ ಡ್ಯಾಡಿ ಮನೆಗೆ ಹೋಗ್ತಾ ಇದ್ದೆ. ಆಮೇಲೆ ಅದ್ನ ಕೂಡ ನಿಲ್ಲಿಸ್ದೆ. ಇನ್ನ ಮಮ್ಮಿ ಹಸ್ಬೆಂಡ್ ಕೋಪಿಷ್ಟ. ನನ್ನಂಡ್ರೆ ಸಿಡಿದುಬೀಳ್ತಾ ಇದ್ದ. ನಾನು ಹೋಗ್ತಾನೇ ಇರ್ಲಿಲ್ಲ. ಫೋನ್‌ನಲ್ಲಿ ಮಾತುಕತೆ ಅಷ್ಟೆ. ಈ ಒಂಟಿತನ ಒಂದು ರೀತಿಯಲ್ಲಿ ಹುಟ್ಟಿದಾಗ್ಲೇ ಜೊತೆಯಾಯ್ತು. ಎಲ್ಲಾ ಅಭ್ಯಾಸವಿದೆ. ಹೋಟಲ್‌ಗೆ ಹಿಂದಿರುಗಿದ ಕೂಡ್ಲೇ ಫೋನ್ ಮಾಡ್ತೀನಿ" ಎಂದಳು.

ಸಿಕ್ಕಿದ ಟ್ಯಾಕ್ಸಿಗಳಲ್ಲೆಲ್ಲ ಇಣುಕುತ್ತ ಟ್ಯಾಕ್ಸಿ ಸ್ಟ್ಯಾಂಡ್‌ಗೆ ಬಂದಳು. ಟ್ಯಾಕ್ಸಿ ನಂಬರ್ ಕೂಡ ಗೊತ್ತಿಲ್ಲದೆ ಟ್ಯಾಕ್ಸಿ ಹುಡುಕುವುದು ಕಷ್ಟವೆಂದು ಅವಳಿಗೂ ಗೊತ್ತು.

ಕತ್ತಲು ಮುಸುಕಿದ ಮೇಲೆ ಹೋಟೆಲ್‌ಗೆ ಹಿಂದಿರುಗುತ್ತಿದ್ದಾಗ ಅದೇ ಟ್ಯಾಕ್ಸಿ ಡ್ರೈವರ್ ಕಂಡಿದ್ದು ಆಕಸ್ಮಿಕ. 'ಸ್ಟಾಪ್ ಇಟ್....' ಕಿರುಚಿಕೊಂಡಳು.

ಇಳಿದು ಓಡಿದವಳು ಹೋಗುತ್ತಿದ್ದವನನ್ನು ರೆಟ್ಟೆ ಹಿಡಿದು ನಿಲ್ಲಿಸಿದ ನಂತರ ಕ್ಷಮೆ ಯಾಚಿಸಿದಳು.

"ಸಾರಿ, ಎಕ್ಸ್‌ಕ್ಯೂಜ್ ಮಿ....." ಎಂದಳು.

"ಇದ್ನ ಆಂಗ್ಲರು ನಮಗಾಗಿ ಬಿಟ್ಹೋಗಿದ್ದಾರೆ ಮೇಡಮ್, ಈ ಪದಗಳ್ನ ಆ ಜಾನಾಂಗದವ್ರು ನಮ್ಮಷ್ಟು ಬಳಸ್ತಾರೋ ಇಲ್ವೋ. ನನ್ನಿಂದ ನಿಮ್ಗೇನಾಗ್ಬೇಕು?" ಎದೆಯ ಮೇಲೆ ಕೈ ಕಟ್ಟಿ ಕೇಳಿದ. ಹಾಕಿದ್ದ ಯೂನಿಫಾರಂ ನೀಟಾಗಿತ್ತು.

"ನಿಮ್ಮ ತಾತನ್ನ ಸ್ವಲ್ಪ ನೋಡ್ಬೇಕಲ್ಲ!" ಎಂದಾಗ ಅವನಿಗೆ ಆಶ್ಚರ್ಯದ ಜೊತೆ ಆತಂಕ ಕೂಡ. ಐದು ವರ್ಷದಿಂದ ಟ್ಯಾಕ್ಸಿ ಓಡಿಸುತ್ತಿದ್ದವನು ಇಂದೇ ಈ ಯುವತಿಯನ್ನು ಕಂಡಿದ್ದು. ತೀರಾ ನೀಟಾಗಿ ಮೃದುವಾಗಿ ಚೆಲುವಾಗಿದ್ದ ಈ ಹೆಣ್ಣಿಗೇಕೆ ತನ್ನ ತಾತನ ಉಸಾಬರಿ? "ನೀವು ಅಲ್ಲಿಗೆ ಹೋಗೋಕ್ಕಾಗೊಲ್ಲ, ಮೇಡಮ್" ಎಂದ. ಎರಡು ವರ್ಷದ ಹಿಂದೆ ಅವನ ತಾತ ಸತ್ತಿದ್ದ.

"ಪ್ಲೀಸ್, ನಂಗೆ ಅವ್ರನ್ನ ನೋಡೋ ಅಗತ್ಯವಿದೆ. ಅವ್ರ ವಿಳಾಸ ಹೇಳಿ. ನಾನೇ ಹೋಗಿ ಮೀಟ್ ಮಾಡ್ತೀನಿ" ಎಂದವಳು ಬ್ಯಾಗ್‌ನಿಂದ ಪೆನ್, ಪ್ಯಾಡ್ ತೆಗೆದಳು. ಅವನಿಗೆ ನಗು ಬಂದರೂ ನಗಲಿಲ್ಲ.

"ನಿಮಗ್ಯಾಕೆ, ಅಂಥ ಆತುರ? ನಿಮ್ಮ ಮುಂದೆ ಸಾಕಷ್ಟು ಬದ್ಕು ಬಿದ್ದಿದೆ. ನಾನೇ ನಿಮ್ಮನ್ನು ಮೊದಲ್ನೇ ಸಲ ನೋಡ್ತಾ ಇರೋದು. ನಮ್ಮ ತಾತ ಕೂಡ ನೋಡಿರೊಲ್ಲ. ಆ ಲೋಕದ ಜನರ ಜ್ಞಾಪಕ ಶಕ್ತಿಯ ಪವರ್ ಬಗ್ಗೆ ನಂಗೇನು ಗೊತ್ತಿಲ್ಲ. ಅವ್ರು ಬದ್ಕಿಲ್ಲ ಮೇಡಮ್" ತನ್ನ ಪಾಡಿಗೆ ತಾನು ನಡೆದ.

"ಏಯ್... ಸರ್... ಡ್ರೈವರ್" ಕೂಗಿಕೊಂಡಳು.

ಹಿಂದಕ್ಕೆ ಬಂದ. ಟ್ಯಾಕ್ಸಿನ ತೊಳೆಯಲು ಬಿಟ್ಟಿದ್ದ. ಒಂದು ರೀತಿಯಲ್ಲಿ ಇರುಸುಮುರುಸು. ಟ್ಯಾಕ್ಸಿಗಳ ಸಂಖ್ಯೆ ಸಿಟಿಯಲ್ಲಿ ಬೆಳೆದಿದ್ದರಿಂದ ಮೊದಲಿನಷ್ಟು ಆದಾಯ ಇರಲಿಲ್ಲ. ಹಾಗಂದೇನು ಖರ್ಚು ತಗ್ಗಿಸಲು ಸಾಧ್ಯವೇ?

ಬರೀ ಅನಾಥಾಲಯದ ವಿಷಯ ತಿಳಿಸಿ, ಆ ಬಗ್ಗೆ ಒಂದಿಷ್ಟು ವಿವರ ಬೇಕೆಂದು ಅರುಹಿದವಳು "ಸ್ಮಶಾನದ ವಿಷ್ಯ ಹೇಳಿದಾಗ್ಲೇ ಈ ಪ್ರದೇಶದ, ಪರಿಚಯವಿದೆಯೆಂದ್ಕೊಂಡೇ, ಅಜ್ಜಿ ಗ್ರಾಂಡ್ ಮಾಮ್ ಅಂಥವ್ರು

ಯಾರಾದ್ರೂ ಇದ್ರೆ ಸರಿ. ಪ್ಲೀಸ್ ಹೆಲ್ಪ್ ಮಿ" ಅವನೊಬ್ಬ ಟ್ಯಾಕ್ಸಿಯವನು ಎನ್ನುವ ಸಂಗತಿ ಮರೆತಂತೆ ಕೇಳಿಕೊಂಡಳು.

ಯೋಚಿಸುವಂತೆ ನಿಂತ ಡ್ರೈವರ್ ಓಟ್ಟು ಕುಟುಂಬದಲ್ಲಿದ್ದ ಅವನ ತಂದೆ ಈಗ ಬಹು ಅಂತಸ್ತಿನ ಕಟ್ಟಡ ಎದ್ದಿರುವ ಜಾಗದಲ್ಲಿಯೇ ಗುಡಿಸಲು ಹಾಕಿಕೊಂಡು ಇದ್ದಿದ್ದು. ಇದು ವರ್ಷಗಳ ಹಿಂದಿನ ಮಾತು, ಇಂದು ಅಂಥ ಗುರುತುಗಳನ್ನು ಅಳಿಸಿ ಹಾಕಿ ಸಿಟಿಯ ಶ್ರೀಮಂತ ಬಡಾವಣೆಯಾಗಿ ರೂಪು ತಳೆದಿತ್ತು.

"ನಮ್ಮ ದೊಡ್ಡ ತಾತ ಇದ್ದಾರೆ. ಅವ್ರಿಗೆ ಎಷ್ಟು ಗೊತ್ತೋ ಏನೋ! ಬೇರೆ ಅನಾಥಾಶ್ರಮಗಳು ಇವೆ. ಅಲ್ಲಿಗೆ ಬೇಕಾದ್ರೆ ನಿಮ್ಮನ್ನ ಕರ್ಕೊಂಡ್ಹೋಗ್ತೀನಿ" ಎಂದ. ಅವನ ಚಿಂತನೆ ನಾನಾ ರೂಪದಲ್ಲಿ ಹರಿದಾಡುತ್ತಿತ್ತು. ಅನಾಥಾಶ್ರಮ ಹುಡುಕಿಕೊಂಡು ಹೋಗುವ ಜನ ಯಾರು ? ಕೆಟ್ಟ ಚಿತ್ರ ಮನದಲ್ಲಿ ರೂಪು ತಳೆದಾಗ ತಳ್ಳಿಹಾಕಲು ಪ್ರಯಾಸ ಪಡಬೇಕಾಯಿತು ಅವನು. ಸಾಕಷ್ಟು ನೋಡಿದ್ದ. ಒಬ್ಬ ಕ್ಯಾಬರೆ ನರ್ತಕಿ ಟ್ಯಾಕ್ಸಿಯ ಖಾಯಂ ಗಿರಾಕಿ. ಆಗಾಗ ಅವಳಿಗಾಗಿ ಬುಕ್ ಆಗುತ್ತಿತ್ತು ಟ್ಯಾಕ್ಸಿ. ನಾನಾ ಮುಖದ ಜನರನ್ನು ಕಾಣುವಂಥ ಸ್ಪೆಶಾಲಿಟಿ ಇತ್ತು ಅವನ ಪ್ರೊಫೆಷನ್‌ಗೆ.

"ಬೇಡ, ಇಲ್ಲಿ ಹಿಂದೆ ಒಂದು ಅನಾಥಾಶ್ರಮ ಇತ್ತು! ಅದು ಬೇರೆಲ್ಲಿಗಾದ್ರೂ ಷಿಫ್ಟ್ ಆಯ್ತಾ? ಆ ಬಗ್ಗೆ ಒಂದಿಷ್ಟು ಡೀಟೈಲ್ಸ್ ಬೇಕು. ಪ್ಲೀಸ್ ನನ್ನ ಅವ್ರ ಬಳಿಗೆ ಕರ್ಕೊಂಡ್ಹೋಗಿ. ಮೈ ಹಂಬಲ್ ರಿಕ್ವೆಸ್ಟ್" ಕೇಳಿಕೊಂಡಳು. ಅವನಿಗೆ ಆಶ್ಚರ್ಯವೆನಿಸಿತು. ಆದರೂ ತಲೆನೋವಿನ ಕೆಲಸ.

ಒಂದಷ್ಟು ಮಾತಿನ ನಂತರವೇ ಒಪ್ಪಿಕೊಂಡಿದ್ದು. ಅವನ ಟ್ಯಾಕ್ಸಿ ಕೊಳೆಗೇರಿಗಿಂತ ಸ್ವಲ್ಪವೇ ಸ್ವಲ್ಪ ಉತ್ತಮ ಸ್ಥಿತಿಯಲ್ಲಿರುವ ಬಡಾವಣೆಯ ಮುಂದೆ ನಿಂತಿತು. ಅಂಕುಡೊಂಕಾಗಿ ಅಲ್ಲಲ್ಲಿ ಕಲ್ಲುಗಳನ್ನು ಹಾಸಿದ್ದ ಓಣಿ, ಇಕ್ಕೆಡೆಗಳಲ್ಲಿ ಚರಂಡಿಗಳು. ಆ ಚರಂಡಿಗೆ ಅನಿಸಿದಂತೆ ಮುಂಬಾಗಿಲುಗಳು. ಅವಕ್ಕೆ ಹಚ್ಚಿದ್ದ ದಟ್ಟವಾದ ನೀಲಿ ಬಣ್ಣ. ಹರಿಶಿನದಂಥ ಕಲರ್‌ನ ಹಚ್ಚಿ ಎರಡು ಗೀಟು ಎಳೆದು ಮೂರು ಬೊಟ್ಟು ಇಟ್ಟು ಸಿಂಗರಿಸಿದ್ದರು. ಹೆಚ್ಚು ಕಡಿಮೆ ಶ್ರೀಮಂತ ಬಂಗ್ಲೆಗಳ ಮುಂದೆ ಕಾಣದಂಥ ಪುಡಿ ರಂಗೋಲಿಯ ಚಿತ್ತಾರಗಳು.

ನಾಲ್ಕನೆಯ ಮನೆಯ ಮುಂದೆ ಹೋಗಿ ಬೀಗ ಅಲ್ಲಾಡಿಸಿದ ನಂತರ ಬಾಗಿಲು ತೆರೆಯಿತು. ಒಳಗೆ ಹೋಗಿ ನಂತರ ಇಣುಕಿ "ಬನ್ನಿ....." ಆಹ್ವಾನಿಸಿದ. ಒಳಗಡಿ ಇಟ್ಟವಳು ನಿಂತಳು. ರೆಡ್ ಆರ್ಕೈಡ್‌ನ ನೆಲದ ಪುಟ್ಟ ಹಾಲ್. ಬಹುಶಃ ಅವಳ ಅಪಾರ್ಟ್‌ಮೆಂಟ್‌ನ ಕಿಚನ್ ಕೂಡ ಇದರ ಎರಡರಷ್ಟಿತ್ತು. ನೆಲದ ಗೋಡೆಯ ಅಂಚಿಗೆ ರಂಗೋಲಿಯ ಸಿಂಗಾರ. ಒಂದು ಕಡೆ ಹಾಸಿಗೆಗಳನ್ನು ಸುತ್ತಿಟ್ಟಿದ್ದರೆ, ಅದರ ಪಕ್ಕದಲ್ಲಿ ಒಂದು ಮಂಚ, ಅದರ ಮೇಲೆ ಅಷ್ಟೇನು ಚೊಕ್ಕಟವಲ್ಲದ ಹಾಸಿಗೆ, ಅದರ ಮೇಲೆ ಒಬ್ಬ ಜೀರ್ಣಕಾಯದ ವೃದ್ಧ ಕೂತಿದ್ದ ಏನನ್ನೋ ಜಗಿಯುತ್ತ.

ಗೋಡೆಗೆ ತಗುಲಿ ಹಾಕಿದ್ದ ಒಂದು ಛೇರ್‌ನ ತಂದು ಬಿಡಿಸಿಟ್ಟ. ಗ್ರಾಡ್ರೇಜ್ ಛೇರ್ ಬಣ್ಣಗೆಟ್ಟಿದ್ದರೂ ಗಟ್ಟಿಯಾಗಿದ್ದು ಕೂಡಲು ಸಂಕೋಚಿಸಬೇಕಿರಲಿಲ್ಲ. ಕೂತಳು ಸ್ವಲ್ಪ ಮುದುಡಿ ಭವ್ಯ ಭಾರತದ ನಾಗರಿಕನ ಒಂದೊಂದು ಮಗ್ಗುಲಿನ ಪರಿಚಯ.

ಅಪರೂಪವಾದುದ್ದನ್ನು ಕಂಡಂತೆ ಒಳಗಿದ್ದ ಐದಾರು ಜನರ ಜೊತೆ. ಹೊರಗಿನ ಹತ್ತು ಹನ್ನೆರಡು ಜನ ಬಂದು ತುಂಬಿಕೊಂಡು ಇದ್ದ ಒಂದು ಕಿಟಕಿಯಿಂದ ಬೆಳಕು ಬರದಂತೆ ಮಾಡಿದರು. ಹೊಳೆಯುವ ನುಣುಪಾದ ಕತ್ತರಿಸಿದ ಕೂದಲಿನ ಶುಭ್ರ ಮೈಕಾಂತಿಯ ಪ್ಯಾಂಟ್, ಷರಟು ಧರಿಸಿದ ಈ ಚೆಲುವೆ ಸಿನಿಮಾ ನಟಿಯಂತೆ ಕಂಡಳು.

ಈ ವಿಷಯ ಇಡೀ ಓಣಿಗೆ ಹರಡಿ ಜನರೆಲ್ಲ ಬಂದು ತುಂಬಿಕೊಂಡಾಗ ತಲೆ ಚಚ್ಚಿಕೊಂಡ ನವನೀತ್ "ಮಾವ, ಮಾಧುರಿ ದೀಕ್ಷಿತ್ ಬಂದಿದ್ದಾಳಂತೆ!" ಒಬ್ಬ ಹೇಳಿದಾಗ, ಏದುಸಿರು ಬಿಡುತ್ತ ಬಂದ ಹುಡುಗ "ಶ್ರೀದೇವಿ ನಿನ್ನ ಟ್ಯಾಕ್ಸಿಯಲ್ಲಿ ಬಂದ್ಲು ಅನ್ನೋ ಪ್ರಕಾರ" ಹೇಳಿದ ಗಡಬಡಿಸಿಕೊಂಡು.

"ಥು, ತೇರಿಕೆ, ನಿಮ್ಗೇ ಸಿನಿಮಾ ಸುದ್ದಿ ಬಿಟ್ರೆ ಇನ್ನೇನು ಇಲ್ವಾ, ನಡೀರಿ.... ಯಾರಿಲ್ಲ" ಅವರನ್ನು ಬಲವಂತದಿಂದ ಸರಿಸಿದಷ್ಟು ಬಂದು ತುಂಬಿಕೊಳ್ಳತೊಡಗಿದಾಗ ಮುಂದಿನ ಪರಿಣಾಮ ಲೆಕ್ಕ ಹಾಕಿ ಹೆದರಿದ "ದೊಡ್ಡ ಪಂಚಾಯ್ತಿ ಆಗ್ಬಿಡುತ್ತೆ. ಪ್ಲೀಸ್ ನೀವು ಟ್ಯಾಕ್ಸಿಯಲ್ಲಿ ಕೂತ್ಕೋ ನಡೀರಿ, ಮೇಡಮ್. ನಾನು ಇವ್ರ ಕರ್ಕೊಂಡ್ಬರ್ತೀನಿ" ಹೇಳಿದವನು ಅವರುಗಳನ್ನು ಪಕ್ಕಕ್ಕೆ ಸರಿಸಿ ಜಾಗ ಬಿಡಿಸಿಕೊಂಡು ಬಂದು ಟ್ಯಾಕ್ಸಿ ಹತ್ತಿಸಿದ. ಇಲ್ಲೂ ಆ ಹಿಂಡಿನ ಮುತ್ತಿಗೆ. ಹತ್ತಿ ಕೂತು ಟ್ಯಾಕ್ಸಿ ಸ್ಟಾರ್ಟ್ ಮಾಡಿದ.

"ಮೇಡಮ್, ಒಂದ್ಕಡೆ ಇರೀ. ನಾನ್ಹೋಗಿ ನಮ್ಮ ದೊಡ್ಡ ತಾತನ್ನ ಕರ್ಕೊಂಡ್ಬರ್ತೀನಿ. ಏನು ಕೇಳೋದಿದ್ರು ಕೇಳಿಕೊಳ್ಳಿ. ಟ್ಯಾಕ್ಸಿ ಬಾಡ್ಗೇ, ವೆಯಿಟಿಂಗ್ ಛಾರ್ಜ್ ಕೊಟ್ಬಿರಾಯ್ತು" ಎಂದ. ಅವನ ಸಂಪಾದನೆಯಲ್ಲಿ ಒಂಬತ್ತು ಹೊಟ್ಟೆಗಳು ತುಂಬಬೇಕಿತ್ತು. ಮೊದಲು ತನ್ನ ಸಂಸಾರ, ತೋರಿಕೆ, ನಾಟಕ ಒಂದು ಬೇಕಿರಲಿಲ್ಲ.

"ನಿಮ್ಮ ಮನೆ ವಿಳಾಸ ಕೊಟ್ರೆ ಅಲ್ಲಿಗೆ ಕರ್ಕೊಂಡ್ಬರ್ತೀನಿ" ನುಡಿಯುತ್ತ ಟ್ಯಾಕ್ಸಿಯ ವೇಗ ತಗ್ಗಿಸಿದ. ಮೂವತ್ತನೇ ವಯಸ್ಸಿಗೆ ಮೂರು ಜನ್ಮಕ್ಕೆ ಆಗುವಷ್ಟು ಕಷ್ಟವನ್ನು ಅನುಭವಿಸಿದ್ದ. "ಹೋಟಲ್ ಅಪೋಲೋ....." ಎಂದಳು. ತಲೆ ಕೊಡವಿದ. ಅಂಥ ಶ್ರೀಮಂತ ಹೋಟಲ್‌ಗೆ ತನ್ನ ದೊಡ್ಡ ತಾತನನ್ನು ಕರೆದೊಯ್ಯುವುದು ಸಾಧ್ಯವಿಲ್ಲವೆಂದು ಅವನಿಗೆ ಗೊತ್ತು. ತಲೆ ಕೆರೆದುಕೊಂಡ "ಸಾರಿ, ಮೇಡಮ್ ... ಯಾವ್ದೋ ಫಿಲಂ ಷೂಟಿಂಗ್ ಅಂದ್ಕೋತಾರೆ, ಜನ ಅಥ್ವಾ ಮೈನ್‌ಗೇಟ್‌ನ ವಾಚ್‌ಮನ್ ಒಳಗಡೆ ಬಿಡೋದೇ ಇಲ್ಲ. ಅವ್ರ ಕಿವಿಗಳು ಕೂಡ ಮಂದ, ಜ್ಞಾಪ್ಕ ಶಕ್ತಿ ಪರ್ವಾಗಿಲ್ಲ. ನೀವೇನು ಕೇಳ್ಬೇಕೂಂತ ಇದ್ದೀರೋ. ಅದ್ನ ನಂಗ್ಹೇಳಿ. ನಾನೇ ಕೇಳ್ಕೊಂಡ್ಬರ್ತೀನಿ" ಹೇಳಿದ.

ಆ ವ್ಯಕ್ತಿ ಸ್ಥಿತಿ ಅಲ್ಲಿನ ಪರಿಸ್ಥಿತಿಯನ್ನು ನೆನಪಿಸಿಕೊಂಡು ಅದೇ ಸರಿಯೆಂದುಕೊಂಡಳು. ಹೋಟಲ್‌ನ ವಿಳಾಸದ ಕಾರ್ಡು ಕೊಟ್ಟು ತನ್ನ ರೂಮು ನಂಬರ್ ತಿಳಿಸಿ "ಪ್ಲೀಸ್, ಅಲ್ಲಿ ಅನಾಥಾಶ್ರಮ ಇತ್ತಾ? ಆ ಬಗ್ಗೆ ಅವ್ರಿಗೇನು ಗೊತ್ತಿದ್ಯೋ ಅದ್ನ ತಿಳ್ಕೊಂಡ್ಬನ್ನಿ" ಹೇಳಿದಳು.

ನವನೀತ್ ಹೋಟಲ್ ಬಳಿ ಇಳಿಸಿ ತನ್ನ ಬಾಡಿಗೆ ಪಡೆದುಕೊಂಡು "ಸಾರಿ ಮೇಡಮ್, ಹೇಗೋ ನಮ್ಮ ಮನೆಗ್ಬಂದ್ರಿ. ಗೆಸ್ಟ್ ಅಂತ ಕನಿಷ್ಟ ಒಂದ್ಲೋಟ ನೀರಾದ್ರೂ ಕೊಟ್ಟು ಟ್ರೀಟ್ ಮಾಡ್ಲಾರ್ದೇ ಹೋದೆ. ನಂಗೆ ತುಂಬ ಬೇಸರವಾಗಿದೆ" ಎಂದ ತಲೆ ತಗ್ಗಿಸುತ್ತ.

"ನೋ, ನೋ ಪ್ಲೀಸ್, ಆ ಅನಾಥಾಲಯದ ಬಗ್ಗೆ ನಂಗೊಂದಿಷ್ಟು ಇನ್‌ಫಾರ್ಮೇಷನ್ ಬೇಕು. ಅದ್ನ ನಾನು ಹೆಲ್ಪ್ ಅಂತ ತಿಳ್ಕೋತೀನಿ" ಹೇಳಿದಳು. ತನ್ನ ಲಕ್ಷ್ಯ ಬಿಟ್ಟು ಬೇರೆಡೆ ಅವಳ ಮನ ಹೊರಳುತ್ತಲೇ ಇರಲಿಲ್ಲ.

ಇದೊಂದು ಸಮಸ್ಯೆಯಾಯಿತಲ್ಲ ಎಂದುಕೊಂಡ ನವನೀತ್ "ನಮ್ಮ ದೊಡ್ಡ ತಾತನಿಗೆ ನೂರ ಐದು ವರ್ಷಗಳು ಅಂತಾರೆ. ಜನ್ಮ ನಕ್ಷತ್ರ, ಜಾತ್ಕ,

ಡೇಟ್ ಅಂಥದೇನಿಲ್ಲ. ಸ್ಕೂಲಿಗೆ ಹೋದ ಜನರಲ್ಲಿ. ನನ್ನ ಪ್ರಕಾರ ಅವ್ರ ವಯಸ್ಸು ಇನ್ನೊಂದು ಐದಾರು ವರ್ಷ ಹೆಚ್ಚಿಗೇನೇ ಇರ್ಬೇಕು. ಅಂಥದ್ದರಲ್ಲಿ ಅವ್ರ ಇನ್‌ಫಾರ್ಮೇಷನ್ ಎಷ್ಟು ಸರ್ಯಾಗಿರುತ್ತೆ ಬೇರೆನಾದ್ರೂ ಕ್ಲೂ ಸಿಕ್ರೆ ನಾನ್ಬಂದು ನಿಮ್ಗೆ ತಿಳಿಸ್ತೀನಿ. ನಾನು ಆಟೋ ಕಂಡ್ಮೇಲೆ ಆ ಏರಿಯಾದಲ್ಲಿ ಯಾವ ಅನಾಥಾಶ್ರಮನು ಕಾಣ್ಲಿಲ್ಲ. ಎನೀ-ವೇ, ಪ್ರಯತ್ನಪಡ್ತೀನಿ'' ನವನೀತ್. ಟ್ಯಾಕ್ಸಿ ಹತ್ತಿದ.

ರೂಮಿಗೆ ಬಂದವಳೇ ಫೋನ್ ಮಾಡಿದಳು ಪ್ರೊಫೆಸರ್ ಮನೆಗೆ. ಎತ್ತಿದ್ದು ರಾಮಾಚಾರಿ "ನಾನು ರೂತ್ ಕ್ಲಿಂಟನ್, ಆ ಟ್ಯಾಕ್ಸಿ ಡ್ರೈವರ್ ದೊಡ್ಡಪ್ಪ ಒಬ್ರು ಇದ್ದಾರಂತೆ. ಅಲ್ಲೋಗಿದ್ದೆ. ಜನ ಮುತ್ತಿಕೊಂಡ್ರು. ಅರ್ಥವಾಗ್ಲಿಲ್ಲ ಏನೇನು! ನಾನು ಅವ್ರನ್ನ ನೋಡ್ತೀನೋ ಇಲ್ವೋ'' ಫೋನಿಡಿದೇ ಅತ್ತುಬಿಟ್ಟಳು. ರಾಮಾಚಾರಿಗಳಿಗೆ ಸಂಕಟವಾಯಿತು. ತನಗಿಂತ ಮಗಳು ಇರಬಾರದ? ಅವಳು ತನ್ನನ್ನು ಹುಡುಕಿ ಬಂದಿದ್ದರೆ, ಬರೀ 'ರೆ' ಪ್ರಪಂಚದಿಂದ ಪ್ರಯೋಜನವಿಲ್ಲವೆನಿಸಿತು.

"ಹಾಗೇ, ನಿರಾಶಳಾಗೋದ್ಬೇಡ. ಖಂಡಿತ ಅವ್ರು ಸಿಕ್ತಾರೆ. ನಿನ್ನಂಥ ಹುಡ್ಗಿಗೆ ದೇವರು ಸಹಾಯ ಮಾಡ್ದೇ ಇರ್ತಾರ? ನಿನ್ನ ಪ್ರಯತ್ನ ಮುಂದುವರಿಸು.'' ಧೈರ್ಯ ತುಂಬಿದರು. ಮತ್ತೆ ಮತ್ತೆ ಪ್ರಶ್ನಿಸೋಣವೆಂದರೆ ಮಧ್ಯಾಹ್ನ ತಮ್ಮ ಸಣ್ಣ ಟ್ರಾವಲಿಂಗ್ ಕಿಟ್ ಹಿಡಿದು ಹೊರಟ ಪ್ರೊಫೆಸರ್ ಇನ್ನೂ ಬಂದಿರಲಿಲ್ಲ. 'ಅಲೆಮಾರಿ'ತನಕ್ಕೆ ಒಗ್ಗಿಕೊಂಡ ವ್ಯಕ್ತಿಯ ಬಗ್ಗೆ ಭರವಸೆ ಇಲ್ಲ. 'ಡಿಸೇಬಲ್' (disable)ಒಂದು ರೀತಿಯಲ್ಲಿ 'ಅಶಕ್ತ' ರಾಗಿದ್ದರು.

ಮಂಚದ ಮೇಲೆ ಉರುಳಿಕೊಂಡ ರೂತ್ ಕ್ಲಿಂಟನ್ ಕಣ್ಣುಗಳಿಂದ ಕಂಬನಿ ಇಣಕಿತು. ಟ್ಯಾಕ್ಸಿ ಡ್ರೈವರ್ ನವನೀತ್‌ನ ಪುಟ್ಟ ಮನೆಯನ್ನು ನೆನಸಿಕೊಂಡಳು. ಎಷ್ಟೊಂದು ಜನ ನ್ಯೂ ಯಾರ್ಕ್‌ನಲ್ಲಿದ್ದ ಅವಳ ದೊಡ್ಡ ಅಪಾರ್ಟ್‌ಮೆಂಟ್‌ನಲ್ಲಿ ಅವಳೊಬ್ಬಳೇ. ಕೆಲಸ ಸಿಕ್ಕಿ ಹೊಸದರಲ್ಲಿ ಹಾಸ್ಟಲ್‌ನಲ್ಲಿದ್ದಳು.

ಒಮ್ಮೆ ಆಕಸ್ಮಿಕವಾಗಿ ಬಂದ ಕ್ಲಿಂಟನ್ ಅಪಾರ್ಟ್‌ಮೆಂಟ್‌ನ ಬೀಗದ ಕೈಯನ್ನು ಅವಳ ಕೈಯಲ್ಲಿಟ್ಟು "ನಿನ್ನ ಸ್ವಂತ ಅಪಾರ್ಟ್‌ಮೆಂಟ್. ಪುಟ್ಟ ಹುಡ್ಗಿಯಲ್ಲ, ಬೆಳ್ದ ಯುವತಿ. ನಿನ್ನ ಬಾಯ್ ಫ್ರೆಂಡ್‌ನ ನಂಗೆ ಪರಿಚಯಿಸಿಯೇ ಇಲ್ಲ.'' ತಮಾಷೆ ಮಾಡಿದಾಗ ತಬ್ಬಿಬ್ಬಾಗಿದ್ದಳು.

ಯಾಕೋ ಏನೋ ಅಮೆರಿಕನ್ ಹುಡುಗಿಯರಂತೆ ಹುಡುಗರ ಜೊತೆ ಬೆರೆಯುತ್ತಿರಲಿಲ್ಲ. ಡ್ಯಾನ್ಸ್, ಡೇಟಿಂಗ್ ಅದೆಲ್ಲ ಅವಳಿಗೆ ಇಷ್ಟವಿಲ್ಲ. ಅಂಥವರಿಂದ, ಸಂದರ್ಭಗಳಿಂದ ಸನ್ನಿವೇಶಗಳಿಂದ ತಪ್ಪಿಸಿಕೊಳ್ಳಲು ಹೆಣಗಾಡುತ್ತಿದ್ದಳು ನಿರಂತರವಾಗಿ. ಒಮ್ಮೆ ಕುಡಿದ ಕ್ರೌನ್ ವಿವಸ್ತ್ರಗೊಳಿಸತೊಡಗಿದಾಗ ಕೈಗೆ ಸಿಕ್ಕ ನೇಮ್ ಪ್ಲೇಟ್‌ನಿಂದ ಅವನ ತಲೆಗೊಡೆದು ತಪ್ಪಿಸಿಕೊಂಡಿದ್ದಳು.

ಫೋನ್ ಸದ್ದಾಯಿತು. ಕಣ್ಣೀರು ತೊಡೆದುಕೊಂಡು ಎತ್ತಿದಳು. "ಅಮೆರಿಕಾಯಿಂದ ಕಾಲ್ ಇದೆ" ಆಪರೇಟರ್ ನುಡಿದಳು. ಲೈನ್‌ನಲ್ಲಿ ಟೆಡ್ಡಿ ಇದ್ದ "ಹಲೋ ರೂತ್....." ಉತ್ಸಾಹದ ದನಿ. ಇವಳನ್ನು ಕಂಡರೆ ಅವನಿಗೆ ತುಂಬ ಇಷ್ಟ. ಇವಳಿಗೂ ಅಷ್ಟೆ.

"ಹಲೋ ಹೇಗಿದ್ದಿ ?" ಕೇಳಿದಳು. ಬಿಸಿಲಿಗೆ ಕಂಗೆಟ್ಟವಳಿಗೆ ಮಂಜಿನ ತಣ್ಣನೆಯ ಹನಿಯ ಸ್ಪರ್ಶ ಅವನ ಫೋನ್ "ಚೆನ್ನಾಗಿದ್ದೀನಿ, ಇವತ್ತು ಮಮ್ಮಿ ಮದ್ವೆ ನಡೀತು. ಹೊಸ ಡ್ಯಾಡಿಗೆ ಸ್ವಲ್ಪ ಕುಂಟು. ತುಂಬ ಶ್ರೀಮಂತರು. ನಂಗೊಂದು ಕಾರು ಉಡುಗೊರೆಯಾಗಿ ಕೊಟ್ರು" ಖುಷಿಯಿಂದಲೇ ಹೇಳಿದ. ಅವನ ತಂದೆ ಸ್ವಾಭಾವದಲ್ಲಿ ಸ್ವಲ್ಪ ಒರಟಾದದ್ದರಿಂದ ಸಲಿಗೆ, ಸ್ನೇಹದಿಂದ ನಡೆಸಿಕೊಳ್ಳುತ್ತಿರಲಿಲ್ಲ. ಆದರಿಂದ ತಂದೆಯಿಂದ ದೂರವಿದ್ದವನು 'ಹೊಸ ಡ್ಯಾಡಿ' ಯನ್ನು ಸಂತೋಷದಿಂದಲೇ ಸ್ವಾಗತಿಸಿದ್ದ.

ಬರೀ ಹೇಳಿದ್ದಕ್ಕೆ ಹ್ಮೂಗುಟ್ಟಿ ಮಮ್ಮಿ ಮತ್ತು ನೂತನ ಡ್ಯಾಡಿಗೆ ಕಂಗ್ರಾಟ್ಸ್ ಹೇಳಿದಳು "ಯಾವಾಗ ಬರ್ತೀ, ಈಗ ಚೆರಿಹಿಲ್‌ನಲ್ಲಿ ನಾವಿರೋದು. ಹೇಗೂ ನ್ಯೂ ಯಾರ್ಕ್‌ಗೆ ಹತ್ತಿರವೇ. ಇನ್ನು ನೀನು ಅಲ್ಲೇ ಇರ್ಬಹ್ದು. ನಿಂಗೊಂದು ಉದ್ಯೋಗ ಮಮ್ಮಿ ಕೊಡಿಸ್ತಾಳೆ" ಟೆಡ್ಡಿ ಉತ್ಸಾಹದಿಂದ ನುಡಿದ.

"ಬೇಗ್ಬರ್ತೀನಿ...." ಫೋನಿಟ್ಟಳು.

ಹೊಳೆಯುವ ಹೊನ್ನ ಬಣ್ಣದ ಕೂದಲಿನ ಮಮ್ಮಿ ದಯಾನ ಅಂದರೆ ಅವಳಿಗೆ ಇಷ್ಟವೇ. ಅವಳು ಬೋರ್ಡಿಂಗ್‌ಗೆ ಹೋಗುವ ಮುನ್ನ ಸದಾ ಗಂಡ, ಹೆಂಡತಿ ಜಗಳವಾಡುತ್ತಿದ್ದರು. ಕ್ಲಿಂಟನ್ ಹೆಂಡತಿಯ ಜೋರು ಬಾಯಿ ಮುಂದೆ ಸದಾ ಸೋಲುತ್ತಿದ್ದರು.

ಇದೆಲ್ಲ ಅವಳ ಪಾಲಿಗೆ ಕಹೀ ನೆನಪುಗಳೇ. ಹೊಂದಿಕೊಂಡು

ಬಾಳಲಾರದಂಥದ್ದು ಏನಿತ್ತು. ಅವರಿಬ್ಬರ ನಡುವೆ? ಇಂದಿಗೂ ಅರ್ಥವಾಗಿರಲಿಲ್ಲ ಅವಳಿಗೆ. ಹೊರಗಿನ ಶ್ರೀಮಂತ ಆಕರ್ಷಕ ಬದುಕನ್ನು ಇಷ್ಟಪಡುವ ಡಯಾನಗೆ ಕ್ಲಿಂಟನ್‌ನ ಮೌನ, ಸಾಧಾರಣ, ಸರಳ ಸ್ವಭಾವ ಇಷ್ಟವಾಗಿರಲಿಕ್ಕಿಲ್ಲ.

ಮಲಗಿದ್ದವಳು ಎದ್ದು ಕೂತಳು. ನ್ಯೂ ಯಾರ್ಕ್ ನ್ಯೂ ಜೆರ್ಸಿಯ ಮಧ್ಯೆ ಸಿಗುವ ಪುಟ್ಟ ಊರು ಚೆರಿಹಿಲ್.

ಹೆಚ್ಚು ಶ್ರೀಮಂತ ಜನ ವಾಸಿಸುವ ಸುಂದರ ಊರು. ಫಿಲಿಡೆಲ್ಫಿಯಾಗೆ ಹೋಗಿದ್ದಾಗ ನೋಡಿದ್ದಳು. ಆ ಪರಿಸರ ಬಹಳ ಇಷ್ಟವಾಗಿತ್ತು. ಸದ್ಯಕ್ಕೆ ಡಯಾನ ವಾಸ ಅಲ್ಲಿ. ಅಪರೂಪಕ್ಕೊಮ್ಮೆ ಹೋಗಿ ಬರಬಹುದಿತ್ತು.

ಫಿಲಿಡೆಲ್ಫಿಯಾದಲ್ಲಿ ಕಳೆದ ಒಂದು ಸಂಜೆಯನ್ನು ನೆನಪು ಮಾಡಿಕೊಂಡಳು. ಡಯಾನ ದಂಪತಿಗಳ ಜೊತೆ ಟೆಡ್ಡಿ ಕೂಡ ಇದ್ದುದರಿಂದ ಒಂದು ಅಪರೂಪದ ಆಹ್ಲಾದಕರ ಸಂಜೆಯೇ, ಡಯಾನ ಪತಿಯೊಂದಿಗೆ ಬೆರೆಯಲು, ಸ್ವಲ್ಪ ಹಿಂಜರಿಕೆ. ಸದಾ ಮುಖ ಗಂಟು ಹಾಕಿಯೇ ಇರುವ ಅವನೊಬ್ಬ ಶ್ರೀಮಂತ ಹೆಣ್ಣಿನ ವ್ಯಾಪಾರಿ. ಹೆಂಡತಿ, ಮಕ್ಕಳಿಗಾಗಿ ಧಾರಾಳವಾಗಿ ಖರ್ಚು ಮಾಡುತ್ತಿದ್ದ.

ಅಪರೂಪಕ್ಕೆ ಡಯಾನನ ಭೇಟಿ ಮಾಡಲು ಹೋದಾಗ ವಿಹಾರಕ್ಕೆಂದು ತಮ್ಮೊಂದಿಗೆ ಫಿಲಿಡೆಲ್ಫಿಯಾಗೆ ಅವಳನ್ನು ಕರೆತಂದಿದ್ದರು. ಅದಕ್ಕೆ ಟೆಡ್ಡಿಯ ಹಟವೇ ಹೆಚ್ಚು. ಸ್ವತಂತ್ರ ಪ್ರೇಮಿಗಳಿಗೆ ಆಕರ್ಷಣೀಯವಾದ, ಅಭಿಮಾನದ ಸ್ಥಳ. ಇಂಗ್ಲೆಂಡ್‌ನೊಂದಿಗೆ ಮೊದಲು ಯುದ್ಧ ಹೂಡಿ ಸ್ವತಂತ್ರ ಘೋಷಿಸಿ ಮೊದಲು ಸ್ವತಂತ್ರ ಪ್ರಣಾಳಿಕೆಯನ್ನು ವಿಧಿವತ್ತಾಗಿ ಅಂಗೀಕರಿಸಿದ್ದು ಇಲ್ಲಿಯೇ. ಚಾರಿತ್ರಿಕ ಮೈದಾನದಲ್ಲಿ ಮಹಾನ್ ಘಟನೆಗಳ ಸಂಕೇತಗಳು ಇದೆ. ಸ್ವಾತಂತ್ರ್ಯ ಘೋಷಣೆಯ ಮೊದಲ ಪಠಣದೊಂದಿಗೆ 1776ಜುಲೈ 8ರಂದು ಗಂಟೆ ಬಾರಿಸಿತು. ಬಲು ಭಾರವಾದ ಗಂಟೆಯ ಮೇಲುಗಡೆಯ ಫಲಕದಲ್ಲಿ ಸ್ವಾತಂತ್ರ್ಯವನ್ನು ಎಲ್ಲಾ ರಾಷ್ಟ್ರದವರಿಗೂ ಎಲ್ಲಾ ಪ್ರಜೆಗಳಿಗೂ ಘೋಷಿಸಿ ಎನ್ನುವ ವಾಕ್ಯವಿದೆ. ಯಾರಿಗಾದರೂ ರೋಮಾಂಚನದ ವಿಷಯ.

ಅಂದೇ ಬಹಳ ಪ್ರೀತಿಯಿಂದ ಅಭಿಮಾನದಿಂದ ಬೆಂಜಮಿನ್ ಫ್ರಾಂಕ್ಲಿನ್ ವಿಷಯ ಹೇಳಿದ್ದು. ಇದು ಅವನ ಕಾರ್ಯ ಕ್ಷೇತ್ರವು ಕೂಡ.

ಬಹು ವರ್ಣರಂಜಿತ ವ್ಯಕ್ತಿತ್ವದ ಈತ ಜನನಾಯಕನಾಗಿ, ವಿನೋದಿಯಾಗಿ ರಾಜಕಾರಣಿಯಾಗಿ ವಿಜ್ಞಾನಿಯಾಗಿ ಸಿಡಿಲಿನ ವಿಷಯದಲ್ಲಿ ಜಗತ್ತಿನಲ್ಲಿಯೇ ಪರಿಶೋಧನೆ ಮಾಡಿದ ಕೀರ್ತಿ ಇವನದು. ನಿರ್ಗತಿಕನಾಗಿ ಒಳ್ಳೆಯ ಮಿತ್ರರಿಲ್ಲದೆ, ಆದರಿಸುವ ಬಂಧುಗಳು ಇಲ್ಲದೆ, ಒಬ್ಬ ಮುದ್ರಕನಾಗಿ ಪ್ರಕಾಶಕನಾಗಿ, ರಾಜಕಾರಣಿಯಾಗಿ, ರಾಷ್ಟ್ರಪ್ರೇಮಿಯಾಗಿ ಇಲ್ಲಿಯೇ ಮನೆ ಕಟ್ಟಿ ಕೆಲವು ವರ್ಷ ವಾಸಿಸಿದ. ಇಂದಿಗೂ ಎತ್ತರದ ಕಟ್ಟಡಗಳ ಮೇಲೆ ಹುಗಿಯುವ ಸಿಡಿಲು ನಿರೋಧಕ ಲೋಹದ ತಂತಿ ಫ್ರಾಂಕ್ಲಿನ್‌ನ ಪರಿಶೋಧನೆಯ ಆಧಾರದ ಮೇಲೆ ನಿರ್ಮಿತವಾಗಿದ್ದು. ಗಾಂಧೀಜಿಯಂತೆ ಬೆಂಜಮಿನ್ ಫ್ರಾಂಕ್ಲಿನ್ ಕೂಡ ಬ್ರಿಟಿಷರ ವಸ್ತುಗಳ ಬಹಿಷ್ಕಾರವನ್ನು ಒಂದು ಅಸ್ತ್ರವಾಗಿ ಬಳಸಿದ. ಇಂಥ ಬಹು ರಂಜಿತ ಮಹಾನ್ ವ್ಯಕ್ತಿಯ ಮರಣವು ಫಿಲಿಡೆಲ್ಫಿಯಾದಲ್ಲಿಯೇ ಆಯಿತು.

ಫ್ರಾಂಕ್ಲಿನ್ ಅಂತ್ಯಕಾಲದ ಅವನ ಮನೆ ಫ್ರಾಂಕ್ಲಿನ್ ಕೋರ್ಟಿನ ಕೂಡ ಟೆಡ್ಡಿಯ ಜೊತೆ ನೋಡಿದ್ದು ಒಂದು ಸಿಹಿ ನೆನಪಾದರೂ, ಡಯಾನ ಗಂಡ ಎಷ್ಟು ಸಿಡುಕ, ಕೋಪಿಷ್ಟ ಎಂದು ಅಂದೇ ಅರ್ಥವಾಗಿದ್ದು.

ಸಾರ್ವಜನಿಕವಾಗಿ ಒಂದು ರೆಸ್ಟೋರೆಂಟ್‌ನಲ್ಲಿ ಕೂಗಾಡಿ ಬೈದಾಡಿದ್ದ. ಗಂಡ ಹೆಂಡಿರ ಮಧ್ಯೆ ಒಂದು ಸಣ್ಣ ಹೊಡೆದಾಟ, ಇವಳತ್ತ ತೋರಿಸಿ ಬಹಳ ಕೆಟ್ಟ ಭಾಷೆಯಲ್ಲಿ ಬೈಯ್ದಿದ್ದ.

ನಂತರ ಎಂದೂ ಅವರಲ್ಲಿ ಉಳಿದಿರಲಿಲ್ಲ ರೂತ್ ಕ್ಲಿಂಟನ್. ಫೋನ್‌ನಲ್ಲಿ ಮಾತ್ರ ಕುಶಲೋಪರಿ. ಯಾಕೋ ಏನೋ ಕ್ಲಿಂಟನ್‌ನೊಡನೆ ಅವಳ ಒಡನಾಟ ಹೆಚ್ಚು. ಅಪರೂಪಕ್ಕೆ ಬಂದರೂ ಒಂದೆರಡು ದಿನ ಅವಳೊಂದಿಗೆ ಅಪಾರ್ಟ್‌ಮೆಂಟ್‌ನಲ್ಲಿ ಉಳಿದುಕೊಳ್ಳುತ್ತಿದ್ದರು.

* * * *

ಎರಡು ದಿನದ ನಂತರ ನವನೀತ್ ಹುಡುಕಿಕೊಂಡು ಬಂದ ಹೋಟೆಲ್ ರಿಸೆಪ್ಷನಿಸ್ಟ್ ಕೌಂಟರ್‌ಗೆ "ಮೇಡಮ್, ರೂತ್ ಕ್ಲಿಂಟನ್‌ನ ನೋಡ್ಬೇಕು" ಎಂದಾಗ ಅವನು ಯಾರೆಂದು ವಿಚಾರಿಸಿದ ನಂತರ ಒಂದು ಸ್ಲಿಪ್ ಕೊಟ್ಟು ತನ್ನ ಕೆಲಸದಲ್ಲಿ ಮಗ್ನಳಾದಳು.

ಹೊರ ಬಂದ ನವನೀತ್ ಗೇಟಿನವರೆಗೂ ನೋಟ ಹರಿಸಿದ. ಬರುತ್ತಿದ್ದ ರೂತ್ ಅವನ ಗಮನ ಸೆಳೆದಳು. ಅಚ್ಚು ಕಪ್ಪು ಕೂದಲು,

ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು



ಶುಭ್ರವಾದ ಬಣ್ಣ, ಸ್ವಲ್ಪ ಹೆಚ್ಚೆನಿಸುವಂಥ ನಿಲುವು ತಿದ್ದಿ ತೀಡಿದಂಥ ಮುಖ, ಕಡೆದಿಟ್ಟಂಥ ಅಂಗಾಂಗಗಳು. ಮಿಸ್ ಯೂನಿವರ್ಸ್, ಮಿಸ್ ವರ್ಲ್ಡ್‌ನ ಸ್ಪರ್ಧಿಯಾಗಿ ಕಂಡಳು. ಇಂಥ ರೂಪಸಿಯನ್ನು ತಾನು ನೋಡೇ ಇಲ್ಲವೆಂದುಕೊಂಡ ಕೆಲವು ಕ್ಷಣಗಳು. 83357CR

ವಿಶ್ ಮಾಡಿ ಪಕ್ಕಕ್ಕೆ ಸರಿದ. 'ಉಫ್' ಎಂದು ಹಣೆಯೊತ್ತಿಕೊಂಡಳು. "ಮೈ ಗಾಡ್, ನಿನ್ನ ಸಾಕಷ್ಟು ಕಡೆ ಹುಡುಕ್ದೇ. ನಿಮ್ಮ ಮನೆಗೂ ಹೋಗಿದ್ದೆ. 'ಐಯಾಮ್ ಸಾರಿ....'' ಎಂದು ಸಂತಾಪ ವ್ಯಕ್ತಪಡಿಸಿದಳು. ಹಿಂದಿನ ದಿನ ಅವನ ತಂಗಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ಅಲ್ಲಿಗೆ ಹೋದನಂತರವೇ ವಿಷಯ ತಿಳಿದಿದ್ದು. ಅವಳಮ್ಮನ ರೋಧನ ಮುಗಿಲು ಮುಟ್ಟಿತ್ತು.

ಎರಡು ಕ್ಷಣ ಮೌನವಹಿಸಿದ ನಂತರ "ಸಾರಿ, ನಿಮ್ಮನ್ನ ತುಂಬ ಕಾಯ್ಸಿಬಿಟ್ಟೆ. ಈಗ ಥಿಯೇಟರ್ ಇರೋ ಸ್ಥಳದಲ್ಲಿ ಹಿಂದೆ ಅನಾಥಾಶ್ರಮ ಇತ್ತಂತೆ. ಹದಿನೈದು ವರ್ಷಗಳ ಹಿಂದೆ ಡೆಮಾಲಿಷ್ ಮಾಡಿ ಚಲನಚಿತ್ರ ಮಂದಿರ ಕಟ್ಟಿದ್ದಾರೆ. ಇಷ್ಟು ಇನ್‌ಫಾರ್ಮೇಶನ್ ಸಾಕಲ್ವಾ ?'' ಹೊರಟಾಗ ತಡೆದವಳು ಪರ್ಸ್‌ನಿಂದ ಒಂದು ಐದು ನೂರರ ಒಂದು ನೋಟನ್ನು ತೆಗೆದು ಅವನ ಮುಂದಿಡಿದಾಗ ನಿರಾಕರಿಸಿದ್ದಳು "ಬೇಡ ಮೇಡಮ್, ಹಣ ಕೊಡೋಂಥ ಸಹಾಯ ನಾನೇನು ಮಾಡ್ಲಿಲ್ಲ.''

ಈಗ ಸಿಕ್ಕ ಎಳೆ ಹಿಡಿದು ಮುಂದುವರಿಯಬೇಕಿತ್ತು, ಯಾಕೋ ಏನೋ ನವನೀತ್ ಮನೆಯ ಚಿತ್ರವೇ ಅವಳ ಕಣ್ಮುಂದೆ. ಅಲ್ಪ ಸ್ವಲ್ಪ ಸಂಪಾದನೆ ಬೇರೆಯವರು ಮಾಡಿದರೂ ನವನೀತ್‌ಗೆ ಆರ್ಥಿಕವಾಗಿ ಆಧಾರ ಆ ಮನೆಗೆ. ಬೋರ್ಡಿಂಗ್‌ಗಳಲ್ಲಿ ಬೆಳೆಯುವ ಮಕ್ಕಳಲ್ಲಿ ಶಿಸ್ತು ಬೆಳೆಯಬಹುದು. ಉತ್ತಮ ವಿದ್ಯಾಭ್ಯಾಸ ಸಿಕ್ಕಬಹುದು. ಆದರೆ ಕಳೆದುಕೊಳ್ಳುವುದು ತೀರಾ ಅಮೂಲ್ಯವಾದದ್ದು.

ರೂಮಿಗೆ ಬಂದವಳು ಸುಮ್ಮನೆ ಕೂಡಲಿಲ್ಲ. ಆ ಚಲನಚಿತ್ರ ಮಂದಿರದ ಮ್ಯಾನೇಜರ್‌ನ ಸಂಪರ್ಕಿಸಿದಳು "ಸ್ವಲ್ಪ ಓನರ್‌ನ ನೋಡ್ಬೇಕಿತ್ತಲ್ಲ'' ಅವನು ಸುಮ್ಮನೆ ಇಟ್ಟುಬಿಟ್ಟ.

ಚಿತ್ರಮಂದಿರವನ್ನು ಲೀಜ್‌ಗೆ ಪಡೆದ ಮಾಲೀಕನ ಕ್ಯಾರೆಕ್ಟರ್ ಅಷ್ಟಕ್ಕಷ್ಟೆ. ಸಾಕಷ್ಟು ಹೆಣ್ಣುಗಳ ಗೆಳೆತನ. ಇಂಥ ಫೋನ್‌ಗಳು

ಅಪರೂಪವಲ್ಲ. ಮನೆಯಾಕೆ ತೀರಾ ಜೋರು. ಥಿಯೇಟರ್‌ನ ಮ್ಯಾನೇಜ್‌ಮೆಂಟ್‌ನ ಎಚ್ಚರಿಸಿದ್ದಳು.

"ಯಾವ್ದೇ ಫೋನ್ ಬಂದ್ರೂ ಅವ್ರಿಗೆ ಕೊಡಕೂಡ್ದು. ವಿಷ್ಯ ಅವ್ರವರ್ಗು ಹೋಗ್ಬಾರ್ದು. ಇಲ್ಲಿ ಅಪರಂಜಿಗೆ ಹೇಳಿ ಕೈಕಾಲು ಮುರ್ಸಿಬಿಡ್ತೀನಿ" ತಮ್ಮನ ಕಡೆ ತೋರಿಸಿ ಬೆದರಿಕೆ ಹಾಕಿದ್ದಳು. ಬರೀ ಪುಂಡ, ಪೋಕರಿ ಮಾತ್ರವಲ್ಲ, ಅವನೊಬ್ಬ ಕ್ರಿಮಿನಲ್ ಕೂಡ. ಆದ್ದರಿಂದ ಹೆದರುತ್ತಿದ್ದರು.

ಫೋನ್‌ನಲ್ಲಿ ಸಂಪರ್ಕಿಸಲು ಸಾಹಸ ಮಾಡಿ ಕಡೆಗೆ ಆ ವಿಷಯ ಕೈ ಬಿಟ್ಟು ತಾನೇ ಥಿಯೇಟರ್‌ಗೆ ಬಂದಳು. ಷೋ ನಡೆಯುತ್ತಿದ್ದ ಸಮಯ.

ನೋಡಿದ ಕೂಡಲೇ ಮುಖದ ಮೇಲಿನ ಗಾಂಭೀರ್ಯ ತೊಟ್ಟ ಬಟ್ಟೆಗಳು ನೀಡಿದ ಧೀಮಂತಿಕೆಯಿಂದ ಯಜಮಾನರ ಗೆಳತಿಯರ ಪಟ್ಟಿಗೆ ಸೇರಿಸಲು ಹಿಂಜರಿದರು ಸ್ವಲ್ಪ.

"ಏನಾಗ್ಬೇಕಿತ್ತು, ಮೇಡಮ್? ಮುಂಗಡ ಬುಕ್ಕಿಂಗ್ ಏನು ಇಲ್ಲ. ಈ ಷೋ ಕೂಡ ಹೌಸ್‌ಫುಲ್ ಆಗಿಲ್ಲ." ಹೇಳಿದ ಗೇಟ್ ಕೀಪರ್. ನಲ್ವತ್ತು ವರ್ಷ ಮೀರಿದ ವ್ಯಕ್ತಿ. ಅನುಭವಗಳು ವಯಸ್ಸಿಗಿಂತ ಹೆಚ್ಚಿಗೆ ಹಣ್ಣು ಮಾಡಿತ್ತು ಅವನನ್ನು. "ಓನರ್‌ನ ನೋಡ್ಬೇಕಿತ್ತು" ಎಂದಳು. ಅತ್ತಿತ್ತ ನೋಡಿದವನ ಕಣ್ಣುಗಳಲ್ಲಿ ಭಯ ಮಿಶ್ರಿತ, ಸಹಾನುಭೂತಿ, ಬದುಕಲು ಇದೊಂದೇ ದಾರಿಯೇ?

"ಅಮ್ಮಾವ್ರಿಗೆ ಗೊತ್ತಾದ್ರೆ, ನಿಮ್ಮನ್ನು ಬಡೆದು ಹಾಕ್ಬಿಡ್ತಾರೆ. ಪರ್ಸನಲ್ ಬಿಡದಿ ಇದೆ, ಅಲ್ಲಿಗೆ ಹೋಗ್ಬಿಡಿ" ಪಿಸುದನಿಯಲ್ಲಿ ಹೇಳಿದಾಗ ಅವಳಿಗೇನು ಅರ್ಥವಾಗಲಿಲ್ಲ.

"ಅವ್ರ ಮನೆ ಅಡ್ರೆಸ್ ತಿಳ್ಸಿ ಸಾಕು."

ಅಷ್ಟರಲ್ಲಿ ಒಂದು ಕಾರು ಬಂದು ನಿಂತಿತು. ಅವನು ಸರಿದು ಓಡಿದ. ಐವತ್ತು ವಯಸ್ಸು ಮೀರಿದ ಸ್ವಲ್ಪ ಸದೃಢ ಮೈಕಟ್ಟಿನ ಬೊಜ್ಜು ಮನುಷ್ಯ ಬಂದ. ಹಣೆಯಲ್ಲಿ ಗಂಧ; ಕುಂಕುಮ; ಕುತ್ತಿಗೆಯಲ್ಲಿ ಯಾವುದೋ ದೇವರ ಡಾಲರ್.

ಮುಖವನ್ನು ಮತ್ತಷ್ಟು ಮೃದುಗೊಳಿಸಿ ವಿಚಾರಿಸಿದ "ತಾವು ಯಾರು, ಏನಾಗ್ಬೇಕಿತ್ತು?" ಒಳ್ಳೆಯತನವನ್ನು ಮಾತಿನಲ್ಲಿ ವೈಭವಿಸಿದ. ಜೊತೆಯಲ್ಲಿ ಕರೆದೊಯ್ದು ಮೇಲಿನ ವಿಶ್ರಾಂತಿ ಗೃಹಕ್ಕೆ.

"ಕೂತ್ಕೊಂಡ್ ಮಾತಾಡಿ" ಎಂದವ ಕೂಲ್ ಡ್ರಿಂಕ್ಸ್‌ಗೆ ಹೇಳಿ ಕಳಿಸಿದ. ಧರೆಗಿಳಿದು ಬಂದ ರೂಪರಾಶಿಯಂತೆ ಗೋಚರಿಸಿದಳು. ಎಲ್ಲಕ್ಕಿಂತ ಹೆಚ್ಚಿಗೆ ಅವನನ್ನು ಆಕರ್ಷಿಸಿದ್ದು ಅಮೆರಿಕನ್ ಉಡುವು. ಹೆಚ್ಚಿನ ವಿಶ್ವಾಸ ತೋರಿದ.

"ನಿಮ್ಮಿಂದ ಸ್ವಲ್ಪ ಇನ್‌ಫಾರ್ಮೇಷನ್ ಬೇಕಿತ್ತು. ಈಗ ಈ ಚಲನಚಿತ್ರ ಮಂದಿರ ಇರೋ ಸ್ಥಳದಲ್ಲಿ ಹಿಂದೆ ಅನಾಥಾಶ್ರಮ ಇತ್ತಂತೆ. ಅದ್ನ ಈಗ ಬೇರೆ ಕಡೆಗೆ ಷಿಫ್ಟ್ ಮಾಡಿದ್ದಾರ?" ಕೇಳಿದಳು.

ರಾಮಾಚಾರಿಗಳು ಎಚ್ಚರಿಸಿದ್ದರು. "ನಿನ್ನ ಹುಡುಕಾಟ, ಅದ್ರ ಹಿಂದಿನ ಸತ್ಯನ ಬೇರೆಯವ್ರಿಗೆ ಬಿಚ್ಚಿ ಹೇಳಿದ್ರೆ ಅಪಾಯ. ವಿಷ್ಯ ತಿಳಿಯೋಕೆ ಬೇರೆ ಬೇರೆ ಕಾರಣಾನ ಹೇಳ್ಕೊ. ಕಾಡಿನಲ್ಲಿ ಹಸಿರು, ರಮ್ಯ ಪ್ರಕೃತಿ ಸೌಂದರ್ಯ ಮಾತ್ರವಲ್ಲ, ದುಷ್ಟ ಪ್ರಾಣಿಗಳ ಕೂಡ ಇರುತ್ತೆ" ಈ ವಾಕ್ಯಗಳು ಅವಳ ಮನದಲ್ಲಿ ಇತ್ತು.

ತಲೆಕೆರೆದು ನಗೆ ಬೀರಿದ ಆ ವ್ಯಕ್ತಿ. ಮುಗ್ಧವಾದ, ಆತ್ಮೀಯವಾದ, ಸಹಜವಾದ ನಗು ಆಗಿರಲಿಲ್ಲ. ಕೆಟ್ಟ ನಗೆ, ಆ ನಗೆಯಲ್ಲಿ ಮುಖದ ವರ್ಚಸ್ಸು ಹಾಳಾಯಿತು. ವಿಭಿನ್ನ ವ್ಯಕ್ತಿಯಾಗಿ ಕಂಡ.

"ಷಿಫ್ಟ್ ಆಗೋಕೇನಿತ್ತು, ಒಂದ್ಸಲ ರೈಡ್ ಆದ್ಮೇಲೆ ಪೊಲೀಸ್‌ನವ್ರು ಅನಾಥಾಶ್ರಮನ ಸೀಲ್ ಮಾಡ್ಕೊಂಡ್ ಹೋದ್ರು. ಆಮೇಲೆ ಏನೇನೋ ಸುದ್ದಿ ಬಂತು ಪೇಪರ್‌ಗಳಲ್ಲಿ. ಕಡೆಗೆ ಹಾಳು ಬಿತ್ತು. ಕೊಂಡವ್ರು ವ್ಯಾಪಾರಿ ದೃಷ್ಟಿಯಿಂದ ಥಿಯೇಟರ್ ಕಟ್ಟಿದ್ರು. ಇಪ್ಪತ್ತೈದು ವರ್ಷ ಲೀಜ್‌ಗೆ ಪಡೆದುಕೊಂಡಿದ್ದೀನಿ. ನೀನು ಯಾರು?" ಕೇಳಿದ ಉಲ್ಲಾಸದಿಂದ. ಯುವತಿ ಇಷ್ಟಪಟ್ಟರೆ ಹದಿನೈದು ದಿನ ಇರಿಸಿಕೊಳ್ಳಲು ಸಿದ್ಧ ಸದುದ್ದೇಶದಿಂದಲೇ.

"ರೂತ್ ಕ್ಲಿಂಟನ್, ಅಮೆರಿಕಾದಿಂದ ಬಂದಿದ್ದೀನಿ" ಎಂದ ಕೂಡಲೇ ಏಸೀ ಕೆಲಸ ಮಾಡುತ್ತಿದ್ದರೂ ಬೆವತುಹೋದ. ಸರಿಯಾಗಿ ಯೋಚಿಸದೆ ನಾಲಿಗೆಯಲ್ಲಿನ ಪಸೆಯಾರಿತು. ಅಮೆರಿಕಾ ಅಧ್ಯಕ್ಷ ಕ್ಲಿಂಟನ್, ಅವನ ಸಂಬಂಧಿ ಇತರ.. ಇತರ. "ತಗೊಳ್ಳಿ..." ಕೂಲ್ ಡ್ರಿಂಕ್ಸ್ ಅವಳ ಮುಂದೆ ಸರಿಸಿದವನು ಕರ್ಚೀಫ್‌ನಿಂದ ಮುಖದ ಬೆವರನ್ನೊತ್ತಿದ. ಭಯದಿಂದ ಅವನೆದೆ ನಡುಗುತ್ತಿತ್ತು. ಒಂದು ಹುಡುಗಿಯ ಸಲುವಾಗಿ ಮೂರು ದಿನ ಸರಳುಗಳ ಹಿಂದೆ ಇದ್ದ. ಆಗಿನ ಸ್ಥಿತಿ ನೆನಪಾದರೆ ಇನ್ನೊಮ್ಮೆ

ಬದುಕಿರುವವರೆಗೂ ಹೆಣ್ಣಿನ ಕಡೆ ಕಣ್ಣೆತ್ತಿ ನೋಡಲಾರ. ರಕ್ತದಿಂದ ಬಂದ ದೌರ್ಬಲ್ಯವನ್ನು ಹತ್ತಿಕ್ಕಲಾರ.

"ನಂಗೇ ಮತ್ತೇನು ವಿಷ್ಯನು ಗೊತ್ತಿಲ್ಲ. ನಮ್ಮ ಗೇಟ್ ಕೀಪರ್ ನಜೀರ್‌ನ ವಿಚಾರ್ಸಿದ್ರೆ ಏನಾದ್ರೂ ತಿಳೀಬಹ್ದು" ಎದ್ದು ಹೋದ. ಅವಳಿಗೇನು ಅರ್ಥವಾಗಲಿಲ್ಲ. ವಿಚಾರಿಸಿದಾಗ ಗೇಟ್ ಕೀಪರ್ ನಜೀರ್ ಎಂಟು ದಿನದಿಂದ ಕೆಲಸಕ್ಕೆ ಬಂದಿಲ್ಲವೆಂದು ತಿಳಿಯಿತು.

ಥಿಯೇಟರ್ ಕ್ಯಾಬಿನ್ ರೂಂನ ಪಕ್ಕದಲ್ಲಿದ್ದ ರೂಮಿನಿಂದ ಬರುವ ವೇಳೆಗೆ ಷೋ ಮುಗಿದು ಜನ ಹೊರ ಬರತೊಡಗಿದ್ದರು. ಎಲ್ಲಾ ಹಿಂದಿರುಗಿ ಹಿಂದಿರುಗಿ ನೋಡುವವರೇ. ಕೆಲವರಂತು ನೋಡುತ್ತಲೇ ನಿಂತರು. ಇನ್ನಷ್ಟು ಧೈರ್ಯ ವಹಿಸಿದ ಯುವಕರು ಅವಳನ್ನ ಮುಟ್ಟಿ ನೋಡಿ ಆನಂದ ಪಡುವ ಅಂದಾಜು ಹಾಕಿದಾಗ, ಟ್ಯಾಕ್ಸಿ ಏರುತ್ತಿದ್ದ ನವನೀತ್ ಅವರ ನಡುವೆ ಬಂದ.

"ಬನ್ನಿ ಮೇಡಮ್, ನಿಮ್ಮನ್ನ ಹುಡ್ಕಿಕೊಂಡು ಹೋಟಲ್‌ಗೆ ಹೋಗಿದ್ದೆ. ಒಂದಿಷ್ಟು ವಿಷ್ಯ ತಿಳಿಸೋದಿದೆ" ಎಂದು ಜೊತೆಯಲ್ಲಿ ಕರೆದೊಯ್ದ. ಚಲನಚಿತ್ರದ ಒಂದು ದೃಶ್ಯ ನೋಡಿ ಉತ್ಸಾಹಿತರಾಗಿದ್ದವರು ಕೈ ಕೈ ಹಿಸುಕಿಕೊಂಡರು. ಕಲ್ಪನೆಯ ಸೀನು ಮರೆಯಾಗಿ ಹೋಗಿತ್ತು.

ಒಂದು ಕಡೆ ಟ್ಯಾಕ್ಸಿ ನಿಂತಿತು. ಸ್ವಲ್ಪ ಹಿಂದಕ್ಕೆ ತಿರುಗಿ ಕ್ಷಮೆ ಯಾಚಿಸಿದ "ಎಕ್ಸ್‌ಕ್ಯೂಜ್‌ಮಿ ಮೇಡಮ್, ನಿಮ್ಮ ಈ ಪರ್ಸ್‌ನ ನಮ್ಮ ಮನೆಯಲ್ಲಿ ಬಿಟ್ಬಂದಿದ್ರಿ. ಕೊಡೋ ಸಲುವಾಗಿ ಹೋಟಲ್‌ಗೆ ಹೋಗಿದ್ದೆ. ಅರಸಿಕೊಂಡ್ಬಂದೆ. ಬಹಳ ನೀಚ ಮನುಷ್ಯ ಮುಕುಂದಯ್ಯ. ಕೆಟ್ಟ ಇತಿಹಾಸವುಳ್ಳ ವ್ಯಕ್ತಿ. ಒಂದು ರೀತಿಯ ಗೋಸುಂಬೆ. ಅವ್ನು ಬೇರೆಯವ್ರನ್ನ ಮಾತ್ರವಲ್ಲ, ತನ್ನನ್ನು ತಾನೇ ಮೋಸ ಮಾಡಿಕೊಳ್ಳಬಲ್ಲ. ಅಂದರೇ ಆಸ್ಕರ್ ವೈಲ್ಡ್‌ನ 'ಡೋರಿಯಸ್ ಗ್ರೇ'ನಲ್ಲಿ ಬರೋ ನಾಯಕನಂತೆ 'ಗ್ರೇ' ವರ್ಷಗಳಾದರೂ ಏನು ಬದಲಾಗ್ದೇ ಇರ್ತಾನೆ. ಆದರೆ 'ಗ್ರೇ'ನ ಅಕೃತ್ಯಗಳಿಗೆ ಅನುಸಾರವಾಗಿ ಅವನ ಚಿತ್ರ ಬದಲಾಗುತ್ತ ಹೋಗುತ್ತೆ. ಅಂದರೆ ಅದು ಅವ್ನ ಘೋರ ಕೃತ್ಯಗಳನ್ನು ದಾಖಲಿಸುತ್ತೆ. ಚಿತ್ರವನ್ನು ನೋಡಿದ ನಾಯಕ ಅದರ ವಿಕಾರತೆ ಸಹಿಸಲಾರದೆ ಚಾಕು ಹಾಕುತ್ತಾನೆ. ಈ ವೈಕಿ ವ್ಯಕ್ತಿತ್ವದ ಮನುಷ್ಯ ಮುಕುಂದಯ್ಯ. ನೀವು ಅನಾಥಾಲಯದ ಬಗ್ಗೆ ಅವ್ನ ಪ್ರಶ್ನಿಸಿ ಪ್ರಯೋಜನವಿಲ್ಲ, ಥಿಯೇಟರ್ ಓನರ್ ಮನೆಗೆ ನಿಮ್ಮನ್ನ

ಕರ್ಕೊಂಡ್ಹೋಗ್ತೀನಿ" ಹೇಳಿದ. ಆದರೆ ಅವನ ಮುಖದಲ್ಲಿ ದೊಡ್ಡ ಉಪಕಾರ ಮಾಡುವ ಭಾವವಾಗಲಿ, ತೀರಾ ವಿಪರೀತದ ವಿನಯವಾಗಲಿ ಇರಲಿಲ್ಲ. ಮೆಚ್ಚುಗೆ ಮೂಡಿತು ರೂತ್ ಕಣ್ಣುಗಳಲ್ಲಿ.

"ತುಂಬ ಓದಿಕೊಂಡಿದ್ದೀರಾ?" ಕೇಳಿದಾಗ ತಲೆ ಕೊಡವಿದ "ಅಂಥದೇನಿಲ್ಲ, ಶಾಲಾ ಕಾಲೇಜು ದಿನಗಳ ಕನಸು, ನಾನೊಬ್ಬ ಬರಹಗಾರನಾಗ್ಬೇಕು. ನಾಲ್ಕು ಜನ ಓದುವಂತಾಗ್ಬೇಕು. ಈಗ ಅದೇನಾಗ್ಲಿಲ್ಲ" ನೋವಿತ್ತು ಅವನ ದನಿಯಲ್ಲಿ.

ದಾರಿಯುದ್ದಕ್ಕೂ ಹೇಳಿಕೊಂಡ. ಏಳು ಜನ ಮಕ್ಕಳಲ್ಲಿ ಅವನು ಎರಡನೆಯವ. ಮೊದಲನೆಯ ಆಕ್ಸಿಡೆಂಟ್‌ನಿಂದ ತೀರಿಕೊಂಡಿದ್ದ. ಬಿ.ಎ.ವರೆಗೂ ಕಲಿಕೆ. ಆಮೇಲೆ ಟ್ಯಾಕ್ಸಿ ಡ್ರೈವರ್ ವೃತ್ತಿ. ಡಿಗ್ರಿ ಪಡೆದುಕೊಂಡಿದ್ದು ತೀರಾ ಕಷ್ಟದಿಂದ. ಇಬ್ಬರ ತಂಗಿಯರ ಮದುವೆ ಸಾಲಸೋಲ ಮಾಡಿ, ತಮ್ಮಂದಿರ ವಿದ್ಯಾಭ್ಯಾಸ. ಅಜ್ಜಿ, ತಾತ ಇಂಥ ದೊಡ್ಡ ಸಂಸಾರ. ಮೂರು ವರ್ಷದ ಹಿಂದೆ ಮದುವೆಯಾದ ಹೆಂಡತಿ ಇಲ್ಲಿಗೆ ಸುಖ ಸೌಲತ್ತು ಸಾಲದೇ ತವರುಮನೆ ಸೇರಿದ್ದು. ಅದಕ್ಕೆ ಅವನ ಬಳಿ ಪರಿಹಾರವಿಲ್ಲ.

ಒಂದು ಕತೆ ಓದಿದ ಅನುಭವವಾಯಿತು ರೂತ್‌ಗೆ. ಆದರೆ ಅವನು ತನ್ನವರೊಂದಿಗೆ ಇದ್ದ. ಅದಕ್ಕಾಗಿ ಕ್ಷಣ ಈರ್ಷೆಪಟ್ಟಳು ಕೂಡ.

"ಏನು ಬರೀಲಿಲ್ವಾ?" ಕೇಳಿದಳು.

ಸುಮ್ಮನಾಗಿಬಿಟ್ಟ. ಅವನ ಅನುಭವಗಳನ್ನೆ ಗಟ್ಟಿ ಮಾಡಿಕೊಂಡು ಪುಟಗಳನ್ನು ತುಂಬಿ ಪತ್ರಿಕಾಲಯಗಳಿಗೆ ಅಲೆದಾಡಿದ್ದ. ಓದದೆಯೇ ವಾಪಸ್ಸು ಮಾಡಿದ್ದರು! ಪ್ರಕಾಶಕರನ್ನು ಕಂಡಿದ್ದ. ಯಾರು ರಿಸ್ಕ್ ತೆಗೆದುಕೊಳ್ಳಲು ಸಿದ್ಧವಿಲ್ಲ. ಈಗ ಅವೆಲ್ಲ ಅಲಮಾರು ಸೇರಿತ್ತು. ಹಳೇ ಪೇಪರ್ ಬೇಕೆನಿಸಿದಾಗ ಮನೆಯವರು ಒಂದೊಂದು ಹಾಳೆ ಕಿತ್ತುಕೊಳ್ಳುತ್ತಿದ್ದರು. ಅದೊಂದು ದುರಂತ ನವನೀತ್ ಪಾಲಿಗೆ.

ಟ್ಯಾಕ್ಸಿ ಒಂದು ಕಡೆ ನಿಂತಾಗ ಇಳಿದವನು "ಇದೇ ಥಿಯೇಟರ್‌ನ ಮಾಲೀಕರ ಮನೆ. ಇಲ್ಲೇ ಇರ್ತೀನಿ. ನೀವ್ಹೋಗ್ಬನ್ನಿ" ಎಂದವನು ಬಟ್ಟೆ ಹಿಡಿದು ಟ್ಯಾಕ್ಸಿಯನ್ನೊರೆಸತೊಡಗಿದ. ಇದು ಅವನ ಜೀವನದ ಒಂದು ಭಾಗ. ಹೆಚ್ಚಿನ ಒಡನಾಟ ಅದರೊಂದಿಗೆ ಇದ್ದುದ್ದರಿಂದ ಆತ್ಮೀಯತೆ ಆಪ್ಯಾಯಮಾನ.

ಇಲ್ಲಿಗೆ ಬಂದ ಮೇಲೆ ಹತ್ತಾರು ಅನುಭವಗಳು ಅವಳಿಗೆ ಆಗಿತ್ತು. ಸ್ವಲ್ಪ ಹಿಂಜರಿಕೆಯಿಂದಲೇ ಗೇಟು ತೆಗೆದಳು. ಹಣೆಯ ಮೇಲೆ ಮೂರು ಎಳೆಯ ವಿಭೂತಿ. ರಟ್ಟೆ, ಎದೆಗೆಲ್ಲ ವಿಭೂತಿಯ ಅಲಂಕಾರ ವ್ಯಕ್ತಿಯ ಎದೆಯ ಮೇಲೆ ಲಿಂಗವಿದ್ದ ಬಂಗಾರದ ಕರಂಡಕವಿತ್ತು. ಹೊರಗೆ ಇಣಕಿದವನು ಕಣ್ಣು ಕಿರಿದುಗೊಳಿಸಿ ಮೂತಿ ಉದ್ದ ಮಾಡಿದ.

"ಯಾರು? ನಮ್ಗೆ ಯಾವ ತರಹದ ಪದಾರ್ಥಗಳು ಬೇಕಿಲ್ಲ. ಏನಿದ್ರೂ ನಮ್ದು ಅಂಗ್ಡಿಯಲ್ಲಿ ವ್ಯಾಪಾರ. ಮನೆ ಮುಂದೆ ಸೇಲ್ಸ್ ಗರ್ಲ್ ಹತ್ರ ಏನು ತಗೊಳ್ಳೊಲ್ಲ" ಹೇಳಿದರು ಒರಟಾಗಿ.

"ನಾನು ಸೇಲ್ಸ್ ಗರ್ಲ್ ಅಲ್ಲ. ನ್ಯೂ ಯಾರ್ಕ್‌ನಿಂದ ಬಂದಿದ್ದೀನಿ, ನಿಮ್ಮನ್ನ ಭೇಟಿ ಮಾಡೋ ಸಲುವಾಗಿ" ಎಂದಳು. ಅಮೆರಿಕಾದ ಬಗ್ಗೆ ಭಾರತದ ಜನಕ್ಕೆ ಅಭಿಮಾನವಿದೆಯೆಂದು ಅವಳ ಅರಿವಿಗೆ ಬಂದಿತ್ತು. ಬಹಳ ನಿಧಾನವಾಗಿ ಸಡಿಲವಾಯಿತು ಮುಖದ ಗಂಟು. ಹೆಗಲ ಮೇಲಿನ ವಸ್ತ್ರದಿಂದ ಮೈ ಕೊಡವಿಕೊಳ್ಳುತ್ತ "ಬನ್ನಿ....." ಎಂದರು ಒಳಗೆ ಹೋಗುತ್ತ.

ಈ ಆಸೆ ಮನದಲ್ಲಿ ಮೂಡಿದ ದಿನದಿಂದಲೇ, ಭಾರತಕ್ಕೆ ಸಂಬಂಧಪಟ್ಟ ಗ್ರಂಥ ಜನಗಳನ್ನು ಅಭ್ಯಾಸಿಸಿದ್ದಳು. ಅಂತು ಜಗತ್ತಿನಲ್ಲಿಯೇ ಅತ್ಯಂತ ವೈವಿಧ್ಯಮಯವಾದ ದೇಶವೆನಿಸಿತ್ತು.

ಇವಳು ಒಳಗೆ ಹೋದನಂತರ ಷರಟು ತೊಟ್ಟು ಬಂದ ಆ ವ್ಯಕ್ತಿ "ಕುತ್ಕೊಳ್ಳಿ, ನಾನು ಹಾಗೇ ಮಾತಾಡ್ದೇಂತ ಏನು ತಿಳ್ಕೊಬೇಡಿ. ಓಡಿಸೋ ಸೇಲ್ಸ್ ಗರ್ಲ್ಸ್ ಜಾಸ್ತಿ. ನನ್ನ ಹೆಂಡ್ತಿ ಕರುಣೆಯ ಭಾಂಡ ಇದ್ದಂಗೆ. ವ್ಯವಹಾರ ಜ್ಞಾನ ತೀರಾ ಕಮ್ಮಿ. ಬಂದು ಬಂದಿದ್ದನ್ನೆಲ್ಲ ಖರೀದಿಸಿ ಇಡ್ತಾಳೆ. ಅದೊಂದು ಚಿಂತೆ" ತಮ್ಮ ಮಾತುಗಳಿಗೆ ಕಾರಣವನ್ನು ಕೊಟ್ಟರು.

"ನಿಮ್ಮ ಥಿಯೇಟರ್ ಇದ್ದ ಜಾಗದಲ್ಲಿ ಹಿಂದೆ ಅನಾಥಾಶ್ರಮ ಇತ್ತಂತೆ" ಎಂದ ಕೂಡಲೇ ಕೂತಿದ್ದ ಮನುಷ್ಯ ಎದ್ದು ಎರಡು ಕೈಗಳನ್ನು ಜೋಡಿಸಿದ "ಥಿಯೇಟರ್, ಅದ್ನ ಕಟ್ಟಿರೋ ಸ್ಥಳ ನಂದೆ. ದಯವಿಟ್ಟು ಅನಾಥಾಶ್ರಮದ ಬಗ್ಗೆ ನನ್ನೇನು ಕೇಳ್ಬೇಡಿ. ಆ ಬಗ್ಗೆ ನಾನು ಸಾಕಷ್ಟು ಫಜೀತಿ ಪಟ್ಟಿದ್ದೀನಿ. ತಾವು ಹೊರಡ್ಬಹುದ್ದು" ನೇರವಾಗಿ ಹೇಳಿದರು. ತಕ್ಷಣ ಮನೆಯ ಕೆಲಸದವನನ್ನು ಕೂಗಿಕೊಂಡು ಅವಳ ಇರವನ್ನೇ ಮರೆತು ಹೊರಟುಬಿಟ್ಟರು.

'ಕರುಣೆಯ ಭಂಡಾರ'ದ ಆಕೆಯ ಪತ್ನಿ ಬರದಿದ್ದರೇ ಜಾಗ ಖಾಲಿ ಮಾಡಬೇಕಿತ್ತು ರೂತ್.

"ಕುತ್ಕೋಮ್ಮ. ಇವತ್ತು ಸೋಮವಾರ. ಪೂಜೆ ಮುಗೀತು, ಪ್ರಸಾದ ಸ್ವೀಕರಿಸಿ ಹೋಗು" ಎಂದು ಅಡಿಯಿಂದ ಮುಡಿಯವರೆಗೂ ನೋಡಿದರು. ಮೂರು ಗಂಡು ಮಕ್ಕಳ ತಾಯಿಯಾದರೂ ತನಗೆ ಹೆಣ್ಣು ಮಕ್ಕಳಿಲ್ಲವೆಂಬ ಕೊರಗು ಹಚ್ಚಿಕೊಂಡಿದ್ದ ಮುಗ್ಧೆ. 'ತನ್ನ ತಾಯಿ ಹೀಗೆ ಇರಬಹುದೇ? ಇಷ್ಟು ವಯಸ್ಸು ಆಗಿರಲಾರದು. ಇಷ್ಟು ಕುಳ್ಳ ಕೂಡ ಸಾಧ್ಯವಿಲ್ಲ. ತನ್ನಷ್ಟು ಉದ್ದ, ನೀಳವಾದ ಮೂಗು, ಶುಭ್ರವಾದ ಕೇದಿಗೆಯ .ಬಣ್ಣ— ತನ್ನ ತಾಯಿಯ ಒಂದು ಚಿತ್ರವನ್ನು ಮನದಲ್ಲಿ ರೂಪಿಸಿಕೊಂಡಳು. ಹಿತವೆನಿಸಿತು. ಮಧುರವೆನಿಸಿತು. 'ಆ ಕ್ಷಣ ಇದೇ ಆಗಬಾರದೆ ?' "ತುಂಬ ಚೆನ್ನಾಗಿ ಕಾಣ್ತೀಯಾ ?" ಎಂದಾಗಲೇ ಅವಳು ಎಚ್ಚೆತ್ತು ಆಕೆಯ ಕಣ್ಣುಗಳಲ್ಲಿನ ಮೆಚ್ಚು ಕಂಡಿದ್ದು.

"ಬಂದ್ಬಿಡ್ತೀನಿ!" ಒಳಗೆ ಹೋದರು.

"ಮತ್ಯಾಕೆ ಕೂಡ್ಸಿಕೊಂಡೇ? ಅನಾಥಾಶ್ರಮದ ಕಟ್ಟಡ ಕೊಂಡ್ಮೇಲೆ ಎಷ್ಟೆಲ್ಲ ಪೊಲೀಸ್, ಕೋರ್ಟು, ಕಛೇರಿಂತ ಓಡಾಡಿದ್ದಾಯ್ತು. ಆ ಸುದ್ದಿ ಎತ್ಕೊಂಡ್ ಯಾರಾದ್ರೂ ಬಂದ್ರೆ ಭೂತದರ್ಶನವಾದಂತಾಗುತ್ತೆ. ಕೊಡೋದೇನೋ ಕೊಟ್ಟು ಕಳ್ಸು" ಗೊಣಗಿದ್ದು ಅಸ್ಪಷ್ಟವಾಗಿಯಾದರೂ ಅವಳಿಗೆ ಕೇಳಿಸಿತು. ಸ್ವಲ್ಪ ಮುಜುಗರಗೊಂಡರೂ ಆ ಅನಾಥಾಲಯದ ವಿಷಯ ಇವರಿಂದಲೇ ತಿಳಿಯಬೇಕಿತ್ತು. ಕೂತಳು ತಣ್ಣಗೆ.

ಧಾರ್ಮಿಕ ಮನೋಭಾವದ ಹೆಣ್ಣು ಶಿವಮ್ಮ ಸ್ವಲ್ಪ ಹೆಂಗರುಳು "ಆಯ್ತು, ಆಯ್ತು.... ಏನೂಂತ ವಿಚಾರ್ಸಿಕೊಳ್ಳಿ! ಅದೊಂದು ಸತ್ಸಂಪ್ರದಾಯವಲ್ವ! ಉಪಕಾರ ಮಾಡೋ ಅವಕಾಶಗಳು ಅಪರೂಪವಾಗಿ ಬರುತ್ತೆ" ಬುದ್ಧಿ ಹೇಳಿ ತೆಪ್ಪಗಾಗಿಸಿದರು.

ಗೋಧಿ ಹಿಟ್ಟಿನಲ್ಲಿ ಮಾಡಿದ ಗುಂಡಗಿನ ಆಕಾರದ ಉಂಡೆಗಳ ಜೊತೆ ಒಂದಿಷ್ಟು ಅಕ್ಕಿ ತರಿಯ ಉಪ್ಪಿಟ್ಟು ತಂದುಕೊಟ್ಟರು. ಬ್ರೇಕ್ ಫಾಸ್ಟ್ ಮುಗಿದಿತ್ತು. ಆಕೆಯ ಮುಖದ ಪ್ರಸನ್ನತೆ ಕಾಪಾಡಲು ತಾಯಿಯನ್ನು ಆಕೆಯಲ್ಲಿ ಕಾಣುವ ಆನಂದ ಕೆಲವು ನಿಮಿಷಗಳಾದರೂ ಉಳಿಸಿಕೊಳ್ಳಬೇಕೆಂದು ತಿಂದಳು ಕಷ್ಟಪಟ್ಟು.

ಹೆಂಡತಿಯ ಬಲವಂತಕ್ಕೇನೋ ಸ್ವಲ್ಪ ಮುಖ ಗಂಟು ಹಾಕಿಯೇ

ಬಂದರು ಪರಮಶಿವಯ್ಯ. ಹೊರಗೆ, ಮುಖದ ಗಂಟೇನು ಸಡಲಿಸದೇ ಮತ್ತಷ್ಟು ಬೇಸರದ ಚಾದರ ಅದರ ಮೇಲೊರೆಸಿದ್ದರು.

"ಏನಮ್ಮ ಸಮಾಚಾರ? ನಾನು ಆ ಕಟ್ಟಡಾನ ಕೊಂಡ್ಕೊಡೆಸಿ ಕಟ್ಟಿಕೊಂಡಿರೋದು ಥಿಯೇಟರ್‌ನ ನನ್ನ ಸ್ವಂತ ಹಣದಿಂದ ಕೋರ್ಟಿನಲ್ಲಿ ಡಿಸೈಡ್ ಆಗಿದೆ. ಆ ಬಗ್ಗೆ ಏನು ತಕರಾರು ಹೂಡೋಕೆ ಸಾಧ್ಯವಿಲ್ಲ" ಕಡ್ಡಿ ಮುರಿದಂತೆ ಹೇಳಿದರು. ಆ ಕಟ್ಟಡದ ವಿಷಯದಲ್ಲಿ ತುಂಬ ಸಮಸ್ಯೆಗಳನ್ನೆದುರಿಸಿರಬೇಕೆಂದುಕೊಂಡಳು.

"ಪ್ಲೀಸ್, ಇಲ್ಲೇನು ತಕರಾರಿಲ್ಲ, ಕಟ್ಟಡದ ಬಗ್ಗೆ. ನಂದು ಒಂದಿಷ್ಟು ವಿಷ್ಯ ಅಷ್ಟೆ. ಅನಾಥಾಲಯ ಕಟ್ಟಡ ನಿಮ್ಗೆ ಮಾರಿ ಅಲ್ಲಿನ ಆಫೀಸ್ ಎಲ್ಲಾ ಎಲ್ಲಿಗೆ ಷಿಫ್ಟ್, ಮಾಡಿದ್ರು? ನಂಗೆ ಬೇಕಿರೋದು ಅಷ್ಟೆ ವಿಷ್ಯ ಮಾತ್ರ" ತೀರಾ ಮೆಲುವಾಗಿ ಕೇಳಿದಳು.

ಮುಖ ಕೆಟ್ಟಗೆ ಮಾಡಿದ ಪರಮಶಿವಯ್ಯ "ಆ ವಿಷ್ಯ ನಂಗೊಂದು ಗೊತ್ತಿಲ್ಲ. ಆ ಅನಾಥಾಶ್ರಮಕ್ಕೆ ಬೀಗ ಬಿದ್ದಿತ್ತು. ಕೋರ್ಟಿನಿಂದ ತೆರವು ಆದ್ಮೇಲೆನೇ ನಾನು ಕೊಂಡಿದ್ದು. ಆಮೇಲೆ ಎಷ್ಟೊಂದು ತಲೆನೋವು. ಆ ಸೊತ್ತು ಯಾರ್ದೋ, ಆ ಮಹಾತಾಯಿ ಎಷ್ಟೊಂದು ಗಲಾಟೆ ಮಾಡಿದ್ಳು. ಅದೆಲ್ಲ ಮುಗ್ದ ಕತೆ. ಆ ಕಟ್ಟಡ ನಾನು ಕೊಂಡೇ, ಮಿಕ್ಕಿದ್ದು ನಂಗೆ ಗೊತ್ತಿಲ್ಲ" ಕೈಯಾಡಿಸಿಬಿಟ್ಟರು. ಅಷ್ಟೋ ಇಷ್ಟೋ ಗೊತ್ತಿದ್ದರೂ ಹೇಳಲು ಸಿದ್ಧರಿರಲಿಲ್ಲ. ಸ್ವಲ್ಪ ಪುಕ್ಕಲು ಸ್ವಭಾವದ ಪರಮಶಿವಯ್ಯ ತೊಂದರೆ ಇದೆಯೆಂದ ಕಡೆ ತಲೆ ಹಾಕುತ್ತಿರಲಿಲ್ಲ. ಆದರೂ ಅದು ಅವರನ್ನು ಅರಸಿಕೊಂಡು ಬರುತ್ತಿತ್ತು. ಇದೊಂದು ವಿಚಿತ್ರ.

"ನಂಗೆ, ಹಿಂದಿನ ಓನರ್ ವಿಳಾಸ ಕೊಟ್ರೆ ಸಾಕು. ನಾನೇನು ಸೊತ್ತಿಗೆ ವಾರಸುದಾರಳು ಅಂತಲ್ಲ. ಭಾರತದಲ್ಲಿನ ಅನಾಥಾಶ್ರಮಗಳ ಸ್ಥಿತಿ; ಗತಿಗಳ ಬಗ್ಗೆ ಪುಸ್ತಕ ಬರೆಯಲು ನ್ಯೂ ಯಾರ್ಕ್‌ನಿಂದ ಬಂದಿದ್ದೀನಿ. ಈ ಬಗ್ಗೆ ಅಲ್ಲಿನ ಜನಕ್ಕೂ ಕುತೂಹಲ." ನಿಜವನ್ನು ಮರೆ ಮಾಚಿದಳು. ಹತ್ತಾರು ಜನಗಳನ್ನು ಭೇಟಿ ಮಾಡಬೇಕಿತ್ತು. ನಾನಾ ಮುಖಗಳಲ್ಲಿ ಹುಡುಕಬೇಕಿತ್ತು. ಪ್ರತಿಯೊಬ್ಬರಿಗೂ ತನ್ನ ಉದ್ದೇಶ ವಿವರಿಸಿ ಅವರ ಕಣ್ಣುಗಳಲ್ಲಿ ಸಹಾನುಭೂತಿ, ಸಂತಾಪ, ಅಸಹನೆ, ಜಿಗುಪ್ಸೆ ನೋಡಲು ಸಂಕೋಚಿಸುತ್ತಿದ್ದಳು.

"ಅದು ಸತ್ತ ವಿಷ್ಯ. ಅದ್ಕೇ ಅಸ್ತಿತ್ವವೇ ಇಲ್ಲಾಂದ್ಮೇಲೆ ಆ ಬಗ್ಗೆ

ತಿಳ್ಕೋ ಕುತೂಹಲವೇಕೆ?" ಸ್ವಲ್ಪ ಜೋರಾಗಿಯೇ ಮಾತಾಡಿದರು ಪರಮಶಿವಯ್ಯ. "ನೋ, ಆಗಲ್ಲ.... ನಂಗೆ ಇಲ್ಲಿನ ಅನಾಥಾಲಯಗಳ ಇಪ್ಪತ್ತೈದು ವರ್ಷಗಳ ಇತಿಹಾಸ ಬೇಕು. ಯಾವುದನ್ನು ಉದಾಸೀನ ಮಾಡುವಂತಿಲ್ಲ. ನಿಮ್ಗೆ ತೊಂದರೆ ಕೊಟ್ಟಿದ್ದಕ್ಕೆ ಕ್ಷಮೆ ಇರ್ಲಿ. ನಂಗೆ ಅವ್ರ ವಿಳಾಸ ತಿಳ್ಸಿ ಹೆಲ್ಪ್ ಮಾಡಿ." ಕನ್ವಿನ್ಸ್ ಮಾಡಿದಳು.

ಸುಮ್ಮನೆ ಕೂತವರು ಗೊಣಗಿಕೊಂಡರು. ಒಳಗೆ ಹೋಗಿ ಹೆಂಡತಿಯನ್ನು ಕೇಳಿದರು. ಆಮೇಲೆ ಅರೆ ಮನಸ್ಸಿನಿಂದ ವಿಳಾಸ ಗುರುತು ಹಾಕಿಕೊಂಡು ಬಂದು ಕೊಟ್ಟರು.

"ಅವ್ರು, ಈಗ ಸಿಟಿಯನ್ನೇ ಬಿಟ್ಟು ತೋಟದಲ್ಲಿ ಇದ್ದಾರಂತೆ...." ಮತ್ತೇನೋ ಹೇಳಲು ಹೋದವರು ಸುಮ್ಮನಾಗಿ "ಅಲ್ಲಿ ನಮ್ಮ ವಿಷ್ಯ ಬರಕೂಡ್ದು. ಇನ್ನ ಹೋಗ್ಬನ್ನಿ. ಈ ವಿಷ್ಯನ ಬರ್ಯೋಕೆ ಅಮೆರಿಕಾದಿಂದ ಬಂದ್ರಾ? ದೇವರೇ ... ದೇವರೇ... ವಿಚಿತ್ರಗಳು...ವಿಪರೀತಗಳು ಶಿವ... ಶಿವ...." ಮೇಲುಗಡೆ ನೋಡಿದರು. ಮಾತುಗಳ ನಿವೇದನೆ ದೇವರಿಗೆ.

ಇವಳು ಹೊರಟು ನಿಂತಾಗ ಹರಿಶಿನ, ಕುಂಕುಮದ ತಟ್ಟೆ ಹಿಡಿದು ಬಂದರು ಶಿವಮ್ಮ. ತಾಂಬೂಲದ ಜೊತೆ ಒಂದು ಬ್ಲೌಸ್ ಪೀಸ್ ಇಟ್ಟಿದ್ದರು. ಹೆಣ್ಣು ಮಕ್ಕಳು ಇಲ್ಲದ ಒಡಲು, ಯಾರಾದರೂ ಹೆಣ್ಣು ಮಕ್ಕಳನ್ನು ಕಂಡರೇ ದ್ರವಿಸಿಹೋದಾರು.

ತಾವೇ ಕುಂಕುಮ ಹಚ್ಚಿದವರು, ಕಟ್ಟಿದ ಹೂ ಹಿಡಿದು ಜಡೆ ಇಲ್ಲದನ್ನು ಗಮನಿಸಿ "ಅಮೆರಿಕಾ ಏನು.... ಈಗ ಇಲ್ಲು ಕೂದಲು ಕತ್ತರ್ಸಿಕೊಂಡ್ಬಿಡ್ತಾರೆ. ಅದೇ ಹುಡುಗ್ರು ಕೂದ್ಲು ಬೆಳಸ್ತಾರೆ. ಎಲ್ಲಾ ವಿಪರೀತಗಳು." ತುಸು ಬೇಸರದಿಂದಲೇ ಹೇಳಿದರು. ಇತ್ತೀಚಿಗೆ ಹೆಣ್ಣುಗಳಲ್ಲಿ ಲಕ್ಷಣಗಳು ಕಡಿಮೆಯಾಗುತ್ತಿದೆಯೆನ್ನುವುದು ಆಕೆಯ ವಾದ.

ತಾಂಬೂಲ ಅವಳ ಕೈಯಲ್ಲಿಟ್ಟರು. ನ್ಯೂ ಯಾರ್ಕ್‌ನಲ್ಲಿ ನೆಲೆಸಿದ್ದ ಭಾರತೀಯ ಕುಟುಂಬಗಳಲ್ಲಿ ಹಬ್ಬ ಮತ್ತು ಇತರೆ ದಿನಗಳಲ್ಲಿನ ಈ ಪದ್ಧತಿಯನ್ನು ಗಮನಿಸಿದ್ದಳು. ತೀರಾ ಆಕರ್ಷಕ ಅವಳ ಪಾಲಿಗೆ. ಇವೆಲ್ಲ ಇಷ್ಟವು ಕೂಡಾ.

ಗೇಟಿನವರೆಗೂ ಬಂದು ಕಳುಹಿಸಿ ಕೊಟ್ಟರು ಆಕೆ. "ನಿನ್ನ ತಾಯ್ತಂದೆ ಅಮೆರಿಕಾದಲ್ಲೇ ಇದ್ದಾರ?" ಆಕೆಯ ಪ್ರಶ್ನೆಗೆ ತಬ್ಬಿಬ್ಬಾದಳು. ದತ್ತುಪಡೆದು ಇವಳ ಬೆಳವಣಿಗೆ, ಭವಿಷ್ಯದ ಬಗ್ಗೆ ಆಸ್ಥೆವಹಿಸಿದ ಅವರೇ ತಾಯಿತಂದೆ!

ಆದರೆ ಜನ್ಮ ಕೊಟ್ಟವರು... ಕಂಠ ಬಿಗಿಯಿತು. ಏನು ಹೇಳಲಾರದೆ ಕೈ ಜೋಡಿಸಿ ಬಂದು ಟ್ಯಾಕ್ಸಿಯಲ್ಲಿ ಕೂತಳು. ಅಕ್ಕಪಕ್ಕ ನೋಡದೇ ಗಮನಿಸಿದ ನವನೀತ್. ಅವನ ಹತ್ತು ವರ್ಷದ ಅನುಭವದಲ್ಲಿ ಎಂಥೆಂಥ ಪ್ಯಾಸೇಂಜರ್‌ನ್ನೋ ನೋಡಿದ್ದ, ಕೆಲವರು ಅವನ ನೆನಪಿನಲ್ಲಿ ಉಳಿದಿದ್ದರು. ಕೆಲವರ ಬದುಕಿನ ಬಗ್ಗೆ ಅಸಹ್ಯಗೊಂಡಿದ್ದ. ರೋಷ ಆದರೆ ನಿರ್ಲಿಪ್ತನಾಗಿ ತನ್ನ ವೃತ್ತಿಯನ್ನು ನಡೆಸಿಕೊಂಡು ಬಂದಿದ್ದ. ಅಂದು ಡ್ರೈವರ್ ಆಗಿ ಈ ಜಗತ್ತು ಪ್ರವೇಶಿಸಿದ್ದ ಇಂದು ಟ್ಯಾಕ್ಸಿಯ ಮಾಲೀಕ. ಬಹುಶಃ ಅಂಥ ದೊಡ್ಡ ವ್ಯತ್ಯಾಸವೇನನ್ನು ಕಾಣದಿದ್ದರೂ ಟ್ಯಾಕ್ಸಿಯ ಮಾಲೀಕರ ಮುಂದೆ ತಲೆ ತಗ್ಗಿಸಿ ಅವರ ಪ್ರಶ್ನೆಗಳಿಗೆ ಉತ್ತರಿಸಬೇಕಿರಲಿಲ್ಲ, ಇಷ್ಟವಿಲ್ಲದಿದ್ದರೂ ಮಾಲೀಕರ ಹೆಚ್ಚಿನ ಬಾಡಿಗೆಯ ಆಸೆಗೆ ಕೆಲಸ ಮಾಡಬೇಕಿರಲಿಲ್ಲ.

"ಎಲ್ಲಿಗೆ ಮೇಡಮ್ ?" ಎಂದ ಮೌನವನ್ನು ತುಂಡರಿಸುವಂತೆ. ಬೆಚ್ಚಿದಂತೆ ಸರಿಯಾಗು ಕೂತು ಅವರು ಗುರುತು ಹಾಕಿಕೊಟ್ಟಿದ್ದ ವಿಳಾಸ ಮುಂದಿನ ಸೀಟಿನ ಮೇಲೆ ಹಾಕಿದಳು. ವೇಗವನ್ನು ನಿಯಂತ್ರಣದಲ್ಲಿಟ್ಟುಕೊಂಡು ಚೀಟಿಯನ್ನಿಡಿದು ನೋಡಿದ. "ಸಿಟಿಯಿಂದ ಇಪತ್ತೆರಡು ಕಿಲೋಮೀಟರ್ ಹೋರ್ಗೇ.... ಊಟದ ಸಮಯ ಮೀರುತ್ತೆ. ನನ್ನ ತಾಯಿ ಕಾಯ್ತ ಇರ್ತಾಳೆ. ಬೇರೆ ಟ್ಯಾಕ್ಸಿ ಮಾಡಿಕೊಡ್ಲಾ ?" ಕೇಳಿದ. ಮಧ್ಯಾಹ್ನದ ಊಟಕ್ಕೆ ಮನೆಗೆ ಹೋಗಿಬಿಡುತ್ತಿದ್ದ. ಹಿರಿಯರ ಜೊತೆ ಕೂತು ಊಟ ಮಾಡುವುದು ಅಭ್ಯಾಸ. ಅನಾವಶ್ಯಕವಾಗಿ ಹೋಟಲ್‌ಗೆ ಕಾಸು ಹಾಕಲಾರ, ಹಾಗೇ ದೇಹವನ್ನು ಒಣಗಿಸಲಾರ. ಅವನ ಆಶ್ರಯದಲ್ಲಿ ಒಂಬತ್ತು ಜೀವಗಳು ಇದ್ದವು.

"ಬೇಡ, ನೀವು ಊಟ ಮಾಡ್ತಿರೋವರ್ಗೂ ಟ್ಯಾಕ್ಸಿಯಲ್ಲಿ ಇರ್ತೀನಿ, ಅಥ್ವಾ ಹೋಟಲ್‌ನಲ್ಲಿ ಬಿಟ್ಟು ಮತ್ತೆ ಪಿಕ್‌ಅಪ್ ಮಾಡಿ. ನಾನು ಇಂದು ಆದಷ್ಟು ಬೇಗ ಅಲ್ಲಿಗೆ ಹೋಗ್ಬೇಕು" ಎಂದಳು ಒಂದು ತರಹ. 'ನವನೀತ್ ಅದೃಷ್ಟವಂತ ಅವನಿಗೆ ಕಾಯುವ ತಾಯಿ ಇದ್ದಳು.' ಎಂಥ ಹಿತವಾದ ಇಷ್ಟವಾದ ವಿಷಯ.

ಅವನ ಮನೆಯ ಮುಂದೆ ಟ್ಯಾಕ್ಸಿ ನಿಲ್ಲಿಸಿದವನು ಅವಸರವಾಗಿ ಇಳಿದು ಹೋಗಿ ಅಷ್ಟೇ ವೇಗವಾಗಿ ಹಿಂದಿರುಗಿದ.

"ಅರೇ, ನೀವು ಊಟ ಮಾಡ್ಕೊಂಡ್ ಬರ್ಲಿಲ್ವಾ ? ಐಯಾಮ್ ಸೋ ಸಾರಿ. ನಾನು ಕಾಯ್ತೀನಿ" ಸಂಕೋಚ ವ್ಯಕ್ತಪಡಿಸಿದಳು.

"ಅಮ್ಮಂಗೆ ಹೇಳ್ಬಂದಿದ್ದೀನಿ. ನಮ್ಮ ವೃತ್ತಿಯಲ್ಲಿ ಇದೆಲ್ಲ ಸಹಜ." ಟ್ಯಾಕ್ಸಿಯ ವೇಗ ಹೆಚ್ಚಿಸಿದ. ಕೆಲವೊಮ್ಮೆ ಅಪರೂಪಕ್ಕೆ ನಿಲ್ಲುವ ಟ್ಯಾಕ್ಸಿಗೆ ಪ್ರಯಾಣಿಕರೇ ಸಿಕ್ಕುತ್ತಿರಲಿಲ್ಲ. ಸಂಪಾದನೆ ನಿಲ್. ಬ್ಯಾಲೆನ್ಸ್ ಮೇಲೆ ಕೊಂಡೊಯ್ಯಬೇಕಿತ್ತು ಸಂಸಾರವನ್ನು.

ರಸ್ತೆಯಂಚಿಗೆ ಅಂಟಿದಂತೆ ಎತ್ತರದ ಕಾಂಪೌಂಡ್ ಮುಂದೆ ಮಾತ್ರ ಎಬ್ಬಿಸಿದ್ದ ತೋಟದ ಮುಂದಿನ ಎತ್ತರದ ಗೇಟು ಬಳಿ ನಿಲ್ಲಿಸಿದ ಟ್ಯಾಕ್ಸಿಯನ್ನು ನವನೀತ್.

ಇಳಿದ ರೂತ್ ಎಲ್ಲೆಡೆ ನೋಟವರಿಸಿದಳು. ಸುತ್ತಲೂ ಫಾರಂ ಹೌಸ್‌ಗಳು ಇದ್ದವು. ತೀರಾ ಎತ್ತರದ ಗೇಟು, ಸರವಣಿಯನ್ನು ಸೇರಿಸಿ ಬೀಗ ಹಾಕಿತ್ತು.

"ಮುಂದಿನ ಗೇಟಿಗೆ ಬೀಗ ಹಾಕಿದ್ರೂ, ಬೇರೆ ಕಡೆಯಿಂದ ಓಡಾಡುವ ವ್ಯವಸ್ಥೆ ಇರ್ಬೇಕಲ್ಲು. ನಾನು ನೋಡ್ಕೊಂಡ್ಬರ್ತೀನಿ" ನವನೀತ್ ಹೋದ, ಹತ್ತು ನಿಮಿಷಗಳನಂತರ ವಾಪಸ್ಸು ಬಂದ. "ತೋಟದ ಗೆಸ್ಟ್ ಹೌಸ್‌ನಲ್ಲಿ ಯಾರಿಲ್ಲ, ಸಣ್ಣ ಆಫೀಸ್ ರೂಂ ಅದಕ್ಕೊಬ್ಬ ಮ್ಯಾನೇಜರ್ ಗುಮಾಸ್ತರ್ನ ಬಿಟ್ರೆ... ಮಿಕ್ಕವರೆಲ್ಲ ತೋಟದಲ್ಲಿ ಕೆಲ್ಸ ಮಾಡೋ ಆಳು ಕಾಳುಗಳು. ಆಫೀಸ್ ಕೂಡ ಬಾಗಿಲು ಹಾಕಿದೆ. ಅವ್ರಿಗೆ ಈಗ ಲಂಚ್ ಅವರ್ ಅಂತೆ. ಮೂರರ ನಂತರ ಸಿಗ್ತಾರೇ ಅಂದ್ರು ಆಳುಗಳು." ಹೇಳಿದ. ಅವನಿಗೆ ಪ್ರಶ್ನೆಯಾಗಿದ್ದಳು. ಆದರೂ ಪ್ರಶ್ನಿಸನು. ಅದು ಅವನಿಗೆ ಅನಗತ್ಯ.

"ಅವ್ರುಗಳು ಬರೋವರ್ಗೂ ಕಾಯ್ಬೇಕು" ಎಂದಳು ಬಿಸಿಲಿಗೆ ಕಣ್ಣುಗಳನ್ನು ಬಿಡಲಾರದೆ "ಒಂದ್ಗಂಟೆಗೂ ಮಿಕ್ಕಿ ಕಾಯ್ಬೇಕು. ಬಹುಶಃ ನೀವು ಮಧ್ಯಾಹ್ನದ ಊಟ ಮಾಡಿಲ್ಲ. ಇಲ್ಲೊಂದು ಪಂಜಾಬಿ ಡಾಬಾ ಇದೆ. ರೋಟಿ, ದಾಲ್ ಸಿಕ್ಕುತ್ತೆ... ಬನ್ನಿ" ಆಹ್ವಾನಿಸಿದ ನಮ್ರತೆಯಿಂದ.

ಶಿವಮ್ಮ ಕೊಟ್ಟಿದ್ದ ಉಂಡೆಗಳನ್ನು ತಿಂದಿದ್ದರಿಂದ ಅವಳಿಗೇನು ಹಸಿವಿರಲಿಲ್ಲ. ಆದರೆ ಡ್ರೈವರ್ ಸಲುವಾಗಿ ತಲೆದೂಗಿದಳು. ತನ್ನ ಹುಡುಕಾಟದಲ್ಲಿ ಸಫಲತೆ ಸಿಗಬಹುದೇ ? ಇನ್ನಷ್ಟು 'ರಿಸ್ಕ್'ಗೆ ಸಿದ್ಧ. ಆದರೆ ಅವರನ್ನು ನೋಡಲಾರದೆ ಹಿಂದಿರುಗಿದರೇ ಬಹುಶಃ ಅವಳ ಬದುಕಿಗೆ ಲಕ್ಷ್ಯವೆಂಬುದು ಇರುವುದಿಲ್ಲ.

ಹತ್ತಿರದ ಡಾಬಾದಿಂದ ರೊಟ್ಟಿ, ದಾಲ್ ತಂದುಕೊಟ್ಟ. ಅವಳಿಂದ ತಿನ್ನಲಾಗಲಿಲ್ಲ "ಜ್ಯೂಸ್ ಅಂಥದ್ದು ಇದ್ರೆ ಸಾಕು. ನಂಗೆ ಇದೆಲ್ಲ

ತಿನ್ನೋಕ್ಕಾಗೊಲ್ಲ'' ಎಂದಳು ಆಶ್ಚರ್ಯದಿಂದ. ಅವಳು ಆಡುವ ಮಾತಿನಲ್ಲಿ ಭಾರತದ ಶೈಲಿ ಮಾತ್ರವಲ್ಲ ಕನ್ನಡದಲ್ಲಿ ಕರ್ನಾಟಕದ ಯಾವ ಭಾಗಗಳಲ್ಲಿನ ರೀತಿಯಲ್ಲ. ನಯವಾದ ಇಂಪು, ಮೋಡಿ ಹಾಕುವಂತೆ ಮೆಲುವಾಗಿ ಪದಗಳು ಉರುಳಿ ಬರುತ್ತಿತ್ತು. ಭಾರತೀಯ ಕನ್ಯೆಯಾದರೂ ಹೊರನಾಡಿನಲ್ಲಿ ಬೆಳೆದಿರಬೇಕೆಂದುಕೊಂಡ.

ತಾಜಾ ಪೈನಾಪಲ್ ರಸವನ್ನು ತಂದಿತ್ತ "ಸದ್ಯಕ್ಕೆ ಇಲ್ಲಿ ಸಿಗೋದಿಷ್ಟೆ." ಬಲವಂತವಾಗಿ ನಗೆ ಬೀರಿ "ಥ್ಯಾಂಕ್ಸ್...." ಎಂದು ಹೇಳಿದಳು. ತುಟಿಯ ಅಂಚಿಗೆ ಗ್ಲಾಸ್ ಒಯ್ಯುವಾಗಲೂ ತುಟಿಗಳು ತೆರೆಯದೆ ನಿರಾಕರಿಸುತ್ತಿತ್ತು.

ಡಾಬಾದಿಂದ ನವನೀತ್ ಹಿಂದಿರುಗುವ ವೇಳೆಗೆ ಹೆಬ್ಬೆಟ್ಟು ಗಾತ್ರದ ದಪ್ಪ ಹನಿಗಳು ಆಕಾಶದಿಂದ ಭೂಮಿಗೆ ಎರಚುವಂತೆ ಬೀಳತೊಡಗಿತು. ಗ್ಲಾಸ್‌ಗಳನ್ನೆರಿಸಿದವನು ಹೋಗಿ ಮರದಡಿಯಲ್ಲಿ ನಿಂತ.

ಸೈಕಲ್‌ನಲ್ಲಿ ಬರುತ್ತಿದ್ದ ಇಸ್ಮಾಯಿಲ್ ಇವನನ್ನು ನೋಡಿ ನಿಂತ "ಅರೇ ಬಾಯಿ, ಅಸ್ಸಲಾಂ ಅಲೇಕುಂ ಇದೇನು ಇಲ್ಲಿ ನಿಂತೆ?" ಕೇಳುತ್ತ ಬಗ್ಗಿ ಒಡೆದುಹೋಗಿದ್ದ ಸೈಕಲ್ ಟ್ಯೂಬ್‌ನ ನೋಡಿದ 'ವ ಅಲೈಕುಂ ಸಲಾಂ, ಮತ್ತೇನು ಕೆಲ್ಸ. ಒಬ್ಬ ಮೇಡಮ್ ಈ ತೋಟದ ಯಜಮಾನ್ರನ ನೋಡೋಕೆ ಬಂದಿದ್ದಾರೆ. ಅವ್ರಿಲ್ಲ, ಸರ್ಕಾರಿ ಕಾನೂನು ಅಳವಡಿಸಿಕೊಂಡಂಗೆ ಕಾಣ್ತಾರೆ ಈ ತೋಟದಲ್ಲಿ. ಆಫೀಸ್, ಮ್ಯಾನೇಜರ್, ಗುಮಾಸ್ತ, ಎಲ್ಲಾ ಚೆನ್ನಾಗೇನೋ ಇದೆ. ಹೋಗ್ಲಿ ಬಿಡು... ನೀನು ಹೇಗಿದ್ದಿ?" ಮಳೆ ಹನಿಗಳಿಂದ ಪಕ್ಕಕ್ಕೆಳೆದುಕೊಂಡ ನವನೀತ್.

ಜಟಕಾ ಓಡಿಸುವುದು ಅವನ ಉದ್ಯೋಗ, ವಂಶ ಪಾರಂಪರ್ಯವೆನ್ನುವಂತೆ ನಡೆದುಬಂದಿತ್ತು. ಅವನಪ್ಪನ ಕಾಲಕ್ಕೆ ಜೀವನಾಧಾರವಾಗಿದ್ದು ಈಗ ಜೀವ ತಿನ್ನುತ್ತಿತ್ತು. ಎರಡೊತ್ತಿನ ಊಟಕ್ಕೂ ಪರದಾಟ. ಐದು ಮಕ್ಕಳ ಸಂಸಾರದ ಜೊತೆ ವಯಸ್ಸಾದ ತಾಯಿ, ಮೊದಲ ಮೂರು ಹೆಣ್ಣು ಮಕ್ಕಳಾದುದ್ದರಿಂದ ಮನೆಯಲ್ಲಿ ಉಳಿದಿದ್ದರೇ ವಿನಃ ಆರ್ಥಿಕವಾಗಿ, ತಂದೆಗೆ ಸಹಾಯ ಮಾಡುವಂತಿರಲಿಲ್ಲ. ಅಜ್ಜಿಗೆ ಗಂಜಿ ಕಾಯಿಸಲು, ಮೀನು ಹುರಿಯಲು, ಖಾರ ಅರೆಯಲಷ್ಟೆ ಸಹಾಯ. ಈಚೆಗೆ ಮಾಂಸದ ಸಾರು ಆ ಸಂಸಾರ ಉಂಡೇ ಎಷ್ಟೋ ದಿನಗಳಾಗಿತ್ತು. ದೊಡ್ಡ ಅಂಗಡಿ ರೆಹಮಾನ್ ಸಾಹೇಬರ ಮನೆಯಲ್ಲಿ ಉಳಿದ ಬಿಳಿ ಅಕ್ಕಿಯ ಅನ್ನ, ಮಾಂಸದ ಬರೀ

ಸಾರು ದೇವರ ಪ್ರಸಾದದಂತೆ ಈ ಮನೆಗೆ ಬಂದಾಗ ಅದಕ್ಕಾಗಿ ಮಕ್ಕಳು ಕಾದಾಡಿ ದೊಡ್ಡವರವರೆಗೂ ಬರುತ್ತಿರಲಿಲ್ಲ.

ಕಷ್ಟ ಸುಖ ಮಾತಾಡುತ್ತಿದ್ದಂಗೆ ಮಳೆ ಜಾಸ್ತಿಯಾಗಿ ಇರಚಲೊಡೆಯತೊಡಗಿತು. ಮುಂಗಾಲಿನವರೆಗೂ ಪ್ಯಾಂಟ್‌ಗಳು ನೆನೆದು ಮೇಲಿನ ಬಟ್ಟೆಗಳು ತೊಯ್ಯತೊಡಗಿದಾಗ, ಇಸ್ಮಾಯಿಲ್ ನಡುಗತೊಡಗಿದ.

"ಚಳಿ ತಡೆಯೋಕಿಲ್ಲ ಬಾಯಿ, ಈ ಶರೀರ" ನಡುಗಿದ ಇಸ್ಮಾಯಿಲ್. ನಿಮಿಷ ನಿಮಿಷಕ್ಕೂ ಮಳೆ ಏರುತ್ತಿತ್ತು. ಉರುಳಿದ ತೀರಾ ಚಿಂತಾಜನಕ ಸ್ಥಿತಿಯಲ್ಲಿದ್ದ ಸೈಕಲ್‌ನ ಒಯ್ದು ಟ್ಯಾಕ್ಸಿಯ ಸ್ಟಾಂಡ್ ಮೇಲೆ ಹಾಕಿ ಮುಂದಿನ ವಿಂಡ್ ತೆಗೆದು "ಎಕ್ಸ್‌ಕ್ಯೂಜ್ ಮೀ, ಮೇಡಮ್, ನನ್ನ ಸ್ನೇಹಿತ ಇಸ್ಮಾಯಿಲ್ ಮೈನಲ್ಲಿ ಆರಾಮಿಲ್ಲ. ಒಂದಿಷ್ಟು ಮನೆಗೆ ಬಿಡ್ತೀನಿ, ನೀವು ಒಪ್ಪಿಕೊಂಡ್ರೆ.... ಇದು ತಪ್ಪು. ಒಬ್ಬ ಪ್ಯಾಸೆಂಜರ್ ಹತ್ತಿದ್ಮೇಲೆ...." ಸಂಕೋಚಿಸಿದ. ಕೂದಲಿನಿಂದ ಮುಖದ ಮೇಲೆ ನೀರಿಳಿಯುತ್ತಿತ್ತು.

"ಪರ್ವಾಗಿಲ್ಲ ಬಿಡಿ, ಹೇಗೂ ಇನ್ನ ಅರ್ಧ ಗಂಟೆ ಇದೆ" ಸಮ್ಮತಿ ಸೂಚಿಸಿದಳು. ಮಳೆಯಲ್ಲಿ ನೆನೆಯುತ್ತಲೇ ಬರುವಂತೆ ಇಸ್ಮಾಯಿಲ್‌ಗೆ ಸನ್ನೆ ಮಾಡಿದ. ತೊಯ್ದು ನಡುಗುತ್ತ ಬಂದ ಇಸ್ಮಾಯಿಲ್ ಎರಡು ಕೈಗಳನ್ನು ಜೋಡಿಸಿ ಕೃತಜ್ಞತೆಯಿಂದ "ಉಪಕಾರ ಆಯ್ತು, ತಾಯಿ" ನಡುಗುತ್ತ ಕೂತ.

ಟ್ಯಾಕ್ಸಿ ರಿವರ್ಸ್ ಹೋಗಿ ಮುಂದಕ್ಕೆ ಬಂದು ಸಣ್ಣ ದಿಬ್ಬದ ಪಕ್ಕದಲ್ಲಿನ ಫಾರಂ ಹೌಸ್‌ನ ದಾರಿ ಹಿಡಿಯಿತು. ಒಂದು ಕಿಲೋಮೀಟರ್ ನಂತರ ನಿಂತಿತು, ಮುರುಕು ಮನೆಯೆನಿಸಿಕೊಂಡಿದ್ದ ಗುಡಿಸಲು ಮುಂದೆ ಇಳಿದ ಇಸ್ಮಾಯಿಲ್ ತನ್ನ ಸೈಕಲ್ ಇಳಿಸಿಕೊಂಡ. ಅದು ತೀರಾ ಶಿಥಿಲವಾಗಿತ್ತು. ಹೇಗೆ ರಸ್ತೆಯ ಮೇಲೆ ಉರುಳುತ್ತದೆಯೋ ಆಶ್ಚರ್ಯಕರವಾದ ವಿಷಯ. ಒದ್ದೆಯ ಟವಲನ್ನು ತಲೆಯ ಮೇಲೆ ಹಾಕಿಕೊಂಡಿದ್ದ ಗದಗುಟ್ಟುತ್ತ. ಆದರೂ ಬಂದು ಟೀ ಕುಡಿದು ಹೋಗುವಂತೆ ಆಹ್ವಾನಿಸಿದಾಗ ನಿರಾಯಾಸವಾಗಿ ಇಳಿದಾಗ ಹುಬ್ಬೇರಿಸಿದ ನವನೀತ್. ಶ್ರೀಮಂತರ ಉಪಯೋಗಕ್ಕೆಂದೇ ನಿರ್ಮಿತವಾಗಿದ್ದ ಹೋಟಲ್‌ನಲ್ಲಿ ಆವಳು ಇಳಿದುಕೊಂಡಿದ್ದು. ಇಸ್ಮಾಯಿಲ್‌ನ ಗುಡಿಸಲ ಸ್ಥಿತಿ ಒಂದಕ್ಕೊಂದು ತದ್ವಿರುದ್ಧ.

ಆದರೆ ಆರಾಮಾಗಿ ಇಳಿದು ತಲೆ ಬಗ್ಗಿಸಿಯೇ ಅವನ ಗುಡಿಸಲಿನಂತಿದ್ದ ಮನೆಯೊಳಕ್ಕೆ ತೂರಿದ್ದು. ಮೋಟು ಗೋಡೆಗಳು, ಮೇಲ್ಭಾಗಕ್ಕೆ ಗರಿಗಳನ್ನು ಹೊದ್ದಿಸಿ ಛಾವಣಿ ಮಾಡಿದ್ದರು, ಒಳಗೆ ಸ್ವಲ್ಪ ವಿಶಾಲವಾಗಿಯೇ ಇತ್ತು. ಒಂದು ಕಡೆ ಒಲೆ, ಮಡಕೆ, ಅಲ್ಯೂಮಿನಿಯಂ ಪಾತ್ರೆಗಳು, ಮತ್ತೊಂದೆಡೆ ಸುತ್ತಿಟ್ಟ ಚಾದರ, ಬಟ್ಟೆಗಳು, ಅದರ ಕೆಳಗೊಂದು ಕಬ್ಬಿಣದ ಟ್ರಂಕ್.

"ಎಲ್ಲಿ ಗಾಡಿ ? ಮೂರು ದಿನದಿಂದ ಮನೆಯಲ್ಲಿ ಹೊಗೆ ಕಂಡಿಲ್ಲ. ಇವತ್ತು ಬರೀ ಕೈಯಲ್ಲಿ ಬಂದಿದ್ದಿ. ಉಪ್ವಾಸ ಬೀಳೋ ಬದ್ಲು ಅಲ್ಲಾಹುಪಾದ ಸೇರ್ಬಿಡೋದೇ ಸೈ" ಅಮೀನಾಬೀ ಬರೀ ಕೈಗಳನ್ನು ನೋಡಿಯೇ ಚಟಪಟ ಷುರು ಮಾಡಿದಳು, ರೂತ್‌ನ ನೋಡುವ ಮುನ್ನವೇ.

"ಏಯ್, ಬಾಯ್ಮುಚ್ಚು" ಹೆಂಡತಿಯನ್ನು ಗದರಿಕೊಂಡು ಟ್ರಂಕ್‌ನ ಮೇಲಿದ್ದ ಚಾದರಗಳನ್ನು ಇಳಿಸಿ "ಬಡ್ವನ ಗುಡಿಸ್ಲು, ಕೂಡಿ ಮೇಡಮ್" ಸಂಕೋಚದಿಂದ ಹಿಡಿಯಾದ. ಅಮೀನಾಬೀ ಬಿಟ್ಟ ಕಣ್ಣುಗಳನ್ನು ಅಲುಗಿಸಲಿಲ್ಲ. ಇಷ್ಟೊಂದು ಬೆಲೆ ಬಾಳೋ ಉಡುಪು ತೊಟ್ಟ ಒಂದು ಹೆಣ್ಣು ಆ ಗುಡಿಸಲ ಕಡೆ ಬಂದೇ ಇಲ್ಲ, ಇನ್ನ ಒಳಗೆ ಬರುವುದೇನು ? ಇದೇನು ಕನಸಾ ? ಕಣ್ಣೊಸಕಿಕೊಂಡಳು. ಆದರ ಜೊತೆ ಭಯ ಕೂಡ.

"ಟೀ, ಮಾಡ್ಕೋಗು" ಹೆಂಡತಿಗೆ ಹೇಳಿದ ಇಸ್ಮಾಯಿಲ್. ಟೀ ಕಾಸಿಯೆ ವಾರದ ಮೇಲಾಗಿತ್ತು. 'ಇದು ನಿನಗೆ ತಿಳಿಯದಾ ಹಾಲು, ಸಕ್ಕರೆ, ಟೀ ಪುಡಿ ಯಾವುದು ಇಲ್ಲ' ಎನ್ನುವಂತೆ ಕಣ್ಣುಗಳಲ್ಲಿ ಹೇಳಿದಳು. ಬಹಳ ಸುಲಭವಾಗಿ ಅರ್ಥ ಮಾಡಿಕೊಂಡಳು ರೂತ್ 'ಬೇಡ'ವೆಂದು ತಲೆಯಾಡಿಸಿದವಳು "ಏನು ಬೇಡ, ನಿಮ್ಮೊಂದಿಗೆ ಮಾತಾಡ್ತೀನಿ" ಎಂದಳು ಅಮೀನಾಬಿಯೊಟ್ಟಿಗೆ. ಗಂಡನೆಡೆಗೆ ನೋಡಿದವಳು ತೀರಾ ಬಿಳಿಚಿಕೊಂಡವಳ ಮುಖದಲ್ಲಿ ನಾಚಿಕೆ ಮೂಡಿತು. ಮುಗುಳ್ನಗೆಯಿಂದ ಹತ್ತಿರಕ್ಕೆ ಬರಮಾಡಿಕೊಂಡು ಮಾತಾಡಿಸಿದಳು.

ಆ ಹೆಣ್ಣು ಗಳಗಳ ಅತ್ತಳು. "ರಬ್ಬುಲ್ ಆಲಮಿನಾಯಾ ತಂಪುರಾನೇ" (ಸೃಷ್ಟಿಕರ್ತನಾದ ಪರಮಾತ್ಮ) ಹಿಂದೆ ಒಂದಿಷ್ಟು ಸಂಪಾದ್ನೇ ಸಿಕ್‌ತಿತ್ತು. ಈಗ ಎರ್ಡುರ್ ದಿನಕ್ಕೊಮ್ಮೆ ಉಪ್ವಾಸ ಬೀಳ್ಬೇಕು. ಯಾಕ್‌ಬೇಕ್ ಈ ಬದ್ಕು" ಹೇಳಿಕೊಂಡಾಗ ಇಸ್ಮಾಯಿಲ್ ಗದರಿಕೊಂಡ

"ನಾಚ್ಕೇಗೇಡಿ,ಮನೆಗೆ ಬಂದವ್ರ ಮುಂದ ಮಾನ ತಗೀತೀಯಾ. ಈ ಕಷ್ಟ ನಿಂಗೊಬ್ಬಿಗಾ ?" ಅವನಿಗೆ ಅವಮಾನವಾಗಿತ್ತು.

"ಎದ್ರೊರ್ತಿತ್ತಿ ಮಕ್ಕಿಗೆ ಗಂಜಿ ಹಾಕ್ತೋಳು ನಾನು. ನನ್ನ ಅಲ್ಲಾಹು ಯಾಕೆ ಭೂಮಿ ಮೇಲೆ ಇಟ್ಟಿದ್ದಾನೋ" ಎದೆ ಎದೆ ಬಡಿದುಕೊಂಡಳು ಮಕ್ಕಳ ಕಡೆ ತೋರಿಸಿ.

ಚಿಂದಿಯುಟ್ಟ ತಲೆಗೆ ಎಣ್ಣೆ ಕಾಣದ ಎರಡು ಹೆಣ್ಣು ಮಕ್ಕಳು ಮುದುರಿ ಕೂತಿದ್ದವು. ಕಣ್ಣು ಗುಡ್ಡೆಗಳು ಮಾತ್ರ ಹೊರಳುತ್ತಿದ್ದವು. ಮ್ಯೂಜಿಯಂನಲ್ಲಿಟ್ಟ ಗೊಂಬೆಗಳಂತೆ ಕಂಡರು. ಇನ್ನೊಂದು ಗಂಡು ಕೂಸು ಕಣ್ಣಲ್ಲಿ ನೀರು, ಮೂಗಲ್ಲಿ ಸಿಂಬಳ ಸುರಿಸುತ್ತ ನಗ್ನವಾಗಿ ಕೂತಿತ್ತು. ಕಡೆಯವ ಮಜೀದ ಎಲುಬುಗೂಡಾಗಿ ಚಾದರದ ಮೇಲೆ ಮಲಗಿ ಆಗಾಗ 'ಉಮ್ಮಾ.....' ಎಂದು ಪಿರಿಪಿರಿ ಮಾಡುತ್ತಿದ್ದ ಬಡತನದ ಒಂದು ದೃಶ್ಯ.

ರೂತ್ ಮಿದುಳಿನಲ್ಲಿ ಷಾಕ್ ಹೊಡೆದಂತಾಯಿತು. ಈ ಸ್ಥಿತಿಯಲ್ಲಿ ಅಮೀನ ಏನು ಮಾಡೀಯಾಳು ? ಇಷ್ಟು ಮಕ್ಕಳಲ್ಲಿ ಒಂದಾದರೂ ಚೆನ್ನಾಗಿ ಬೆಳೆಯಲೆಂದು ಅನಾಥಾಶ್ರಮಕ್ಕೆ ಕೊಟ್ಟರೇ ? ತನ್ನನ್ನೇ ಅಮೀನಾ ಮಗುವಾಗಿ ರೂಪಿಸಿಕೊಂಡಾಗ ಅವಳೆದೆ ಥವಗುಟ್ಟಿತು. ಹೊರಗೆ ಮಳೆ ಸುರಿಯುತ್ತಿದ್ದರೂ ಬೆವತುಬಿಟ್ಟಳು. ಪರ್ಸ್‌ನಿಂದ ಕೆಲವು ನೋಟುಗಳನ್ನು ತೆಗೆದು ಅಮೀನಾ ಅಂಗೈ ತೆರೆದು ಅದರಲ್ಲಿ ಇಟ್ಟು ಮುಚ್ಚಿದಳು.

ಅಮೀನಾಬೀ ಕಣ್ಣುಗಳು ನೀರು ತುಂಬಿಕೊಂಡರೂ ಅರಳಿದವು. ಬರುವ ರಮ್ಜಾನ್ ಹಬ್ಬಕ್ಕೇನು ಮಾಡುವುದೆಂದು ಚಿಂತಿಸುತ್ತಿದ್ದಳು. ಅವಳಿಗೆ ಸೀರೆ ಇರಲಿಲ್ಲ ಮಾತ್ರವಲ್ಲ ಮಕ್ಕಳು ತೀರಾ ಹರಿದ ಅರಿವೆಗಳನ್ನು ತೊಡುತ್ತಿದ್ದರು. ಹಬ್ಬದ ವೇಳೆಗೆ ಅವರಿಗಾದರೂ ಹೊಸ ಬಟ್ಟೆಗಳನ್ನು ಕೊಳ್ಳುವ ಬಯಕೆ !

ಮಳೆಯ ರಭಸ ಒಂದಿಷ್ಟು ಕಮ್ಮಿ ಆಯಿತು. ಹೊರಗೆ ನಿಂತಿದ್ದ ನವನೀತ್ ಇಣಕಿದ ಆಶ್ಚರ್ಯದಿಂದ. ಮೇಲೆದ್ದವಳು ತನ್ನ ಹ್ಯಾಂಡ್ ಬ್ಯಾಗ್‌ನಲ್ಲಿದ್ದ ಚಾಕಲೇಟ್‌ಗಳನ್ನು ಎಲ್ಲರ ಕೈಯಲ್ಲಿಟ್ಟಳು. ಹಿಂದೆ ಒಂದು ದಿನ ತಾನು ಕೂಡ ಬೇರೆಯವರ ಕರುಣೆಯ ಕೂಸಾಗಿರಬೇಕು. ಆ ಸಹಾನುಭೂತಿಯಿಂದ ಮೇಲೆತ್ತಿದವರು ಕ್ಲಿಂಟನ್ ದಂಪತಿಗಳು. 'ಡ್ಯಾಡಿ, ಮಮ್ಮಿ' ಕನವರಿಸುವಂತಾಯಿತು. ಈಗ ಅವರಿಗೆ ಸ್ವಂತ ಮಕ್ಕಳಿದ್ದರು.

ಅಮೀನಾಬಿ ಡಬ್ಬದಲ್ಲಿದ್ದ ಕಲ್ಲುಸಕ್ಕರೆ ತುಂಡು, ಖರ್ಜೂರವನ್ನು,

ಅವಳ ಕೈಯಲ್ಲಿಟ್ಟು ಕೈಯನ್ನು ಕಣ್ಣಿಗೊತ್ತಿಕೊಂಡ ಅಮೀನಾಬಿಯ ಕಣ್ಣುಗಳಲ್ಲಿ ಕೃತಜ್ಞತೆಯ ತುಂತುರಿತ್ತು. ಅಪ್ಪಿ ಆಕೆಯ ಹೆಗಲ ಮೇಲೆ ತಲೆ ಇಟ್ಟು ಕಂಬನಿ ಹರಿಸಬೇಕೆನಿಸಿತು ರೂತ್‌ಗೆ.

ಮೈನ್ ರೋಡಿಗೆ ಬಂದ ಟ್ಯಾಕ್ಸಿ ಮತ್ತೆ ತೋಟದ ಮುಂಭಾಗದ ಮೈನ್‌ಗೇಟಿನ ಬಳಿ ನಿಂತಾಗ ಇಳಿದ ನವನೀತ್ ಡೋರ್ ತೆಗೆದವನು "ಈಗ ಆಫೀಸ್ ತೆಗೆದಿರ್ಬೇಕು ಮೇಡಮ್, ಹೋಗಿ ಮಾತಾಡ್ಬನ್ನಿ" ಎಂದವನು ತೋಟದ ಕೊನೆಯಲ್ಲಿದ್ದ ಸಣ್ಣ ಗೇಟಿನವರೆಗೂ ಕರೆತಂದು ಬಿಟ್ಟವನು ಅನುಮಾನಿಸಿದ. ತೀರಾ ದೊಡ್ಡ ತೋಟ "ಮೇಡಮ್, ನನ್ನ ಅಗತ್ಯವಿದ್ರೆ ನಿಮ್ಜೊತೆ ಬರಲು ಅಭ್ಯಂತರವಿಲ್ಲ. ಎಡಗಡೆಯ ಹಾದಿಯ ಉದ್ದಕ್ಕೂ ಹೋದರೆ ಎಡಗಡೆಯ ದ್ರಾಕ್ಷಿ ತೋಟದ ಹಿಂಭಾಗಕ್ಕೆ ಬರುತ್ತೆ ಆಫೀಸ್ ಅನ್ನೋ ರೂಂ" ವಿವರಿಸಿದ ಸ್ವಲ್ಪ. ಮತ್ತೆ ಹುಡುಕಾಡುತ್ತ ಲೇಟಾದರೆ ಮತ್ತೆ ಮಳೆ ಬರುವ ಸೂಚನೆ ಇತ್ತು. ಅದರ ಬಗ್ಗೆ ಒಂದಿಷ್ಟು ಭಯ. ಹಿಂದೆ ಅವನ ಟ್ಯಾಕ್ಸಿಯಲ್ಲೇ ಬಂದ ಒಂಟಿ ಹೆಣ್ಣು ಹೋಟಲ್‌ನ ರೂಮಿನಲ್ಲಿ ಕೊಲೆಯಾಗಿ ವರ್ಷದವರೆಗೂ ಪೊಲೀಸ್, ಕೋರ್ಟೂಂತ ಅಲೆದಾಡಿದ್ದ. ಅದೇ ಪ್ರಶ್ನೆ, ಅಷ್ಟೇ ಉತ್ತರ. ಮಾನಸಿಕವಾಗಿ ಅವನು ಮಾತ್ರವಲ್ಲ, ಅವನ ಕುಟುಂಬ ಕೂಡ ನೊಂದಿತ್ತು.

"ಬನ್ನಿ....." ಎಂದಳು. ಭಾಷೆ ಚೆನ್ನಾಗಿ ಗೊತ್ತಿದ್ದರೂ ಆಡುವ ಶೈಲಿಯಲ್ಲಿ ಎಡವಿ ಒಂದು ಸಲ ಹೇಳಿದ್ದು ಮತ್ತೆ ಮತ್ತೆ ಹೇಳಬೇಕಾಗುತ್ತಿತ್ತು. ಬರುವಂತೆ ಸೂಚಿಸಿದಳು ಸನ್ನೆಯಿಂದಲೇ... ಸರಿಯಾದ ಪದಗಳು ತಕ್ಷಣ ಸಿಗದಿದ್ದಾಗ ಅವಳು ಅನುಸರಿಸುತ್ತಿದ್ದುದು ಸನ್ನೆಯ ಮಾರ್ಗ.

ಆಫೀಸ್ ತೆಗೆದಾಗ ಎಲೆಯಡಿಕೆ ಹಾಕಿಕೊಂಡು ಕಚ್ಚೆ ಪಂಚೆಯ ಕೋಟುಧಾರಿಯ ಒಬ್ಬ ವ್ಯಕ್ತಿ ತೋಟದ ಆಳುಗಳೊಂದಿಗೆ ಮಾತಾಡುತ್ತ, ಆಗಾಗ ತಲೆಯ ಮೇಲಿನ ಕರೀ ಟೋಪಿಯನ್ನು ತೆಗೆದು ಕೆರೆದುಕೊಳ್ಳುತ್ತಿದ್ದ.

ಹ್ಯಾಂಡ್ ಬ್ಯಾಗ್‌ನಿಂದ ವಿಳಾಸದ ಚೀಟಿ ತೆಗೆದು ಕೊಟ್ಟಳು. ನೇರವಾಗಿ "ಅವ್ರನ್ನ ಮೀಟ್ ಮಾಡ್ಬೇಕು" ಹೇಳಿದಾಗ, ವಿಳಾಸ ಅವಳ ಮುಖವನ್ನು ಬದಲಿಸಿ ಬದಲಿಸಿ ನೋಡಿದವನು ಎದ್ದು ಹೋಗಿ

ತಾಂಬೂಲವನ್ನು ತೆಂಗಿನ ಮರದ ಬುಡಕ್ಕೆ ಉಗಿದು ಬಂದು ಅದೇ ಸ್ಥಳದಲ್ಲಿ ಕೂತು ಹಿಂದಕ್ಕೆ ಸರಿದ ಕೋಟನ್ನು ಸರಿಮಾಡಿಕೊಂಡರು.

"ಸಾಧ್ಯವಿಲ್ಲ, ಅವ್ರನ್ನ ಭೇಟಿ ಮಾಡೋಕೆ. ಮನೆಯವ್ರೇ ಎಷ್ಟೋ ಪ್ರಯತ್ನಗಳ್ನ ಮಾಡಿ ತಣ್ಣಗೆ ಕುಂತವ್ರೆ. ಮರೆತಂಗೆ ಇನ್ನ ನಿಮ್ಗಲ್ಲಿ ಸಿಕ್ಕಿಯಾರು?" ಚೀಟಿಯನ್ನು ಹಿಂದಿರುಗಿಸಿದ. ಅವಳ ತಲೆ 'ಧಿಂ' ಎಂದಿತು. ಅವನು ಆಡಿದ ಮಾತುಗಳ ಅರ್ಥವೇನು? "ಸ್ವಲ್ಪ ಬಿಡ್ಸೇಳಿ" ಎಂದಳು.

ಕೆಳಗೆ ಕೈಯೂರುತ್ತ ಮೇಲೆದ್ದವನು "ಅದ್ನೆಲ್ಲ ಹೇಳೋಕ್ಕಾಗೊಲ್ಲ. ಅಂತು ಅವ್ರು ಇಲ್ಲ ಅಷ್ಟೆ" ಬಾಯನ್ನು ವಕ್ರ ಮಾಡಿ ಹಲ್ಲುಗಳ ಮಧ್ಯೆ ಸಿಕ್ಕಿಕೊಂಡ ತಾಂಬೂಲದ ಚೂರುಗಳನ್ನು ನಾಲಿಗೆಯ ಮೇಲೆ ತಂದುಕೊಂಡು "ಯಾವ ಕೆಲ್ಸದ್ಮೇಲೆ ಬಂದ್ರಿ?" ಕೇಳುತ್ತಲೇ ಎದ್ದು ಹೋದ ಆಫೀಸ್ ರೂಂನೊಳಕ್ಕೆ.

ತೆಂಗಿನ ಮರದ ಬುಡದ ಸುತ್ತ ಕೆತ್ತಿ ಗೊಬ್ಬರ ಹಾಕುತ್ತಿದ್ದ ಆಳನ್ನು ಕೈ ತಟ್ಟಿ ಕರೆದವಳು "ಇವ್ರು ಮ್ಯಾನೇಜರ್ರಾ, ಗುಮಾಸ್ತನಾ?" ಕೇಳಿದಳು. ಅವನು ತಲೆಗೆ ಸುತ್ತಿದ್ದ ಮುಂಡನ್ನು ಹೆಗಲ ಮೇಲೆ ಹಾಕಿಕೊಂಡು "ಗುಮಾಸ್ತ, ಮ್ಯಾನೇಜರ್ ಬರೋ ಮಟ್ಟಿಗಿಲ್ಲ. ಯಜಮಾನ್ರು ಊರಿನಲ್ಲಿದ್ರೆ ಬರ್ತಾರಷ್ಟೆ. ಅವ್ರೇನೋ ಪಟ್ಟಣಕ್ಕೆ ಹೋದ್ರೂ ಅನ್ನೋ ಮಾತು. ಯಾವ್ಕೆಲ್ಸದ್ಮೇಲೆ ಬಂದ್ರಿ?" ಎನ್ನುತ್ತಲೇ ಆಕಾಶವನ್ನು ನೋಡಿ ಯಾವ ವೇಳೆಗೆ ಮಳೆ ಬರಬಹುದೆಂದು ಲೆಕ್ಕ ಹಾಕಿಕೊಂಡ.

"ಯಜಮಾನ್ರು" ಎಂದವಳು ಚೀಟಿನ ನೋಡಿ ದೃಢಪಡಿಸಿಕೊಂಡು "ಸೀನಪ್ಪಯ್ಯನಾ...." ಅಂದ ಕೂಡಲೇ ಅವನು 'ಉಫ್' ಎಂದು ಉಸಿರು ಚೆಲ್ಲಿ "ಅವ್ರು ಸಿಗೋಹಂಗಿಲ್ಲ, ಬಿಡಿ. ಅವ್ರು ಹೋಗಿ ವರ್ಷಗಳೇ ಉರುಳಿಹೋಯ್ತು. ಹುಚ್ಚೋ, ಬೆಪ್ಪೋ, ರಾಮಲೀಲೆಯೋ ಅನ್ನುವಂತೆ... ದೇಶಾಂತರ ಹೋಗ್ಬಿಟ್ರು. ಅವ್ರ ಸಂಸಾರದವ್ರು ಇದ್ದಾರಷ್ಟೆ" ಹೇಳಿದವನು ಸೊಂಟ ಬಗ್ಗಿಸಿ ತನ್ನ ಕೆಲಸದಲ್ಲಿ ನಿರತನಾದ.

"ಅವ್ರ ಸಂಸಾರ ಎಲ್ಲಿದೇಂತ ಹೇಳಪ್ಪ" ಎಂದಳು ಮೆಲುವಾಗಿ. ಅವನು ಸೊಂಟ ನೇರ ಮಾಡಲಿಲ್ಲ "ಗೊತ್ತಿಲ್ಲಮ್ಮ ಮ್ಯಾನೇಜರ್ ಬಂದ್ಮೇಲೆ ಕೇಳ್ಕೊಳ್ಳಿ" ಎಂದ ನಿರ್ಲಕ್ಷ್ಯವಾಗಿ. ಸ್ವಲ್ಪ ಸಹಾಯ ಮಾಡುವ ಮನಸ್ಸು ಕೂಡ ಇರಲಿಲ್ಲ.

ಒಮ್ಮೆ ಎಲಿಮಿನೇಟರ್ ಮೇಲೆ ಕಾಲಿಡುವಾಗ ಜಾರಿ ಅನಾಹುತವಾದಾಗ ಎಲಿಸನ್ ಎನ್ನುವ ಯುವಕ ಅವಳನ್ನು ಆಸ್ಪತ್ರೆಗೆ ಒಯ್ಯುವುದರಿಂದ ಹಿಡಿದು, ಕ್ಲಿಂಟನ್‌ಗೆ ವಿಷಯ ಮುಟ್ಟಿಸಿ ಅವರ ಬರುವವರೆಗೆ ತಾನೇ ಶುಶ್ರೂಷೆಗೆ ನಿಂತಿದ್ದ, ಬರೀ ಮಾನವೀಯ ಸಂಬಂಧದಿಂದ.

"ಸಿಟಿಯ ಆ ಕೊನೆಯಲ್ಲಿರೋ ಎಸ್ಟೇಟ್‌ನಲ್ಲಿರೋದು ಅವ್ರು, ಅಂದರೇ ನಲ್ವತ್ತು ಕಿಲೋಮೀಟರ್‌ಗಳ ಆಚೆ" ಎಂದವ ಮೇಲಕ್ಕೆ ನೋಟ ಹರಿಸಿ "ಮೋಡಗಳು ದಟ್ಟವಾಗಿದೆ. ಯಾವ ಕ್ಷಣದಲ್ಲಿಯಾದ್ರೂ ಬಿರುಸಾದ ಮಳೆ ಬರ್ಬಹುದು. ಕೆಲವು ಸಮಸ್ಯೆಗಳು ತಾನಾಗಿ ಒದಗಿಬರುತ್ತೆ" ಸ್ವಲ್ಪ ಅನುಮಾನಿಸಿದ ಉತ್ಸಾಹ ತೋರದೆ. ಅವನು ಕೂಡ ಬೇಗನೆ ಮನೆಗೆ ಹೋಗಬೇಕಿತ್ತು. ತಂಗಿ ಸತ್ತ ಮೇಲೆ ಅವನಮ್ಮ ಹುಚ್ಚಿಯಂತಾಗಿ ಎಲ್ಲರ ಚಿಂತೆಗೆ ಕಾರಣವಾದ್ದರಿಂದ ಇವನ ಅಗತ್ಯ ಹೆಚ್ಚಾಗಿಯೇ ಇತ್ತು.

ಪರಿಸ್ಥಿತಿ ಅರ್ಥ ಮಾಡಿಕೊಂಡ ರೂತ್ "ನನ್ನ ಟ್ಯಾಕ್ಸಿ ಸ್ಟ್ಯಾಂಡ್‌ಗೆ ಬಿಟ್ಹೋಗಿ. ಆಮೇಲೆ ನಾನು ಮ್ಯಾನೇಜ್ ಮಾಡ್ಕೋತೀನಿ" ಎಂದಳು. ಸದ್ಯಕ್ಕೆ ಅಲ್ಲಿಗೆ ಹೋಗಿ ತಲುಪುವ ನಿರ್ಧಾರ ಅವಳದು.

ಮೌನವಾಗಿ ಟ್ಯಾಕ್ಸಿ ಹತ್ತಿದ ನವನೀತ್. ಬಿರುಸಾದ ಗಾಳಿಯೊಂದಿಗೆ ಸಮುದ್ರದ ಆ ಭಯಂಕರ ಅಲೆಗಳಂತೆ ತೂರಿ ವರ್ಷ, ವೈಪರ್ ಕೆಲಸ ಮಾಡುತ್ತಿದ್ದರು ಟ್ಯಾಕ್ಸಿ ನಡೆಸುವುದು ಕಷ್ಟವಾಗಿತ್ತು ನವನೀತ್‌ಗೆ. ರಭಸದ ಮಳೆಯಲ್ಲಿ ನಾಲ್ಕು ಕಡೆಯಿಂದ ನುಗ್ಗಿ ಬರುತ್ತಿದ್ದ ನೀರಿಗೆ ರಸ್ತೆ ಆಧಾರವೆನ್ನುವಂತ ತುಂಬಿಕೊಂಡು ಓಡಾಟ ಕಷ್ಟವೆನಿಸಿದರೂ ಸಾಹಸದಿಂದ ನಡೆಸಿದವನು ಟ್ಯಾಕ್ಸಿಯ ಸ್ಟ್ಯಾಂಡ್‌ನಲ್ಲಿ ನಿಲ್ಲಿಸಿ ಇಳಿದ. ನಿಂತಿದ್ದ ಕೆಲವು ಟ್ಯಾಕ್ಸಿಗಳಲ್ಲಿ ಡ್ರೈವರ್‌ಗಳಿಲ್ಲ, ಕೆಲವರು ತಲೆ ಅಲ್ಲಾಡಿಸಿಬಿಟ್ಟರು.

ಟ್ಯಾಕ್ಸಿಯ ಬಳಿಗೆ ಹಿಂದಿರುಗಿದ ನವನೀತ್ "ಸಾರಿ, ಮೇಡಮ್.... ಯಾರು ಬರೋಕೆ ಸಿದ್ಧವಿಲ್ಲ. ಒಂದೆರಡು ಟ್ಯಾಕ್ಸಿಗಳು ಪ್ರತಿಯೊಂದಕ್ಕೂ ಸಿದ್ಧ, ಆದ್ರೂ ಅನುಕೂಲಕರವಲ್ಲ. 'ಥ್ರಿಲ್' ಬೇಕೆಂದ್ಕೊಳ್ಳೋ ಜನ." ಪರಿಸ್ಥಿತಿಯನ್ನು ವಿವರಿಸಿದ. ಸುರಿಯೋ ಮಳೆಯನ್ನು ನೋಡುತ್ತಿದ್ದ ರೂತ್ ತನ್ನ ನಿರ್ಧಾರ ಬದಲಾಯಿಸಿಕೊಂಡಳು.

"ನನ್ನ ಹೋಟಲ್ ಹತ್ರ ಡ್ರಾಪ್ ಮಾಡಿ ನೀನು ಹೋಗ್ಬಹುದು. ಬೆಳಗ್ಗೆ

ಸ್ವಲ್ಪ ಬೇಗ್ಬಾ'' ಹೇಳಿದವಳು, ಪರ್ಸ್‌ನೊಳಕ್ಕೆ ಕೈ ಹಾಕಿದಳು. ಹೋಟಲ್ ತಲುಪಿದ ನಂತರವೆ ಕೈ ಚಾಚಿದ್ದು. ಟ್ಯಾಕ್ಸಿ ಮೀಟರ್ ಛಾರ್ಜ್ ಜೊತೆ ವೆಯಿಟಿಂಗ್ ಛಾರ್ಜ್‌ಗೂ ಲೆಕ್ಕ ಹಾಕಿ ಹಣ ಪಡೆದ.

ರಿಸೆಪ್ಷನಿಸ್ಟ್ ಕೌಂಟರ್‌ನಲ್ಲಿ ಅವಳಿಗಾಗಿ ಒಂದು ಪತ್ರ ಇತ್ತು. ಕ್ಲಿಂಟನ್ ಕೈ ಬರಹ ನೋಡಿದ ಕೂಡಲೇ ಅವಳ ಮುಖ ಅರಳಿತು. ರೂಮಿಗೆ ಬಂದು ಬಟ್ಟೆ ಬದಲಾಯಿಸಿದವಳೇ ಪತ್ರ ಬಿಡಿಸಿದಳು.

'ಮೈ ಡಿಯರ್ ಚೈಲ್ಡ್....' ನೊಂದಿಗೆ ಷುರುವಾದ ಪತ್ರ ದೀರ್ಘವಾಗಿತ್ತು. ಹಾಸ್ಯದಿಂದ ಆರಂಭಿಸಿದರೂ ಕೊನೆಯ ಪದಗಳಲ್ಲಿ ನೋವು ತುಂಬಿಕೊಂಡಿತ್ತು. 'ಈಗಿನ ಹೆಂಡತಿ ನೂಸನ್‌ನ ಸ್ವೇಚ್ಛಾಚಾರದ ಜೀವನ ತಮಗೇ ಇಷ್ಟವಾಗುತ್ತಿಲ್ಲ. ಪ್ರತಿಯೊಂದಕ್ಕೂ ಸಿಡಿದೇಳುತ್ತಾಳೆ. ಐಷಾರಾಮದಿಂದ ದಿನಗಳು ದೂಡುವುದು ಅವಳಿಗೆ ಇಷ್ಟ. ಯಾಕೋ ಈಚೆಗೆ ಬದುಕಿನಲ್ಲಿ ತಾವು ಉತ್ಸಾಹ ಕಳೆದುಕೊಳ್ಳುತ್ತಿರುವ ವಿಷಯ ಬರೆದುಕೊಂಡಿದ್ದರು. ಭಾರತದ ದಾಂಪತ್ಯದ ಸೊಗಸು ಬದ್ಧತೆ ತಮಗೆ ಇಷ್ಟವೆನಿಸುತ್ತಿದೆ. ಅಲ್ಲಿ ಒಬ್ಬರನ್ನೊಬ್ಬರು ನಂಬಬಹುದು. ತನ್ನ ಗಂಡು ಮಕ್ಕಳು ಮಾತ್ರ ತಮ್ಮ ಸಮಸ್ತವೆಂದು ಭಾವಿಸುವ ಹೆಣ್ಣುಗಳಿದ್ದಾರೆ. ವಿಚ್ಛೇದನಗಳು ಕಡಿಮೆ. ಅಲ್ಲಿನ ಜೋಡಿಗಳ ವಿವಾಹ ಜೀವನಕ್ಕೆ ದೀರ್ಘ ಆಯುಸ್ಸಿದೆ. ಡಯಾನ ಮದುವೆಯ ಸಮಾರಂಭಕ್ಕೆಂದು ಚಿಂಹಿಲ್‌ಗೆ ಹೋಗಿದ್ದೆ. ಅವನ ಹಿಂದಿನ ಗಂಡಂದಿರಿಗಿಂತ ಹೆಚ್ಚು ಶ್ರೀಮಂತ ಅವನು. ಒಂದು ಗಡಿಯಾರವನ್ನು ಉಡುಗೊರೆಯಾಗಿ ಕೊಟ್ಟು ಶುಭ ಕೋರಿದೆ. ಡಯಾನ, ನನ್ನ ಜೊತೆಯ ಹಿಂದಿನ ದಿನಗಳನ್ನು ನೆನೆಸಿಕೊಂಡು ಅತ್ತಳು. ಟೆಡ್ಡಿ ತುಂಬ ಚುರುಕಿನ ಹುಡುಗ. ಪದೇ ಪದೇ ನಿನ್ನ ನೆನಪಿಸಿಕೊಂಡ. ಬಲವಂತವಾಗಿ ಡಯಾನ ಎರಡು ದಿನ ನಿಲ್ಲಿಸಿಕೊಂಡಳು. ಎಲ್ಲಾ ಕೂಡಿಯೇ ಫಿಲಿಡೆಲ್ಫಿಯಾಗೆ ಹೋಗಿದ್ದೆವು. ನಾನು ಸಾಕಷ್ಟು ಸಲ ಹೋದ ಸ್ಥಳವೇ. ಆಗಿನ ಮನಸ್ಥಿತಿ, ಈಗಿನದಕ್ಕೂ ವ್ಯತ್ಯಾಸವಿದೆ. ಆಗ ಪ್ರೇಮಿ, ಹೆಂಡತಿಯ ಆರಾಧಕನಾಗಿದ್ದೆ. ಈಗ ಪ್ರಕೃತಿಯ ಆರಾಧಕ. ಇದು ಅಸಾಧಾರಣ ಪ್ರತಿಭೆಯ ಮಹಾನ್ ವ್ಯಕ್ತಿ ಬೆಂಜಮಿನ್ ಫ್ರಾಂಕ್ಲಿನ್‌ನ ಕಾರ್ಯಕ್ಷೇತ್ರ. ಭಾರತದ ಮಹಾತ್ಮ ಗಾಂಧೀಜಿಯವರ ಹಾಗೇ ಬೆಂಜಮಿನ್ ಫ್ರಾಂಕ್ಲಿನ್ ಕೂಡ ಬ್ರಿಟಿಷ್ ವಸ್ತುಗಳ ಬಹಿಷ್ಕಾರವನ್ನು ರಾಜಕೀಯ ಅಸ್ತ್ರವಾಗಿ ಪ್ರಯೋಗಿಸಿದ್ದವರು. ಈ ಸುತ್ತಾಟ ಬಹಳ ದಿನ ನೆನಪಿನಲ್ಲಿ

ಇರತಕ್ಕದ್ದು. ಡಯಾನ ಮತ್ತು ಅವಳ ಪತಿ ಮುಖ್ಯ ಅತಿಥಿಯಂತೆ ಆದರಿಸಿದ್ದರು. ನಾನು, ಡಯಾನ ನಿನ್ನ ಬಗ್ಗೆಯೇ ಮಾತಾಡಿದ್ದು. ಈಗ ಅವಳಿಗೂ ಮಕ್ಕಳು ಇದ್ದರು, ನಂಗೂ ಸ್ವಂತ ಮಕ್ಕಳು ಇದ್ದಾರೆ. ಆದರೆ ನಮ್ಮಿಬ್ಬರ ಮಗಳು ಮಾತ್ರ ನೀನೊಬ್ಬಳೇ.

ದಯವಿಟ್ಟು ಬೇಗ ಹಿಂದಿರುಗಿ ಬಾ. ನಿನ್ನ ತಾಯಿ ತಂದೆಯರು ಸಿಕ್ಕರೇ ಈ ವ್ಯಥಾ ಅಪ್ಪನನ್ನು ಮರೆಯಬೇಡ. ನಿನ್ನ ನನ್ನ ಜೊತೆಯಲ್ಲೇ ಇರಿಸಿಕೊಳ್ಳುವ ಆಸೆ. ನಿಂಗೆ ಒಬ್ಬ ಬಾಯ್ ಫ್ರೆಂಡ್‌ನ ಹುಡುಕಿ ಇಟ್ಟಿದ್ದೀನಿ. ಅವನು ಭಾರತೀಯನೇ. ನೀನು ಒಪ್ಪಿಕೊಂಡರೇ ನಾನೇ ನಿಂತು ಮದುವೆ ಮಾಡ್ತೀನಿ. ಬೇಗ ಹೊರಟು ಬಾ ರೂತ್' ಎಂದು ಬರೆದುಕೊಂಡಿದ್ದರು.

ಪತ್ರ ಓದಿ ಮುಗಿಸಿದ ಮೇಲೆ ಜೋರಾಗಿ ಅತ್ತುಬಿಟ್ಟಳು. ಅಮೇರಿಕಾಗೆ ಹಾರಿಬಿಡಲೇ ? ಈ ಆಸೆಗಿಂತ ಅವಳ ಆಕಾಂಕ್ಷೆ ಪ್ರಬಲವಾಗಿತ್ತು. ಒಂದೇ ಒಂದು ಸಲ ಜನ್ಮ ಕೊಟ್ಟವರ ದರ್ಶನವಾದರೇ ಸಾಕು !

ಮಲಗಿ ಕಣ್ಮುಚ್ಚಿದಾಗ ನವನೀತ್ ತಾಯಿ, ಶಿವಮ್ಮ ಅಮೀನಾಬಿ ಪ್ರತಿಯೊಬ್ಬರು ತಾಯಿ. ಅವರಲ್ಲಿನ ತಾಯ್ತನದಲ್ಲಿ ತನ್ನ ತಾಯಿಯನ್ನು ಹುಡುಕಬೇಕೆನಿಸಿತು. ಮನದಲ್ಲಿಯೇ ಒಂದು ರೂಪು ಕೊಟ್ಟಳು. ಮತ್ತೆ ಅಳಿಸಿ ಇನ್ನೊಂದು ಕಲ್ಪನೆಯ ಚಿತ್ರ, ಇದು ನಿರಂತರವಾಗಿ ನಡೆಯುತ್ತಲೇ ಬಂದಿತ್ತು.

ತೀರಾ ಸೋತು ನಿದ್ರಿಸಿದಳು.

ಅನಿಕೇತ್ ಮೂರು ದಿನದಿಂದ ಕಾಯುತ್ತಿದ್ದ ಮನೆ ಬಿಟ್ಟು ಹೋಗದಂತೆ. ಅವನು ಬಂಗ್ಲೆಯಲ್ಲಿ ಇರುತ್ತಿದ್ದುದೇ ಅಪರೂಪ. ಹತ್ತಾರು ಮೀಟಿಂಗ್‌ಗಳು, ಕೆಲವು ಸಂಸ್ಥೆಗಳಿಗೆ ಅಧ್ಯಕ್ಷ, ಕೆಲವಕ್ಕೆ ಸಲಹೆಗಾರ. ಚಿಕ್ಕ ವಯಸ್ಸಿಗೆ ಇದೆಲ್ಲ ಬಂದು ಅಪ್ಪಿಕೊಂಡಿತ್ತು ಅವನಿಗೆ. ಅದಕ್ಕೆ ಕೆಲವು ಮುಖ್ಯ ಕಾರಣಗಳು ಇರಬಹುದು.

ಬಂಗ್ಲೆಯಿಂದ ಸಪೋಟಾ ಗಿಡಗಳ ಕಡೆ ನಡೆಯುವ ಮುನ್ನ ಚೆರ್ರಿನ ಕರೆದು "ನಿನ್ನ ದೃಷ್ಟಿ ಮೈನ್‌ಗೇಟ್‌ನ ಕಡೆನೇ ಇರ್ಲಿ. ಯಾರಾದ್ರೂ ಬಂದ್ರೆ ತಕ್ಷಣ ತಡೆದು ನಂಗ್ಬಂದು ಇನ್‌ಫಾರ್ಮೇಷನ್ ಕೊಡ್ಬೇಕು. ಅಲರ್ಟ್ ಆಗಿರು" ಎಚ್ಚರಿಸಿ ಜೀಪ್‌ನತ್ತ ನಡೆದ. ಸುತ್ತಮುತ್ತಲಿನ ಕೆಲವು

ಎಸ್ಟೇಟ್‌ಗಳಿಗಿಂತ ಇದು ದೊಡ್ಡದೇ, ಸಿಟಿಗೆ ನಲ್ವತ್ತು ಕಿಲೋಮೀಟರ್ ಹೊರಗೆ ಇದ್ದುದರಿಂದ ಪ್ರಶಾಂತವಾಗಿತ್ತು.

ಚೆರ್ರಿ ಮಲೆನಾಡಿನ ಕಡೆಯವನು. ಇಲ್ಲಿಗೆ ಯಾವಾಗ ಬಂದನೋ ನೆನಪಿಲ್ಲ. ತನ್ನ ಹುಟ್ಟು ಕೂಡ ಇಲ್ಲೇ ಎನ್ನುವಂತೆ ಹೊಂದಿಕೊಂಡಿದ್ದ. ಅಂಥ ಬುದ್ಧಿವಂತನೇನೇನು ಅಲ್ಲ. ಹೇಳಿದಷ್ಟೇ ಮಾಡೋದು. ಸ್ವಂತದ್ದಾಗಿ ತನಗೇ ಬುದ್ಧಿ ಇದೆಯೆನ್ನುವ ತಿಳಿವಳಿಕೆಯೇ ಇರಲಿಲ್ಲ. ಒಳ್ಳೆದಾಗಲಿ ಕೆಟ್ಟದಾಗಲೀ ನಿರ್ಲಿಪ್ತವಾಗಿ ನಿರ್ವಹಿಸುತ್ತಿದ್ದ ಕೆಲಸವನ್ನು.

ಸುಮ್ಮನೆ ಅಡ್ಡಾಡುತ್ತಿದ್ದ ಚೆರ್ರಿಗೆ ಬಂದಿದ್ದು ಒಳಗಿನಿಂದ ಬುಲಾವ್ "ಅಮ್ಮಾವ್ರು ಕರೀತಾರೆ" ಆವನು ಅತ್ತಿತ್ತ ನೋಡಿದ. ಒಂದು ರೀತಿಯ ಗೊಂದಲ "ಈಡಿಯಟ್, ಹೇಳಿದ್ದೆಲ್ಲ ಸರ್ಯಾಗಿ ಮಾಡ್ಲಿಲ್ಲಾಂದ್ರೆ, ಎಸ್ಟೇಟ್‌ನಿಂದ ಒದ್ದು ಹೊರ್ಗೇ ಹಾಕ್ಬಿಡ್ತೀನಿ" ಅನಿಕೇತ್ ರೇಗುತ್ತಿದ್ದ. ಇನ್ನ ಚಿಕ್ಕಮ್ಮಾವರ ಸಿಟ್ಟು ಗೊತ್ತು. "ಅರ್ಜೆಂಟಂತೆ....." ವಾಸುದೇವಯ್ಯ ಹೇಳುವಷ್ಟರಲ್ಲಿ ಟ್ಯಾಕ್ಸಿ ಬರುತ್ತಿರುವುದು ಕಂಡಿತು. ಒಂದು ತರಹ ಗೊಂದಲದಲ್ಲಿ ಇದ್ದುದರಿಂದ ವಿಷಯ ಮುಟ್ಟಿಸಲು ಓಡಿದ ಯಜಮಾನನಿಗೆ.

ಇದರ ನಿರೀಕ್ಷೆಯಲ್ಲಿಯೇ ಇದ್ದುದ್ದರಿಂದ ಜೀಪ್‌ನ ಹಿಂದಕ್ಕೆ ತಿರುಗಿಸಿದವನು, ಮಣಿಪತ್ರೆ ಬಂದಿದ್ದರಿಂದ ಹತ್ತು ನಿಮಿಷ ತಡವಾಗಿ ಬರಬೇಕಾಯಿತು ಬಂಗ್ಲೆಗೆ. ಏನಾದರೂ ಪ್ರಶ್ನಿಸುವ ಮುನ್ನವೇ ಪರಿಚಯಿಸಿದ ತಾಯಿ, ಹೆಂಡತಿಗೆ ಕೂಡಿಯೇ.

"ಅಪ್ಪನ ಸ್ನೇಹಿತರ ಮಗ್ಳು. ಅಮೆರಿಕಾದಿಂದ ಇಲ್ಲಿಗೆ ಬಂದಿದ್ದಾರೆ" ಸಖೀ ಅಂತ.

ರೂತ್ ಕ್ಲಿಂಟನ್ ಕಣ್ಣುಗಳಲ್ಲಿ ಕಂಡ ಗಲಿಬಿಲಿಯನ್ನು ಕಣ್ಣಿಂದಲೇ ನಿವಾರಿಸಿದವನು "ನಿಮ್ಗಿಂದೆ ಫೋನ್ ಬಂದಿತ್ತು. ಯಾವ್ದೇ ತೊಂದರೆ ಆಗ್ಲಿಲ್ವಲ್ಲ" ವಿಚಾರಿಸಿದ. ಅವಳಿಗೇನು ಅರ್ಥವಾಗದಿದ್ದರೂ ಚೇತರಿಸಿಕೊಂಡಳು. ತುಟಿಗಳ ಮೇಲೆ ಮುಗುಳ್ನಗು ಅರಳಿತು. "ಇಲ್ಲ....." ಬಹಳ ನಿಧಾನವಾಗಿ ಬಂತು ದನಿ.

ಒಂದಿಷ್ಟು ಉಪಚಾರ ಮಾತುಗಳ ನಂತರ ಮಾಲತಿ ಅನಿಕೇತ್ "ಹೋಟಲ್‌ನಲ್ಲಿ ಯಾಕೆ, ಇಲ್ಲೇ ಇರ್ಬಹುದಲ್ಲ. ನಾವು ಕೂಡ

ಅಮೆರಿಕಾಗೆ ಬರೋರಿದ್ದೀವಿ. ಅಲ್ಲಿ ಏನೇನು ಸಿಗುತ್ತೆ ಎಲ್ಲಾ ತಿಳ್ಕೋಬಹುದಿತ್ತು" ಎಂದಾಗ ಅವಳ ಕಣ್ಣುಗಳು ಮಿಂಚಿತು.

"ಕರೆಕ್ಟ್, ನಿಮ್ಮ ಓಡಾಟಕ್ಕೆ ನಮ್ಮ ವೆಹಿಕಲ್ಸ್ ಉಪಯೋಗಿಸ್ಕೋಬಹ್ದು. ಪ್ರೈವೆಸಿಗೇನು ತೊಂದರೆ ಇಲ್ಲ." ಹೇಳಿದ ಅನಿಕೇತ್ ಕೂಡ. ಪೆಚ್ಚಾಯಿತು ರೂತ್ ಮುಖ. ತಕ್ಷಣ ಏನು ಹೇಳಬೇಕೆಂದು ಅವಳಿಗೆ ಅರ್ಥವಾಗಲಿಲ್ಲ "ಯೋಚ್ನೇ ಮಾಡಿಯೇ ನಿರ್ಧಾರ ತಗೋಬಹ್ದು. ಬನ್ನಿ ಎಸ್ಟೇಟ್ ತೋರಿಸ್ತೀನಿ" ಮೇಲೆದ್ದ.

ರೂತ್ ಎರಡು ಕೈಗಳನ್ನು ಜೋಡಿಸಿದಳು. ಅನಿಕೇತ್ ತಾಯಿ ಯಾವುದೇ ಪ್ರತಿಕ್ರಿಯೆ ತೋರದೆ ಎದ್ದು ಹೋದರು. ನಿರ್ಲಕ್ಷ್ಯವೋ, ಉದಾಸೀನವೋ ಒಂದೂ ಅರ್ಥವಾಗಲಿಲ್ಲ ಅವಳಿಗೆ.

ಇಬ್ಬರು ಹೊರಗೆ ಬಂದಾಗ ಹಿಂಬಾಲಿಸಿದ ಮಾಲತಿ "ಚೆರ್ರಿನ ಕಳ್ಸಬಹುದಿತ್ತಲ್ಲ?" ತಟ್ಟನೆ ಬಂದಾಗ ಒಮ್ಮೆ ಸೀರಿಯಸ್ಸಾಗಿ ನೋಡಿದವನು. ಹತ್ತಿರಕ್ಕೆ ಅಂದರೆ ತೀರಾ ಸನ್ನಿಹಕ್ಕೆ ಹೋಗಿ ಉಸುರಿದ "ಗೆಸ್ಟ್‌ಗಳ್ನ ಅನುಸರಿಸಿ ಟ್ರೀಟ್ ಮಾಡ್ಬೇಕಾಗುತ್ತೆ. ಚೆರ್ರಿನೋ, ವಾಸುದೇವಯ್ಯನನ್ನೇ ಕಳ್ಸೋಂತ ಗೆಸ್ಟ್ ಅಲ್ಲ, ಮೈಂಡ್ ಇಟ್" ಎಂದ. ಪ್ರತಿಯೊಂದಕ್ಕೂ ತಲೆ ಹಾಕುವುದು ಸ್ವಭಾವವಾದರೂ ಆ ಮಟ್ಟಿನ ಬೌದ್ಧಿಕತೆ ಬೆಳೆಸಿಕೊಳ್ಳಬೇಕೆಂಬ ಪ್ರಜ್ಞೆ ಮಾತ್ರ ಇರಲಿಲ್ಲ ಮಾಲತಿಗೆ.

ಬಂಗ್ಲೆಯ ಮೆಟ್ಟಿಲುಗಳನ್ನು ಇಳಿದು ಕೆಳಗೆ ಬಂದಾಗ ಟ್ಯಾಕ್ಸಿಯ ಕಡೆ ನೋಡಿದವನು "ನಾನು ನಿಮ್ಮನ್ನು ಹೋಟಲ್‌ಗೆ ಡ್ರಾಪ್ ಮಾಡ್ತೀನಿ. ಟ್ಯಾಕ್ಸಿನ ವಾಪ್ಸು ಕಳ್ಸಬಹುದಲ್ಲ" ಎಂದವನು "ಮಣಿಪತ್ರೆ....." ಎಂದು ಕೂಗಿಕೊಂಡಾಗ ತಡೆದಳು "ನಾನೇ ಹೇಳ್ತೀನಿ" ಅತ್ತ ನಡೆದಳು.

"ನವನೀತ್ ನೀವ್ಹೋಗಿ" ಟ್ಯಾಕ್ಸಿಯ ಛಾರ್ಜನ್ನು ಕೊಟ್ಟಳು. ನವನೀತ್ ಸ್ವಲ್ಪ ಅನುಮಾನಿಸಿದರೂ ಮಾತಾಡಲಿಲ್ಲ "ಥ್ಯಾಂಕ್ಯೂ ಮೇಡಮ್...." ಎಂದವನು ಟ್ಯಾಕ್ಸಿ ತಿರುಗಿಸಿಕೊಂಡು ಹೋದ. ಅವನಿಗೆ ಯಾರ ಉಸಾಬರಿಯೂ ಬೇಕಿಲ್ಲ. ಆದರೆ ತೀರಾ ನಯವಾಗಿ ಮೃದುವಾಗಿ ವರ್ತಿಸುವ 'ಮೇಡಮ್' ಬಗೆಗೆ ಒಂದಿಷ್ಟು ಗೌರವ, ಅಭಿಮಾನ ಅದಕ್ಕೆ ಮೀರಿದ ಆದರ ಕೂಡ.

ಮುಂದಿನ ಗಾರ್ಡನ್ ದಾಟಿ ಮರಗಳ ತಾಣ ಮುಟ್ಟಿದಾಗ "ಗಣಪತಿ ಒಂದು ಮೀಟಿಂಗ್‌ನಲ್ಲಿ ಭೇಟಿಯಾದಾಗ ನಿಮ್ಮ ವಿಷ್ಯ ತಿಳಿಸಿದ್ರು. ನೀವು

ಬರೋ ನಿರೀಕ್ಷೆಯಿಂದ್ಲೇ ಬಾಂಬೆ ಟೂರ್ ಕ್ಯಾನ್ಸಲ್ ಮಾಡಿ ಉಳಿದೆ. ಮಿಕ್ಕ ವಿಷ್ಯ ನಂತರ, ವಾಟ್ ಕೆನ್ ಐ ಡೂ ಫಾರ್ ಯು'' ಸಹಜವಾಗಿ ಕೇಳಿದ. ಎತ್ತರದ ಮಾಸಲು ಕೆಂಪು ಬಣ್ಣದ ನಿಲುವಿನ ವ್ಯಕ್ತಿ ಮುಖದ ಮೇಲಿನ ಗಾಂಭೀರ್ಯ ಬದುಕಿನ ಬಗ್ಗೆ ಖಚಿತತೆ ಎದ್ದು ಕಾಣುತ್ತಿತ್ತು.

ಕಾಣದ ನೋಡದ ತನಗಾಗಿ ತೆಗೆದುಕೊಂಡ 'ರಿಸ್ಕ್'ಗೆ ನೀಡುವ ಸಹಾಯ ಹಸ್ತಕ್ಕೆ ಎದೆ ತುಂಬಿ ಬಂತು. ಹರ್ಷ, ಉತ್ಸಾಹ ತುಂಬಿ ಬಂತು.

''ಥ್ಯಾಂಕ್ಯು ಸರ್....'' ಎಂದಳು ಮೆಲುವಾಗಿ.

ಅನಿಕೇತನ್ ನಗೆ ಬೀರಿದ. ತುಂಬು ಆತ್ಮವಿಶ್ವಾಸದ ನಗು. ಅದರಲ್ಲಿ ಗಟ್ಟಿತನವಿತ್ತು, ಜೀವಂತಿಕೆ ಇತ್ತು. ಅವನು ಬದುಕನ್ನು ಸಹನೀಯವಾಗಿ ಸಂಭಾಳಿಸುವ ರೀತಿ ಅನನ್ಯ. ತೀರಾ ಶಾಯಿ ಚೆಲ್ಲಿ ವಿರೂಪವಾದ ಚಿತ್ರವನ್ನು ಸಹನೀಯವಾಗಿಸಿಕೊಂಡಿದ್ದ.

''ದಟ್ಸ್ ಆಲ್ ರೈಟ್, ಈಗ್ಲೇಳಿ... ಗಣಪತಿಗಳು ಹೇಳಿದ್ದು ಅಲ್ಪಸ್ವಲ್ಪ. ವಿಷ್ಯ ಪೂರ್ತಿ ತಿಳಿದ್ಮೇಲೆ ಏನಾದ್ರೂ ಮಾಡೋಕೆ ಸಾಧ್ಯವಿದೆಯೇನೋಂತ ಯೋಚ್ಸಬಹ್ದು. ಅಲ್ಲಿ ಕೂತು ಮಾತಾಡೋಣ'' ನಡೆದಾಗ ದೃಷ್ಟಿ ಚೆಲ್ಲಿದಳು.

ದೂರದ ಮರಗಳ ನಡುವೆ ಆಸನ ವ್ಯವಸ್ಥೆ. ಪೂರ್ತಿ ನೆರಳಿಗೆ ಛತ್ರಿಗಳನ್ನು ನಿರ್ಮಿಸಿ ಅತ್ಯಂತ ಹಸನುಗೊಳಿಸಿ ಸುಂದರವಾಗಿಸಿದ್ದರು ಇಡೀ ಪ್ರದೇಶವನ್ನು.

ಪೂರ್ಣ ಚಿತ್ರವನ್ನು ಬಿಡಿಸಿಟ್ಟು ರಾಯ್ ಮತ್ತು ಕ್ಲಿಂಟನ್ ದಂಪತಿಗಳ ನಡುವೆ ತಾನು ಇದ್ದ ಭಾವಚಿತ್ರವನ್ನು ಅವನ ಮುಂದಿಟ್ಟಳು.

''ಆ ಮಗುನೇ ನಾನು, ಕ್ಲಿಂಟನ್ ದಂಪತಿಗಳು ನನ್ನ ದತ್ತು ಪಡೆದಿದ್ದು, ಪೇಪರ್ ಎಲ್ಲೋ ಕಾಣೆಯಾಗಿದೆ. ಅನಾಥಾಶ್ರಮದ ಬಗ್ಗೆ ಸರ್ಯಾದ ಮಾಹಿತಿ ಸಿಕ್ತಾ ಇಲ್ಲ. ಹಳೆಯ ಕಟ್ಟಡದಲ್ಲಿನ ಸಂಸ್ಥೆ ಬೇರೆ ಕಡೆ ಷಿಫ್ಟ್ ಆಗಿದ್ಯಾ?'' ಕೇಳಿದಳು ನಿಧಾನವಾಗಿ.

ಸ್ವರದಲ್ಲಿನ ಮಧುರವಾದ ಆವೇಗ, ಹೇಳುವ ರೀತಿ, ಆಗಿನ ಅವಳ ಮುಖಭಾವ, ಎದೆಯಲ್ಲಿನ ತುಡಿತ - ಎಲ್ಲವು ಸುಂದರ ಕಾವ್ಯ ಓದುತ್ತಿದ್ದೇನೆಯೋ ಎನಿಸಿತು ಅನಿಕೇತನ್‌ಗೆ. ಅವನು ಈ ವಿಷಯದಲ್ಲಿ ಹೆಚ್ಚು ಸಹಾಯ ಮಾಡುವುದು ಸಾಧ್ಯವಿಲ್ಲವೆನಿಸಿತು.

''ಆ ಕಟ್ಟಡದ ಜೊತೆ ಸಂಸ್ಥೇನು ನೆಲಸಮ. ಅಲ್ಲಿನ ಮಕ್ಳು ಕೂಡ

ಬೇರೆ ಬೇರೆ ಅನಾಥಾಶ್ರಮಗಳಲ್ಲಿ ಆಶ್ರಯ ಪಡೆದು ದೊಡ್ಡವರಾದರೇನೋ, ನಂಗೂ ಆ ವಿಷ್ಯ ಗೊತ್ತಿಲ್ಲ. ಅನಾಥಾಶ್ರಮದಿಂದ ದೂರವಿಟ್ಟೆ ಬೆಳೆಸಿದ್ರು ಅಮ್ಮ. ಅವ್ರಿಗೆ ಅಂಥ ಸಂಸ್ಥೆಗಳ ಬಗ್ಗೆ ಕಾಳಜಿ ಇಲ್ಲ, ಒಂದು ರೀತಿಯ ಅಸಹ್ಯಭಾವ. ಅದ್ಕೇ ನಾನಾ ಕಾರಣಗಳು ಇರ್ಬಹ್ದು. ಅದ್ಕೇ ನಿಮ್ಮ ಬಗ್ಗೆ ಬೇರೆ ರೀತಿ ಹೇಳಿದ್ದು. ಮಾಲತಿ ಕೂಡ ಅಷ್ಟೆ'' ಹೇಳಿದ. ತನ್ನ ವರ್ತನೆಗೆ ಕಾರಣವನ್ನು ತಿಳಿಸಿದ. ಸಂಕೋಚದಿಂದ ಭೂಮಿ ಸೇರಿ ಬಿಡಬೇಕೆನಿಸಿತು ಅವಳಿಗೆ, ಕಣ್ಣಂಚು ಒದ್ದೆಯಾಗದಂತೆ ನೋಡಿಕೊಂಡಳು.

"ನಿಮ್ತಂದೇನ ಭೇಟಿ ಮಾಡ್ಬೇಕಿತ್ತು'' ಎಂದಳು.

'ಪ್ರಯೋಜನವಿಲ್ಲ' ಎನ್ನುವಂತೆ ತಲೆಯಾಡಿಸಿದವನು "ಅನಾಥಾಶ್ರಮದ ಬಗ್ಗೆ ತನಿಖೆ ಷುರುವಾದಾಗ, ಅಮ್ಮನ ಪ್ರತಿಭಟನೆ ಹೇಗಿತ್ತೆಂದರೆ ಮಾತಾಡೋದೇನು, ಮುಖ ನೋಡೋದು ಕೂಡ ಬಿಟ್ರು. ಅಂದು ಹೋದೋರು ಇಂದಿಗೂ ಬಂದಿಲ್ಲ. ಬರಬಹ್ದೂಂತ ಮಾತ್ರವಲ್ಲ ಜೀವಂತಿಕೆ ಇದ್ದಾರನ್ನೋ ನಂಬ್ಕೇ ಕೂಡ ಇಲ್ಲ'' ಇಡೀ ಚಿತ್ರವನ್ನೇ ಅವಳ ಮುಂದಿಟ್ಟ.

ತುಟಿಕ್ ಪಿಟಕ್ ಎನ್ನದೆ ಗೊಂಬೆಯಂತಾದಳು. ಗಾಳಿ ಕೂಡ ಸ್ತಬ್ಧವಾದಂತಾಯಿತು. 'ಕಟ್ಟಡದ ಜೊತೆ ಸಂಸ್ಥೆ ಕೂಡ ನೆಲಸಮ' ಅಂದರೆ ಯಾವುದೇ ಪಳೆಯುಳಿಕೆಗಳಿಲ್ಲ. ಹೇಗೆ ಹುಡುಕುವುದು? ಎಲ್ಲಿ ಅರಸುವುದು? ಇವಳಿಗೆ ಒಮ್ಮೆ ಕೂಡ ತಾಯ್ತಂದೆಯರನ್ನು ನೋಡೋ ಭಾಗ್ಯವಿಲ್ಲವೇ? ಶೂನ್ಯ ಆವರಿಸಿದಂತಾಯಿತು ಅವಳಿಗೆ. ಆದರೆ ಅವಳಲ್ಲಿನ ಅದಮ್ಯ ಆಕಾಂಕ್ಷೆ. ಸುಮ್ಮನೆ ಕೂಡಲಿಲ್ಲ, ಮೈ ಕೊಡವಿಕೊಂಡು ಎದ್ದಿತು.

"ಪ್ಲೀಸ್ ಹೆಲ್ಪ್ ಮೀ, ಸರ್. ನನ್ನ ತಾಯ್ತಂದೆಯರ್ನ ನೋಡೋಕಾಗದಿದ್ರೆ... ನನ್ನ ಮುಂದಿನ ಬದ್ಕಿಗೆ ಯಾವ್ದೇ ಲಕ್ಷ್ಯವಿಲ್ಲ. ಶೂನ್ಯದಲ್ಲಿ ಜೀವಿಸ್ಬೇಕಾಗುತ್ತೆ. ಅದ್ರ ಬದ್ಲು ಆತ್ಮಹತ್ಯೆ ಮೇಲು'' ಎಂದವಳು ಗಳಗಳ ಅತ್ತುಬಿಟ್ಟಳು ಮನದ ಆವೇಗ ಹತ್ತಿಕ್ಕಲಾರದೆ.

ಕರುಣೆಯಿಂದ ನೋಡಿದ ಅನಿಕೇತನ್. ಸಂಬಂಧಗಳ ಭಾವಸ್ಪಂದನದ ಅಪರೂಪದ ವೈಭವ ದೃಶ್ಯ. ನೋಡದ, ಹೆತ್ತ ಕೂಡಲೇ ಎಸೆದ ಮಾತಾಪಿತೃಗಳಿಗಾಗಿ ಈ ರೋಧನ. ಆ ಅದೃಷ್ಟವಂತರ ಬಗ್ಗೆ ತುಸು ಅಸೂಯೆ ಕೂಡ ಮೂಡಿತು.

"ಪ್ಲೀಸ್ ಸಖೀ, ಸದ್ಯಕ್ಕೆ ಈ ಹೆಸರನ್ನು ಸ್ವೀಕರಿಸಿ. ಅಳು ಒಳ್ಳೆಯದೇ, ಅದೇ ಪರ್ಯಾಯವಾಗೊಲ್ಲ. ಏನಾದ್ರೂ ಮಾಡೋಕೆ ಸಾಧ್ಯವೇನೋ ನೋಡ್ಡೋಣ. ಕನಿಷ್ಟ ಅನಾಥಾಶ್ರಮದ ಕಡತಗಳಾದ್ರೂ ಸಿಕ್ರೆ, ಅದ್ನ ಮೋಂಬತ್ತಿಯಾಗಿಟ್ಕೊಂಡ್ ಮುಂದುವರಿಯೋ ಪ್ರಯತ್ನ ಮಾಡ್ಬಹ್ದು" ಸಾಂತ್ವನ ಹೇಳಿದ. ಕಣ್ಣೊರೆಸಿಕೊಂಡು ಕೃತಜ್ಞತೆಯಿಂದ ನೋಡಿದಳು ರೂತ್.

ಬಿಸಿಲಿನ ಪ್ರಖರತೆ ಇದ್ದರೂ ಮೋಡದ ಜೊತೆ ಕಣ್ಣುಮುಚ್ಚಾಲೆಯಾಡುತ್ತಿದ್ದ ಸೂರ್ಯ ತನ್ನ ಕಿರಣಗಳಿಂದ ಅವು ಕೂಡ ಹಿಂದೆ ಬಿದ್ದಿಲ್ಲವೆನ್ನುವಂತೆ ತುಂತುರು ಮಳೆ ಎರಚುತ್ತಿತ್ತು ಭೂಮಿಗೆ. ಆಪ್ಯಾಯಮಾನವಾದ ದೃಶ್ಯ.

ಮಳೆಯ ತುಂತುರನ್ನೇ ನೋಡುತ್ತ ಯೋಚಿಸುತ್ತಿದ್ದ ಅನಿಕೇತನ್‌ಗೆ ವಾಸುದೇವಯ್ಯನನ್ನು ಯಾಕೆ ಪ್ರಶ್ನಿಸಬಾರದೆನಿಸಿತು. ಸ್ವಲ್ಪ ಹಿಂದಿನ ಅಂದರೆ ಅವನಪ್ಪನ ಕಾಲದ ಮನುಷ್ಯ. ಅನಾಥಾಶ್ರಮದ ಬಗ್ಗೆ ಅಷ್ಟಿಷ್ಟು ಗೊತ್ತಿರಬಹುದು ! ಅದರಿಂದೇನು ಹೆಚ್ಚು ಪ್ರಯೋಜನವಾಗಲಾರದೆನಿಸಿತು.

"ಬರ್ತೀನಿ ಸರ್, ನನ್ನಿಂದ ನಿಮ್ಮ ವೇಳೆ ವ್ಯಯವಾಗ್ಬಾರ್ದು" ಎಂದು ಎದ್ದಾಗ ನಗೆ ಬೀರಿದ ಮೆಚ್ಚಿಗೆಯಿಂದ "ಗುಡ್, ನೀವು ನ್ಯೂ ಯಾರ್ಕ್‌ನಲ್ಲಿದ್ರೂ ಇಲ್ಲಿನವ್ರಿಗಿಂತ ಹೆಚ್ಚಾಗಿ ಕನ್ನಡ ಮಾತಾಡ್ತೀರಾ. ವ್ಯವಸ್ಥಿತವಾಗಿ ಭಾರತಕ್ಕೆ ಬರುವ ಪ್ಲಾನ್ ಮಾಡ್ಕೊಂಡ್ಬಂದಿದ್ದೀರಾ. ಐ ಲೈಕ್ ಯು, ಹೇಗೂ ಬಂದಿದ್ದೀರಾ, ಊಟ ಮುಗ್ಸಿ ಕೊಂಡ್ಹೋಗಿ. ಆ ವೇಳೆಗೆ ವಾಸುದೇವಯ್ಯ ಕೂಡ ಬರ್ತಾರೆ. ಎಷ್ಟು ಉಪಯೋಗವಾಗುತ್ತೋ, ಮಾತಾಡಿದ ನಂತರವೇ ಗೊತ್ತಾಗೋದು" ಎಂದ. ಅವಳು ಸಮ್ಮತಿಸದಿರಲು ಕಾರಣವಿಲ್ಲ. ಗುರಿ ಮುಟ್ಟಬೇಕಾದರೇ ಇಲ್ಲಿಂದಲೇ ಸಾಗಬೇಕಿತ್ತು.

ವಾಚ್ ಕಡೆ ನೋಡಿದವನು "ನಮ್ಮ ಎಸ್ಟೇಟ್ ಕೂಡ ನೋಡ್ಬಹ್ದು, ಅಪ್ಪ ಹೊರಟ್ಹೋದ್ಮೇಲೆ ಇಲ್ಲಿಗ್ಬಂದು ಸೆಟ್ಲ್ ಆಗಿದ್ದು. ಅಮ್ಮ ಹಿಂದಿನ ಮನೆಯೇನು, ಆ ವಾತಾವರಣದಲ್ಲಿ ಇರೋಕೆ ಒಪ್ಲಿಲ್ಲ. ತುಂಬ ಸ್ಮೂತ್ ಮಾತ್ರವಲ್ಲ, ಒಂದು ತರಹ ಸ್ವಭಾವ. ಸಮಾಜ ಬಿಟ್ಟು ಬದ್ಕೇ ಇಲ್ಲಾಂತ ತಿಳಿದೋರು. ವಿಪರೀತದ ವಿಚಿತ್ರ ಸ್ವಭಾವ. ಈಗಂತು ಪ್ರತಿಯೊಬ್ರನ್ನೂ ಅನುಮಾನದ ದೃಷ್ಟಿಯಲ್ಲಿ ನೋಡ್ತಾರೆ. ಇಷ್ಟೆಲ್ಲ ಹೇಳೋಕೆ ಕಾರಣ ಅವ್ರ

ಮಾತು, ನಡತೆಯಿಂದ ನೀವು ಮನಸ್ಸಿಗೆ ಹರ್ಟ್ ಮಾಡ್ಕೋಬಾರ್ದು" ಎಂದವನು ಕೂಲಿಂಗ್ ಗ್ಲಾಸ್ ಏರಿಸಿ ಜೀಪ್ ಕಡೆ ನಡೆದ.

ದೊಡ್ಡ ಶ್ರೀಮಂತ ಎಸ್ಟೇಟ್. ಭಾರತಕ್ಕೆ ಬಂದ ಮೇಲೆ ಇಂಥ ಪ್ರಕೃತಿ ರಮ್ಯ ಸಂಪತ್ಭರಿತ ಪ್ರದೇಶವನ್ನು ನೋಡುತ್ತಿದ್ದುದು ಇಂದೇ. ಇಷ್ಟವೆನಿಸಿತು.

"ಭಾರತಕ್ಕೆ ಬಂದು ಎಷ್ಟು ದಿನವಾಯ್ತು?" ಕೇಳಿದ.

ಸಪ್ಪಗಾದಳು "ಹನ್ನೊಂದು ದಿನವಾಯ್ತು. ಅನಾಥಾಶ್ರಮ ಇದ್ದ ಸ್ಥಳ ಹುಡ್ಕೋದೇ ಪ್ರಯಾಸವಾಯ್ತು. ಸುಲಭವೆನಿಸಿಯೇನು ಬರ್ಲಿಲ್ಲ, ಆದ್ರೂ ಡ್ಯಾಡಿ 'ಇಂಪಾಜಿಬಲ್' ಎಂದಿದ್ರು. ನನ್ನ ಪ್ರಯಾಣ ಅವ್ರಿಗೆ ಸ್ವಲ್ಪವು ಇಷ್ಟವಿರ್ಲಿಲ್ಲ." ಹೇಳಿಕೊಂಡಳು. ಮನ ಬಿಚ್ಚಿ ಮಾತಾಡಲು ಯಾಕೋ ಹಿಂದೆಗೆಯಲಿಲ್ಲ ಅವಳು.

ಅನಿಕೇತನ್‌ಗೆ ನಗು ಬಂತು. ಭಾರತದವರಿಗೆ ಅಮೆರಿಕಾ ನೋಡುವ ಕನಸು, ಅಲ್ಲಿನ ಡಾಲರ್ ಆಕರ್ಷಣೆ, ಅಲ್ಲಿನ ತಂತ್ರಗಾರಿಕೆಯ ಮೇಲೆ ಕಣ್ಣು! ತನ್ನನ್ನು ಅನಾಥಾಶ್ರಮಕ್ಕೆ ಎಸೆದ ತಾಯಿತಂದೆಯರನ್ನು ನೋಡಲು ಅಮೆರಿಕಾದಿಂದ ಬಂದ ಹೆಣ್ಣಿನ ಬಗ್ಗೆ ಅವನಿಗೆ ಮರುಕ.

ಬಂಗ್ಲೆ ತಲುಪುವವರೆಗೂ ಅನಿಕೇತನ್ ಮಾತಾಡಲಿಲ್ಲ. ಜೀಪಿನಿಂದ ಹೊರಗೆ ಧುಮುಕಿದವನು ನಿಂತ "ಡೋಂಟ್ ಮೈಂಡ್, ನಿನ್ನ ಹೆಸರಿನ ಬಗ್ಗೆ ಕೇಳ್ಲಿಲ್ಲ, ಆರಾಮಾಗಿ ನಾನೇ ಸಖೀ ಅಂತನಾಮಕರಣ ಮಾಡ್ಬಿಟ್ಟೆ ನಿಂಗೆ ಇಷ್ಟವೆನಿಸುತ್ತೋ ಇಲ್ವೋ, ಸದ್ಯಕ್ಕೆ ನಮ್ಮ ಮನೆಯಲ್ಲಿ ಮಾತ್ರ ಇದೇ ಚಲಾವಣೆಯಲ್ಲಿರೋ ಹೆಸರು." ಹುಬ್ಬು ಕುಣಿಸಿ ಹೇಳಿದ. ಆತ್ಮೀಯವಾಗಿ ಬೆರೆತುಹೋಗುವ ವ್ಯಕ್ತಿತ್ವವೇನೋ ಎಂದುಕೊಂಡಳು.

ಡೈನಿಂಗ್ ಹಾಲ್ ನೋಡಿ ನಿಬ್ಬೆರಗಾದಳು. ಅವಳ ಇಡೀ ಫ್ಲ್ಯಾಟ್ ಕೂಡ ಡೈನಿಂಗ್ ಹಾಲ್ ಅಷ್ಟು ಇರಲಿಲ್ಲ. ಅದ್ಕಿಂತ ಇದು ದೊಡ್ಡದಾಗಿ ವೈಭವೋಪೇತವಾಗಿತ್ತು. ಶ್ರೀಮಂತಿಕೆಯನ್ನು ಲೆಕ್ಕ ಮಾಡಲು ಅವಳಿಂದಾಗಲಿಲ್ಲ. ವಿಶಾಲವಾದ ಡೈನಿಂಗ್ ಟೇಬಲ್ ಬೆಳ್ಳಿ ತಟ್ಟೆ, ಚಮಚ, ಪಾತ್ರೆ ಸ್ಪೂನ್‌ಗಳಿಂದ ಅಲಂಕಾರಗೊಂಡಿತ್ತು.

"ಕುತ್ಕೊಳ್ಳಿ....." ಅಂದವನು ಮಡದಿಗೆ ಏನೋ ಹೇಳಿ ಹೊರಗೆ ಹೋದವನು ಐದು ನಿಮಿಷ ಬಿಟ್ಟು ಬಂದ "ನಮ್ಮ ಫುಡ್" ಎಂದವನು ತಾಯಿಯ ಬರವನ್ನು ನೋಡಿ ಸುಮ್ಮನಾದ. "ಬಾಮ್ಮ ಯಾಕೆ

ನಾನ್ನಂದಿದ್ದೇ. ರೂಮಿನಲ್ಲಿರ್ಲಿಲ್ಲ'' ಎಂದ. ಆಕೆಯದು ಯಾವುದೇ ಪ್ರತಿಕ್ರಿಯೆ ಇಲ್ಲ. ಅಡಿಗೆಯವನು ಲಕ್ಷಣವಾಗಿ ಬಡಿಸಿದ. ಊಟ ಕೂಡ ರುಚಿಕರವೇ. ಬೆವರಿಬಿಟ್ಟಳು ರೂತ್. ಅನಿಕೇತ್‌ನ ತಾಯಿಯ ಮುಖದ ಸೀರಿಯಸ್‌ನೆಸ್ ನೋಡಿ. ಅವಳಿಗೆ ಭಯವೆ? ಆಕೆ ಮುಖ ಸಡಲಿಸಿದ್ದೇ ಇಲ್ಲ. ಇದು ಅರ್ಥವಾಗಿದ್ದು ಅನಿಕೇತ್‌ಗೆ ಮಾತ್ರ. ತನ್ನ ಪಾಡಿಗೆ ತಾನು ಊಟ ಮಾಡುತ್ತಿದ್ದಳು ಮಾಲತಿ. ಎರಡು ಕೈಗಳ ತುಂಬ ಇದ್ದ ಬಂಗಾರದ ಬಳೆಗಳ ನಡುವೆ ಇದ್ದ ಕೆಲವು ಗಾಜಿನ ಬಳೆಗಳು ಸದ್ದು ಮಾಡುತ್ತಿದ್ದವು. ಮಟ್ಟಸವಾಗಿ, ದೃಢವಾಗಿ, ಎತ್ತರವಾಗಿದ್ದ ಮಾಲತಿ ಸುಂದರವಾದ ದೇವತಾ ವಿಗ್ರಹದಂತೆ ಅಲಂಕಾರ ಮಾಡಿಕೊಂಡಿದ್ದಳು. ಕುತ್ತಿಗೆಯಲ್ಲಿ ಹಾಕಿದ್ದ ಚಿನ್ನದ ಸರಗಳ ಭಾರಕ್ಕೆ ಜಗ್ಗೀತೇನೋ ಕತ್ತೆನಿಸುತ್ತಿತ್ತು.

ಊಟ ಮುಗಿಸಿ ನೇರವಾಗಿ ಹೊರಗಿನ ಸಿಟ್ಟಿಂಗ್ ರೂಮಿಗೆ ರೂತ್ ಬಂದರೆ ಮಿಕ್ಕವರು ಎಲ್ಲೆಲ್ಲಿ ಹೋದರೋ, ಅರ್ಧ ಗಂಟೆಯ ನಂತರ ಅನಿಕೇತ್, ಮಾಲತಿ ದಂಪತಿಗಳು ಹೊರಗೆ ಬಂದರು.

"ಸಾರಿ, ಕೆಲವು ಮಾಮೂಲ್‌ಗಳು ತಪ್ಪಿಸುವಂತಿಲ್ಲ'' ಮಡದಿಗೆ ಕಣ್ಣೊಡೆದಾಗ ಅವನ ತುಟಿಗಳು ತಾಂಬೂಲದಿಂದ ಮಿಂಚುತ್ತಿತ್ತು. ಆ ಕ್ಷಣ ರೂತ್ ಕೆನ್ನೆಗಳಲ್ಲಿ ಕೂಡ ಕೆಂಪೊಡೆಯಿತು. ತಲೆ ಒಂದಿಷ್ಟು ಬಾಗಿ 'ಸುಖಿ ಜನ, ಬದುಕಿನಲ್ಲಿ ಸಂತೃಪ್ತರು' ಎಂದುಕೊಂಡಾಗ ಅವಳಿಗೆ ಕ್ಲಿಂಟನ್, ಡಯಾನಾನ ದಾಂಪತ್ಯದ ನೆನಪಾಗಿ ಸ್ವಲ್ಪ ಕಸಿವಿಸಿಯೆನಿಸಿತು. ಸದಾ ಜಗಳ, ಕೆಲವೊಮ್ಮೆ ವಾದ ವಿವಾದಗಳು ತಾರಕಕ್ಕೆ ಹೋಗಿ ಹೊಡೆದಾಟದ ಮಟ್ಟಕ್ಕೆ ನಿಂತರೂ ಹೇಗೋ ಅನುಸರಣೆಯ 'ಸಂಸಾರ ಮುರಿದುಬಿತ್ತು, ಎಲ್ಲಕ್ಕೂ ತೆರೆ ಹಾಕುವಂತೆ.

ಅವಳ ಕೆನ್ನೆಯಲ್ಲಿನ ಸಣ್ಣ ಒಂದು ಕಲ್ಲಿನ ಉಂಗುರ ನೋಡಿದ ಕೂಡಲೇ ಕಣ್ಣರಳಿಸಿದ ಮಾಲತಿ "ಈ ಉಂಗುರ ಎಲ್ಲಿ ತಗೊಂಡ್ರಿ, ತುಂಬ ಚೆನ್ನಾಗಿದೆ'' ಅವಳ ಬೆರಳನ್ನಿಡಿದು ನೋಡಿದಳು ನೂರು ಆಸೆಗಳಿಂದ. ಇದು ರೂತ್ ಮಟ್ಟಿಗಂತೂ ಅನಿರೀಕ್ಷಿತ. ಯಾವುದೋ ಮೂಡ್‌ನಲ್ಲಿದ್ದಳು "ಬೇಕೂಂದ್ರೆ ನೀವೇ ಇಟ್ಕೊಳ್ಳಿ'' ತೆಗೆಯಲು ಹೋದಾಗ ಅನಿಕೇತ್ ತಡೆದ.

"ದಿಸ್ ಈಸ್ ಟೂ ಮಚ್. ಸಖೀ. ನಿನ್ನ ನೀಳವಾದ ಬೆರಳುಗಳು ಅತ್ಯಂತ ಸುಂದರವಾಗಿದೆ. ಹಾಗೆಂದ ಮಾತ್ರಕ್ಕೆ ಕೊಡೋಕ್ಕಾಗುತ್ತ? ಮಾಲತಿ ಒಂದಿಷ್ಟು ಜ್ಯೂಸ್ ಕಳಿಸೋಕ್ಕಾಗುತ್ತ?' ಹೆಂಡತಿಯ ಕಡೆಗೆ

ತಿರುಗಿದ. ಮುದ್ದು ಮಡದಿಯ ಸ್ವಭಾವ ಬಲ್ಲ. ಎಲ್ಲಿಂದ ಎಲ್ಲಿಗೋ ಅರಸಿಕೊಂಡು ಬಂದ ಹೆಣ್ಣನ್ನು ವಿಧವಾಗಿ ಲೂಟಿ ಮಾಡುವುದು ಅವನಿಗಿಷ್ಟವಿಲ್ಲ.

ಮಾಲತಿಯೇನು ಅಲ್ಲಿಂದ ಜರುಗಲಿಲ್ಲ "ಮಣಿ, ಜ್ಯೂಸ್ ತಗೊಂಡ್ಬಾ" ಕೂಗಿ ಸುದ್ದಿ ಮುಟ್ಟಿಸಿದಾಗ ಮುಖ ಗಂಟಿಕ್ಕಿದ ಅನಿಕೇತ್ "ಅದ್ನ ನಾನೇ ಮಾಡ್ಬಹುದಿತ್ತು!" ಎದ್ದು ಹೋಗಿಬಿಟ್ಟ, ಬೇಸರದಿಂದ.

ಬಂಗ್ಲೆಯಲ್ಲಿ ಇರುವಷ್ಟು ಸಮಯವು ಮಾಲತಿ ಅವನ ಹಿಂದೆ ಮುಂದೆ ಇರುತ್ತಿದ್ದಳು ಎನ್ನುವುದಕ್ಕಿಂತ ಅವನ ಎದುರು ಸದಾ ಸಿದ್ಧ. ಆದರೆ ಬಂಗ್ಲೆ ದಾಟಿ ಹೊರಗೆ ಹೋದ ಮೇಲೆ ಮಾತ್ರ ಬರಬಾರದೆಂದು ಕಟ್ಟಪ್ಪಣೆ ವಿಧಿಸಿ ಗೆದ್ದುಕೊಂಡಿದ್ದ ತಾಯಿಯ ಸಹಕಾರದಿಂದ.

"ನೀವು ಮತ್ತೆ ಎಂದು ಅಮೆರಿಕಾಗೆ ಹೋಗ್ತೀರಾ ?" ಮಾಲತಿಯ ಪ್ರಶ್ನೆ ಒಂದು ರೀತಿಯಲ್ಲಿ ಮುಗ್ಧವಾಗಿತ್ತು. "ಒಂದೆರಡು ತಿಂಗ್ಳ ನಂತರ, ಭಾರತದಲ್ಲಿ ಒಂದಿಷ್ಟು ನೋಡೋ ಪ್ರದೇಶಗಳು ಇವೆ. ಅಂದರೆ ಸದ್ಯಕ್ಕೆ ಇಂಡಿಯಾಯೆಲ್ಲ ಸುತ್ತೋ ಇಚ್ಛೆಯೇನು ಇಲ್ಲ. ಕೆಲವು ತೀರಾ ಪುರಾತನ ಟೆಂಪಲ್‌ಗಳ ಬಗ್ಗೆ ಅಲ್ಲಿನ ಒಂದು ಮ್ಯಾಗಝೀನ್‌ಗೋಸ್ಕರ ಆರ್ಟಿಕಲ್ ಸಿದ್ಧ ಮಾಡ್ತಾ ಇದ್ದೀನಿ" ಹೇಳಿದಳು. ಅನಿಕೇತ್‌ನ, ಮಾತುಗಳಿಂದ ಸ್ವಲ್ಪ ಎಚ್ಚೆತ್ತುಕೊಂಡಿದ್ದಳು ರೂತ್ ಅರ್ಥಾತ್ ಸಖೀ ಹೊಸ ನಾಮಕರಣದಂತೆ.

"ಅದಕ್ಕೋಸ್ಕರ ಬಂದ್ರಾ, ನಂಗೆ ಅಮೆರಿಕಾ ಬಗ್ಗೆ ತುಂಬ ತಿಳ್ಯೋ ಇಂಟರೆಸ್ಟ್ ಇದೆ. ನೋಡೋಕ್ಕಿಂತು ತುಂಬ ಇಷ್ಟ. ಅಲ್ಲೇ ಇರೋದೂಂದ್ರೆ ತುಂಬ ಮಜಾ" ಎಂದಳು. ಆಸೆಯ ಬೆಟ್ಟದ ಮೇಲಿನ ನರ್ತನದಂತೆ ಕಂಡಿತು ಮಾಲತಿ ಮಾತುಗಳು. ಮುಗುಳ್ನಕ್ಕಳು ಸಖೀ....

ಅಷ್ಟರಲ್ಲಿ ಆಗಮಿಸಿದರು ಅನಿಕೇತನ ಅಮ್ಮ. ಆಳು ಮರದ ತಿಜೋರಿಯಂಥ ಪೆಟ್ಟಿಗೆಯನ್ನು ತಂದಿಟ್ಟು ಹೋದ ಆಕೆಯ ಮುಂದೆ.

'ಬಂದ ಬಂದವ್ರ ಮುಂದೆ ಒಡವೆ ಪ್ರದರ್ಶನ ಮಾಡೋದು ಒಳ್ಳೇದಲ್ಲ. ಅದ್ನೆಲ್ಲ ಅವ್ರ ಮನಸ್ಸಿಗೆ ನೋವಾಗ್ದಂತೆ ನಿವಾರಿಸ್ಬೇಕು. ಮುಂದೆ ಅಪಾಯಕ್ಕೆ ಕಾರಣವಾಗುತ್ತೆ' ಅನಿಕೇತ್ ಮಡದಿಯನ್ನು ಎಚ್ಚರಿಸಿದ್ದ. ಮಾಲತಿ ಅತ್ತೆಗೆ ಹೆದರುತ್ತಿದ್ದಳು. ಆಕೆಗೆ ಹುಚ್ಚೆಂಬ ಭೀತಿ ಹಾಗೆಂದು ಸಾಬೀತುಪಡಿಸಲು ಉಂಟು ಅಥವಾ ಇಲ್ಲ.

ಚಂಪಕವಲ್ಲಿ ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಬಂಗಾರದ ಕಲಾತ್ಮಕ ಕೀಲಿ

ಚೈನ್‌ನಲ್ಲಿದ್ದ ಕೀನಿಂದ ಆ ತಿಜೋರಿಯನ್ನು ತೆಗೆದು ಒಂದೊಂದೇ ಒಡವೆಯನ್ನು ಹೊರಗೆ ಜೋಡಿಸತೊಡಗಿದರು. ಕಲಾತ್ಮಕವಾದ ಹಳೆಯ ಕಾಲದ ಆಭರಣಗಳು, ಮೂವತ್ತು ಪವನಿನ ಪಟ್ಟಿ, ಎಂಟೆಳೆ ಚಕ್ರದ ಸರ, ದೊಡ್ಡ ಗಂಡಭೇರುಂಡ ಪದಕವಿದ್ದ ನಾಲ್ಕು ಎಳೆಯ ಮುತ್ತಿನ ಸರ, ಲಕ್ಷ್ಮಿ ಕಾಸಿನ ಸರ ಅದರ ಜೊತೆಗೆ ವಿವಿಧ ರೀತಿಯ ಸರಗಳು, ಡಾಬು, ಒಡ್ಯಾಣ, ಅಡ್ಡಿಗೆ ಚೈನು, ಕಿವಿಯ ವಿವಿಧ ರೀತಿಯ ಆಭರಣಗಳು, ಎಲ್ಲಕ್ಕಿಂತ ಹೆಚ್ಚಿಗೆ ಅವಳನ್ನು ಆಕರ್ಷಿಸಿದ್ದು ಬೆಳ್ಳಿಯ ಕಾಲಿನ ಚೈನ್. ಅಂಥ ದುಬಾರಿಯಲ್ಲ, ಬೆಳ್ಳಿಯ ಒಡವೆ ಚಿನ್ನದ ಜೊತೆಗೆ ಕಾಂಪೀಟ್ ಮಾಡಲಾಗದು.

ಅದೊಂದನ್ನು ಕೈಗೆತ್ತಿಕೊಂಡು ನೋಡಿದ ತಕ್ಷಣ ಇಟ್ಟುಬಿಟ್ಟಳು.

"ಈ ಒಡ್ವೇಗಳೆಲ್ಲ ನಂದು!" ಚಂಪಕವಲ್ಲಿ ಮೌನಾನ ಕತ್ತರಿಸಿ ನುಡಿದರು. ಆ ಕ್ಷಣ ಆಕೆಯ ಮುಖದಲ್ಲಿದ್ದುದು ಅಹಂಭಾವ, ಯಾಕೆ, ಏನು, ಅವಳಿಗೊಂದು ಅರ್ಥವಾಗಲಿಲ್ಲ.

ಒಡನೆ ಬಂದ ಅನಿಕೇತ್ ಗಾಬರಿಯೇನು ಆಗಲಿಲ್ಲ ಇದೊಂದು ಸಾಧಾರಣ ವಿಷಯ. ಒಡವೆ ಪೆಟ್ಟಿಗೆ ತಾಯಿಗೆ ಪಂಚಪ್ರಾಣವೆಂದು ಅವನಿಗೆ ಗೊತ್ತು. ದೀರ್ಘವಾಗಿ ಹೆಂಡತಿಯ ಕಡೆ ನೋಡಿದವನು ನಿಧಾನವಾಗಿ ಹೊರಕ್ಕೆ ಹೊರಳಿಸಿದ, ನೋಟವನ್ನು. ಕೆಲವು ಸಮಸ್ಯೆಗಳು ಸಮಸ್ಯೆಗಳಲ್ಲ, ಅದಕ್ಕೆ ಪರಿಹಾರವಿಲ್ಲ ಕೂಡ.

ಮೇಲೆದ್ದ ರೂತ್ "ಬರ್ತೀನಿ....." ಎರಡು ಕೈಗಳನ್ನು ಜೋಡಿಸಿದಳು ಆತ್ಮೀಯವಾಗಿ. ಈ ಕುಟುಂಬದಿಂದ ದೊಡ್ಡ ಉಪಕಾರವಾಗಿತ್ತು ಅವಳಿಗೆ. ಪೂರ್ತಿ ಮುಚ್ಚಿಯೇ ಹೋಯಿತು ಎನ್ನುವಾಗ ಕಿಂಡಿಯಿಂದ ಬೆಳಕಿನ ಪ್ರವೇಶ.

ನಾಲ್ಕು ಹೆಜ್ಜೆ ಮುಂದಕ್ಕೆ ಹೋದವನು ತಾಯಿಯ ಬಳಿ ನಿಂತು "ಅಮ್ಮ ಇವ್ರಿಗೆ ಸಹಾಯದ ಜೊತೆ, ಅವ್ರು ಬರ್ಯೊ ಪುಸ್ತಕಕ್ಕೆ ಒಂದಿಷ್ಟು ವಿಷಯ ಸಂಗ್ರಹಿಸಿ ಕೊಡಬೇಕಾಗಿದೆ" ಎಂದ ಶೀತಲ ಸ್ವರದಲ್ಲಿ.

ತಟ್ಟನೆ ತಿಜೋರಿಯನ್ನು 'ರಪ್' ಎಂದು ಮುಚ್ಚಿ ಎದ್ದವರು ದುರದುರನೆ ಅವಳ ಕಡೆ ನೋಡಿ ಎದ್ದು ಹೋದಾಗ ಮಾಲತಿ ತಣ್ಣಗೆ ಒಡವೆಗಳನ್ನ ಸಂದೂಕಕ್ಕೆ ಸೇರಿಸಿದವಳು ಕೊಂಡೊಯ್ಯುವಂತೆ ಆಳಿಗೆ ಹೇಳಿದಳು. ಅವನು ತೀರಾ ನಂಬಿಗಸ್ಥ, ಬಹಳ ಕಾಲದಿಂದ ಈ ಮನೆಯಲ್ಲಿ

ಇದ್ದವ. ಅವನ ಕೆಲಸ, ಕಾರ್ಯಗಳಲ್ಲಿ ಇದು ಬಹಳ ಮುಖ್ಯವಾದದ್ದು. ಶ್ರದ್ಧೆ, ಭಕ್ತಿಗಳಿಂದ ಒಯ್ಯುವವನ ಕಡೆ ನೋಡಿದಳು.

ಅರಳಿದ ದಳಗಳಂತೆ ಸಂತಸದಿಂದಿದ್ದ ಅನಿಕೇತ್‌ನ ಮುಖ ಬಾಡಿ, ಅಲ್ಲಿ ಕಾಠಿಣ್ಯತೆ ಇಣಕಿತು ಕೆಲವು ಕ್ಷಣಗಳಾದರೂ. ಹಿಂದೆಯೇ ಕೂಗಿ ಅಪ್ಪಳಿಸಿತು ಒಂದು ಸ್ವರ "ಕರುಣೆ, ಸೇವೆ, ಸಹಾಯ, ಸಹಕಾರ ಅಂತ್ಲೇ ನಿಮ್ಮಪ್ಪ ಹಾಳಾಗಿದ್ದು" ಮಾತುಗಳು ಬಲವಾದ ಕಲ್ಲುಗಳಂತೆ ಅಪ್ಪಳಿಸಿ ತಬ್ಬಿಬ್ಬುಗೊಳಿಸಿ ಆಳುವಂತೆ ಮಾಡಿತು ಅವಳನ್ನು, ಆದರೆ ಆಳಲಿಲ್ಲ. ಮುಖ ಭಯಗ್ರಸ್ತವಾಯಿತು.

ಮಡದಿಯ ಹೆಗಲ ಮೇಲೆ ಕೈಯಿಟ್ಟು "ಅಮ್ಮನ್ನ ನೋಡ್ಕೋಗು...." ಎಂದವನು ಬಗ್ಗಿ ಅವಳ ಕೆನ್ನೆಯ ಬಳಿ ಏನೋ ಪಿಸುಗುಟ್ಟಿದ. ಅವಳ ಮರದಂತಿದ್ದ ಮುಖದಲ್ಲಿ ಚುರುಕುತನವೊಡೆಯಿತು. ಎದ್ದು ಹೋದಳು.

"ಬನ್ನಿ... ಸಖೀ....." ಎಂದವ ಹೊರ ನಡೆದವನು ಜೀಪಿನ ಬಳಿಗೆ ಹೋಗುವವರೆಗೂ ಒಂದು ಮಾತು ಆಡದವನು ತಟ್ಟನೆ ಅವಳ ಕಣ್ಣುಗಳಲ್ಲಿ ನೋಟ ನೆಟ್ಟು "ಡೋಂಟ್ ವೈಂಡ್, ಅವ್ರ ಮಾನಸಿಕ ಸ್ಥಿತಿ ಸರಿಯಾಗಿಲ್ಲ. ನನ್ನಿಂದ ನಿಮ್ಗೆ ನೇರವಾಗಿ ಹೆಲ್ಪ್ ಆಗದಿದ್ರೂ, ಆ ದಿಕ್ಕಿನಲ್ಲಿ ಪ್ರಯತ್ನ ಮಾಡ್ತೀನಿ. ಅವರ್ಗೂ ನಮ್ಮಲ್ಲೇ ಉಳ್ಕೋಬಹ್ದು" ಎಂದಾಗ ಹಿಂಜರಿದಳು. ಅಮೀನಾಜಿ ಗುಡಿಸಲಿನಲ್ಲಿದ್ದ ವಾತಾವರಣ ಮತ್ತು ನವನೀತ್‌ನ ಮನೆಯ ಪರಿಸರಕ್ಕಿಂತ ಇಲ್ಲಿನ ಸ್ಥಿತಿ ವಿಭಿನ್ನವಾಗಿತ್ತು.

ಅವಳು ತುಟಿ ತೆರೆಯುವ ಮುನ್ನ ಅವನೇ ನಿರ್ಧಾರಯುತವಾಗಿ ಹೇಳಿದ "ವಾಸುದೇವಯ್ಯನ್ನ ಭೇಟಿ ಮಾಡ್ದ ತರುವಾಯ ಆ ಬಗ್ಗೆ ಯೋಚ್ಸಿದ್ರಾಯ್ತು. ಈಗ ಹತ್ತಿ."

ಜೀಪು ಒಂದು ಸುತ್ತು ಹಾಕಿ ಹೊರಟಾಗ ಮಣಿ ಪತ್ರ "ವಾಸುದೇವಯ್ಯನೋರು ಮನೆ ಹತ್ರ ಇದ್ದಾರೆ, ಅವ್ರಿಗೆ ಎಂತದ್ರೋ ಕಾಲು ನೋವಂತೆ ಅಯ್ಯನೋರೆ" ಕೂಗಿ ಹೇಳಿದ. ಆಳುಗಳ ಉಸ್ತುವಾರಿಯ ಜೊತೆ ಬಂಗ್ಲೆಯ ಕೆಲವು ಕೆಲಸಗಳನ್ನ ನೋಡಿಕೊಳ್ಳುತ್ತಿದ್ದರಿಂದ ಬೇರೆ ಆಳುಗಳಿಗಿಂತ ಸ್ವಲ್ಪ ಹತ್ತಿರದವ.

ಆ ಎಸ್ಟೇಟ್‌ನ ಅಂಚಿನಲ್ಲಿಯೇ ಇತ್ತು ಬಂಗ್ಲೆಯ ಸ್ವಲ್ಪ ಹಿಂಭಾಗದಲ್ಲಿ ಒಂದೇ ಮಾದರಿಯ ಕ್ವಾರ್ಟರ್ಸ್‌ಗಳು. ಅದರಲ್ಲಿನ ಸ್ವಲ್ಪ ಚೆನ್ನಾದ ಮನೆಯಲ್ಲಿ ವಾಸ ವಾಸುದೇವಯ್ಯನದು. ಹೆಚ್ಚು ಕಡಿಮೆ ಮೂವತ್ತು

ವರ್ಷದಿಂದ ಅಂದರೆ ಅನಿಕೇತ್ ಹುಟ್ಟುವ ಮೊದಲಿನಿಂದ ತಂದೆಯ ಜೊತೆ ವಾದ ಮಾಡುತ್ತಿದ್ದ. ಹಿಂದಿನ ಪಳೆಯುಳಿಕೆಗಳು ಅವಸಾನಗೊಂದು ಈಗ ಹೊಸ ಚಿಗುರುಗಳಿಗೆ ಇವನು ಹಿರಿಯನಾಗಿದ್ದ, ಹಳಬನಾಗಿದ್ದ.

ಮರದ ನೆರಳಿನಲ್ಲಿ ಜೀಪು ನಿಲ್ಲಿಸಿದಾಗ ಅಲ್ಲಲ್ಲಿ ಕೆಲಸ ಮಾಡುತ್ತಿದ್ದ ಆಳುಗಳು ಓಡಿ ಬಂದರು ಅತ್ಯಂತ ವಿನಯದಿಂದ ತಲೆಯ ಮುಂಡಸನ್ನು ಕೊಡವಿ ಸೊಂಟಕ್ಕೆ ಸಿಕ್ಕಿಸುತ್ತ.

"ವಾಸುದೇವಯ್ಯನ್ನ ಕರೀರಿ" ಹೇಳಿದ.

ಸ್ವಲ್ಪ ಕುಂಟುತ್ತಿದ್ದ ವಾಸುದೇವಯ್ಯ ಐದೇ ನಿಮಿಷದಲ್ಲಿ ಬಂದ "ಅದೇನು ಚಿಕ್ಕೆಜಮಾನ್ರೆ, ಹೇಳಿ ಕಳ್ಸಿದ್ರೆ ನಾನೇ ಬರ್ತಾ ಇದ್ದೆ. ಕಾಲು ನೋವಿನ ಬಗ್ಗೆ ಹೇಳಿದ್ದೆ. ಅಮ್ಮಾವ್ರಿಗೆ" ಹೇಳಿಕೊಂಡ ನೋವಿನ ಮುಖದಲ್ಲಿ, ತಾನು ಅನಾರೋಗ್ಯದ ಸೂಚನೆ ಕೊಟ್ಟರೇ ಎಲ್ಲಿ ಕೆಲಸದಿಂದ ತೆಗೆದುಬಿಡುವರೋ ಎನ್ನುವ ಭಯ ಕೂಡ.

ಕಣ್ಣಲ್ಲಿಯೇ ಸೂಚಿಸಿದ ವಿಷಯ ಅರುಹುವಂತೆ ಅನಿಕೇತ್ ಸಖೀಗೆ. ನಂತರ ಪರಿಚಯಿಸಿದ "ಇವ್ರು ತಂದೆ ಸ್ನೇಹಿತರ ಮಗ್ಳು. ಅಮೆರಿಕಾದಿಂದ ಬಂದಿದ್ದಾರೆ, ಇಲ್ಲಿನ ಅನಾಥಾಶ್ರಮ. ಅನಾಥಾಲಯಗಳ ವಿಷ್ಯ ತಿಳ್ದು ಪುಸ್ತಕ ಬರೆಯಲು. ನಮ್ಮ ಅನಾಥಾಲಯದ ಬಗ್ಗೆ ನಿಂಗೆ ಗೊತ್ತಿರೋದೆಲ್ಲ ಹೇಳು" ಎಂದವನು ಅವಳಿಗೆ ಮೊದಲೇ ಹೇಳಿದ್ದರಿಂದ ಹೊರಟುಬಿಟ್ಟ. ತನ್ನೆದುರು ಕೆಲವು ವಿಚಾರಗಳು ಹೊರಬರದು ಮಾತ್ರವಲ್ಲ, ಅವು ಯಥಾ ಚಿತ್ರವಾಗಿ ಬಂಗ್ಲೆಯನ್ನು ಪ್ರವೇಶಿಸುತ್ತದೆಯೆಂದು ಅವನಿಗೆ ಗೊತ್ತು.

"ಏನಿದೆ ತಾಯಿ, ಬರ್ಯೋಕೆ. ಅದು ಮುಚ್ಚಿಹೋಯಿತು ತುಂಬ ವರ್ಷಗಳ ಹಿಂದೇನೆ. ಆಗಾಗ ನಾನು ಯಜಮಾನ್ರ ಜೊತೆ ಹೋಗ್ತಾ ಇದ್ದೆ, ಅನ್ನೋದ್ನ ಬಿಟ್ರೆ ನಂಗೇನು ಗೊತ್ತಿಲ್ಲ ಅಂದ್ಕೋಬೇಕು." ನಿರುತ್ಸಾಹ ತೋರಿ. ವಾಸುದೇವಯ್ಯ ಏನು ಹೇಳದಿದ್ದರೆ, ಹುಡುಕಾಟದ ಬಾಗಿಲೇ ಮುಚ್ಚಿಹೋಗುತ್ತದೆಯೆಂದು ಗೊತ್ತು. ನೂರರ ಎರಡು ಹಸಿರು ನೋಟುಗಳನ್ನು ಅವನ ಮುಂದೆ ಹಿಡಿದಳು.

"ಇದ್ನ ಇಟ್ಕೊಳ್ಳಿ, ಚೆನ್ನಾಗಿ ನೆನಪಿಸ್ಕೊಂಡೇ ನಾಳೆ ಹೇಳು. ನಿಂಗೆ ಇನ್ನು ಹಣ ಸಿಗುತ್ತೆ. ನನ್ನ ಬರವಣಿಗೆಗೆ ಈ ಮುಚ್ಚಿಹೋದ ಅನಾಥಾಲಯರು ಇಂಪಾರ್ಟೆಂಟ್ ಆಗುತ್ತೆ. ನಿಂಗೆ ಗೊತ್ತಿರೋಷ್ಟು,

ನೆನಪಿನಲ್ಲಿರೋಷ್ಟು ವಿಷ್ಯ ಹೇಳಿದ್ರೆ ಸಾಕು'' ಉತ್ಸಾಹ ಮೂಡಿಸುವಂತೆ ಹೇಳಿದಳು.

ಬಹಳ ನಿರಾಕರಿಸಿದ ನಂತರವೇ ಅವನು ನೋಟುಗಳನ್ನು ಪಡೆದಿದ್ದು, ಹಣದ ಮೇಲೆ ಆಸೆ ಯಾರಿಗೆ ಇರೋಲ್ಲ? ಅವನಿಗೆ ಅಂಥ ಮಹತ್ತರ ವಿಷ್ಯವೇನು ಗೊತ್ತಿರಲಿಲ್ಲ. ಹಣ ಬರೋವಾಗ ಅಷ್ಟೋ ಇಷ್ಟೋ ಹೇಳೋಂದರಲ್ಲಿ ತಪ್ಪೇನಿದೆ, ಚಿಕ್ಕ ಯಜಮಾನರ ಪರ್ಮಿಷನ್ ಸಿಕ್ಕ ಮೇಲೆ ಎಂದು ಯೋಚಿಸಿಯೇ ಅವನು ನಿರ್ಧಾರಕ್ಕೆ ಬಂದಿದ್ದು.

''ತಿಳಿದಿರೋಷ್ಟು ಹೇಳ್ತೀನಿ'' ಎಂದಾಗ ಇನ್ನೆರಡು ನೋಟುಗಳನ್ನು ಅವನ ಕೈಯಲ್ಲಿಟ್ಟು ಹೋಟಲ್‌ನ ವಿಳಾಸವಿರೋ ಕಾರ್ಡನ್ನು ಕೊಟ್ಟಳು ''ರೂಂ ನಂಬರ್ ಇದ್ರಲ್ಲಿ ಗುರುತು ಹಾಕಿದೆ. ಅಲ್ಲಿಗೆ ಬಂದ್ಬಿಡು. ನಂಗೆ ಹೆಚ್ಚಿಗೇನು ವಿಷ್ಯ ಬೇಡ, ತಿಳಿದಿರೋಷ್ಟು ಹೇಳಿದ್ರೆ ಸಾಕು'' ಇನ್ನಷ್ಟು ಒತ್ತಾಯವನ್ನೇರಿದಳು ಅವನ ಮೇಲೆ. ಅವಳು ಗುರಿ ತಲುಪಬೇಕಾದರೆ ಒಂದಿಷ್ಟು ಸಮಸ್ಯೆಗಳನ್ನೆದುರಿಸಬೇಕಿತ್ತು. ಆದರೆ... ಆ ಕ್ಷಣ. ಸಖಿಯ ಮೈ ಪುಳಕಿತಗೊಂಡಿತು.

ಬೀಳ್ಕೊಟ್ಟು ಬರುವಾಗ ಹೊರ ಗೇಟಿನ ಬಳಿಗೆ ಬಂತು ಜೀಪು ''ಹತ್ತಿ ನಿಮ್ಮನ್ನು ಡ್ರಾಪ್ ಮಾಡಿ ನಂದೊಂದಿಷ್ಟು ಕೆಲ್ಸ ಇದೆ, ಮುಗ್ಸಿಕೊಂಡ್ಬರ್ತೀನಿ'' ಹೇಳಿದ.

ದಾರಿಯಲ್ಲಿ ವಾಸುದೇವಯ್ಯ ಹೇಳಿದನ್ನು ಹೇಳಿದಳಷ್ಟೆ. ನಕ್ಕುಬಿಟ್ಟ ಅನಿಕೇತ್. ''ಇನ್ನೊಂದು ಫಾರ್ಮಾಲಿಟೀಸ್ ಅನುಸರಿಸಿದ್ಮೇಲೆ ನಿಮ್ಮ ಕೆಲ್ಸ ಈಸೀಯಾಗಿರ್ಬೇಕು'' ಎಂದ ಅರ್ಥಗರ್ಭಿತನಾಗಿ. ಮೊದಲು ಅವಳಿಗೆ ಅರ್ಥವಾಗದಿದ್ದರೂ ನಂತರ ಹೊಳೆಯಿತು. ಗಣಪತಿಗಳು ಲೋಕಾಭಿರಾಮವಾಗಿ ಕೆಲವು ಮಾತುಗಳನ್ನು ಹೇಳಿಕೊಂಡಿದ್ದನ್ನು ಇಲ್ಲಿ ಬಳಸಿಕೊಂಡಿದ್ದಳು. ಪೆಚ್ಚು ಮುಖ ಮಾಡಿ ಕ್ಷಮೆ ಯಾಚಿಸಿದಳು. ''ಎಕ್ಸ್‌ಕ್ಯೂಜ್ ಮೀ. ಒಳ್ಳೆ ಜಾಬ್, ನಾನು ರಜಾ ಪಡೆದು ಬಂದಿರೋದು ಮೂರೇ ತಿಂಗ್ಳು. ಆ ಪೀರಿಯಡ್ ಮುಗ್ದ ಮರುದಿನ ನಾನು ಹಾಜರಾಗದಿದ್ರೆ ಕೆಲ್ಸದಿಂದ ವಜಾ ಮಾಡ್ತಾರೆ. ಎರ್ಡು ಕಾರಿದ್ರೂ ನಾನು ಆಫೀಸ್‌ಗೆ ಬಸ್ಸಿನಲ್ಲೇ ಬರ್ಬೇಕಿತ್ತು, ನನ್ನ ಕಾರಿನ ಪಾರ್ಕಿಂಗ್‌ಗೆ ಸ್ಥಳ ಇಲ್ಲದಿದ್ದರಿಂದ, ಈಚೆಗೇನೇ ಸೀನಿಯಾರಿಟಿ ಪ್ರಕಾರ ಸ್ಥಳ ಸಿಕ್ಕಿರೋದು. ಮತ್ತೆ ಸಮಸ್ಯೆಗಳ್ನ ಎದುರಿಸ್ಬೇಕಾಗುತ್ತೆ. ವಾಸುದೇವಯ್ಯ ವಿಷ್ಯ ತಿಳಿಸೋಕೆ

ಇಂಟರೆಸ್ಟ್ ತೋರ್ಲಿಲ್ಲ, ಅದ್ಕೆ ಹಣ ಕೊಟ್ಟೆ" ವಿವರಿಸಿದಳು. ಮಾತಾಡಲಿಲ್ಲ ಅನಿಕೇತ್. ಸ್ವಲ್ಪ ಹಣಕ್ಕೆ ಹಾತೊರೆಯುವ ಮನುಷ್ಯನೇ ವಾಸುದೇವಯ್ಯ ಎಂದು ಅವನಿಗೆ ಗೊತ್ತು. ಅದನ್ನು ರೂಢಿಗೆ ತಂದವರು ಮನೆಯ ಹೆಂಗಸರೆಂದು ಗೊತ್ತುಂಟು.

ಹೋಟಲ್ ಮುಂದೆ ಕಾರು ನಿಲ್ಲಿಸಿದಾಗ ಇಳಿದವಳು "ಬನ್ನಿ, ಟೀ ತಗೊಂಡ್ಹೋಗ್ಬಹುದ್ದು. ಒಂಟಿಯಾಗಿ ಬಂದಿಳಿದಾಗ ಲೋನ್ಲೀನೆಸ್ ಕಾಡ್ತು. ಈಗ....." ಕಣ್ತುಂಬಿತು. ಹೃದಯ ಭಾರವೆನಿಸಿತು.

ಮುಗ್ಧ ಮುಖದ ಹಿಂದಿನ ಭಾವಗಳನ್ನು ಅರ್ಥ ಮಾಡಿಕೊಂಡ ಅನಿಕೇತ್ ಇಳಿಯುವ ವೇಳೆಗೆ, ನವನೀತ್ ಬಂದವನು ಸಣ್ಣ ಹಿಡಿ ಇರುವ ಪುಟ್ಟ ಕಿಟ್‌ನ ಅವಳ ವಶಕ್ಕೊಪ್ಪಿಸಿ "ಟ್ಯಾಕ್ಸಿಯಲ್ಲೇ ಇತ್ತು, ಮೇಡಮ್, ಮುಂದಿನ ಸ್ಟಾಂಡ್‌ನಲ್ಲಿ ಇರ್ತೀನಿ ಏನಾದ್ರೂ... ಎಲ್ಲಿಗಾದ್ರೂ ಹೋಗ್ಬೇಕಾದ್ರೆ ಹೇಳ್ಕಳ್ಸಿ" ಎಂದವನು ಒಮ್ಮೆ ಅನಿಕೇತ್‌ನತ್ತ ನೋಟವರಿಸಿ ಹೋದಾಗ ಅವನ ಹುಬ್ಬೇರಿತು. ಅರಿವಾಗದಂತೆ ತುಟಿಯಂಚನ್ನು ನಗು ಅಪ್ಪಿತು 'ಹೀರೋ ಅಲ್ಲದಿದ್ರೂ ವಿಲನ್ ಅಲ್ಲ' ಎಂದುಕೊಂಡವನು ತಂಪು ಕನ್ನಡಕವನ್ನು ಬೆರಳಿನಿಂದ ಹಿಂದಕ್ಕೆ ತಳ್ಳಿ ಸರಿಯಾಗಿ ಕೂಡಿಸಿದ.

ಲಿಫ್ಟ್‌ನಲ್ಲಿ ಆರನೇ ಅಂತಸ್ತಿನಲ್ಲಿರುವ ರೂಮಿಗೆ ಹೋದಾಗ ನಗುಮೊಗದಿಂದ ಬರಮಾಡಿಕೊಂಡಳು. ಟೇಬಲ್ ಮೇಲಿರುವ ಫೋಟೊ ಅವನ ಗಮನ ಸೆಳೆಯಿತು. ಕ್ಲಿಂಟನ್ ಮತ್ತು ಡಯಾನ ದಂಪತಿಗಳದು.

"ನನ್ನ ಮಮ್ಮಿ ಡ್ಯಾಡಿ....." ಅರ್ಥ ಮಾಡಿಕೊಂಡಂತೆ ಹೇಳಿದವಳ ಮುಖದ ಮೇಲೆ ವ್ಯಥೆಯ ನೆರಳಾಡಿತು. ಅವರಿಬ್ಬರೂ ಜೊತೆಯಾಗಿದ್ದರೇ ಚೆನ್ನಾಗಿತ್ತೂಂತ ಎಷ್ಟೋ ಸಲ ಅಂದುಕೊಂಡಿದ್ದಳು. ಸಾಧ್ಯವೇ? ಈಚೆಗೆ ಅದು ಅಸಾಧ್ಯವಾಗಿ ಕಾಣುತ್ತಿರಲಿಲ್ಲ.

"ಮೇಡ್ ಫಾರ್ ಈಚ್ ಅದರ್ ಅನ್ನೋ ಹಂಗಿದ್ದಾರೆ, ಗುಡ್ ಪೇರ್" ಫೋಟೊ ಫ್ರೇಮನ್ನು ಕೈಯಲ್ಲಿಡಿದು ಮೆಚ್ಚಿಗೆಯಿಂದ ನುಡಿದ. ಪರ್ಸ್‌ನ ಮಂಚದ ಫ್ರೇಮ್‌ನ ಮೇಲಿಟ್ಟವಳು "ಹಾಗೇನಿಲ್ಲ, ಅವ್ರುಗಳ ಮಧ್ಯೆ ತುಂಬ ಭಿನ್ನಾಭಿಪ್ರಾಯವೇ ಇತ್ತು, ಸದಾ ಜಗ್ಳ ಆಡ್ತಾ ಇದ್ರು. ಈಗ ಬೇರೆ ಬೇರೆ ಇದ್ದಾರೆ. ಈಗ ಅವರವರದ್ದೇ ಮಕ್ಳು ಇದ್ದಾರೆ. ಮಮ್ಮಿ ಮಗ ಟೆಡ್ಡಿ ತುಂಬ ಸ್ಮಾರ್ಟ್. ಆಗಾಗ ಫೋನ್ ಮಾಡ್ತಾನೆ. ವೆಕೇಷನ್ ಬಂದಾಗ

ನಂಗೆ ಜೊತೆಯಾಗ್ತಾನೆ'' ಎಂದಳು. ಟೆಡ್ಡಿಯ ವಿಷಯ ಬಂದಾಗ ಕಮಲದ ದಳಗಳಂತೆ ಅವಳ ಮುಖ ಅರಳಿತು.

'ಅಯ್ಯೋ' ಎನಿಸಿತು ಅವನಿಗೆ. 'ಪಾಪಿ ಸಮುದ್ರ ಹೊಕ್ಕರೂ ಮೊಳಕಾಲುದ್ದ ನೀರು' ಗಾದೆಯ ಮಾತಾದರೂ ಕೆಲವರ ಬದುಕಿಗಂತು ಪೂರ್ಣವಾಗಿ ಅನ್ವಯಿಸುತ್ತೆ.

ಟೀ ಕುಡಿದ ನಂತರ ಗಂಭೀರವಾಗಿ ''ಡೋಂಟ್ ಮೈಂಡ್, ನಾನಂತು ನಿಮ್ಮನ್ನ ಸಖೀ ಅಂತ್ಲೇ ಕೂಗೋದು. ಸದ್ಯಕ್ಕೆ ಭಾರತದಲ್ಲಿ ಇರೋವರೆಗಾದ್ರೂ ಈ ಹೆಸರು ಇರ್ಲೀಂತ, ನಿಮ್ಮದೇನು ಅಭ್ಯಂತರವಿಲ್ವಾ ?'' ನಯವಾಗಿ, ನುಡಿದ, ಅವಳ ಕಣ್ಣಿನ ಆಳದಲ್ಲಿ ಒಪ್ಪಿಗೆ ಇದೆಯೋ, ಇಲ್ಲವೋಂತ ಪರೀಕ್ಷಿಸುತ್ತ. ನಯವಾಗಿ ಮಿನುಗಿದ ನಯನಗಳಲ್ಲಿ ಸಮ್ಮತಿ ಸಿಕ್ಕಿತು. ಹರ್ಷಗೊಂಡ.

ತುಂಬು ಸ್ನೇಹದಿಂದ ಮಾತಾಡಿದ್ದು ಒಂದು ಮುಖ್ಯವಾದ ಕಾರಣಕ್ಕಾಗಿಯೇ. ಹೆತ್ತವರು ಸಿಗಬಹುದು, ಇಲ್ಲದಿರಬಹುದು. ಎರಡರಿಂದಲೂ ನೋವು ಅನಿವಾರ್ಯವೆಂದು ಅವನಿಗೆ ಗೊತ್ತು.

ಟೀಯ ನಂತರ ''ಒಂದ್ಮಾತು, ನನ್ನ ಪ್ರಕಾರ ನೀವು ಹೊರಟಿರೋದು ಸಾಹಸಕ್ಕೇನೆ ! ಎಂಥ ಮಕ್ಳು ಅನಾಥಾಶ್ರಮಕ್ಕೆ ಬರೋದು ? ಅವ್ರಿಗೆ ಬೇಡವಾದ ಸಂತಾನ ಬೆಳ್ಯೋದು ಅನಾಥಾಶ್ರಮಗಳಲ್ಲಿ. ಅಂಥ ಮಗು ತಮ್ಮನ್ನು ಹುಡ್ಕೀ ಬರೋದು ಅವ್ರಿಗೆ ಇಷ್ಟವಾಗೊಲ್ಲ'' ಅತ್ಯಂತ ವಿವೇಕದಿಂದ ಎಚ್ಚರದ ನುಡಿಗಳನ್ನಾಡಿದ. ತಟ್ಟನೆ ಮುತ್ತುಗಳಂತೆ ಅವಳ ಕಣ್ಣಿಂದ ಕಂಬನಿ ಚಿಮ್ಮಿತು. ಕೈನಿಂದೊರೆಸಿಕೊಂಡವಳು ಮುಖವನ್ನು ಬೇರೆಡೆಗೆ ತಿರುಗಿಸಿಕೊಂಡು ತನ್ನನ್ನು ತಾನೇ ಸಮಾಧಾನಿಸಿಕೊಂಡು ನಂತರ ಅವನತ್ತ ತಿರುಗಿದ್ಲು.

''ಐ ನೋ ಸರ್, ಆದ್ರೂ ನಂಗೆ ಅವ್ರನ್ನ ನೋಡೋ ಇಚ್ಛೆ. ನಂಗೆ ಬುದ್ಧಿ ಬಂದಾಗ್ನಿಂದ ಇಂಥದೊಂದು ಆಸೆಯನ್ನು ಹತ್ತಿಕ್ಕಿ, ಹಣ ಉಳ್ಸಿ ಭಾರತಕ್ಕೆ ಬಂದಿದ್ದೀನಿ. ನಂಗೆ ಅವ್ರಿಂದ ಏನು ಬೇಕಿಲ್ಲ. ಜಸ್ಟ್ ಒಮ್ಮೆ ನೋಡ್ಬೇಕು. ಅದೊಂದು ನನ್ನ ಬದ್ಕಿನ ಅಮೂಲ್ಯ ಕ್ಷಣ. ನನ್ನ ಹುಟ್ಟು ಹೇಗಾದ್ರಾಗ್ಲೀ ನಂಗೂ ಒಬ್ಬ ಅಮ್ಮ ಖಂಡಿತ ಇರ್ತಾಳೆ. ಅವ್ಳನ ನೋಡ್ಬೇಕೂಂತ ಅಂದ್ಕೊಳ್ಳೋದು ತಪ್ಪಾ ? ಪ್ಲೀಸ್ ಟೆಲ್ ಮಿ ಸರ್'' ಬಿಕ್ಕಿ ಬಿಕ್ಕಿ ಎಳೆ ಮಗುವಿನಂತೆ ಅತ್ತಳು. ಸಣ್ಣ ಮಗುವೊಂದು [illegible]ಗಿ

ಹಂಬಲಿಸುವಂತೆ, ತಂದೆಗಾಗಿ ರೋಧಿಸುವಂತೆ ಕಂಡಿತು. ಅವಳನ್ನು ಅವಳ ಪಾಡಿಗೆ ಬಿಟ್ಟು ರೂಮಿನಿಂದ ಹೊರಗೆ ಹೋದ.

ಇದೆಲ್ಲ ಇಷ್ಟವಾಯಿತು. ಆಪ್ಯಾಯಮಾನವಾಗಿ ಕಂಡಿತು ಅವಳಿಗೆ. ಏನು ಮಾಡದ ನಿರ್ದಾಕ್ಷಿಣ್ಯವಾಗಿ ಹೊರಗೆ ತಳ್ಳಿದ ತಾಯ್ತಂದೆಯರ ಬಗೆಗಿನ ಒಲವು ಆಶ್ಚರ್ಯವೆನಿಸಿತು.

ಮತ್ತೆ ಒಳಗೆ ಬರುವ ವೇಳೆಗೆ ಒಂದಿಷ್ಟು ಸುಧಾರಿಸಿಕೊಂಡು ಮುಖ ತೊಳೆದು ಬಂದವಳು "ಸಾರಿ...." ಎಂದಳು ಸಂಕೋಚದಿಂದ.

"ಅದ್ನ ನಾನು ಕೇಳ್ಬೇಕಿತ್ತು. ಆಲ್ ದಿ ಬೆಸ್ಟ್. ಆ ಕ್ಷಣದ ನಿಮ್ಮ ಸಂತೋಷದಲ್ಲಿ ನಾನು ಕೂಡ ಪಾಲುದಾರನಾಗಲು ಇಷ್ಟಪಡ್ತೀನಿ. ಬರ್ತೀನಿ" ಎಂದ ಪಶ್ಚಾತ್ತಾಪದ ಸ್ವರದಲ್ಲಿ.

ಲಿಫ್ಟ್‌ನಲ್ಲಿ ಅವನ ಜೊತೆಯಲ್ಲಿ ಇಳಿದು ಬಂದು ಜೀಪಿನವರೆಗೂ ಬೀಳ್ಕೊಟ್ಟಳು. "ವಾಸುದೇವಯ್ಯ ನಾಳೆ ಇಲ್ಲಿಗೆ ಬರೋಕೆ ಒಪ್ಕೊಂಡಿದ್ದಾರೆ. ಮತ್ತೇನಾದ್ರೂ ಅವ್ರಿಗೆ ತೊಂದ್ರೆಯಾದ್ರೆ....." ಅವಳ ಅನುಮಾನಕ್ಕೆ ಜೋರಾಗಿ ನಕ್ಕುಬಿಟ್ಟ. ಪರಿಶುಭ್ರ ನಗೆ. ತುಂಬು ರಾತ್ರಿಯಲ್ಲಿ ಅರಳು ಚೆಲ್ಲಿದಂಥ ಬೆಳದಿಂಗಳಿನ ನಗೆ.

ಸ್ಟೇರಿಂಗ್ ವ್ಹೀಲ್ ಮೇಲೆ ಕೈ ಇಟ್ಟವನು "ಡೋಂಟ್ ವರೀ ಮೇಡಮ್, ವಾಸುದೇವಯ್ಯ ಬರ್ತಾನೆ" ಸ್ವಿಚ್ ಕೀ ಅದುಮಿ ಸ್ಟಾರ್ಟ್ ಮಾಡಿದ. ಜೀವ ತುಂಬಿಕೊಂಡ ಚಕ್ರಗಳು ಮುಂದಕ್ಕೆ ಉರುಳಿದವು.

'ಬ್ರಿಲಿಯಂಟ್' ಅಂದುಕೊಂಡ. ಹೆಂಡತಿ, ತಾಯಿ ಎಲ್ಲ ಒಳ್ಳೆಯವರೇ, ಒಬ್ಬರಿಗೆ ಕೇಡು ಬಗೆಯುದ ಜನ ತಮ್ಮ ಸುತ್ತಲೂ ಬಂದು ವರ್ತುಲ ನಿರ್ಮಿಸಿಕೊಂಡಿದ್ದರು. ಅದನ್ನು ಬೇರೆಯವರು ಸಮೀಪಿಸುವುದು ಕೂಡ ಇಷ್ಟಪಡರು. ಅವನ ಮೇಲೆ ಕೂಡ ಒಂದು ಸಿ.ಬಿ.ಐ. ಸ್ಕ್ವಾಡ್. ಇದು ಆರೋಗ್ಯಕರ ಲಕ್ಷಣವಲ್ಲ. ತಿಳಿ ಹೇಳಿದ್ದ, ವಿಶ್ವಾಸಕ್ಕೆ ತೆಗೆದುಕೊಂಡು ಪರಿಣಾಮವನ್ನು ಬಿಡಿಸಿಟ್ಟರು. ಹಿಂದೆಗೆದಿರಲಿಲ್ಲ. ಮಡದಿಯನ್ನು ಹದ್ದುಬಸ್ತಿನಲ್ಲಿ ಇಡಬಹುದಿತ್ತೇನೋ, ಪರಿಸ್ಥಿತಿಗಳು ಅವಕಾಶ ಕೊಡಲಿಲ್ಲ. ಮತ್ತೊಬ್ಬ ಅರೆಹುಚ್ಚಿಯನ್ನಾಗಿ ಇಡೀ ಮನೆಯ ನೆಮ್ಮದಿಯೊಂದೇ ಅಲ್ಲ ಎಲ್ಲಾ ನಾಶವಾಗಿಬಿಡುವ ಅಪಾಯವಿತ್ತು.

ಬಂಗ್ಲೆಗೆ ಹಿಂದಿರುಗಿದಾಗ ವಾಸುದೇವಯ್ಯನ ಹಾಜರಿ ಇತ್ತು.

ಪೆಚ್ಚುಮುಖ, ಅತ್ತೆ ಸೊಸೆ ಮುಖ ದುಮ್ಮಿಸಿ ಕೂತಿದ್ದ ಸ್ಥಿತಿಯನ್ನು ನೋಡಿಯೇ ಕೆಲವು ನಿಮಿಷಗಳ ಹಿಂದಿನ ಚಿತ್ರವನ್ನು ಊಹಿಸಿದ. ವಿಷಯ ಅವನವರೆಗೂ ಬರುವುವರೆಗೂ ಕಾಯುವುದು ಬುದ್ಧಿವಂತಿಕೆ. ಇದನ್ನು ಅನುಸರಿಸಿಕೊಂಡು ಬರುತ್ತಿದ್ದ.

ಹುಬ್ಬೆತ್ತಿ ಏನು ಎನ್ನುವಂತೆ ವಾಸುದೇವಯ್ಯನ ಕಡೆ ನೋಡಿದ. ಸತ್ಯ ಹೇಳಲಾರದೆ ತೊಳಲಾಡಿದ "ಅಮ್ಮಾವ್ರು ಹೇಳಿ ಕಳಿಸಿದ್ರು ತಾನೆ! ಬಂದ್ಕೆಲ್ಲ ಮುಗೀತಲ್ಲ ಹೋಗಿ ಮೇಸ್ತ್ರಿನ ಕಳ್ಸು. ಎರ್ಡು ದಿನ ಸುಮ್ನೇ ಮನೆಯಲ್ಲಿ ಮಲ್ಗು. ಮತ್ತೆ ಕಾಲು ನೋವು ಷುರುವಾದ್ರೆ ತೊಂದರೆ ಆಗುತ್ತೆ, ನಂಗಲ್ಲ... ನಿಂಗೆ" ಸ್ವಲ್ಪ ಜೋರಾಗಿಯೇ ಹೇಳಿದ.

ನೇರವಾಗಿ ರೂಮಿಗೆ ಹೋದವನು ತಲೆ ಹಿಡಿದು ಕೂತ. ಅವನ ತಂದೆ ದೇಶಾಂತರ ಹೋಗಿದ್ದಕ್ಕೆ ಪೂರ್ಣ ಕಾರಣರು ತಾಯಿಯಲ್ಲದಿದ್ದರೂ ಹೆಚ್ಚಿನ ಪಾಲು ಆಕೆಯದೇ ಎಂದು ಗೊತ್ತು.

ಶೀನಪ್ಪಯ್ಯನ ಸ್ವಭಾವಕ್ಕೆ ತೀರಾ ವಿರುದ್ಧ ಮನಸ್ಥಿತಿಯ ಹೆಣ್ಣು ಚಂಪಕವಲ್ಲಿ. ಆಕೆ ಒಂದೇ ಮಗ್ಗುಲಲ್ಲಿ ಬದುಕಲು ಇಚ್ಛಿಸಿದರು. ಗಂಡನ ಮಾನವೀಯ ಗುಣಗಳು ಆಕೆಗೇ ಹಿಡಿಸದು.

"ಲಕ್ಷಗಳೇನು, ಕೋಟಿ ಬಾಳುವಂಥ ಜಮೀನು, ಬಿಲ್ಡಿಂಗ್ ಅನಾಥಾಶ್ರಮಕ್ಕೆ! ನಮ್ಗೇನು ಅದ್ರ ಕರ್ಮ. ಪ್ರಪಂಚಕ್ಕೆ ಇಲ್ದ ಉಸಾಬರಿ ನಿಮಗ್ಯಾಕೇ. ನಮ್ಮಪ್ಪ ಕೂಡ ಶ್ರೀಮಂತನಾಗಿದ್ದಕ್ಕೆ ಬಚಾವ್ ಆದ್ರಿ" ಈ ತರಹದ ಮಾತುಗಳನ್ನು ಚಿಕ್ಕಂದಿನ ದಿನಗಳಲ್ಲಿ ತಾಯಿಯ ಬಾಯಿಂದ ಕೇಳಿದ್ದೆ. ವಿಪರೀತವಾದ ಕುಟುಂಬ ಪ್ರೇಮ, ಶ್ರೀಮಂತಿಕೆಯ ವ್ಯಾಮೋಹ, ಅದಕ್ಕೆ ಮೀರಿದ ಯಾವುದೋ ಭಯ ಆಕೆಯನ್ನು ಕಠೋರಹಿತಳನ್ನಾಗಿ ಮಾಡಿತೆಂದು ಅರಿವಿಗೆ ಬರಬೇಕಾದರೇ ಕೆಲವು ವರ್ಷಗಳು ಬೇಕಾಗಿತ್ತು ಅವನಿಗೆ. ಆದ್ದರಿಂದಲೇ ಆಕೆಯ ಬಗ್ಗೆ ಸಂತಾಪ, ಸಹಾನುಭೂತಿ. ಇದರಿಂದ ಆಕೆ ಕಳೆದುಕೊಂಡಿದ್ದು ಅತ್ಯಂತ ಅಮೂಲ್ಯವಾದ ದಿನಗಳನ್ನು.

ಹೆಗಲ ಮೇಲಿನ ಮೃದು ಸ್ಪರ್ಶಕ್ಕೆ ಎಚ್ಚೆತ್ತ ಅನಿಕೇತ್. ನೋಟ ತಿರುಗಿಸಿದ. ಮಾಲತಿ ನಿಂತಿದ್ದಳು. ಅವಳ ಮುಖದಲ್ಲಿ ಯಾವ ಭಾವನೆ ಇದೆಯೋ, ಅದನ್ನೆಂದು ಗುರುತಿಸುವ, ಅದಕ್ಕಾಗಿ ತಲೆ ಕೆಡಿಸಿಕೊಳ್ಳುವ ಅವಕಾಶ ಅವನಿಗೆಂದಿಗೂ ಬಂದಿರಲಿಲ್ಲ. ಸದಾ ಮಾತಾಡುವ ಮೇಲ್ಮುಖವಾಗಿಯೆ ತನ್ನ ಭಾವನೆಗಳನ್ನು ತೋರುವ ಪ್ರಿಯ ಮಡದಿ

ಹೃದಯಗಳು ಮಾತಾಡಿಕೊಳ್ಳಲು, ಮನ ಸ್ಪಂದಿಸಲು, ಮೌನ ಮಾತಾಡಲು ಅವಕಾಶ ಕೊಟ್ಟಿರಲಿಲ್ಲ.

"ಯಾರು, ಸಖೀ ?" ನೇರವಾಗಿತ್ತು ಪ್ರಶ್ನೆ.

ಜಡೆ ಎಳೆದು ಕೆನ್ನೆ ಸವರಿ "ಪರಿಚಯ ಮಾಡ್ಸಿದ್ನಲ್ಲ. ನಿಂಗೆ ಗೊತ್ತಿರೊಷ್ಟೇ ನಂಗೆ ಗೊತ್ತಿರೋದು. ಅನಗತ್ಯ ವಿಷ್ಯಗಳೇಕೆ ? ಅಪ್ಪನ ಫ್ರೆಂಡ್, ಅಲ್ಲಿಂದ ಇಲ್ಲಿಗೆ ಬಂದಿದ್ದಾಳೆ. ಕೈಯಲ್ಲಾದಷ್ಟೇ ಸಹಾಯ. ದಟ್ಸ್ ಆಲ್" ಆ ಮಾತುಗಳನ್ನು ಅಲ್ಲಿಗೆ ಮುಕ್ತಾಯ ಮಾಡಲು ಇಚ್ಛಿಸಿದ.

"ವಾಸುದೇವಯ್ಯ ಏನೋ ಹೇಳಿದ್ರು !" ಮಡದಿಯ ಮಾತಿಗೆ ಅವನ ಅವಡುಗಳು ಬಿಗಿದುಕೊಂಡವು "ಮಾಲತಿ, ಅಸಲು ನಿಂಗೆ ಬುದ್ಧಿ ಇದ್ಯಾ ? ಅಥ್ವಾ ನಿನ್ನ ಬುದ್ಧಿಯ ಮಟ್ಟವೇ ಇಷ್ಟೆ. ನಾನು ಪರಿಚಯಿಸಿದ್ಮೇಲೆ ಅವ್ನ ಕೂಗಿ ಕೇಳೋಂಥದೇನಿತ್ತು ? ಇದ್ನ ನೂರು ಸಲ ಕೇಳಿದ್ದೀನಿ. ಏನು ಉಪಯೋಗಕ್ಕೆ ಬಂದಿಲ್ಲ. ಸದಾ ಸೀರೆ, ಒಡ್ವೆ ಇಂಥದ್ನ ಬಿಟ್ಟು ಒಂದಿಷ್ಟು ಓದು, ತಿಳಿವಳಿಕೆಪಡ್ಕೋ ಬದ್ಕು ಹಸನಾಗುತ್ತೆ. ಥೆ....." ರೂಮಿನಿಂದ ಹೊರ ಬಂದವನು ಹಿಂದಿನ ಬಾಲ್ಕನಿಗೆ ಹೋಗಿ ಕೂತ.

ಇಂಥದ್ದು ಎಷ್ಟು ನೂರು ಬಾರಿಯೋ, ಬದಲಾವಣೆ ಇಲ್ಲದಿದ್ದರೂ ತೊಂದರೆಗಳು ಅನಿವಾರ್ಯವಾಗಿಬಿಡುತ್ತಿತ್ತು. ಕೆಲವು ಸಂದರ್ಭದಲ್ಲಿ ವ್ಯಕ್ತಿತ್ವ ಸತ್ತು ಅಸಾಹಯಕನಾಗಿಬಿಡುತ್ತಿದ್ದ.

ನಿಟ್ಟುಸಿರು ದಬ್ಬಿ ಒಳಕ್ಕೆ ಬಂದಾಗ ಅಳುತ್ತಿದ್ದಳು. ಅತ್ಯಂತ ಸಂಯಮದಿಂದ ರಮಿಸಬೇಕಿತ್ತು. ಅಷ್ಟಿಷ್ಟು ತೆರವಾಗಿತ್ತು ಕೂಡ.

"ಪ್ಲೀಸ್, ಸ್ವಲ್ಪ ಅರ್ಥ ಮಾಡ್ಕೋಮ್ಮ" ಕೂದಲಲ್ಲಿ ಕೈಯಾಡಿಸಿ "ಅಮ್ಮ ಏನೋ ಒಂದು ತರಹ ಆಗ್ಬಿಟ್ರು, ಅಪ್ಪ ಹೋದ್ಮೇಲೆ. ನಂಗೆ ಅವ್ರು ಹಿಂದಿರುಗಿ ಬರ್ತಾರೇ ಅನ್ನೋ ನಂಬ್ಕೇನೆ ಇಲ್ಲ. ಈಗ ನಿನ್ನ ಜವಾಬ್ದಾರಿ ಹೆಚ್ಚಲ್ಲ" ತೀರಾ ಸ್ವರವನ್ನು ಮೃದುವಾಗಿಸಿ ಮಗುವಿಗೆ ಹೇಳಿದಂತೆ ಹೇಳಿದ. ಮತ್ತಷ್ಟು ಜೋರಾಗಿ ಅತ್ತಳು. ವಜ್ರವೋ, ಕಲ್ಲೋ ಅಂತು ಸಾಣೆ ಹಿಡಿದಷ್ಟು ಮಂಕಾಗುತ್ತಿತ್ತೇ ವಿನಃ ಹೊಳಪು ಬರುತ್ತಿರಲಿಲ್ಲ. ಆದರೂ ತನ್ನ ಪ್ರಯತ್ನವನ್ನು ಮುಂದುವರಿಸಿದ್ದ.

"ಗಂಡಸರೆಲ್ಲ ಕೆಟ್ಟೋರೆ, ಬರೀ ಸುಳ್ಳು ಹೇಳ್ತಾರೆ" ಅವಳ ಆಪಾದನೆ. ಈ ಆರೋಪದಲ್ಲಿ ಎಂದೂ ಬದಲಾವಣೆ ಇಲ್ಲ ! ತುದಿ ಬೆರಳಿನಿಂದ

ಗದ್ದವಿಡಿದು ಮೇಲಕ್ಕೆತ್ತಿದ "ನನ್ನ ಕಣ್ಣುಗಳಲ್ಲಿ ನೋಡ್ದೇಳು. ನಾನು ಕೆಟ್ಟೋನಾ ?" ಒರಟಾಗಿ ಅವನ ಕೈ ದೂಡಿದಳು.

"ಏನಿದೆ ಕಣ್ಣುಗಳಲ್ಲಿ ? ಗಂಡಸ್ರೂಂದ್ರೆ ಎಲ್ಲರೂ ಕೆಟ್ಟೋರೆ ! ಹೇಗೆ ನಡುನೀರಿನಲ್ಲಿ ಸಂಸಾರನ ಕೈ ಬಿಟ್ಟೋದ್ರು ಮಾವನೋರು ! ಕಟ್ಟಿಕೊಂಡ ಹೆಂಡ್ತಿಯ ಚಿಂತೆ ಬೇಡ್ವಾ ಅವ್ರಿಗೆ. ಅತ್ತೆ ಸ್ವಲ್ಪ ಎಚ್ಚರವಹಿಸಿದ್ರೆ ಇಂದು ಕಷ್ಟಪಡ್ತಾ ಇರ್ಲಿಲ್ಲ" ಎಂದಳು ಕಣ್ಣು ಮೂಗೊರೆಸಿಕೊಳ್ಳುತ್ತ. ತಣ್ಣಗೆ ಮೆಟ್ಟಿಲು ಇಳಿದು ಕೆಳಗೆ ಬಂದ.

ಬುಟ್ಟಿ ಹೂವನ್ನು ಮುಂದೆ ಸುರಿದುಕೊಂಡು ಕಟ್ಟುತ್ತಿದ್ದರು ಚಂಪಕವಲ್ಲಿ. ಇದು ನಿತ್ಯ ವಿಧಿಯಲ್ಲೊಂದು. ಕಟ್ಟಿದ ಹೂವನ್ನೆಲ್ಲ ದೇವರಿಗೆ ಹಾಕೋದು. ಬಾಯಿಗೆ ಬರೋ ಸ್ತೋತ್ರಗಳನ್ನೆಲ್ಲ ದಿನಕ್ಕೆ ಒಂದೆರಡು ಸಲ ಹೇಳೋದು.

"ಅಮ್ಮ ಸ್ವಲ್ಪ ಹೊರ್ಗಡೆ ಹೋಗ್ಬರ್ತೀನಿ" ನಡೆದ ನಿಧಾನವಾಗಿ ತಲೆಯೆತ್ತಿದವರು "ಹೊರ್ಗಿನ ಎಲ್ಲಾ ಕೆಲ್ಸಕ್ಕು ಆಳುಕಾಳುಗಳಿದ್ದಾರಲ್ಲ, ನೀನ್ಹೋಗಿ ಮಾಡೋದೇನಿದೆ ?" ಅದೇ ಹುಚ್ಚು ಪ್ರಶ್ನೆ. ದಿನವು ಇದನ್ನೇ ಕೇಳುವುದು. ಅವನು ಮೌನವಾಗಿ ಹೋಗುತ್ತಿದ್ದ.

ಗಂಡ ಮನೆ ಬಿಟ್ಟು ಹೋದ ನಂತರ ಆಕೆ ಅನಿಕೇತ್‌ನ ಬಂಧನದಲ್ಲಿ ಇಟ್ಟಂತೆ ಸಾಕಿದ್ದರು. ಹೊರ ಜಗತ್ತಿನ ದರ್ಶನವೇ ಅವನಿಗೆ ಬೇಡವೆನ್ನುವ ಇರಾದೆ. ಕೆಲವೊಮ್ಮೆ ಕಾಲೇಜಿಗೆ ಫೋನ್ ಮಾಡಿ ವಿಚಾರಿಸುತ್ತಿದ್ದರು. ಹಿಂದೆ ಜನನ ಅಟ್ಟುತ್ತಿದ್ದರು. ಈ ವಿಪರೀತಗಳು ಹುಚ್ಚನ್ನು ಸಾಬೀತುಪಡಿಸಿದರು ವಿಲಕ್ಷಣ ಸ್ಥಿತಿ ಮುಟ್ಟಲಿಲ್ಲ. ಅಂತು ಅವನ ಸ್ಥಿತಿ ಅಯೋಮಯ ! ಸೊಸೆಯಾಗಿ ಅಣ್ಣನ ಮಗಳನ್ನೆ ಆಯ್ಕೆ ಮಾಡಿಕೊಂಡಾಗಲೂ ತಕರಾರು ಎತ್ತಲಿಲ್ಲ. ಆದರೆ ಬಂದ ಹೆಣ್ಣು ಕೂಡ ಅದೇ ಜಾಡು.

ಮಾಲತಿ ಸುಧಾರಿಸಬಹುದೆಂಬ ದೂರದ ಆಸೆ ಇತ್ತೀಚೆಗೆ ಸುಳ್ಳಾಗತೊಡಗಿತು.

* * * *

ಹೋಟಲ್‌ನ ಹೊರ ಲೌಂಜ್‌ನಲ್ಲಿ ಬಂದು ಕೂತಳು. ವಾಸುದೇವಯ್ಯನನ್ನು ಕಾಯುತ್ತ ಹೇಳಿದ ಸಮಯ ಮುಗಿದು ಅರ್ಧಗಂಟೆ. ಮುಕ್ಕಾಲು ಗಂಟೆಯ ನಂತರವೂ ಅವನ ಸುಳಿವಿಲ್ಲ.

ಆ ಬಗ್ಗೆ ಬಹಳ ಸ್ಪಷ್ಟವಾಗಿ ನುಡಿದಿದ್ದ ಅನಿಕೇತ್ "ನಮ್ಮಮ್ಮ ಆ ಅನಾಥಾಲಯದ ನೆರಳು ಕೂಡ ನನ್ಮೇಲೆ ಬೀಳ್ದಂತೆ ಎಚ್ಚರವಹಿಸಿದ್ದರಿಂದ, ಅದರ ಬಗ್ಗೆ ನಂಗೇನು ಗೊತ್ತಿಲ್ಲ. ಆ ಬಿಲ್ಡಿಂಗ್, ಬಗ್ಗೆ ಒಂದಿಷ್ಟು ಗಲಾಟೆ; ಕೋರ್ಟು ಕಛೇರಿ ಅವೆಲ್ಲ ನೋಡಿಕೊಂಡಿದ್ದು ಕೂಡ, ನನ್ನ ದ್ವಾರಕಿ ಮಾಮ ಮಾಲತಿ ತಂದೆ."

ಒಂದು ರೀತಿಯಲ್ಲಿ ಆ ಬಗ್ಗೆ ಪೂರ್ತಿ ಕೈ ತೊಳೆದುಕೊಂಡಿದ್ದ. ಅಷ್ಟೋ ಇಷ್ಟೋ ಹೇಳಬಹುದಾದ ವಾಸುದೇವಯ್ಯ ಹಿಂಜರಿದರೇ ಹೊಸ ವ್ಯಕ್ತಿಯ ಅನ್ವೇಷಣೆ ಪ್ರಾರಂಭಿಸಬೇಕಾಗುತ್ತೆ. ಒಂದು ರೀತಿಯಲ್ಲಿ ದಟ್ಟ ಕತ್ತಲಿನಲ್ಲಿ ಕಣ್ಮುಚ್ಚಿ ಹುಡುಕುವ ಸ್ಥಿತಿ ಅವಳದು.

ರಿಸೆಪ್ಷನಿಸ್ಟ್ ಕೌಂಟರ್‌ನಿಂದ ಅವಳಿಗೊಂದು ಸುದ್ದಿ ಬಂತು "ಅಮ್ಮ ಮೇಡಮ್ ವಾಸುದೇವಯ್ಯ ಅನ್ನೋರು, ಇನ್ನ ಅರ್ಧ ಗಂಟೆಯೊಳ್ಗೇ ಬರ್ತಾರಂತೆ."

ನಿರಾಶೆಯ ಆವರಣದಲ್ಲಿ ಇದ್ದವಳಿಗೆ ಜೀವ ಬಂದಂತಾಯಿತು. ನವನೀತ್ ಟ್ಯಾಕ್ಸಿ ಬೇಕೆಂದು ಕೌಂಟರ್‌ನಲ್ಲಿ ತಿಳಿಸಿ ಬಂದು ಕೂತಳು. ಹತ್ತು ನಿಮಿಷದಲ್ಲಿ ಟ್ಯಾಕ್ಸಿ ಬಂದರೂ ವಾಸುದೇವಯ್ಯ ಬರಲು ಐವತ್ತು ನಿಮಿಷಗಳೇ ಬೇಕಾಯಿತು.

"ನವನೀತ್ ಪ್ರಶಾಂತವಾದ ಗಲಾಟೆ ಇಲ್ದ ಕಡೆ ಕರ್ಕೊಂಡ್ಹೋಗು." ಟ್ಯಾಕ್ಸಿ ಹತ್ತಿದ ಕೂಡಲೇ ಹೇಳಿದಳು. ಮೊಣಕಾಲನ್ನು ಒತ್ತಿಕೊಂಡೋ ವಾಸುದೇವಯ್ಯ "ಬೇಗ ಹಿಂದಿರುಗ್ಬೇಕು ತಾಯಿ, ನಾಲ್ಕು ಮಾತು ಇಲ್ಲೇ ಹೇಳ್ಬಿಡ್ತಾ ಇದ್ದೆ. ಮುಖ್ಯವಾದುದ್ದೇನು ನಂಗೆ ಗೊತ್ತಿಲ್ಲ" ಸ್ವಲ್ಪ ಇರುಸು ಮುರುಸು ಪ್ರದರ್ಶಿಸಿದ. ತಟ್ಟನೇ ಪದಗಳನ್ನು ಕೂಡಿ ಹಾಕಿ ಏನು ಹೇಳುವುದಾಗಲಿಲ್ಲ ಅವಳಿಗೆ.

ಒಂದು ಮರದ ಕಡೆ ಟ್ಯಾಕ್ಸಿ ನಿಲ್ಲಿಸಿದ ನವನೀತ್ "ಅಲ್ಲಿ ಮರದ ನೆರಳು ಇದೆ. ಕೊಡೋಕು ತೊಂದರೆ ಇಲ್ಲ" ಹೇಳಿ ತನ್ನ ಕೆಲಸ ಮುಗಿಸಿ ಬಾನೆಟ್ ಎತ್ತಿ ಬ್ಯಾಟರಿಯ ಸಂಪರ್ಕದ ಬೋಲ್ಟ್‌ಗಳನ್ನು ಬಿಗಿ ಮಾಡತೊಡಗಿದ.

ವಾಸುದೇವಯ್ಯನನ್ನು ಅಲ್ಲಿನವರೆಗೂ ಆಸರೆ ನೀಡಿ ನಡೆಸಬೇಕಾಯಿತು ಸಖೀ. ಆ ಮನುಷ್ಯ ನೋವೆಂದು ಆಗಾಗ ನಿಲ್ಲುತ್ತಿದ್ದ. ಒಂದು ರೀತಿಯ ಗಾಬರಿ.

ಸಖೀ ಹೋದ ಮೇಲೆ ಕರೆಸಿಕೊಂಡು ಪ್ರಶ್ನಿಸಿದ್ದ ಅತ್ತೆ, ಸೊಸೆ "ನೀನು ಹೋಗ್ಬೇಡ...." ತಾಕೀತು ಮಾಡಿದ್ದರು. ಆದರೆ ಜೇಬಿನಲ್ಲಿದ್ದ ನೂರರ ಎರಡು ನೋಟುಗಳು ಅಲ್ಲೇ ಹೊಗೆಯಾಡುತ್ತಿತ್ತು. ಬೆಂಕಿಯಂತೆ ಸುಡುತ್ತಿತ್ತು.

ರಾತ್ರಿ ಭೇಟಿಯಾದ ಅನಿಕೇತ್ ತೀಕ್ಷ್ಣವಾಗಿ ನೋಡಿದ್ದ. ನೋಟವೇ ಪ್ರಶ್ನಿಸಿತ್ತು, ಹೆದರಿಸಿತ್ತು. ಬಾಯಿ ಬಿಟ್ಟು ಏನು ಹೇಳಿರಲಿಲ್ಲ. ಮಾತು ಕಮ್ಮಿ ಮಾಡಿ ಕಣ್ಣುಗಳನ್ನೇ ಆದೇಶಕ್ಕೆ ಇಟ್ಟುಕೊಂಡಿದ್ದ. ಅವನಿದ್ದ ಸ್ಥಿತಿಯಲ್ಲಿ ಇದು ಅನಿವಾರ್ಯವಾಗಿತ್ತು. ಮಾತು ಹೊರ ಬಿದ್ದರೇ ನೇರವಾಗಿ ಹೋಗಿ ತಲುಪುತ್ತಿದ್ದುದು ಬಂಗ್ಲೆಗೆ. ಈ ವಿಷಯದಲ್ಲಿ ನಡೆದದ್ದು ಕೂಡ ಅದೇ.

"ಕೂತ್ಕೊಳ್ಳಿ....." ಕೂಡಿಸಿದಳು ನೆರಳಿದ್ದ ಸ್ಥಳದಲ್ಲಿ. ನಂತರ ತನ್ನ ಬ್ಯಾಗಿನಿಂದ ಅಯೋಡೆಕ್ಸ್ ಬಾಟಲು "ಎಲ್ಲಿದೆ ನೋವು, ಹಚ್ಚುತ್ತೀನಿ" ಮುಂದಾದಾಗ ಕಾಲನ್ನು ಹಿಂದಕ್ಕೆಳೆದುಕೊಂಡ "ಬೇಡ, ಮೇಡಮ್, ಅದೇನು ಕೇಳ್ಬೇಕೋ ಅದ್ನ ಕೇಳಿ. ನಂಗೆ ಬೇಗ ಹೋಗೋದಿದೆ" ಆತುರಪಡಿಸಿದ.

"ಮೊದಲ್ಲು ಅನಾಥಾಶ್ರಮ ಎಲ್ಲಿತ್ತು?" ಕೇಳಿದಳು.

ಅವನಿಗೆ ಉದಾಸೀನ, ಬೇಸರ "ಮೊದ್ಲು ಇತ್ತು, ಈಗೆಲ್ಲಿದೆ? ಅದೆಲ್ಲ ಮುಗ್ದೋದ ಕತೆ. ಈಗ ಥಿಯೇಟರ್ ಕಟ್ಟಿದ್ದಾರಲ್ಲ, ಆ ಸ್ಥಳದಲ್ಲೇ ಇದ್ದಿದ್ದು ಅನಾಥಾಶ್ರಮ." ಮುಗಿಯಿತೆನ್ನುವಂತೆ ಮುರುಟಿ ಹೇಳಿದ. ಅವನಿಗೆ ತೀರಾ ಅನಾಸಕ್ತಿ, ಭಯ. ಎರಡು ನೋಟುಗಳನ್ನು ಜೇಬಿನಲ್ಲಿ ಇಟ್ಟುಕೊಂಡು ಬಂದಿದ್ದ. ಹಿಂದಿರುಗಿ ಹೋಗಿಬಿಡಲು ಸಿದ್ಧ.

ಒಂದೆರಡು ನಿಮಿಷಗಳ ಮೌನದ ನಂತರ "ವಾಸುದೇವಯ್ಯ, ನಿಮ್ಮ ಯಜಮಾನ್ರು, ಅವ್ರ ಫ್ಯಾಮಿಲಿ ಬಗ್ಗೆ ನಂಗೆ ಯಾವ್ದೇ ವರದಿಗಳು ಬೇಡ. ಅನಾಥಾಶ್ರಮ ಅಂದರೇ.... ಅಲ್ಲಿದ್ದ ಮಕ್ಕಳು, ವಾರ್ಡನ್ ಬಗ್ಗೆ ಒಂದಿಷ್ಟು ವಿವರ ಬೇಕು... ಬರೀ ಅಲ್ಲಿನ.... ಮಕ್ಳು ಅಷ್ಟೇ.... ಅಷ್ಟೆ" ಎಂದಳು. ಸರಿಯಾಗಿ ಮಾತನಾಡಲಾರದಷ್ಟು ಭಾವೋದ್ವೇಗ ಒತ್ತಿ ಬಂದು ಮುಖವೆಲ್ಲ ಕೆಂಪಗಾಗಿ ಕಣ್ಣಲ್ಲಿ ನೀರು ತುಂಬಿಕೊಂಡಿತು.

"ಮಕ್ಳುಂದ್ರೆ ಪರದೇಶಿಗಳು ತಾನೇ! ಅವ್ರ ಬಗ್ಗೆ ಹೇಳೋಕೆ

ಕೇಳೋಕೇನಿದೆ? ಎಲ್ಲೊ? ಹುಟ್ಟಿದ ಬೇಡವಾದ ಪಾಪದ ಮಕ್ಳು. ಅವಕ್ಕೇನು ಭವಿಷ್ಯ ತಾಯಿ?" ಉತ್ಪ್ರೇಕ್ಷೆಯಿಂದ ನುಡಿದ.

ಸಸ್ತನಿ ಪ್ರಾಣಿ ಹಾವು ಹರಿದಾಡಿದಂತಾಯಿತು ಅವಳ ಮೈಮೇಲೆ ವಾಸುದೇವಯ್ಯನ ಮಾತುಗಳಿಂದ. 'ಪರದೇಶಿಗಳು' ಸಮಾಜದ ಕೆಲಸಕ್ಕೆ ಬಾರದ, ಭವಿಷ್ಯವಿಲ್ಲದ ಸಂತಾನ, ಅವಳ ಹೃದಯ ನರಳಿ ನರಳಿ ಅತ್ತಿತು. ಚೇತರಿಸಿಕೊಳ್ಳಲು ಅವಳಿಗೆ ನಿಮಿಷಗಳು ಬೇಕಾಯಿತು.

"ಅವ್ರು ಏನಾದ್ರಾಗ್ಲೀ, ಅದಕ್ಕೊಬ್ಬ, ವಾರ್ಡನ್, ಆಯಾ ಅಂಥವ್ರು ಇದ್ದಿರಬೇಕಲ್ಲ. ಅವ್ರ ಬಗ್ಗೆಯಾದ್ರೂ ತಿಳಿದಿದ್ದು ಹೇಳು" ಕೇಳಿದಳು.

ವಾಸುದೇವಯ್ಯ ತಲೆ ಕೆರೆದುಕೊಂಡ. ಅನಾಥಾಶ್ರಮದ ಬಗ್ಗೆ ಮನೆಯಲ್ಲಿ ಪೂರ್ತಿ ವಿರೋಧವಿತ್ತು. ಯಜಮಾನರೊಬ್ಬರೇ ಆಗಾಗ ಹೋಗಿ ಬರುತ್ತಿದ್ದುದು. ಕೆಲವು ಸಲ ಅವರೊಂದಿಗೆ ಹೋಗಿದ್ದ.

"ಏನು ತಿಳಿದಿಲ್ಲಾಂತ್ಲೇ ಇಟ್ಕೊಳ್ಳಿ. ಸಾಕಮ್ಮ ಅನ್ನೋ ಆಯಾ ಒಬ್ಳು ಇದ್ಲು. ಅವಳದ್ದು ನನ್ನ ಊರಿನ ಹತ್ತಿರದ ಬಸರಿಕಟ್ಟೆ. ಈಗೇನು ಬದ್ಕಿದ್ದಾಳೋ ಸತ್ತಿದ್ದಾಳೋ ಗೊತ್ತಿಲ್ಲ. ಅನಾಥಾಶ್ರಮಕ್ಕೆ ಬೀಗ ಬಿದ್ಮೇಲೆ ನಾನು ನೋಡೇ ಇಲ್ಲ. ಆ ವಾರ್ಡನ್ ಅಮ್ಮನಿಂದ್ಲೇ ಎಲ್ಲಾ ನಡೆದಿದ್ದು....." ಕೊನೆಯ ಮಾತನ್ನು ನುಡಿದು ನಾಲಿಗೆ ಕಚ್ಚಿಕೊಂಡ. ಆ ಮಾತಿನಿಂದ ಏನು ಅಪಾಯ ಸಂಭವಿಸಿತ್ತೋ ಎಂದು ಹೆದರಿದ ವಾಸುದೇವಯ್ಯ "ಅಮ್ಮ ನಂಗ್ಯಾರು ಗೊತ್ತಿಲ್ಲ. ಸುಮ್ನೇ ನಮ್ಮಂಥ ಜನನ ಈ ವಿಷ್ಯಗಳಲ್ಲಿ ಯಾಕೆ ಎಳೀತೀರಾ?" ಕಂಪಿಸುವ ದನಿಯಲ್ಲಿ ನುಡಿದ.

"ಏನು ತೊಂದರೆ ಇಲ್ಲ? ಅನಾಥಾಶ್ರಮ ಯಾಕೆ ಮುಚ್ಚಿತ್ತು?" ಎಂದಾಗ ವಾಸುದೇವಯ್ಯ ಎದ್ದವನೇ ಹಿಂದಿನ ದಿನ ಕೊಟ್ಟ ಎರಡು ನೋಟುಗಳನ್ನು ಕೆಳಗಿಟ್ಟು "ಈ ವಯಸ್ಸಿನಲ್ಲಿ ನಂಗೆ ಬೇರೆ ಕಡೆ ಕೆಲ್ಸ ಸಿಗೋಲ್ಲ. ಎಸ್ಟೇಟ್‌ನಿಂದ ಹೊರ್ಗೇ ಹಾಕಿದ್ರೆ ಬೀದಿ ಪಾಲಾಗ್ಬೇಕಾಗುತ್ತೆ. ಬಡವ್ರ ಒಗ್ಗೆ ಕನಿಕರವಿರ್ಲೀ. ಇನ್ನೇನು ಕೇಳ್ಲೇಬೇಡಿ" ಕುಂಟುತ್ತ ಹೊರಟಾಗ ಕೈ ಹಿಡಿದು ನಿಲ್ಲಿಸಿ ಆ ಎರಡು ನೋಟುಗಳ ಜೊತೆ ಇನ್ನೆರಡು ನೋಟುಗಳನ್ನು ಸೇರಿಸಿ ಕೈಗಿಟ್ಟಳು. ಎರಡು ನೋಟುಗಳನ್ನು ತಾನಿರಿಸಿಕೊಂಡು ಎರಡು ನೋಟುಗಳನ್ನು ಮಾತ್ರ ತಂದಿದ್ದ.

ಟ್ಯಾಕ್ಸಿಯನ್ನು ಕಾರ್ನರ್ ಬಳಿ ನಿಲ್ಲಿಸುವಂತೆ ಹೇಳಿದವಳು

"ನವನೀತ್, ನೀನು ಇವ್ರನ್ನು ಎಸ್ಟೇಟ್‌ಗೆ ಬಿಟ್ಬಾ, ನಾನು ಟೀ ಸ್ಟಾಲ್‌ನಲ್ಲಿ ಇರ್ತೀನಿ" ಎಂದು ಇಳಿಯುವ ಮುನ್ನ ಅಯೋಡೆಕ್ಸ್ ಬಾಟಲನ್ನು ವಾಸುದೇವಯ್ಯನ ಕೈಯಲ್ಲಿಟ್ಟು "ಇದ್ನ ಹಚ್ಕೊಳ್ಳಿ, ನೋವು ಕಡ್ಮೆ ಆಗುತ್ತೆ" ಹೇಳಿದಳು ಆತ್ಮೀಯವಾಗಿ. ಆ ಕ್ಷಣ ಆ ವ್ಯಕ್ತಿ ಕೂಡ ಕಳವಳಗೊಂಡ.

ಟ್ಯಾಕ್ಸಿ ಸ್ಟ್ಯಾಂಡ್‌ನಲ್ಲಿ ತನಗೆ ಪರಿಚಯ ಇರುವವರ ಹತ್ತಿರ ನವನೀತ್ ಹೋಗಿ ವಿಚಾರಿಸಿದ ಬಸರಿಕಟ್ಟೆಯ ಬಗ್ಗೆ. ಒಬ್ಬೊಬ್ಬರು ಒಂದೊಂದು ಬಸರಿಕಟ್ಟೆಯ ಬಗ್ಗೆ ಹೇಳಿದರು. ಬಹುಶಃ ಅವು ಮೂರು ನಲ್ವತ್ತು ಕಿಲೋಮೀಟರ್ ನಡುವೆಯೇ ಇತ್ತು. ಆದರೆ ಯಾವ ಬಸರಿಕಟ್ಟೆ ?

ಬಂದ ನವನೀತ್ ಸಂಕ್ಷಿಪ್ತವಾಗಿ ವಿವರಿಸಿ "ಯಾವ ಬಸರಿಕಟ್ಟೆ ?" ಅವಳು ತಲೆ ಕೆರೆದುಕೊಂಡಳು. 'ನಮ್ಮ ಊರಿನ ಹತ್ರ ಇರೋ ಬಸರಿಕಟ್ಟೆ' ಎಂದಿದ್ದರು ವಾಸುದೇವಯ್ಯ. ಆಯಾ ಸಾಕಮ್ಮ ಯಾವ ಬಸರಿಕಟ್ಟೆಗೆ ಸೇರಿದವಳು ?

"ಇವು ಹತ್ತಿರದ ಬಸರಿಕಟ್ಟೆಗಳು. ದೂರದಲ್ಲಿ ಒಂದಿದೆಯಂತೆ. ಯಾವ್ದುಂತ ತಿಳಿದೇ ಎಲ್ಲಿಗೆ ಹೋಗೋದು ? ನೀವು ಎಲ್ಲಿಗೆ ಹೇಳಿದ್ರೆ ಅಲ್ಲಿಗೆ ಕರ್ಕೊಂಡ್ಹೋಗ್ತೀನಿ !" ಎಂದ. ಈಗಲೂ ಅವನೊಬ್ಬ ಪ್ರಾಮಾಣಿಕ ಟ್ಯಾಕ್ಸಿ ಡ್ರೈವರ್. ಶುದ್ಧವಾದ ಲೆಕ್ಕಾಚಾರ.ಹೋದಷ್ಟೇ ಬಾಡಿಗೆ, ಹೆಚ್ಚು ಕೇಳಲಾರ.ಕಡಿಮೇನೂ ತಗೊಳ್ಳಲಾರ.

ಹಣೆಯುಜ್ಜಿದಳು..... ಒಮ್ಮೆ ರಾಮಾಚಾರಿಗಳನ್ನ ಯಾಕೆ ಸಂಪರ್ಕಿಸಬಾರದೆಂದುಕೊಂಡವಳು ಫೋನಚ್ಚಿದಳು. ಆತ ಸಂತೋಷದಿಂದಲೇ ಮಾತಾಡಿಸಿ ಬಸರಿಕಟ್ಟೆಯವರೆಗಿನ ಪುರಾಣವನ್ನು ವಿಚಾರಿಸಿಕೊಂಡ.

"ಹೆಸರು ಕೇಳಿದ್ದೀನಿ. ಮೂರು ಬಸರಿಕಟ್ಟೆಗಳು ಇರೋದಾಗ್ಲಿ, ಅವುಗಳ ವಿಷ್ಯವಾಗ್ಲೀ ನಂಗೆ ಗೊತ್ತಿಲ್ಲ. ಆದ್ರೂ ಇಲ್ಲಿನ್ವರ್ಗೂ ಬಂದಿರೋದು ಸಂತೋಷದ ಸಂಗ್ತಿ. ಆಗ ರೈಡ್ ಮಾಡಿ ಸೀಲ್ ಮಾಡಿದ್ದರ ಪೊಲೀಸರ ಬಳಿಯಾಗ್ಲೀ, ಅನಾಥಾಶ್ರಮದ ಒಡೆಯರ ಬಳಿಯಾಗ್ಲೀ, ಅದ್ಕೆ ಸಂಬಂಧಪಟ್ಟ ರೆರ್ಕಾಡ್ಸ್ ಇರುತ್ತೆ. ಅದ್ರಲ್ಲಿ ಏನಾದ್ರೂ 'ಕ್ಲೂ' ಸಿಗ್ಬಹುದ್ದು" ಎಂದರು. ಒಂದು ಅತ್ಯುತ್ತಮವಾದ ಸಲಹೆ, ಸೂಚನೆ.

ಸ್ವಲ್ಪ ಆರೆ ಮನಸ್ಸಿನಿಂದಲೇ ಫೋನ್‌ನ ಡಯಲ್ ತಿರುಗಿಸಿದಳು ಎಸ್ಟೇಟ್‌ಗೆ. ರಿಸೀವ್ ಮಾಡಿದ್ದು ಅನಿಕೇತ್. "ಹಲೋ....." ಎಂದ ಕೂಡಲೇ ತೂರಿ ಬಂದಿದ್ದು ಆತ್ಮೀಯ ನಗೆ "ಹಲೋ ಸಖೀ, ಏನು ವಿಷ್ಯ?" ಎಂದ. ಅವಳಿಗೆ ಆಶ್ಚರ್ಯ ಅದನೇನು ತೋರ್ಪಡಿಸಿಕೊಳ್ಳಲಿಲ್ಲ.

ವಾಸುದೇವಯ್ಯ ಹೇಳಿದ್ದನ್ನ ತಿಳಿಸಿ ಒಂದಿಷ್ಟು ಬಸರಿಕಟ್ಟೆಯ ವಿವರ ಕೇಳಿದಳು. ಅನಿಕೇತ್ ತುಟಿ ಕಚ್ಚಿ ಯೋಚಿಸಿದ.

"ಐ ಡೋಂಟ್ ನೋ, ಏನೇನು ಗೊತ್ತಿಲ್ಲ. ಆ ಪಾಕಡಾ ಮನುಷ್ಯ ಇಲ್ಲೇ ಇದ್ದಾನೆ, ಜಸ್ಟ್ ಎ ಮಿನಿಟ್....." ಫೋನ್ ತೆಗೆದಿಟ್ಟು ಹೋದ. ಹಿಂದೆಯೇ ಬಂದ ಮಾಲತಿ ಆರಾಮಾಗಿ ಎತ್ತಿಟ್ಟಳು. ಲೈನ್ ಕಟ್ ಆಯಿತು.

ಚಂಪಕವಲ್ಲಿ ವಾಸುದೇವಯ್ಯನ ಬಳಿ ಏನೋ ಮಾತನಾಡುತ್ತಿದ್ದರಿಂದ ಸುಮ್ಮನಾಗಿ ಫೋನ್ ಬಳಿಗೆ ಬರುವ ವೇಳೆಗೆ ಆರಾಮಾಗಿ ಹುಕ್ ಮೇಲಿತ್ತು ಫೋನ್.

"ಮಾಲತಿ.... ಇಲ್ಬಾ" ಕೂಗಿದ.

ರಾಶಿ ಕೂದಲನ್ನು ಮುಂದಕ್ಕೆ ಹಾಕಿಕೊಂಡು ಬ್ರಷ್ ಮಾಡುತ್ತಿದ್ದ ಮಾಲತಿ ಹಂಸದಂತೆ ತೇಲಿ ಬಂದು ಅವನ ಕುತ್ತಿಗೆಗೆ ಜೋತುಬಿದ್ದಳು. ಯಾಕೋ ಅವನಿಗೆ ತಲೆ ಚಚ್ಚಿಕೊಳ್ಳಬೇಕೆನಿಸಿತು. ಆದರೆ ಮಡದಿಯೊಂದಿಗಿನ ಬದುಕನ್ನು ಉಪಾಯವಾಗಿ ಸವೆಸಬೇಕು. ತಂತಿಯ ಮೇಲೆ ನಡೆಯುವ ರೀತಿಯಲ್ಲಿ.

"ಫೋನ್ ನಾನು ತೆಗೆದಿಟ್ಹೋದೆ. ಆ ಪಾರ್ಟಿಯೊಂದಿಗೆ ಮಾತಾಡೋದಿತ್ತು" ಸ್ವಲ್ಪ ದನಿಯೇರಿಸಿ ಹೇಳಿದ. ಕಣ್ಣಂಚಿನಲ್ಲಿ ಸೆಳೆತ, ತುಟಿಯಂಚಿನಲ್ಲಿ ಕಿರುನಗು "ಪಟಪ್, ಕೇಳಿದ್ದಕ್ಕೆ ಉತ್ತರ ಹೇಳು" ಮತ್ತಷ್ಟು ಸ್ವರವೇರಿಸಿದ.

"ಯಾರು ಆ ಪಾರ್ಟಿ? ಅನಾವಶ್ಯಕವಾಗಿ ವೇಳೆ ಯಾಕೆ ಹಾಳಾಗ್ಬೇಕು. ಎಲ್ಲಾ ನೋಡಿಕೊಳ್ಳೋಕೆ ಜನ ಇದ್ದಾರೆ. ನೀವು ನನ್ನ ನೋಡ್ಕೊಂಡ್ರೆ ಸಾಕು" ನಗೆಯನ್ನು ತೇಲಿಸುತ್ತ ಹೇಳಿದಾಗ, ಅವಳು ಬದಲಾಗಳೆನಿಸಿತು "ನಮ್ಮಪ್ಪ ದೇಶಾಂತರ ಹೋಗಿದ್ದು, ಮಧ್ಯೆ ವಯಸ್ಸು ಮೀರಿದ ನಂತರ. ಅದ್ಕೆ ನಾನು ಈಗ್ಲೇ ಆ ಬಗ್ಗೆ ಡಿಸಿಷನ್ ತಗೋಬೇಕಾಗುತ್ತೆ" ರೇಗಿ ಹೊರಗೆ ಹೋದ.

ತಂದೆಯ ಒಳ್ಳೆಯ ಗುಣ, ಸಮಾಜದ ಬಗೆಗಿನ ಕಾಳಜಿ, ಮಾನವೀಯ ಮೌಲ್ಯಗಳು ಈ ಮನೆಯವರಿಗೆ ನೆಗೆಟಿವ್ ಆಗಿ ಕಂಡು, ಈಗ ಹಿಂಸೆಯಾಗಿ ಮಾರ್ಪಟ್ಟಿತ್ತು ಅವನಿಗೆ.

ಕಾಫೀ ಬೋರ್ಡ್‌ನ ಒಂದು ಮೀಟಿಂಗ್ ಇತ್ತು, ಅದಕ್ಕಾಗಿ ಕೆಲವು ಗೆಸ್ಟ್‌ಗಳು ಬಂದಿದ್ದರಿಂದ ಅವರೊಂದಿಗೆ ಡಿಸ್‌ಕಷನ್‌ನೊಂದಿಗೆ ಮಗ್ನನಾದ, ಅನಿಕೇತ್.

ಎಸ್ಟೇಟ್ ಹೊರಗೆ ಟ್ಯಾಕ್ಸಿ ನಿಂತಾಗ ಇಳಿದ ರೂತ್ ಅಲ್ಲ ಸಖೀ ಸುತ್ತಲೂ ನೋಡಿದಳು. ಈ ಹುಡುಕಾಟದಲ್ಲಿ ಅವಳಿಗೆ ಬಹು ಸ್ವಲ್ಪ ಅರ್ಥವಾಗಿದ್ದರೂ ಅನಾದರ ಬಗ್ಗೆ ಸಮಾಜಕ್ಕೆ ಅಂತಹ ಅಕ್ಕರೆಯೇನಿಲ್ಲ, ಗಣಪತಿ ಅಂಥವರು ಸಹಾನುಭೂತಿ ವ್ಯಕ್ತಪಡಿಸಬಲ್ಲರು, ಕರ್ತವ್ಯವೆಂದು ತಿಳಿಯಬಹುದು, ಅದೇ ಪ್ರೀತಿಯಲ್ಲವೆನಿಸಿತು.

ಯಾರು ಸುದ್ದಿ ಮುಟ್ಟಿಸಿದರೂ ಬಂಗ್ಲೆ ತಲುಪುವ ಮುನ್ನವೇ ಬಂದ ಮಾಲತಿ ಬಿರುಗಾಳಿಯಂತೆ ಗೋಚರಿಸಿದಳು.

"ನಿಮ್ಗೇನು ಬೇರೆ ಕೆಲ್ಸ ಇಲ್ವಾ? ಅನಾಥಾಲಯಗಳ ಬಗ್ಗೆ ಬರ್ಯೋಕೆ ಅಮೆರಿಕಾದಿಂದ ಬಂದ್ರಾ? ಬರ್ಯೋಕೆ ಬೇರೆ ವಿಷ್ಯಗಳು ಇಲ್ವಾ? ಅನಾಥಾಲಯದ ಸಲುವಾಗಿಯೇ ನಮ್ಮ ಮಾವ ದೇಶಾಂತರ ಹೋಗಿದ್ದು, ನಮ್ಮತ್ತೆ ಅರೆ ಹುಚ್ಚಿಯಾಗಿದ್ದು. ಲಕ್ಷಾಂತರ ಬಾಳೋ ಜಾಗ, ಬಿಲ್ಡಿಂಗ್ ನಮ್ಮ ಕೈ ಬಿಟ್ಟುಹೋಗಿದ್ದು. ಅದ್ಕೇ ಭವ್ಯ ಮನೆ ಬಿಟ್ಟು ಎಸ್ಟೇಟ್‌ಗೆ ವಾಸಕ್ಕೆ ಬಂದಿದ್ದು, ಹಾಳಾದ ಜನ ಸಂಪರ್ಕವೇ ಬೇಡ್ವೆಂದು" ಪಟಪಟ ಆಡಿಬಿಟ್ಟಳು. ಕಾದ ಕಾವಲಿಯ ಮೇಲೆ ಎರಚಿದ ಭತ್ತ ಅರಳಾಗಿ ಸಿಡಿದು ಹೋದಂತೆ.

"ಸಾರಿ, ನಂಗೆ ಯಾವ್ದೇ ವಿಷ್ಯಗಳು ಗೊತ್ತಿರ್ಲಿಲ್ಲ." ಕ್ಷಮೆ ಯಾಚಿಸಿದಳು ನೋವಿನ ಸ್ವರದಲ್ಲಿ "ಇನ್ಮೇಲೆ ಇಲ್ಲಿಗೆ ಬರೋದ್ಬೇಡ. ಅನಾಥಾಲಯದ ಬಗ್ಗೆ ನಮ್ಗೇನು ಗೊತ್ತಿಲ್ಲ" ಖಚಿತವಾಗಿ ಹೇಳಿದ ಮಾಲತಿ ಸರ್ರನೆ ಹಿಂದಿರುಗಿಬಿಟ್ಟಳು.

ನಿಂತ ಜಾಗದಲ್ಲಿ ಸ್ತಬ್ಧವಾದಳು. ಇಷ್ಟೊಂದು ಜಿಗುಪ್ಸೆಪಡುವ ಅನಾಥಾಲಯದ ಮಕ್ಕಳಲ್ಲಿ ತಾನು ಒಬ್ಬಳೆಂದು ತಿಳಿಸಿದ್ದರೇ ಆಗುತ್ತಿದ್ದ ಪರಿಣಾಮವನ್ನು ಲೆಕ್ಕ ಹಾಕಿ ಚಲಿಸಿಹೋದಳು. ಮನದಲ್ಲಿ ಕೃತಜ್ಞತೆ ಹೇಳಿದು ಅನಿಕೇತನಿಗೆ.

ಹಿಂದಿರುಗಿ ಬಂದಾಗ ನವನೀತ್ ಅವಳ ಸಪ್ಪಗಿನ ಮುಖವನ್ನು ಗಮನಿಸಿದರೂ ಏನು ಕೇಳದಿದ್ದರೂ ಹೇಳಿದ. "ನೀವು ಕೂತಿರಿ ಮೇಡಮ್" ಎಂದವನು ಟ್ಯಾಕ್ಸಿಯನ್ನು ಹಿಂದಕ್ಕೊಂದು ನಿಲ್ಲಿಸಿದವನು ಇಳಿದು "ಮೇಡಮ್, ನೀವು ಇರೀ, ಯಾವ ಬಸರಿಕಟ್ಟೇಂತ ನಾನು ವಿಚಾರಿಸ್ಕೊಂಡ್ಬರ್ತೀನಿ" ಹೋದವನು ಹಿಂದಿರುಗಲು ಅರ್ಧ ಗಂಟೆ ಆಯಿತು.

"ನಾನು ಬಸುರಿಕಟ್ಟೆಗೆ ಕರ್ಕೊಂಡ್ಹೋಗ್ತೀನಿ, ಮೇಡಮ್. ಆದ್ರೆ ಒಂದ್ವಿಷ್ಯ.... ನನ್ತಂಗಿ ವೈಕುಂಠ ಸಮಾರಾಧನೆ. ನೀವ್ಬಂದು ನಮ್ಮ ಮನೆಯಲ್ಲಿ ಊಟ ಮಾಡ್ಬೇಕು. ನಮ್ಮಮ್ಮ ನಿಮ್ಗೇ ಹರಿಶಿನ, ಕುಂಕುಮ ಕೊಡ್ಬೇಕೂಂತಿದ್ದಾರೆ, ತಗೋತೀರಲ್ಲ" ಕೇಳಿದ.

ಮೊದಲು ಕಕ್ಕಾಬಿಕ್ಕಿಯಾದರೂ ಗೋಣಾಡಿಸಿ, ಒಪ್ಪಿಗೆ ಸೂಚಿಸಿದಳು. ನವನೀತ್ ಹರ್ಷಿತನಾದ. ಟ್ಯಾಕ್ಸಿ ಹೋಗಿ ನಿಂತಿದ್ದು ಅವನ ಮನೆಯ ಮುಂದೆ. ಮೊದಲು ಇಳಿದವನು ಡೋರ್ ತೆಗೆದು ಅತ್ಯಂತ ವಿನಮ್ರತೆಯಿಂದ ಸ್ವಾಗತಿಸಿದ.

"ಮನೆ ಚಿಕ್ದು ಆದ್ರೂ ಮನುಷ್ಯರು ಇದ್ದಾರೆ. ಮನಸ್ಸುಗಳು ಇವೇಂತ ತಿಳ್ಕೊಂಡ್ರೆ ಸಾಕು." ಎದೆಯಾಳದಲ್ಲಿನ ಆತ್ಮೀಯತೆ ಕಿಂಚಿತ್ ಇಣಕಿ, ತಂಗಿ ಸತ್ತ ನೋವನ್ನು ಕ್ಷಣ ಕಾಲ ಮರೆತ.

ಪುಟ್ಟ ಮನೆಯಲ್ಲಿದ್ದ ಜನಾನ ನೋಡಿ ಗಾಬರಿಯಾದಳು. ಸ್ವಲ್ಪ ಗಾಳಿ, ಬೆಳಕಿನ ನಡುವೆ ಈ ಜನ ಹೇಗೆ ಉಸಿರಾಡುತ್ತಾರೆ? ಅದೊಂದು ದುಃಖದ ಸಂದರ್ಭ, ಸಂತಾಪದ ಸನ್ನಿವೇಶವಾದುದ್ದರಿಂದ ಎಲ್ಲರ ಮುಖಗಳ ಮೇಲು ದುಃಖ ಇತ್ತು.

ನವನೀತ್ ವಯಸ್ಸಾದ ತಾಯಿ ಬಂದು ಬರಮಾಡಿಕೊಂಡಳು. ಭಾವಚಿತ್ರವಿಟ್ಟು ಅದಕ್ಕೆ ಹೂವಿನ ಹಾರ ಹಾಕಲಾಗಿತ್ತು. ಊದುಬತ್ತಿ ಉರಿಯುತ್ತಿತ್ತು. ಆ ಸುವಾಸನೆ ಕೂಡ ತುಸು ಕಮಟಾಗಿ ಆ ಸಂದರ್ಭಕ್ಕೆ ವಿಲಕ್ಷತೆಯನ್ನು ಕವಿಸಿದಂತೆ ಕಂಡಿತು.

ಸಖಿಯ ಎದೆಯ ಬಡಿತವೇರಿತು. ಒಂದು ರೀತಿಯ ಗಾಬರಿ. ಹಣೆಯಂಚನ್ನು ಅಲಂಕರಿಸಿದ್ದು ಬೆವರಿನ ಬಿಂದುಗಳು. ಅಂಗೈಗಳು

ಬೆವತುಹೋಗಿದ್ದವು. ಬಂದವರೆಲ್ಲ ಹೂವನ್ನೋ, ಹೂವಿನ ಹಾರವನ್ನೋ ಇಟ್ಟು ಫೋಟೊ ಬಳಿ ಕೈ ಜೋಡಿಸಿ ನಿಲ್ಲುತ್ತಿದ್ದರು ಕೆಲವು ಕ್ಷಣ.

ಉಗುಳು ಗಂಟಲಲ್ಲಿ ಸಿಕ್ಕಿಕೊಂಡಂತಾಯಿತು. ಅತ್ತಿತ್ತ ನೋಡಿದವಳು ತನ್ನ ಬ್ಯಾಗ್‌ನಲ್ಲಿದ್ದ ಸೆಂಟಿನ ಬಾಟಲನ್ನು ಅಲ್ಲಿಟ್ಟು ಕೈ ಜೋಡಿಸಿ ಎರಡು ಕ್ಷಣ ನಿಂತಳು.

ಆ ಪ್ಯಾಕೆಟ್‌ನ ಆಕರ್ಷಣೆಗೋ ಏನೋ ಒಬ್ಬ ಚಡ್ಡಿಧಾರಿ ಯುವಕ ಪಕ್ಕನೆತ್ತಿಕೊಂಡದ್ದು, ಇನ್ನೊಬ್ಬ ಕಸಿದ. ಇಬ್ಬರ ಕಾದಾಟಕ್ಕೆ ಆ ಪುಟ್ಟ ಜಾಗವೇ ಮೈದಾನವಾಯಿತು. ಕಡೆಗೆ ನವನೀತ್ ಕಿತ್ತುಕೊಂಡವನು ಆ ಬಾಟಲು ಓಪನ್ ಮಾಡಿ ಅದರಲ್ಲಿನ ಸುಗಂಧವನ್ನೆಲ್ಲ, ತಂಗಿಯ ಫೋಟೊದ ಮುಂದಿದ್ದ ಹಾರ ಹೂಗಳ ಮೇಲೆ ಸುರಿದ. ಅದರ ತಿಳಿಯಾದ ಸುವಾಸನೆ ಗಾಳಿಯಲ್ಲಿ ಹಬ್ಬಿ ಇಡೀ ವಾತಾವರಣವನ್ನೇ ಬದಲಿಸಿತು.

ನವನೀತ್‌ನ ತಾಯಿ ಅವಳನ್ನು ಕೂಡಿಸಿ ಹಣೆಗೆ ಹಚ್ಚಿ ಸೀರೆ, ಕುಪ್ಪಸವನ್ನು ಹಣ್ಣು ಹೂಗಳ ಜೊತೆ ಕೊಟ್ಟಾಗ ಅವಳು ಅಷ್ಟು ಜನರ ಮಧ್ಯೆ ನವನೀತ್‌ನ ಹುಡುಕಿದಳು. ಹಿಂದೆ ನಿಂತವನು ಕಣ್ಣಲ್ಲಿ ಕ್ಷಮೆ ಯಾಚಿಸಿದ. ಆಮೇಲೆ ಏನು ನಡೆಯಿತೋ, ಏನು ಹೇಳಿದರೋ ಅವಳಿಗೊಂದೂ ಗೊತ್ತಾಗಲಿಲ್ಲ.

ಟ್ಯಾಕ್ಸಿಯಲ್ಲಿ ಕೂತ ನಂತರವೇ ಸಮಾಧಾನದ ಉಸಿರು ದಬ್ಬಿದ್ದು. ಸಖೀಯೆಂದು ನಾಮಕರಣ ಮಾಡಿದ್ದ ಅನಿಕೇತ್. ಮಗಳನ್ನು ಕಳೆದುಕೊಂಡ ಒಬ್ಬ ತಾಯಿ ಹಣೆಗೆ ಹಚ್ಚಿ ಮಗಳ ನೆನಪಿಗಾಗಿ ಉಡುಗೊರೆಯನ್ನಿತ್ತು ಸತ್ಕರಿಸಿದ್ದಳು.

ಒಂದು ಕಡೆ ಟ್ಯಾಕ್ಸಿ ನಿಲ್ಲಿಸಿದ ನವನೀತ್ ಇಳಿದು ಹೋಗಿ ಎಳನೀರು ಕೊಚ್ಚಿಸಿಕೊಂಡು ಸ್ಟ್ರಾ ಹಾಕಿ ತಂದ "ತಗೊಳ್ಳಿ ಮೇಡಮ್, ಪ್ಲೀಸ್....." ಕೊಟ್ಟು ಅಲ್ಲಿಂದ ಕಣ್ಮರೆಯಾದವನು ಕುಡಿದ ನಂತರವೇ ಬಂದಿದ್ದು "ಥ್ಯಾಂಕ್ಯೂ, ತುಂಬ ತುಂಬ ಧನ್ಯವಾದ. ಒಂದು ರೀತಿಯ ಸಂತೃಪ್ತಿ, ನನ್ತಂಗಿಗೆ ಎಳನೀರೂಂದ್ರೆ ತುಂಬ ಇಷ್ಟ. ಅಪ್ಪಗಾಗಿ ಎಂದಾದ್ರೂ ತಗೊಂಡ್ಹೋಗ್ತಾ ಇದ್ದೆ" ಕಣ್ಣೊರೆಸಿಕೊಂಡು ಟ್ಯಾಕ್ಸಿ ಹತ್ತಿದ.

ಒಂದೆರಡು ಕಿಲೋಮೀಟರ್ ಕ್ರಮಿಸಿದ ಟ್ಯಾಕ್ಸಿ ಟೈರ್ ಪಂಕ್ಚರ್ ಆಗಿ

ಪಕ್ಕಕ್ಕೆಳೆದುಕೊಂಡು ಹೋಗಿ ಮರಕ್ಕೆ ಮುತ್ತಿಕ್ಕಿ ನಿಂತಾಗ ಅವಳು ಚಿಮ್ಮಿದರೂ ಏನಾಗಲಿಲ್ಲ. 'ಮೈ ಗಾಡ್....' ಎದೆಯ ಮೇಲೆ ಕೈ ಇಟ್ಟುಕೊಂಡಳು.

ಹಣೆಯೊತ್ತಿಕೊಂಡು ಇಳಿದ ನವನೀತ್ ಮೊದಲು ಗಮನವರಿಸಿದ್ದು ಅವಳತ್ತ "ಸಾರಿ ಮೇಡಮ್, ಏನಾಗ್ಲಿಲ್ಲ ತಾನೇ! ಆಕಸ್ಮಿಕವೆಂದ್ಕೊಂಡ್ರು ನಾನು ಇನ್ನು ಸ್ವಲ್ಪ ಅಲರ್ಟ್ ಆಗಿರ್ಬೇಕಿತ್ತೇನೋ!" ಎಂದ. ನಡೆದದ್ದಕ್ಕೆ ತಾನೇ ನೈತಿಕ ಜವಾಬ್ದಾರಿಯೊತ್ತು ಪಶ್ಚಾತ್ತಾಪದಿಂದ ನುಡಿದ.

"ಓಕೇ, ಅದ್ರಲ್ಲಿ ನಿಮ್ಮ ತಪ್ಪೇನಿದೆ?" ರೋಡಿನತ್ತ ನೋಟವರಿಸಿದಳು. ಡಾಂಬರ್ ರಸ್ತೆಯಾದರೂ ಅಲ್ಲಲ್ಲಿ ಗುಳಿ ಬಿದ್ದು ಕಲ್ಲುಗಳೆದ್ದು ಇಡೀ ರೋಡು ಅಸ್ತವ್ಯಸ್ತಗೊಂಡಂತೆ ಕಂಡಿತು. ಪ್ರಯಾಣ ಕೂಡ ಸುಖಕರವೇನಲ್ಲ.

ಅವಳಲ್ಲಿದ್ದ ಎರಡು ಕಾರುಗಳು ಎ.ಸಿ. ಇಂಥ ಟ್ಯಾಕ್ಸಿಗಳಿಗೆ ಹೋಲಿಕೆ ಮಾಡುವಂತಿರಲಿಲ್ಲ. ಹಂಸದಂತೆ ತೇಲುತ್ತಿತ್ತು ನ್ಯೂ ಯಾರ್ಕ್ ರಸ್ತೆಗಳಲ್ಲಿ.

"ಮೇಡಮ್, ಸ್ವಲ್ಪ ಟೈರ್ ಬದಲಾಯಿಸಿಬಿಡ್ತೀನಿ" ಜಾಕ್ ಹಿಡಿದು ಹೋದಾಗ ಮರದ ನೆರಳಲ್ಲಿ ಹೋಗಿ ಕೂತು ಸಾಕಾಗಿ ನಿಂತಳು. ಆಗಾಗ ಒಂದೊಂದು ವೆಹಿಕಲ್‌ಗಳು, ಓಡಾಡುತ್ತಿದ್ದವು. ಆದರೆ ಒಬ್ಬರಾದರೂ ನಿಲ್ಲಿಸಿ ಏನೆಂದು ವಿಚಾರಿಸದಿದ್ದದ್ದು ಆಶ್ಚರ್ಯವೆನಿಸಿತು.

ಚಕ್ರ ಬದಲಾಯಿಸಿದ ಮತ್ತೇನೋ ಪ್ರಾಬ್ಲಮ್ ಟ್ಯಾಕ್ಸಿ ಸ್ಟಾರ್ಟ್ ಆಗಲಿಲ್ಲ. ನವನೀತ್ ಸಂಕೋಚದಿಂದ ಕೈಯೊರೆಸುತ್ತ ಬಂದ.

"ಗಾಡಿಯಲ್ಲಿ ಏನೋ ಪ್ರಾಬ್ಲಮ್ ಇದೆ. ಏನ್ಮಾಡೋದೂಂತ ತೋಚ್ತಾ ಇಲ್ಲ. ಬೇರೆ ಯಾವುದಾದ್ರೂ ವೆಹಿಕಲ್ಸ್ ಬಂದ್ರೆ ಏನಾದ್ರೂ ಮಾಡ್ಬಹ್ದು." ತೀರಾ ಬೇಸರಗೊಂಡು ಹೇಳಿದ. ತೀರಾ ಕಸಿವಿಸಿಯೇ ಅವನಿಗಂತು.

.....

ಒಂದು ಟ್ಯಾಕ್ಸಿಯೇನೋ ಬಂತು. ನವನೀತ್‌ಗೆ ಪರಿಚಯವಿದ್ದುದೇ. ನಿಲ್ಲಿಸಿ ವಿಚಾರಿಸಿದವನು ಒಂದು ಗಂಟೆಯೊಳಗೆ ಹಿಂದಿರುಗಿ ಬರುವುದಾಗಿ ಅವರೆಗೂ ಕಾಯಬೇಕೆಂದು ಹೇಳಿ ಹೋದ.

"ನವನೀತ್, ನಿಮ್ಮ ಮನೆಯಲ್ಲಿದ್ದ ಜನವೆಲ್ಲ ನೆಂಟರಾ?" ಕೇಳಿದಳು. ಆ ಪುಟ್ಟ ಮನೆಯಲ್ಲಿನ ಅಷ್ಟು ಜನರನ್ನು ಜ್ಞಾಪಿಸಿಕೊಂಡು. ಅವನ ಕಣ್ಣುಗಳು ಕಿರಿದಾದವು, ಉಗುಳು ನುಂಗಿದ ಬಲವಂತದಿಂದ.

"ನೆಂಟರೂ ಅನ್ನೋದು ಅಷ್ಟು ಸರಿಯಾಗುತ್ತೋ ಇಲ್ವೋ. ಹೆಚ್ಚು ಕಡ್ಮೆ ಒಂದ್ನಾಲ್ಕು ಜನನ ಬಿಟ್ಟು ಮಿಕ್ಕವ್ರೆಲ್ಲ ಆ ಮನೆಯವ್ರೆ. ನಮ್ಮಮ್ಮನಿಗೆ ಒಂಬತ್ತು ಮಕ್ಳು. ನಾನು ಎರಡನೆಯವ್ನು, ಅಂದ್ರೆ... ಒಂದೇ ಪರಿವಾರದ ಜನ." ಹೇಳಿದ.

ಅರಿವಾಗದಂತೆ ಅವನ ಕೈ ಬಾಯಿ ಮೇಲಕ್ಕೆ ಹೋಯಿತು. ಈ ಸೆಂಚುರಿಯ ಕೊನೆಯಲ್ಲಿ ಕೂಡ ಒಂಬತ್ತು ಜನರನ್ನು ಹಡೆಯುವ ಹೆಣ್ಣು, ಅಷ್ಟು ಸಂತಾನವನ್ನು ಸಾಕುವ ಯಜಮಾನ, ಈ ರೀತಿ ಜನಸಂಖ್ಯೆಯ ಏರುವಿಕೆಯನ್ನು ನೋಡುತ್ತ ತೆಪ್ಪಗೆ ಕೂತ ಸರ್ಕಾರ. ಗಾಬರಿಯೇ ಆಯಿತು.

"ಒಂಬತ್ತು ಜನ, ಎಲ್ಲರನ್ನು ನಿಮ್ಮ ತಾಯಿನೇ ಸಾಕಿದ್ರಾ?" ಅಚ್ಚರಿಯಿಂದ ಕೇಳಿದಾಗ ಹೌದೆಂದು ತಲೆದೂಗಿದವನು "ಬರೀ ತಮ್ಮ ಮಕ್ಳುನ ಮಾತ್ರವಲ್ಲ, ನಮ್ಮ ಚಿಕ್ಕಪ್ಪನ ಐದು ಮಕ್ಳು ಕೂಡ ಆಕೆಯ ಕೈಯಲ್ಲಿ ಬೆಳೆದಿದೆ. ಅಷ್ಟು ಮಕ್ಳಿಗೆ ಪ್ರೀತಿ ಹಂಚಿದ್ರೂ ಬೇರೆ ಮಕ್ಳು ಕಂಡ್ರೆ ಪ್ರಾಣ." ತಾಯಿಯಬಗ್ಗೆ ಗೌರವ, ಅಭಿಮಾನದಿಂದ ಹೇಳಿಕೊಂಡ.

ಅವಳ ಮನ ಅಮೆರಿಕೆಗೆ ಹಾರಿತ್ತು. ಶ್ರೀಮಂತ ರಾಷ್ಟ್ರದ ಜನ ಜನಸಂಖ್ಯೆಯ ಬಾಹುಳ್ಯದಿಂದ ಹೆಚ್ಚು ಮಕ್ಕಳನ್ನು ಪಡೆಯದೇ, ತಮ್ಮ ಮಕ್ಕಳ ಮೇಲಿನ ಪ್ರೇಮ, ಆಕರ್ಷಣೆಯನ್ನು ನಾಯಿ, ಬೆಕ್ಕುಗಳ ಮೇಲೆ ತೋರಿಸುತ್ತಾರೆ. ಅವೆರಡರಲ್ಲಿ ಪ್ರಥಮ ಆಕರ್ಷಣೆ ನಾಯಿಯ ಮೇಲೆ. ಡಯಾನ ಸದಾ ನಾಯಿ ಲಿಲ್ಲಿಯನ್ನು ಎತ್ತಿಕೊಂಡು ಓಡಾಡುತ್ತಾರೆ, ಮುಖ್ಯ ಕಾರ್ಯಕ್ರಮಗಳಿಗೆ ಹೋಗುವಾಗ ಕೂಡ ವಾಹನದಲ್ಲಿ ತಮ್ಮ ಪಕ್ಕದಲ್ಲಿಯೇ ಕೂಡಿಸಿಕೊಳ್ಳುತ್ತಾರೆ. ಆ ಪ್ರಾಣಿಯ ಮೇಲಿನ ಅತಿಯಾದ ಪ್ರೀತಿಯ ವಿಷಯದಲ್ಲಿ ಗಂಡ, ಹೆಂಡಿರ ಮಧ್ಯೆ ಜಗಳವಾದದ್ದು ಕೂಡವುಂಟು. ಕೆಲವೊಮ್ಮೆ ಹೆಚ್ಚಿನ ಪ್ರೀತಿಯುಂಟಾದಾಗ ಡಯಾನ ತಮ್ಮ ಪಕ್ಕದಲ್ಲಿಯೇ ಅದನ್ನು ಮಲಗಿಸಿಕೊಂಡು ಮಗುವನ್ನು ತಟ್ಟಿ ಮಲಗಿಸುವಂತೆ ಹಾಡುತ್ತ ನಿದ್ದೆ ಮಾಡಿಸುತ್ತಿದ್ದರು.

ನವನೀತ್ ಸ್ವಲ್ಪ ಲಿಮಿಟ್ ಮೀರಿ ತುಟಿ ಜಾರಿ ಕೇಳಿಬಿಟ್ಟ "ನಿಮ್ಗೇ ಸೋದರ, ಸೋದರಿಯರೆಷ್ಟು?" ಆಮೇಲೆ ತಪ್ಪಿನ ಅರಿವಾದಾಗ ಕ್ಷಮೆ ಯಾಚಿಸಿದ "ಸಾರಿ ಮೇಡಮ್, ನಾನು ಕೇಳ್ಬಾರ್ದಾಗಿತ್ತು."

"ಹಾಗೇನಿಲ್ಲ....." ಎಂದವಳು ಯೋಚಿಸಿದಳು. ಈಗ ಡಯಾನ ಸಂತಾನ ಮತ್ತು ಕ್ಲಿಂಟನ್‌ರ ಮಕ್ಕಳ ಜೊತೆ, ಅವರ ಹಿಂದಿನ ಪತ್ನಿಯ, ಪತಿಯ ಸಂತಾನ ಕೂಡ ಲೆಕ್ಕ ಹಾಕಿ ಹೇಳಬೇಕಾ ಅಥ್ವಾ, ತೋಚದಾಯಿತು. ಮೌನವಹಿಸಿದಳು. ಆದರೂ ಯಾಕೋ ಏನಾದರೂ ಹೇಳಬೇಕೆನಿಸಿತು.

"ನನ್ನ ತಮ್ಮ ಟೆಡ್ಡಿ ತುಂಬ ಸ್ಮಾರ್ಟ್. ಓದೋದರಲ್ಲಿ ಕೂಡ ಇಂಟಲಿಜೆಂಟ್. ಅವ್ನಿಗೆ ನಾಯಿನ ಕಂಡ್ರೆ ಇಷ್ಟ. ನನ್ನ ಅಪಾರ್ಟ್‌ಮೆಂಟ್‌ನ ಪಕ್ಕದ ಅಪಾರ್ಟ್‌ಮೆಂಟ್‌ನಲ್ಲಿ ಒಂದು ಬೆಕ್ಕು ಇದೆ. ಅವ್ನಿಗೆ ಅದ್ನ ಕಂಡ್ರೆ ಪ್ರಾಣ. ತಮ್ಮ ಮಗುನ ಬೇಬಿ ಕೇರ್ ಸೆಂಟರ್‌ನಲ್ಲಿ ಬಿಟ್ಟು ಅದ್ನ ಮುದ್ದು ಮಾಡ್ತಾರೆ" ಹೇಳಿದಳು. ಅಂತರ್ಗತವಾದ ಒತ್ತಡದಿಂದ ಹೊರ ಬಂದ ಮಾತುಗಳು ಅವು. ಅವನ ಪ್ರಶ್ನೆಗೆ ಅಸಂಬದ್ಧವಾದ ವಿವರವೇನೋ ಎನ್ನಿಸಿತು ಮರುಕ್ಷಣ ಅವಳಿಗೆ.

ಅಷ್ಟರಲ್ಲಿ ಟ್ಯಾಕ್ಸಿ ಹಿಂದಕ್ಕೆ ಬಂದುದ್ದರಿಂದ ನವನೀತ್ ಡ್ರೈವರ್‌ನ ಮಾತಾಡಿಸಿ "ಸಾರಿ ಮೇಡಮ್, ನಾನ್ಹೇಳಿದ್ದೀನಿ. ನಿಮ್ಮನ್ನ ಬಸರಿಕಟ್ಟೆಗೆ ಕರ್ಕೊಂಡ್ಹೋಗ್ತಾನೆ" ಎಂದ. ಹ್ಯಾಂಡ್ ಬ್ಯಾಗ್‌ನಿಂದ ಬಾಡಿಗೆ ಹಣ ತೆಗೆಯಲು ಹೋದಾಗ ತಡೆ. "ನಿಮ್ಗೆ ತೊಂದರೇನೇ ಆಯ್ತು. ನಾಳೆ ಹೋಟಲ್ ಹತ್ರ ಒಂದು ಭೇಟಿ ಮಾಡ್ತೀನಿ" ತಾನೇ ಟ್ಯಾಕ್ಸಿ ಡೋರ್ ತೆಗೆದು ಕೂತ ನಂತರ ಹಾಕಿ ಕೈಯಾಡಿಸಿ ಕೆಟ್ಟು ನಿಂತಿದ್ದ ಟ್ಯಾಕ್ಸಿಯ ಬಳಿ ಹೋದ.

ಡಾಬರ್ ರಸ್ತೆ ಬಿಟ್ಟು ಮಣ್ಣಿನ ರೋಡಿಗೆ ಟ್ಯಾಕ್ಸಿ ಇಳಿದಾಗ, ಎರಡು ಕಡೆ ಎತ್ತಿ ಕುಕ್ಕಿತು "ಥೂ..." ಕ್ಯಾಕರಿಸಿ ಹೊರಗೆ ಉಗಿದ ಡ್ರೈವರ್ "ಕ್ಯಾ, ಮೇಮ್ ಸಾಬ್.... ನಿಮ್ಗೇ ಇಲ್ಲಿ ಯಾರು ನೆಂಟರು ಇದ್ದಾರೆ?" ಎಂದ. ಜಿಗುಪ್ಸೆ ಇತ್ತು ಅವನ ದನಿಯಲ್ಲಿ. ದೋಸ್ತ್ ನವನೀತ್ ಹೇಳದಿದ್ದರೇ, ಈ ರೋಡಿಗೆ ತನ್ನ ಹೊಸ ಲಗ್ಷುರಿ ಟ್ಯಾಕ್ಸಿಯನ್ನು ಇಳಿಸುತ್ತಿರಲಿಲ್ಲ.

ಮಾತೇ ಆಡಲಿಲ್ಲ ಸಖೀ. ಬಂಧುತ್ವವನ್ನು ಹೇಗೆ ವಿವರಿಸಲು ಸಾಧ್ಯವೇ? ನೆನಪಿಲ್ಲದ ಸಾಕಮ್ಮನನ್ನು ಅರಸಿಕೊಂಡು ಬಂದಿದ್ದಳು, ಕಾಣದ ಈ ಗ್ರಾಮಕ್ಕೆ.

"ಆಕೆಗೂ, ವಾರ್ಡನ್‌ಗೂ ತುಂಬ ಚೆನ್ನಾಗಿತ್ತು. ಆಕೆ ಸಿಕ್ಕರೇ ಏನಾದ್ರೂ ಗೊತ್ತಾಗ್ಬಹ್ದು" ವಾಸುದೇವಯ್ಯ ಹೇಳಿದ್ದ. ಏನು

ಗೊತ್ತಾಗಬಹುದು ? ಎಷ್ಟು ಗೊತ್ತಾಗಬಹುದು ? ಲೆಕ್ಕಕ್ಕೆ, ಅರ್ಥಕ್ಕೆ ಸಿಗದ ವಿಷಯಗಳು.

ರೋಡು ಮತ್ತಷ್ಟು ಕೊರಕಲಾಗಿ ಒಂದು ಕಡೆ ನಿಂತೇಬಿಟ್ಟಿತು ಟ್ಯಾಕ್ಸಿ. ಬೈಯ್ದುಕೊಂಡು ಇಳಿದು ಹೋದ ಡ್ರೈವರ್ ಎರಡು ಕಡೆ ಇದ್ದ ಕಲ್ಲುಗಳನ್ನು ಎಸೆದು ಕೈ ಕೊಡವುತ್ತ ಬಂದು ಟ್ಯಾಕ್ಸಿ ಹತ್ತಿದವನು ಹಿಂದಕ್ಕೆ ತಿರುಗಿದ.

"ಒಳ್ಳೆ ಗ್ರಹಚಾರ ಮೇಡಮ್, ಈ ರೋಡಿನಲ್ಲಿ ನನ್ನ ಟ್ಯಾಕ್ಸಿ ದಿನಕ್ಕೆರಡು ಸಲ ಓಡಾಡಿದ್ರೆ. ಆರು ತಿಂಗ್ಳಿಗೆ ಸ್ಕ್ರಾಪ್ ಮಾಡ್ಸಿ ಗುಜರಿಯಲ್ಲಿ ತಟ್ಟಬಿಡ್ಬೇಕಾಗುತ್ತೆ." ಗೊಣಗಿದ ಅವನಿಗೆ ತೀವ್ರವಾದ ಅಸಮಾಧಾನ. ಅನ್ನ ಕೊಡುವ ಟ್ಯಾಕ್ಸಿಯೆಂದರೆ ಪ್ರಾಣ ಅದನ್ನು ಅಪಾಯಕ್ಕೊಡ್ಡಲು ಯಾವಾಗಲೂ ಸಿದ್ಧನಿಲ್ಲ.

ಅಂತೂ ಗ್ರಾಮದ ಒಂದು ಸರಹದ್ದಿನಲ್ಲಿ ಬಂದು ಟ್ಯಾಕ್ಸಿ ನಿಂತಾಗ "ಮಾಪ್ ಕರೋ, ಮೇಮ್.... ಇನ್ನ ಮುಂದಕ್ಕೆ ನನ್ನಿಂದಾಗೊಲ್ಲ ನೀವ್ಹೋಗಿ ನಿಮ್ಮೆಲ್ಲ ಮುಗ್ಸಿಕೊಂಡ್ಬನ್ನಿ" ಎಂದವನೇ ಕೆಳಗಿಳಿದು ಟ್ಯಾಕ್ಸಿಯ ಸುತ್ತು ಒಂದು ಸುತ್ತು ಬಂದ.

ಕೆಳಗಿಳಿದ ಸಖೀ, ಇಷ್ಟು ದಿನ ನೋಡದ ಒಂದು ಭಿನ್ನ ಪ್ರಪಂಚ ಕಂಡಂತಾಯಿತು. ತೀರಾ ಕಿರಿದಾದ ದಾರಿ ಮುಂದಕ್ಕೆ ಹೋಗಿ ಒಂದು ಅರಳಿಕಟ್ಟೆಯ ಬಳಿ ಮುಕ್ತಾಯಗೊಂಡಂತಾಗಿತ್ತು. ಬರೀ ಅಂಗಿ ತೊಟ್ಟ ಅರೆ ನಗ್ನ, ಪೂರ್ತಿ ನಗ್ನ ಹುಡುಗರು ಆಟವಾಡುತ್ತಿದ್ದ ಕಲ್ಲು, ಕೋಲು ಇಂಥ ಪದಾರ್ಥಗಳನ್ನು ಹಿಡಿದು ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಮುಂದಕ್ಕೆ ಸಾಗಿದವಳು ಅವಳಿಗೆ ತೀರಾ ಸನ್ನಿಹದಲ್ಲಿ ಹೋಗಿ ನಿಂತು, ಎಲ್ಲೆಡೆ ನೋಟ ಹರಿಸಿದಳು. ಊರನ್ನು ಎರಡು ಭಾಗ ಮಾಡಿದಂತೆ ಒಂದು ಕಡೆ ತೀರಾ ಸಂಪನ್ನರ, ಅರೆ ಶ್ರೀಮಂತರ (ಗ್ರಾಮದ ಮಟ್ಟಿಗೆ) ಜನರ ಮನೆಗಳು ಇದ್ದರೇ ಇನ್ನೊಂದು ಕಡೆ ಬಡತನದ ಕುರುಹಾಗಿ ಅರೆಬರೆ ಹೆಂಚುಗಳನ್ನು ಹೊದ್ದ, ಹುಲ್ಲಿನ ಮಾಡುಗಳಿಗೆ ಹೊದ್ದ ಮನೆಗಳ ಒಂದು ಕಡೆಗೆ ತೀರಾ ಗುಡಿಸಿಲುಗಳು ಇದ್ದವು.

ತೀರಾ ಮಧ್ಯಾಹ್ನದ ಹೊತ್ತು, ಸೂರ್ಯ ನೆತ್ತಿಯ ಮೇಲಿದ್ದ. ನವನೀತ್ ಟ್ಯಾಕ್ಸಿ ಕೆಟ್ಟು ಕೆಲವು ಗಂಟೆಗಳು ಕೈಗೆ ಸಿಕ್ಕದೇ ಉರುಳಿ ಹೋಗಿದ್ದೇ ಸಮಸ್ಯೆಯಾಗಿತ್ತು.

ರುಮಾಲು ಸುತ್ತಿ ಸ್ವಲ್ಪ ಬೆಳ್ಳಗಿನ ಬಟ್ಟೆಗಳನ್ನು ಧರಿಸಿ ಹೊರಟಿದ್ದ

ರಾಜ್ಯ ಕೇಂದ್ರ ಗ್ರಂಥಾಲಯ ಬೆಂಗಳೂರು

ವ್ಯಕ್ತಿಯನ್ನು ನಿಲ್ಲಿಸಿ "ಇಲ್ಲಿ ಸಾಕಮ್ಮ ಅನ್ನೋರ ಮನೆ ಗೊತ್ತಾ?" ಕೇಳಿದಳು ಮಾಮೂಲಿನ ನವಿರುತನದಿಂದಲೇ.

ಅಡಿಯಿಂದ ಮುಡಿಯವರೆಗೂ ಒಂದು ತರಹ ನೋಟ ಹರಿಸಿದ ವ್ಯಕ್ತಿಯ ಕಣ್ಣುಗಳಲ್ಲಿ ವಿಚಿತ್ರವಾದ ಹೊಳಪೇನು ಮೂಡದಿದ್ದರೂ ಕಾಡು ಪ್ರಾಣಿಯನ್ನು ದಿಟ್ಟಿಸುವಂತಿತ್ತು. ಸಮಾಜ ಕಾರ್ಯಕರ್ತೆಯರು ಆರೋಗ್ಯ ಸುಧಾರಣೆ ಡಿಪಾರ್ಟ್‌ಮೆಂಟ್‌ನವರು ಬರುವುದುಂಟು. ಇವರು ಯಾವ ವೈಕಿ ?

"ಇಲ್ಲಿ ಸಾಕಮ್ಮ ಅನ್ನೋರು? ಎಲ್ಲಿದ್ದಾರೆ?" ಆ ಮನುಷ್ಯ ಬೇಸರದಿಂದಲೇ "ಆ ಹೆಸರಿನೋರ ಇಲ್ಲಿ ಮೂರ್ನಾಲ್ಕು ಮಂದಿ ಇದ್ದಾರೆ" ಎಂದ ಪಕ್ಕಕ್ಕೆ ಉಗುಳುತ್ತ. ಅವಳ ಮೇಲೆ ಉಗುಳಿದಂತಾಯಿತು.

ಸ್ವಚ್ಛತೆಗೆ ಹೆಸರಾದ ನ್ಯೂ ಯಾರ್ಕ್‌ನಿಂದ ಬಂದವಳು. ಉಗಿಯುವುದು, ಸಿಂಬಳ ಎಸೆಯುವುದು, ಪೇಪರ್, ಬಾಳೆಹಣ್ಣಿನ ಸಿಪ್ಪೆ ಎಸೆಯುವಂಥ ನೋಟಗಳು ಅಪರೂಪಕ್ಕೂ ಕಾಣುವಂತಿರಲಿಲ್ಲ. ಕಾರಿನಲ್ಲಿ ಹೋಗುವಾಗ ಕೂಡ ಬೀದಿಗೆ ಉಗಿಯುವಂತಿರಲಿಲ್ಲ. ಅಲ್ಲಲ್ಲಿ ಡಬ್ಬಗಳನ್ನು ಇರಿಸುತ್ತಿದ್ದರು. ದೈಹಿಕ ಸ್ವಚ್ಛತೆ, ಸಾಮಾಜಿಕ ಸ್ವಚ್ಛತೆ, ಮನೆ ಪರಿಸರ ರಸ್ತೆ ಈ ಎಲ್ಲಾ ಬಗೆಯ ಸ್ವಚ್ಛತೆಯ ಬಗ್ಗೆ ಅಮೆರಿಕನ್ನರ ಚಿಂತೆ.

ಸ್ವಲ್ಪ ಮುಂದಕ್ಕೆ ಹೋದಳು. ಮೂರು ಜನ ಸಾಕಮ್ಮ ಎನ್ನುವ ಹೆಸರು ಇರುವ ಮಹಿಳೆಯರು ಇದ್ದಾರೆಂದು ಕೇಳಿಯೇ ಅವಳ ತಲೆ ಬಿಸಿಯಾಗಿತ್ತು.

ಒಂದು ಗುಡಿಸಲ ಮುಂದೆ ಒಬ್ಬ ಮುದುಕಿ ಕೂತು ವಾಚಾಮಗೋಚರವಾಗಿ ಬಯ್ಯುತ್ತಿದ್ದಳು ಎನಿಸಿತು. ಅವಳ ಮುಖದಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ಗುರ್ತಿಸಿ. ಒಬ್ಬ ಹೆಂಗಸು ಪರಕೆ ಹಿಡಿದು ಬಂದು ಸಣ್ಣ ಹುಡುಗನನ್ನು ಅಟ್ಟಿಸಿಕೊಂಡು ಬರುತ್ತಿದ್ದಳು. ವಿಚಿತ್ರವೆನಿಸಿತು.

ಅವಳಿದ್ದ ನ್ಯೂ ಯಾರ್ಕ್ ಒಂದು ಸಣ್ಣ ಪ್ರಪಂಚವೇ ಅಲ್ಲಿ ಜಗತ್ತಿನ ಎಲ್ಲಾ ಭಾಗದ ಜನರನ್ನು ನೋಡಬಹುದಿತ್ತು. ರಷ್ಯನ್ನರು, ಜಪಾನಿಗಳು, ಯಹೂದಿಗಳು, ಬೌದ್ಧರು, ಪಂಚೆಯುಟ್ಟು ಮೈಗೆಲ್ಲ ನಾಮ

ಬಳಿದುಕೊಂಡ. ಜುಟ್ಟುಧಾರಿ ಅಮೆರಿಕನ್ನರು ಭಾರತೀಯರು. ಅದೊಂದು ವಿಶ್ವ ಮಾನವ ನಗರದಿಂದ ಬಂದೋಳು.

ಎಚ್ಚರಕ್ಕೆ ಬಂದೋಳು ಆಡುತ್ತಿದ್ದ ಹತ್ತು ವಯಸ್ಸಿನ ಹುಡುಗನನ್ನು ಹತ್ತಿರಕ್ಕೆ ಕರೆದಳು. ಅವನು ಅಲ್ಲಿಂದಲೇ ಹುಬ್ಬು ಕುಣಿಸಿ ಕೇಳಿದನೇ ವಿನಃ ಹತ್ತಿರಕ್ಕೆ ಬರಲಿಲ್ಲ. ತಾನೇ ಅವನ ಬಳಿಗೆ ಹೋದಳು. ಬಂದಾಗಿನಿಂದ ಅವಳ ಗಮನಕ್ಕೆ ಒಂದು ಅಂಶ ಬಂದಿತ್ತು. ಕೆಲವು ಕಡೆ ಬಿಟ್ಟು. ಆಗಾಗ ಅವಳು ಪರ್ಸ್ ತೆಗೆದು 'ಟಿಪ್ಸ್' ಅಥವಾ ಮತ್ತೇನು ಹೇಳಲು ಸಾಧ್ಯವಿತ್ತೋ ಹಣವನ್ನಂತು ಕೊಡಬೇಕಿತ್ತು. ನಂತರ ಕೆಲಸ ಸುಲಭವಾಗಿತ್ತು.

ಪರ್ಸ್‌ನಿಂದ ಒಂದು ಚಾಕಲೇಟ್ ಬಾರ್‌ನ ತೆಗೆದು ಕೊಟ್ಟು ನಂತರವೇ ಕೇಳಿದ್ದು "ಇದು ಬಸರಿಕಟ್ಟೇನಾ ? ಇಲ್ಲಿ ಸಾಕಮ್ಮ ಅನ್ನೋರು ಇದ್ದಾರ ?" ಮುಖವನ್ನು ನೋಡಿದವನು ಏನು ಅನ್ನಿಸಿತೋ ಚೂಟಿ ಹುಡುಗ, ಒಂದಿಷ್ಟು ಕಮಾಯಿಸಬಹುದು ಅಂದುಕೊಂಡನೇನೋ, "ಇದೆಲ್ಲ ಏನ್ಬೇಡಾವ್ವ, ರೊಕ್ಕ ಕೊಟ್ಟರೇನೇ ಕೆಲ್ಸ" ಹಿಂದಿರುಗಿಸಲು ಬಂದ. ಅವಳಿಗೆ ಏನೇನೋ ಗೊತ್ತಾಗಲಿಲ್ಲ. ಆದರೆ ಅವನು ಅರ್ಥ ಮಾಡಿಕೊಂಡ. "ಹಣ ಕೊಡ್ಬೇಕು, ಈ ಚಾಕಲೇಟಿನಿಂದೇನು ಹೊಟ್ಟೆ ತುಂಬಲಕ್ಕ" ಕೈ ಬಾಯಿ ತಿರುಗಿಸಿ ಅರ್ಥ ಮಾಡಿಕೊಟ್ಟ.

ಐದರ ಒಂದು ನೋಟನ್ನು ಕೊಟ್ಟು "ಚಾಕಲೇಟು ನೀನೇ ಇಟ್ಕೋ, ಇಲ್ಲಿ ಸಾಕಮ್ಮ ಅನ್ನೋರು ಎಲ್ಲಿದ್ದಾರೆ ?" ಕೇಳಿದಳು.

ಕಣ್ಣರಳಿಸಿದ ಚೋಟುದ್ದ ಹುಡುಗ ಕೆಟ್ಟದಾಗಿ ನಗೆ ಬೀರಿದ "ಅದಾ ಕೇಸ್, ಮೊದ್ಲಿಗೆ ಗೊತ್ತಾಗಿದ್ರೆ.... ಒಂದಿಪ್ಪತ್ತು ವಸೂಲು ಮಾಡ್ತಾ ಇದ್ದೆ. ಹೋಗ್ಲಿ, ಹೋಗೋವಾಗ ಕೊಡಿ." ಮಹಾ ಉಪಕಾರ ಮಾಡಿದವನಂತೆ ಕರೆದೊಯ್ದು ಒಂದು ಗುಡಿಸಿಲಿಗೆ.

ಅಲ್ಲೊಂದು ಮಧ್ಯ ವಯಸ್ಸಿನ ಹೆಣ್ಣು, ಒಂದು ಹುಡುಗಿಯನ್ನು ಮುಂದೆ ಕೂಡಿಸಿಕೊಂಡು ಹೇನು ತೆಗೆಯುತ್ತಿದ್ದರ ನಡುವೆ ಆಗಾಗ, ಅವಳ ತಲೆಯನ್ನು ಒರಟಾಗಿ ಆಡಿಸಿ ಬೆನ್ನಿಗೆ ಒಂದೊಂದು ಗುದ್ದು ಹಾಕುತ್ತಿದ್ದಳು ಆಗಾಗ. ಬಡತನ, ಅಜ್ಞಾನ, ಅನಕ್ಷರತೆಯ ಒಂದು ಚಿತ್ರದಂತೆ ಕಂಡಿತು ಅಲ್ಲಿನ ಪರಿಸರ ನೋಡಿ.

ಪಕ್ಕದಲ್ಲಿಯೇ ಹರಿದು ಹೋದ ಚರಂಡಿಯ ನೀರು, ಅದರ ವಾಸನೆಯ ಜೊತೆ ಹಾರಾಡುವ ನೊಣ, ಸೊಳ್ಳೆ, ಮೂಗು ಮುಚ್ಚಿಕೊಳ್ಳುವುದು ಮಾತ್ರವಲ್ಲ, ಬೆಳಿಗ್ಗೆ ತಿಂದ ಟೋಸ್ಟ್ ಬಾಯಿಗೆ ಬಂದು ಪಕ್ಕಕ್ಕೆ ಅಷ್ಟು ದೂರಕ್ಕೆ ಹೋಗಿ ಉಗುಳಿದಳು. ತಲೆ 'ಧಿಂ' ಎಂದಿತು. ನಿಲ್ಲಲೂ ಕಷ್ಟವೆನಿಸಿದರು ಸಾವರಿಸಿಕೊಂಡಳು.

ನೀರು ಬೇಕೆನ್ನುವಂತೆ ಕೈ ಸನ್ನೆ ಮಾಡಿದಾಗ ಆ ಹೆಣ್ಣು ಕೂತಿದ್ದ ಮಗಳಿಗೊಂದು ಗುದ್ದು ಹಾಕಿ ಮೇಲೆದ್ದಳು 'ವಿದ್ಯೆ, ಕಲೀದೆ ನಮ್ಮಂಥವೇ ಭೇಷಕ್! ಸುಖ ಬೇಕೂಂದ್ಮೇಲೆ ಅನುಭವಿಸ್ಬೇಕು' ಗೊಣಗಿಕೊಂಡು ಹೋಗಿ ಒಂದು ಸಿಲ್ವರ್ ಲೋಟದಲ್ಲಿ ನೀರು ತಂದಳು. ಅದು ಇದ್ದ ಸ್ಥಿತಿ, ನೀರಿನಲ್ಲಿ ಪರೆಯಂತೆ ತೇಲುತ್ತಿದ್ದ ಕಲ್ಮಷಗಳನ್ನು ನೋಡಿ ಬೇಡವೆಂದು ಸನ್ನೆ ಮಾಡಿದಳು. ರಪ್ ಎಂದು ನೀರನ್ನು ನೆಲಕ್ಕೆರಚಿದಳು ಇವಳ ಮುಖಕ್ಕೆರಚುವಂತೆ 'ಎಲ್ಲಾ ಆದ್ಮೇಲೆ ಈ ನೀರೇ ಕುಡೀಬೇಕು' ಮುಖ ಗಡಿಗೆ ಗಾತ್ರ ಮಾಡಿ ಸಿಂಡರಿಸಿಕೊಂಡು ಕೊಚ್ಚೆಯೊಳಕ್ಕೆ ತಾಂಬೂಲದ ರಸ ಉಗಿದಾಗ ಅವಳ ಉಡುಪಿನವರೆಗೂ ಹಾರಿತು.

"ಸಾಕವ್ವನ ನೋಡೋಕೆ ಬಂದಾರ! ನಂಗೂ ರಾತ್ರಿಗೆ ರಾವಷ್ಟು ಮೀನಿನ ಸಾರು ಮಡ್ಗಬೇಕು" ಹೇಳಿ ಹಲ್ಲು ಗಿಂಜಿ ಆ ಹುಡುಗ ಪರಾರಿಯಾದ.

ಒಳಗೆ ಹೋದ ಹೆಣ್ಣು ಅದೇ ಸಿಲ್ವರ್ ಲೋಟದಲ್ಲಿ ಒಂದು ಹಸಿರು ಔಷಧಿ ತಂದಿತ್ತು "ಇದ್ನ ಕುಡ್ದು ಕುಂತ್ಕ! ಎಷ್ಟು ತಿಂಗ್ಳು?" ಸ್ವಲ್ಪ ಕಠೋರವಾಗಿದ್ದ ಮುಖವನ್ನು ಕೆಟ್ಟದಾಗಿ ಮಾಡಿ ನೋಡಿದಾಗ ನಾಲ್ಕರ ಚಳಿ ಬಂದಂತಾಯಿತು. ಸಖೀಗೆ ದಿಗ್ಭ್ರಮೆ, ತೊಡೆಗಳು ಕಂಪಿಸಿತು.

ನೆಲದಲ್ಲಿ ಅಳುತ್ತ ಮಲಗಿದ್ದ ಕೂಸನ್ನು ಸೊಂಟಕ್ಕೇರಿಸಿ ದಾಪುಗಾಲು ಹಾಕುತ್ತ ಅಷ್ಟು ದೂರ ಹೋದವಳು ಹಿಂದಿರುಗಿ ನೋಡಿ. "ಕುಡ್ದು ಮಲಕ್ಕಾ, ಸಾಕವ್ವ ಹೊಲದ ಕಡೆ ಹೋಗದೆ, ಕರ್ಕೊಂಡ್ಬರ್ತೀನಿ ಬಿರೀನ್" ತೆಳ್ಳಗಿನ ಶರೀರವನ್ನು ಎಳೆದುಕೊಂಡು ಹೋದಾಗ ಪಕ್ಕದ ಗುಡಿಸಿಲಿನಿಂದ ಬಂದ ಒಬ್ಬಾಕೆ "ಸಾಕವ್ವ, ಕೈ ನಡಗತ್ತೈತೆ ಮೊದ್ಲಿನ ಹಂಗಿಲ್ಲ, ಮಿಡ್‌ವೈಫ್ ಅವ್ಳೇ ಊರ್ನಾಗ. ಬೋ ಒಳ್ಳೇ ಮನಸ್ಸು. ಹೆಚ್ಚು ಕಡ್ಮೆ ಆಗ್ದಂಗೆ ನೋಡ್ಕೊತಾಳೆ. ಸುಮ್ನೇ ಹೋಗ್ಬಿಡು. ಆ ತಾಯಿ ಮಗ್ಳು ಬಂದ್ರೆ.... ನಿನ್ನ ಬಿಡೋಂಗಿಲ್ಲ, ಒಬ್ಳೇ ಬಂದಂಗೆ ಕಾಣ್ತೇಯಾ ಬೇಗ್ನೇ ಹೋಗ್ಬಿಡು. ಎಡಕ್ಕೆ

ಹಳದಿ ಬಣ್ಣ ಹಚ್ಚಿರೋದೇ ಮಿಡ್‌ವೈಫ್ ಅಮ್ಮನ್ನ ಮನೆ" ಎಂದಳು. ಏನು ಅರ್ಥವಾಗದಿದ್ದರೂ ಅವಳು ಹೇಳಿದ ರೀತಿಯಿಂದಲೇ ಏನೋ ಅಪಾಯವಿದೆಯೆಂದು ಸಿಲ್ವರ್ ಲೋಟವನ್ನ ಕೆಳಕ್ಕೆ ಹಾಕಿಬಿಟ್ಟು ಅತ್ತ ನಡೆಯತೊಡಗಿದಾಗ "ಏಯ್ ನಿಂತ್ಕ...." ಎಲ್ಲಿಂದಲೋ ದನಿ ಕೇಳಿಸಿತು. ಎದ್ದನೋ ಬಿದ್ದನೋ ಓಡಿದವಳು, ಬಿಳಿ ಕೋಟು ಸ್ಟೆತಾಸ್ಕೋಪ್ ಧರಿಸಿದ್ದ ವ್ಯಕ್ತಿಯನ್ನು ಕಂಡನಂತರವೇ ನಿಂತಿದ್ದು.

"ಎಕ್ಸ್‌ಕ್ಯೂಜ್ ಮಿ ಸರ್...." ಎಂದವಳು ಬಂದ ವಿಷಯ ಹೇಳಿ, "ಮುಚ್ಚಿ ಹೋದ ಅನಾಥಾಲಯದಲ್ಲಿ ಸಾಕಮ್ಮ ಅನ್ನೋ ಮಹಿಳೆ ಆಯಾ ಆಗಿದ್ಲು. ಅವಳಿಂದ ಅನಾಥಾಶ್ರಮ ಮತ್ತು ಮುಚ್ಚಿ ಹೋಗಲು ಕಾರಣ ತಿಳ್ಕೋಬೇಕು. ಅದು ನಾನು ಬರ್ಯೋ ಪುಸ್ತಕಕ್ಕೆ ಅಗತ್ಯವಿದೆ." ವಿವರಿಸಿದಾಗ ಡಾಕ್ಟರ್ ಮುಖದ ಭಾವನೆಗಳೇ ಬದಲಾಯಿತು. ಅದು ಅಮೆರಿಕಾದಿಂದ ಬಂದ ಹೆಣ್ಣು "ಕಮಿನ್...." ಪುಟ್ಟ ಆಸ್ಪತ್ರೆಯೊಳಕ್ಕೆ ಕರೆದೊಯ್ದರು. ವಾರಕ್ಕೆರಡು ಸಲ ರೋಗಿಗಳ ತಪಾಸಣೆಗೆ ಇಲ್ಲಿಗೆ ಬರುತ್ತಿದ್ದರು. ಇಂದು ಯಾವುದೇ ಪೇಷಂಟ್‌ಗಳು ಇಲ್ಲದಿದ್ದರಿಂದ ಹೊರಟಿದ್ದರು. ಮತ್ತೆ ಆಸ್ಪತ್ರೆ ಬಾಗಿಲು ತೆಗೆಸಿದರು. ಫ್ಲಾಸ್ಕ್‌ನಲ್ಲಿ ಕಾಫೀ ತರಿಸಿ ವಿವರಿಸಿದ ನಂತರ "ನನ್ನ ಮಗ ಕೆನಡದ ಟೊರಾಂಟೋ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿದ್ದಾನೆ. ನಾನು ಕೂಡ ಬಂದಿದ್ದೆ. ನಂಗೆ ಹೆಚ್ಚು ಹಿಡಿಸಿದ ಜಾಗ. ಅಲ್ಲಿ ಕರ್ನಾಟಕ ಸಂಗೀತಕ್ಕೆ ಬಂದು ವಿದ್ಯಾಪೀಠವಿದ್ದು ಭಾರತದಲ್ಲಿ ಸಂಗೀತವನ್ನು ಕಲಿತು ಹೋಗಿದ್ದ ಹಿಗ್ಗಿನ್ಸ್‌ರು ಅಲ್ಲಿ ಪ್ರಾಧ್ಯಾಪಕರಾಗಿದ್ದ ಸಂದರ್ಭದಲ್ಲಿ ಒಂದೆರಡು ದಿನ ಅವರೊಂದಿಗೆ ಕಳೆದಿದ್ದೆ." ನೆನಪುಗಳನ್ನು ಹಂಚಿಕೊಂಡರು. ಯಾಕೋ ಅವರಿಗೆ ಭಾರತದ ಬಡತನ, ಅಜ್ಞಾನಕ್ಕಿಂತ ತಾಂಡವಾಡುತ್ತಿದ್ದ ಭ್ರಷ್ಟಾಚಾರದ ಬಗ್ಗೆ ಕೋಪಗೊಂಡವರಂತೆ ಮಾತಾಡಿದರು.

ಹೊರಡುವಾಗ ಮಿಡ್‌ವೈಫ್‌ಗೆ ಆದೇಶಿಸಿದರು "ಮೊದ್ಲು ಸಾಕಮ್ಮನ್ನ ಹುಡ್ಕಿ, ಮೂವರಲ್ಲಿ ಯಾರೂಂತ ತಿಳ್ಕೊಂಡ ನಂತರ ಇವ್ರಿಗೆ ಏನು ಸಹಾಯ ಬೇಕೋ ಅದ್ನ ಮಾಡು."

ಡಾಕ್ಟರ್ ಹೊರಟನಂತರ ಆಯಾ ಲಕ್ಷ್ಮಿ ಜವಾನನಿಗೆ ಹೇಳಿ "ಇಲ್ಲೇ ಹತ್ತಿರದಲ್ಲಿ ನನ್ನ ಕ್ವಾಟರ್ಸ್ ಇದೆ. ಮೊದ್ಲು ಊಟ ಮುಗ್ಸಿ. ಆಮೇಲೆ ಕಾರ್ಯಕ್ಕೆ ತೊಡಗೋಣ" ತನ್ನ ಬ್ಯಾಗ್‌ನ ಹೆಗಲಿಗೇರಿಸಿ ಹೊರ ನಡೆದಳು.

ಅವಳ ಜೊತೆ ಹೆಜ್ಜೆ ಹಾಕಿದ ಸಖೀ ಅಷ್ಟು ದೂರ ಹೋದವಳು ನಿಂತಳು. ಅದೇ ಸಾಕಮ್ಮನ ಮನೆಯ ಮುಂದೆ ಇಬ್ಬರು ಹೆಂಗಸರು ಒಬ್ಬರ ಕೂದಲು ಹಿಡಿದು ಇನ್ನೊಬ್ಬರು ಜಗ್ಗಾಡುತ್ತ ನೆಲದಲ್ಲಿ ಉರುಳಾಡುತ್ತಿದ್ದರು. ಅವಾಚ್ಯ ಬೈಗಳನ್ನು ಸುರಿಸುತ್ತ. ಕೆಲವು ಅರೆಬೆತ್ತಲೆಯ ಹುಡುಗರು ಪ್ರೇಕ್ಷಕರಾಗಿದ್ದರೇ, ಒಬ್ಬ ಮುದುಕಿ ಬಾಯಿ ಬಡಿದುಕೊಂಡು ಗೋಳಾಡುತ್ತಿದ್ದಳು.

"ಈ ಕಡೆ ಹೋಗ್ಬಿಡೋಣ. ಸ್ವಲ್ಪ ಸುತ್ತಾದ್ರೂ ಸೇಫ್, ಆ ಮಹಾತಾಯಿ ನನ್ನ ಸೇರ್ಸಿಕೊಂಡು ಬೈಯೋಕೆ ಷುರು ಮಾಡ್ತಾಳೆ. ನೆಲದಲ್ಲಿ ಕೂತ್ಕೊಂಡ್ ಬಾಯಿ ಬಡ್ಕೋತಿದ್ದಳಲ್ಲ, ಅವ್ಳೇ ಸಾಕಮ್ಮ" ಹೇಳಿ ಸ್ವಲ್ಪ ಹಿಂದಕ್ಕೆ ಕರೆದೊಯ್ದು ಸಣ್ಣನೆಯ ಕಾಲು ದಾರಿ ಹಿಡಿದ ಒಂದು ಪಂಪು ಹೌಸ್ ಸುತ್ತಿಕೊಂಡು ಲಕ್ಷ್ಮಿಯ ಕ್ವಾರ್ಟರ್ಸ್‌ಗೆ ಹೋದರು. ಪೆಟ್ಟಿಗೆಯಂಥ ಪುಟ್ಟ ಮನೆ. ಸದ್ಯಕ್ಕೆ ಅರಮನೆಯೆನಿಸಿತು ಸಖೀಗೆ.

ಬಾಗಿಲು ತೆರೆದ ಲಕ್ಷ್ಮಿ "ಬನ್ನಿ ಮೇಡಮ್, ಒಂದು ಪುಸ್ತಕ ಬರ್ಯೋಸಲುವಾಗಿ ಇಷ್ಟೊಂದು ಸುತ್ತಾಟ ನಡ್ಸಿದ್ದೀರಲ್ಲ. ನಂಗಂತು ಆಶ್ಚರ್ಯ" ಎಂದಾಗ ಪ್ರತಿಕ್ರಿಯಿಸಲಿಲ್ಲ ಸಖೀ. ಕನ್ನಡವನ್ನು ಎಷ್ಟೇ ಕಲಿತಿದ್ದರು ನಿರರ್ಗಳವಾಗಿ ಮಾತಾಡಲು ಪದಗಳ ಹುಡುಕಾಟ ನಡೆಸಬೇಕಿತ್ತು. ತಕ್ಷಣ ಪ್ರತಿಕ್ರಿಯಿಸಲು ಕೂಡ ಸಾಧ್ಯವಾಗುತ್ತಿರಲಿಲ್ಲ.

ಬೀಗದ ಕೈಯನ್ನು ಒಂದು ಕಡೆ ಇರಿಸಿದ ಲಕ್ಷ್ಮಿ ಬಾತ್‌ರೂಂಗೆ ಹೋಗಿ ಬಂದು ಯೂನಿಫಾರಂ ಬದಲಾಯಿಸಿ "ಬಾತ್‌ರೂಂಗೆ ಹೋಗಿ ಮುಖ ತೊಳ್ಕೊಳ್ಳಿ, ಆ ವೇಳೆಗೆ ನಾನು ಊಟಕ್ಕೆ ರೆಡಿ ಮಾಡ್ತೀನಿ" ಬಾತ್‌ರೂಂ ತೋರಿಸಿ ಕಿಚನ್‌ಗೆ ಹೋದಳು.

ಅವಳು ಇಳಿದುಕೊಂಡಿದ್ದ ಸ್ಟಾರ್ ಹೋಟಲ್‌ಗಿಂತ ಅವಳ ಅಪಾರ್ಟ್‌ಮೆಂಟ್ ಸೋಫಿಸ್ಟಿಕೇಟೇಡ್ ಆಗಿತ್ತು. ಮುಜುಗರವೆನಿಸಿದರೂ ಮುಖ ತೊಳೆದು ಬಂದಳು. ಆದರೂ ಸಾಕಮ್ಮನ ಗುಡಿಸಿಲಿನ ಮುಂದಿನ ಹೊಲಸು ರಾಚಿ ನೆನಪಾಗಿ ಹೊಟ್ಟೆ ತೊಳಸಿಕೊಂಡು ಬಂತು. ಬದುಕು ಇಲ್ಲಿ ಬೆತ್ತಲೆಯಾಗಿತ್ತು.

ಅಷ್ಟರಲ್ಲಿ ಹೊರಗೆ ದೊಡ್ಡ ಗದ್ದಲ, ಬೈಗುಳು. ಲಕ್ಷ್ಮಿ ಬಾಗಿಲು ತೆರೆದುಕೊಂಡು ಓಡಿದಳು. ಸಾಕಮ್ಮ ಅವಳ ಸೊಸೆ ಇವಳತ್ತ ಕೈದೂಡಿ ಮಣ್ಣೆರಚಿ ಗೋಳಾಡುತ್ತ ಬೈಯುತ್ತಿದ್ದರು.

'ರಪ್' ಎಂದು ಬಾಗಿಲು ಹಾಕಿ ಒಳಗೆ ಬಂದ ಲಕ್ಷ್ಮಿ "ಇವ್ರ ನಾಲಿಗೆಗೆ ನಾನು ಆಹಾರ!" ತೆರೆದಿದ್ದ ಕಿಟಕಿಗಳನ್ನು ಹಾಕಿದಳು "ನಾಲ್ಕು ಕಾಸು ಕೈಗೆ ಸಿಕ್ಕೊಂದ್ರೆ ಅತ್ತೆ-ಸೊಸೆ ಕುಡ್ದು ತೂರಾಡ್ತಾರೆ. ಇಂಥ ಜನನ ಹುಡ್ಕಿಕೊಂಡ್ಬರ್ತಾರೆ ನೋಡಿ ಬಸಿರು ಇಳ್ಸಿ ಕೊಳ್ಳೋಕೆ" ಕೆಟ್ಟದಾಗಿ ಮುಖ ಮಾಡಿ ಅಂದಳು.

ಅಲ್ಪಸ್ವಲ್ಪ ಅರ್ಥವಾದಾಗ ಬೆಚ್ಚಿಬಿದ್ದಳು ಸಖೀ. ಪುಟ್ಟ ಹುಡುಗ ಕಣ್ಣೊಡೆದು ಹೋದದ್ದನ್ನು ನೆನಪು ಮಾಡಿಕೊಂಡಳು.

ಆಮೇಲೆ ಸಖೀ ಒಂದಿಷ್ಟು ಹೇಳಿದಾಗ ಲಕ್ಷ್ಮಿ ಬಿದ್ದು ಬಿದ್ದು ನಕ್ಕಳು. "ಈಗ ಅರ್ಥವಾಯ್ತು ಬಿಡಿ, ಅವ್ರ ಮಣ್ಣಿನ ತೂರಾಟಕ್ಕೆ. ಅವ್ರ ಬಳಿ ಬಂದ ಕೇಸ್ ನಂಗೆ ದಕ್ಕಿತು ಅನ್ನೋ ಆಕ್ರೋಶ ಆ ಹೆಣ್ಣುಗಳಿಗೆ" ಮತ್ತಷ್ಟು ವಿವರಿಸಿದಳು.

ಆಸ್ಪತ್ರೆ, ನರ್ಸಿಂಗ್‌ಹೋಂಗೆ ಹೋದರೇ ಮತ್ತೆಲ್ಲಿ ತಮಗೆ ತೊಂದರೆಯಾಗುವುದೋ ಎಂದು ಮದುವೆಯಾಗದೇ ಸುಖ ಪಡೆದ ಯುವತಿಯರು ಇಂಥ ಜನರನ್ನು ಹುಡುಕಿಕೊಂಡು ಬರುತ್ತಾರೆ. ಮುಂದಿನ ಅಪಾಯ ಪ್ರಜ್ಞೆ ಇಲ್ಲದೆ, ವಿದ್ಯಾವಂತ ಜನ ಹೇಗೆ ಮೂಢರಾಗುತ್ತಾರೆ ಇಂಥ ವಿಷಯಗಳಲ್ಲಿ? ಆಮೇಲಿನ ಅನಾಹುತಗಳ ಬಗ್ಗೆ ಹೇಳಿಕೊಂಡಳು ಲಕ್ಷ್ಮಿ. ಅಂತು ಈ ಸಾಕಮ್ಮ ಗ್ರಾಮಕ್ಕೆ ಮಾತ್ರವಲ್ಲ ಅದಕ್ಕೂ ಆಚೆ ರಹಸ್ಯವಾಗಿ ಪ್ರಖ್ಯಾತಳಾಗಿದ್ದಾಳೇಂತ ಅನ್ನಿಸಿತು.

ಬರೀ ಬ್ರೆಡ್ ತಿಂದು ಹಾಲು ಕುಡಿದಳು ಸಖೀ. ಆ ವೇಳೆಗೆ ಆಸ್ಪತ್ರೆಯ ಜವಾನ ಮೂರು ಸಾಕಮ್ಮದಿರ ವಿವರಗಳನ್ನು ತಂದ.

"ಬೆಳಿಗ್ಗೆ ಕೇರಿಯ ಸಾಕಮ್ಮ ತೀರಿಕೊಂಡ್ಳಂತೆ. ಇನ್ನ ಕುಡಕ ಸಾಕಮ್ಮ ಯಾರ್ಗೋ ವಾ ಮಗೋಚರವಾಗಿ ಬೈಯ್ಕೊಂಡ್ ಕೂತಿದ್ದಾಳೆ. ಇನ್ನ ಬೇಡರ ಸಾಕಜ್ಜಿ ಹಲ್ಲು ನೋವೂಂತ ಆಸ್ಪತ್ರೆಗೆ ಹೋದವ್ಳು ಬಂದಿಲ್ಲ" ಎಂದ. ಸದ್ಯಕ್ಕೆ ಈ ಸಾಕಮ್ಮ ಮಾತ್ರ ದೊರಕಿಯಾಳು.

ಸತ್ತ ಸಾಕಮ್ಮನೇ ಆಯಾ ಆಗಿದ್ದರೇ? ಇಂದಿನ ಶ್ರಮಕ್ಕೆ ಯಾವುದೇ ಬೆಲೆ ಇಲ್ಲ. ಈ ತಿರುವು ಇಲ್ಲಿಗೆ ಕ್ಲೋಸ್ ಆಗುತ್ತೆ. ಮುಂದಿನ ಹುಡುಕಾಟ ಎಲ್ಲಿಂದ ಪ್ರಾರಂಭಿಸಬೇಕೋ! ಕತ್ತಲು ಆವರಿಸಿದಂತಾಯಿತು ಅವಳನ್ನು.

ಹೆದರಿಸಿ ಒಂದಿಷ್ಟು ಬೆದರಿಕೆ ಹಾಕಿ ಸಾಕಮ್ಮನನ್ನು ಇಲ್ಲಿಗೆ ಕರೆತರಲು ಹೇಳಿ ಕಳಿಸಿದ ಲಕ್ಷ್ಮಿ "ಅಲ್ಹೋಗಿ ಮಾತಾಡೋದು ಕಷ್ಟ ಮೇಡಮ್.

ಅತ್ತೆ-ಸೊಸೆ ಇಬ್ರೂ ಕುಡುಕ್ರು. ಇವ್ರಿಗೆ ಹೆದ್ರಿ ಅಪ್ಪ, ಮಗ ಓಡಿಹೋದ್ರೂಂತ ಮಾತಾಡ್ಕೋತಾರೆ ಜನ. ಸಾಲದಕ್ಕೆ ಮಕ್ಳು ಬೇರೆ. ಇವರಿಬ್ರೂ ಎಂದೋ ಒಂದು ದಿನ ಕುಡ್ದು ಸತ್ರೇ, ಆ ಮಕ್ಳು ಪರದೇಶಿಗಳು ಆಗ್ಬೇಕು. ಇಲ್ಲ, ತಿಳಿವಳಿಕೆಯುಳ್ಳೋ ಊರಿನ ಮುಖಂಡರು ಅನಾಥಾಶ್ರಮಕ್ಕೆ ಸೇರ್ಸಬೇಕು'' ಸುಲಭವಾಗಿ ಆಡಿಬಿಟ್ಟಳು. ಅರಗಿಸಿಕೊಳ್ಳಲು ಕಷ್ಟವಾಯಿತು ಸಖೀ. ತಾನು ಕೂಡ ಸಾಕಮ್ಮ ಅಂಥ ಕುಟುಂಬದ ಮಗಳೇ ಆಗಿದ್ದರೇ! ಅತ್ಯಂತ ಭಯಂಕರ ಸ್ವಪ್ನ ಕಂಡಂತೆ ಬೆಚ್ಚಿಬಿದ್ದಳು.

ಮಾತಾಡದೇ ಕೂತಾಗ ಲಕ್ಷ್ಮಿ ಒಳಗೆದ್ದು ಹೋದಳು. ಪ್ರೆಸ್‌ನವರು ಎಂದರೇನೇ ಅವಳಿಗೆ ಭಯ. ಒಮ್ಮೆ ಒಂದು ಇಂಜಕ್ಷನ್ ಮಗುವಿಗೆ ಕೊಟ್ಟು ಆ ಮಗು ಸತ್ತು ಹಾದಿ ಬೀದಿ ರಂಪವಾಗಿ ಕೊನೆಗೆ ಎಲ್ಲಾ ಮುಚ್ಚಿ ಹೋದರೂ ಪೇಪರ್‌ನವರು ಬಿಟ್ಟಿರಲಿಲ್ಲ!

ಸಾಕಮ್ಮನನ್ನ ಕರೆತಂದು ಬಿಟ್ಟು ಹೋದ ಜವಾನ. ತೀರಾ ಜೀರ್ಣವಾದ ದೇಹದಲ್ಲಿ ಮೂಳೆ, ನರಗಳು ಎದ್ದು ಕಾಣುತ್ತಿದ್ದವು. ಉಟ್ಟ ಸೀರೆಗೆ ನಾಲ್ಕಾರು ತೇಪೆಗಳಾದರೆ, ಹೊಲಿದ ರವಿಕೆಯಲ್ಲಿ ದಾರ ಎದ್ದು ಕಾಣುತ್ತಿತ್ತು, ಬಡತನದ ಕೆಳ ರೇಖೆಯನ್ನು ತೋರಿಸುವಂತೆ ಎರಡು ಕೈ ಜೋಡಿಸಿಕೊಂಡು ಬಂದವಳು ಕುಸಿದು ಅಳತೊಡಗಿದಳು.

"ಮುಚ್ಚುಬಾಯಿ...." ಗದರಿಸಿದಳು ಲಕ್ಷ್ಮಿ "ಹೊರ್ಗಡೆ ಬಂದು ಬಾಯಿಗೆ ಬಂದಂತೆ ಕೂಗಾಡ್ತ ಇದ್ದೆಯಲ್ಲ, ಆಗೆಲ್ಲಿ ಹೋಗಿತ್ತು ಕಣ್ಣೀರು. ಇಲ್ಲಿಗಿಂತ ಜೈಲಿನಲ್ಲಿ ರಾಗಿ ಬಿಸ್ಕೊಂಡ್ ಇದ್ರೆ ಎರ್ಡುಹೊತ್ತು ಮುದ್ದೆನಾದ್ರೂ ಬೀಳುತ್ತೆ. ಇವ್ರು ಪೇಪರಿನೋರು. ಕೇಳಿದ್ದಕ್ಕೆ ಸರ್ಯಾಗಿ ಉತ್ತರ ಹೇಳು. ಒಂದ್ಮಾತು ಹೆಚ್ಚು ಕಡ್ಮೆಯಾಡಿದ್ರೆ ಕಂಬಿಗಳ ಹಿಂದೆ ಹೋಗ್ತೀಯಾ'' ಬೆದರಿಕೆ ಹಾಕಿದವಳು ಇವಳತ್ತ ತಿರುಗಿ "ಒಂದರ್ಧ ಗಂಟೆ ಆಸ್ಪತ್ರೆಯಲ್ಲಿ ಇದ್ಬಂದ್ಬಿಡ್ತೀನಿ. ಕಾಂಪೌಂಡರ್ ಕೂಡ ಊರಿನಲ್ಲಿಲ್ಲ'' ಹೇಳಿ ಅಪ್ಪಣೆ ಪಡದೇ ಹೋಗಿದ್ದು.

ದಢಾರನೇ ಎದ್ದ ಸಾಕಮ್ಮ ಅವಳ ಎರಡು ಕಾಲುಗಳನ್ನು ಹಿಡಿದು ಬಿಟ್ಟಳು "ಅವ್ವ ಮಳ್ಳಿ ಕಣಮ್ಮ ಏನೇನೋ ಹೇಳಿ ತಲೆ ಕೆಡ್ಸಿಬಿಟ್ಳು. ಈ ರಂಡೆ ತಪ್ಪನ್ನ ಹೊಟ್ಟೆಯಲ್ಲಿ ಹಾಕ್ಕೊಳ್ಳಿ'' ಎಂದು ಗೋಳಾಡುತ್ತ

ಸೊಸೆಯನ್ನು ಬೈಯ್ದುಕೊಂಡು ಕ್ಷಮಾಪಣೆ ಕೇಳಿದಳು. ಅವಳನ್ನ ಸಂತೈಯಿಸಿ ಧೈರ್ಯ ಹೇಳುವ ವೇಳೆಗೆ ಸಾಕು ಸಾಕಾಯಿತು ಸಖೀಗೆ.

"ಕಣ್ಣೊರೆಸ್ಕೊಂಡ್ ಸರ್ಯಾಗಿ ಕೂತ್ಕೋ.. ಕೇಳಿದ್ದಕ್ಕೆ ಜ್ಞಾಪ್ಸಿಕೊಂಡ್ ಉತ್ತರ ಕೊಟ್ರೆ ಸಾಕು. ನೀನು ಅನಾಥಾಶ್ರಮದಲ್ಲಿ ಕೆಲ್ಸದಲ್ಲಿ ಇದ್ಯಾ?" ಕೇಳಿದಳು.

ಮೊದಲೇ ಮುಖದ ಸುಕ್ಕುಗಳ ನಡುವೆ ಹುದುಗಿ ಹೋಗಿದ್ದ ಕಣ್ಣುಗಳು ಮತ್ತಷ್ಟು ಆಳಕ್ಕೆ ಇಳಿದರೂ ಗುಡ್ಡೆಗಳು ಫಳಫಳ ಎನ್ನುತ್ತಿದ್ದವು. ಭಯ, ಆಶ್ಚರ್ಯ, ಅಷ್ಟೇ ಅಲ್ಲಿದ್ದುದು. ಕನಿಕರವೆನಿಸಿತು.

"ನಂಗೆ ಮಾರಮ್ಮನಾಣೆಯಾಗೂ ಯಾವ ಅನಾಥಾಶ್ರಮಾನು ಗೊತ್ತಿಲ್ಲ, ಕಣ್ರವ್ವಾ! ಚಂದಿಹಟ್ಟಿಯಿಂದ ಬಂದೇ ನನ್ನವ್ವ ಬಸರಿಕಟ್ಟೆಗೆ ಇಲ್ಲೇ ಮುಗಿದ್ಹೋಯ್ತು ಬದ್ಕೆಲ್ಲ. ನನ್ನತ್ತೆ ಬಸುರಿ ಇಳ್ಸೋದೊಂದು ಕೆಲ್ಸ ಕಲ್ಸೀ, ಸತ್ಲು" ಕೈ ಕೈ ಮುಗಿದುಕೊಂಡು ಹೇಳಿದಳು.

ಇನ್ನಷ್ಟು ಅವಳ ಹತ್ತಿರಕ್ಕೆ ಛೇರ್ ಎಳೆದುಕೊಂಡು ಕೂತ ಸಖೀ "ಚೆನ್ನಾಗಿ ಜ್ಞಾಪಿಸ್ಕೋ, ನೀನು ಒಂದು ಅನಾಥಾಲಯದಲ್ಲಿ ಆಯಾ ಕೆಲ್ಸ ಮಾಡ್ತಾ ಇರ್ಲಿಲ್ವಾ?" ತೀರಾ ದನಿ ಮೃದುವಾಗಿಸಿ ಕೇಳಿದಳು ಕಾತುರದಿಂದ.

ಇವಳ ಎರಡು ಪಾದಗಳನ್ನು ಹಿಡಿದು "ನಿಮ್ಮ ಪಾದದಾಣೆಗೂ ಆ ಚಂದಿಕಟ್ಟೆ, ಈ ಬಸರಿಕಟ್ಟೆ ಬಿಟ್ಟು ಬ್ಯಾರೆ ಪರ್ಪಂಚ ಗೊತ್ತಿಲ್ಲ, ನನ್ನವ್ವಾ. ಈ ಮಳ್ಳಿ ಯಾವ ಸುಳ್ಳು ಹೇಳೋಲ್ಲ ಈ ಭೂತಾಯಿ ಆಣೆಗೂ...." ಎಂದವಳು ನೆನಪಿಗೆ ಬಂದ ದೇವರುಗಳ ಮೇಲೆಲ್ಲ ಸತ್ಯ ಪ್ರಮಾಣ ಮಾಡೋದರ ಜೊತೆಗೆ ಅವಳ ಮೊಮ್ಮಕ್ಕಳನ್ನು ಕೂಡ ಎಳೆದುಬಿಟ್ಟಳು ಆ ಪಂಥಿಗೆ.

ಸಖೀ ನಂಬಲೇಬೇಕಾಯಿತು. ಒಬ್ಬ ಸಾಕಮ್ಮ ಬಸರಿ ಕಟ್ಟೆ ಬಿಟ್ಟು ಹೊರಗೆ ಹೋದದ್ದಿಲ್ಲ, ಇನ್ನೊಬ್ಬಳು ಸತ್ತು ಭೂತಕಾಲಕ್ಕೆ ಸೇರಿದ್ದಳು. ಇನ್ನ ಉಳಿದವಳು ಹುಲ್ಲು ಕಿತ್ತಿಸಿಕೊಂಡು ಬರಲು ಹೋದ ಸಾಕಮ್ಮ. ಮಾರ್ಗ ಸುಲಭವಾಯಿತು; ಆದರೆ ಕೆಲಸ ಸುಗಮವೆನಿಸಿಲಿಲ್ಲ.

ಹತ್ತರ ಐದು ನೋಟುಗಳನ್ನು ಜೀರ್ಣವಾದ ಸಾಕಮ್ಮನ ಕೈಗಳಲ್ಲಿಟ್ಟು "ಹೋಗು, ಸುಮ್ನೇ ಕುಡ್ದು ಆರೋಗ್ಯ ಹಾಳು ಮಾಡ್ಕೋಬೇಡ." ಭುಜ ತಟ್ಟಿದಳು. ಅವಳನ್ನು ಯಾರೂ ಇಷ್ಟು ಆತ್ಮೀಯವಾಗಿ

ಕಂಡಿರಲಿಲ್ಲವೇನೋ, ಗೋಳೋ ಎಂದು ಅತ್ತಳು ಕೈ ಹಿಡಿದುಕೊಂಡು. ಕೈಯನ್ನು ಮತ್ತೆ ಮತ್ತೆ ಕಣ್ಣಿಗೊತ್ತಿಕೊಂಡಳು. ಈ ಕ್ಷಣ ಅವಳ ಜೀವ ಇರುವವರೆಗೂ ನೆನಪಿನಲ್ಲಿ ಇರುತ್ತೆ!

ಅವಳದೇ ಆದ ಭಾಷೆಯಲ್ಲಿ ಏನೋ ಹೇಳಿದಳು. ಅತ್ತಳು ರಾಗವಾಗಿ ಹಾಡಿದಳು. ಬಹಳ ಹೊತ್ತು ಇದು ಬೇಕಿರದ ಸಖೀ ಕೈ ಹಿಡಿದು ರೋಡಿನವರೆಗೂ ನಡೆಸಿಕೊಂಡು ಬಂದು ಬಿಡುವ ವೇಳೆಗೆ ಅವಳ ಸೊಸೆ ಧಾವಿಸಿ ಬಂದವಳೇ, ಎರಡು ಕೈಗಳಲ್ಲು ತಲೆಯ ಕೂದಲನ್ನು ಕಿತ್ತುಕೊಂಡು, ರಪರಪನೆ ಹಣೆ ಗಟ್ಟಿಸಿಕೊಂಡಳು.

"ಯವ್ವಾ, ನನ್ನ ಅತ್ತೆನ ಏನು ಮಾಡ್ಬೇಡಿ. ನಾವು ಪಾಪಿ ಪರದೇಶಿ, ದಿಕ್ಕಿಲ್ಲದ ಜನ. ಪೊಲೀಸರು ನಮ್ಮನ್ನು ಒಯ್ದ್ರೇ ನನ್ಮಕ್ಳಿಗೆ ದಿಕ್ಕು ಯಾರು?" ಅಳುವ ರಾಗ ಆಲಾಪನೆ ನಾಲ್ಕು ಕಡೆಯೂ ಪಸರಿಸಿ ಒಂದು ಸೀನ್ ಕ್ರಿಯೇಟ್ ಆದಾಗ ಚಲಿಸಿಹೋದಳು ಸಖೀ. "ಏನಿಲ್ಲ, ನಿಮ್ಮನ್ನೇನು ಪೊಲೀಸ್‌ನೋರು ಹಿಡ್ಕೊಂಡ್ಹೋಗೋಲ್ಲ. ನಿಮ್ಮತ್ತೆನ ಕರ್ಕೊಂಡ್ಹೋಗು" ಎಂದಳು.

ನೆಲದ ಮೇಲೆ ಬಿದ್ದ ಸೆರಗನ್ನ ಒರಟಾಗಿ ಹೆಗಲ ಮೇಲೆಸೆದು "ಬಾರೇ, ಅತ್ತಿ.... ನಿನ್ನ ಸಲುವಾಗಿ ನಾನು ಎಷ್ಟೆಲ್ಲ ಅನುಭವಿಸ್ಬೇಕೋ....." ಅವಳ ರಟ್ಟೆಗೆ ಕೈ ಹಾಕಿ ಎಬ್ಬಿಸಿ ಕರೆದೊಯ್ಯುತ್ತಿದ್ದವಳನ್ನೇ ನೋಡಿದಳು. ಇಲ್ಲಿ ಅತ್ತೆ ಸೊಸೆಯ ಸಂಬಂಧ ತಾಯಿ ಮಗಳ ಸಂಬಂಧಕ್ಕಿಂತ ಚೆನ್ನಿತ್ತು.

ಆಸ್ಪತ್ರೆಯತ್ತ ಹೊರಟ ಸಖಿಯನ್ನು ಗಾಳಿಯಂತೆ ಹಿಂಬಾಲಿಸಿ ಬಂದು ಅಡ್ಡಗಟ್ಟಿದ ಸಾಕಮ್ಮನ ಸೊಸೆ "ಅವ್ವಾ, ನೋಡಿ ಈ ಸೀರಿ ಹರ್ದು ಜಾಳು ಜಾಳಾಗಿದೆ. ಉಡೋಕೆ ಇನ್ನೊಂದು ಸೀರೀ ಇಲ್ಲ." ಕರುಣಾ ಜನಕವಾಗಿ ಹೇಳಿಕೊಂಡಾಗ ನೂರರ ಒಂದು ನೋಟನ್ನು ಅವಳ ಕೈಯಲ್ಲಿಟ್ಟು ನಡೆದಳು.

ಯಾರೊಂದಿಗೋ ಮಾತಾಡುತ್ತಿದ್ದ ಲಕ್ಷ್ಮಿ ಇವಳನ್ನು ನೋಡಿದ ಕೂಡಲೇ ಎರಡು ಮೆಟ್ಟಿಲು ಇಳಿದು ಬಂದಳು "ಏನಾದ್ರೂ ಹೇಳಿದ್ಳಾ, ಮೇಡಮ್?" ಕೇಳಿದಳು. ಇಲ್ಲವೆಂದು ತಲೆಯಾಡಿಸಿದಳು ಸಖೀ "ಇನ್ನೊಬ್ಬ ಸಾಕಮ್ಮನ್ನ ಮೀಟ್ ಮಾಡ್ಬೇಕು. ಇವ್ಳು ಬಸರಿಕಟ್ಟೆ ಬಿಟ್ಟು ಹೊರ್ಗೆ ಹೋಗಿಯೇ ಇಲ್ವಂತೆ. ಈಗ ಆ ಸಾಕಮ್ಮ ಇರೋದೆಲ್ಲಿ?" ಕೇಳಿದಳು.

"ತೋಟದಲ್ಲಿ ಇದ್ಲು, ಒಂದ್ಸಲ ಅವ್ಳ ಮೂರನೇ ಮಗ್ಳ ಹೆರಿಗೆಗೆ ನಾನ್ಹೋಗಿದ್ದೆ. ಇಷ್ಟು ಅದ್ವಾನ ಅಲ್ಲ. ಆಕೆಯ ಮಗ ಒಬ್ರು ಮೇಷ್ಟ್ರು ಕೆಲ್ಸದಲ್ಲಿ ಇದ್ದಾರೆ. ಹಿಂದೆ ಹೇಗಿದ್ರೋ ಏನೋ ಈಗ ಅನ್ಕೂಲವಾಗಿದ್ದಾರೆ. ಒಂದರ್ಧ ಗಂಟೆ, ನಾನು ಬರ್ತೀನಿ ನಿಮ್ಜೊತೆ" ಕರೆದೊಯ್ದಳು ಲಕ್ಷ್ಮಿ ತುರುಬಿನ ಪಿನ್ನುಗಳನ್ನು ಸಡಲಿಸುತ್ತ.

ಆಸ್ಪತ್ರೆಯೆನ್ನುವ ಚಚ್ಚೌಕದ ಕಟ್ಟಡದಲ್ಲಿ, ಹೊರಗೆ ರಾರಾಜಿ ಸುತ್ತಿದ್ದುದು ಮಿತ ಸಂತಾನದ ಪೋಸ್ಟರ್‌ಗಳು. ಎರಡು ನಗುವ ಮಕ್ಕಳ ಹಿಂದೆ ಹಸನ್ಮುಖಿ ತಂದೆ ತಾಯಿ. ಭವ್ಯ ಭಾರತದ ಕನಸುಗಳಲ್ಲಿ ಮಿತ ಸಂತಾನವು ಒಂದು ಸಂವಿಧಾನ. ಧರ್ಮಗಳನ್ನು ಪ್ರತ್ಯೇಕಿಸಿ ಕೆಲವು ಧರ್ಮಗಳಿಗೆ ಯಾವುದೇ ಮಿತಿಗಳು ಇಲ್ಲದಿದ್ದರಿಂದ ಕನಸ್ಸಿನ ಕುಸಿತಕ್ಕೆ ಅದು ಒಂದು ಕಾರಣ. ಅದನ್ನು ದಾಟಿ ಒಳಗಡಿ ಇಟ್ಟಳು ಪರಿಶೀಲನಾತ್ಮಕವಾಗಿ ನೋಡುತ್ತ. ಡಾಕ್ಟರ್ ಇಲ್ಲೇ ಕರೆದು ವಿಚಾರಿಸಿ ಉಪಚರಿಸಿದ್ದರು. ಆದರೆ ಇಲ್ಲಿನ ಒಂದು ವಸ್ತು ಕೂಡ ಅವಳ ಮನದಲ್ಲಿ ನಿಂತಿರಲಿಲ್ಲ.

ಒಂದು ಚಚ್ಚೌಕದ ಮರದ ಟೇಬಲ್ಲು, ಅದರ ಮೇಲೊಂದು ರಬರ್ ಕ್ಲಾತ್, ಒಂದು ಪಕ್ಕಕ್ಕೆ ಎರಡು ರಿಜಿಸ್ಟರ್‌ಗಳು, ಒಂದು ಲೇಖನಿ ಸ್ಟಾಂಡ್, ಮಾತ್ರೆಗಳ ಡಬ್ಬಿ ಒಂದೆಡೆ. ಅಷ್ಟು ಬಿಟ್ಟು ಅಂಥದೇನು ಕಾಣಲಿಲ್ಲ. ಟೇಬಲ್‌ಗೆ ಅನುಗುಣವಾಗಿ ಮರದ ಕುರ್ಚಿ ಮತ್ತು ಇಡೀ ಹಾಲ್‌ನಲ್ಲಿ ಎರಡು ಸ್ಟೂಲು, ಒಂದು ಸ್ಟೂಲ್ ಮೇಲೆ ಹೋಗಿ ತಪಾಸಣೆಗಳಿಗೆ ಬಳಸುವ. ಕೆಲವು ಮೆಡಿಕಲ್, ಎಕ್ವಿಪ್‌ಮೆಂಟ್, ಆಮೇಲೆ ಒಂದು ದೊಡ್ಡದಾವ ಮರದ ಬೆಂಚನ್ನು ಗೋಡೆಯ ಪಕ್ಕಕ್ಕೆ ಹಾಕಿದ್ದರು. ಅದು ರೋಗಿಗಳು ಕಾದು ಕೂಡುವ ಸ್ಥಳವೇನೋ ?! ಹಾಲ್‌ನ ಒಂದು ಪಕ್ಕಕ್ಕೆ ಒಂದು ಸಣ್ಣ ಕೋಣೆಯಿತ್ತು, ರೋಗಿಗಳ ಒಳ ಪರೀಕ್ಷೆಯ ಸಲುವಾಗಿ ಆ ಕಡೆಗೆ ಒಂದು ಸಣ್ಣ ಬಾತ್‌ರೂಂ.

ಎರಡು ಸಲ ಒಳಕ್ಕೂ, ಹೊರಕ್ಕೂ ಓಡಾಡಿದ ಲಕ್ಷ್ಮಿ ತನ್ನ ಬ್ಯಾಗ್ ಎತ್ತಿಕೊಂಡಳು "ಬನ್ನಿ ಮೇಡಮ್, ಇನ್ನ ಯಾರು ಬರಾಂಗೆ ಕಾಣೋದಿಲ್ಲ. ನೆಗಡಿ, ಜ್ವರ ಬಂದ್ರೂ ಸಿಟಿಯ ನರ್ಸಿಂಗ್ ಹೋಂಗಳಿಗೆ ಓಡ್ತಾರೆ. ಸರ್ಕಾರಿ ಆಸ್ಪತ್ರೆಗಳಂದ್ರೆ.... ಉದಾಸೀನ" ಜೋರಾಗಿಯೇ ಗೊಣಗಿದಳು. ಇದು ಅವಳ ಅನುಭವ. ಇಲ್ಲಿಗೆ ಬಂದು ಮೂರು ವರ್ಷವಾಯಿತು. ಯಾವುದೇ

ಕಾಂಪ್ಲಿಕೇಟೆಡ್ ಇಲ್ಲದಿದ್ದರಿಂದ ಇಲ್ಲೇ ಇದ್ದಳು. ಇದೇನು ಅಂಥ ಅನುಕೂಲಸ್ಥ ಜಾಗವಲ್ಲದಿದ್ದರೂ ಯಾರು ಈ ಪ್ಲೇಸ್‌ಗೆ ಟ್ರೈ ಮಾಡಿರಲಿಲ್ಲ. ಅವಳ ಊರಿಗೂ ಹತ್ತಿರ. ಕೆಲವೊಮ್ಮೆ ಸಂಜೆ ಹೋಗಿ ಬೆಳಗಿನ ಕೆಲಸದ ವೇಳೆಗೆ ಹಾಜರಾಗುತ್ತಿದ್ದಳು. ಡೆಲಿವರಿ ಕೇಸ್‌ಗಳು ಇದ್ದಾಗ ಎಲ್ಲೂ ಹೋಗುತ್ತಿರಲಿಲ್ಲ.

ಲಕ್ಷ್ಮಿ, ಸಖೀ ಕೂಡಿಯೇ ಹೊರಟರು, ರಸ್ತೆಯ ಬದುವನ್ನೇರಿ. ಹಚ್ಚ ಹಸುರಿನ ಈ ಪ್ರದೇಶ ಇಷ್ಟವಾಯಿತು ಅವಳಿಗೆ. ಗಾಳಿಗೆ ತೂಗುತ್ತಿದ್ದ ಹಾಲೊಡೆದ ಭತ್ತದ ಪೈರು ನೆಲಕ್ಕೆ ಹಸುರಿನ ಹೊದ್ದಿಕೆ ಹೊದ್ದಿಸಿದಂತಿತ್ತು. ಅದರ ಬದಿಗೆ ಕಾಣುವ ಮರಗಳು ರಂಗೋಲಿ ಇಟ್ಟಂತಿತ್ತು.

"ನಿಮ್ಗೇ ಇಲ್ಲಿ ಓಡಾಡೋಕೆ ಕಷ್ಟವಾಗೋಲ್ವಾ?" ಲಕ್ಷ್ಮಿ ಕಾಲನ್ನು ಜಾರದಂತೆ ಎತ್ತಿಡಿದು ಕೇಳಿದಾಗ "ಇಲ್ಲಿ, ತುಂಬಾ ಇಷ್ಟವಾಗುತ್ತೆ. ಊರಿನ ಹೊರವಲಯವೆ ಚೆನ್ನಿದೆ" ಹೇಳಿದಳು ಸಂತಸದಿಂದ.

ಅಂತು ಇಂತು ಅರ್ಧ ಗಂಟೆಯ ಹಾದಿ ಸವೆಸಿದ ನಂತರವೇ ತೋಟ ಮುಟ್ಟಿದ್ದು. ಮತ್ತಷ್ಟು ತಣ್ಣಗಿತ್ತು ಮರದ ನೆರಳು. ಪ್ರಶಾಂತವಾಗಿತ್ತು ಆ ಪ್ರದೇಶ. ಒಂದು ಪಕ್ಕಕ್ಕೆ ಪೂರ್ತಿಯಾಗಿ ತೆಂಗಿನ ಗಿಡಗಳನ್ನು ಕಟ್ಟಿದ್ದರು. ಅವುಗಳಲ್ಲಿ ಕೆಲವಲ್ಲಿ ಫಸಲಿತ್ತು. ಕಾಯಿಗಳು ಬಲಿತು ಕೀಳಲು ಅನುವಾಗಿತ್ತು.

"ಇದೇ ತೋಟ ಸಾಕಮ್ಮನದು. ಮೊದ್ಲಿಗೆ ಇಷ್ಟೊಂದು ಚೆನ್ನಾಗಿರ್ಲಿಲ್ಲ. ಮಕ್ಳು ಬುದ್ಧಿವಂತ್ರು. ಭೂಮಿನ ಹಸನುಗೊಳಿಸಿ ಅದ್ರ ಫಲನ ಉಣ್ಣುತ್ತಿದ್ದಾರೆ." ಲಕ್ಷ್ಮಿ ಹೇಳಿದಳು. ದೂರದಲ್ಲಿ ಹುರಿಯುನ್ನೊಸೆಯುತ್ತಿದ್ದ ಹುಡುಗನನ್ನು ಕರೆದಳು ಕೈ ಸನ್ನೆಯಿಂದ.

ಆ ಹುಡುಗನಿಂದ ವಿಷಯ ತಿಳಿಯಿತು, ಹಲ್ಲು ಕೀಳಿಸಲು ಹೋದ ಸಾಕಮ್ಮ ಇನ್ನೂ ಬಂದಿಲ್ಲವೆಂದು.

"ಏನ್ಮಾಡ್ತೀರಾ, ಮೇಡಮ್, ಇಂದ್ಹೋಗಿ ನಾಳೆ ಬರ್ತೀರಾ? ಅಥ್ವಾ ಸಾಕಮ್ಮನಿಗಾಗಿ ಕಾಯೋಣ್ವಾ?" ಕೇಳಿದಳು. ಅವಳಿಗೇನು ಬೇಸರವಿಲ್ಲ. ಹೆಚ್ಚು ಕೆಲಸವೇನು ಇಲ್ಲದಿದ್ದರಿಂದ ಇಲ್ಲಿ ಕೂಡಲು ತೊಂದರೆಯೇನಿಲ್ಲ.

ಸಖಿಯ ಇಚ್ಛಾ ಶಕ್ತಿ ಅಲುಗುವಂತಿರಲಿಲ್ಲ. ಸಾವಿರಾರು ಮೈಲಿಗಳು ಪಯಣಿಸಿ ಬಂದಿದ್ದಳು. ಒಂದಿಷ್ಟು ಹೊತ್ತು ಕಾಯುವುದು ಅವಳಿಗೇನು

ಕಷ್ಟದ ಕೆಲಸವಲ್ಲ. ಹೆತ್ತವರನ್ನು ಕಾಣುವ ಒಂದು ಕ್ಷಣಕ್ಕಾಗಿ ಎಷ್ಟು ಕಷ್ಟವನ್ನಾದರೂ ಪಡಲು ಸಿದ್ಧವಿದ್ದಳು.

"ನಾನು ಕಾಯ್ತೀನಿ. ನಿಮ್ಮಿಂದ ತುಂಬ ಹೆಲ್ಪ್ ಆಯ್ತು. ಹೆಚ್ಚು ತೊಂದರೆ ಕೊಡೋದು, ಗುಡ್ ಫಾರ್ಮಾಲಿಟೀ ಅಲ್ಲ. ಥ್ಯಾಂಕ್ಯೂ ವೆರಿಮಚ್" ಎಂದು ಕೃತಜ್ಞತೆ ವ್ಯಕ್ತಪಡಿಸಿದಳು.

"ಅವೆಲ್ಲ ಏನ್ಬೇಡ, ಒಂದು ಸದಾಶಯ ಇಟ್ಕೊಂಡ್ ಅಮೆರಿಕಾದಿಂದ ಬಂದಿದ್ದೀರಾ! ನಂದು ಒಂದು ಅಳಿಲು ಸೇವೆ. ಸಾಕಮ್ಮ ಬರೋವರ್ಗೂ ನಾನು ನಿಮ್ಮೊತ್ತೆಗೆ ಇರ್ತೀನಿ, ಅಭ್ಯಂತರವಿಲ್ದಿದ್ರೆ" ಎಂದಳು ಮುಖದ ಮೇಲಿನ ಬೆವರನ್ನೊರೆಸಿಕೊಳ್ಳುತ್ತ. ಅಚ್ಚ ಕಪ್ಪಾದ ತನ್ನ ಬಣ್ಣಕ್ಕೂ ಕೆಂಪು ಬೆರೆತ ಬಿಳಿಯ ಶುಭ್ರ ಬಣ್ಣದ ಸಖಿಯ ಬಣ್ಣಕ್ಕೂ ಹಗಲು, ರಾತ್ರಿಯಷ್ಟು ಅಂತರವೆಂದು ನೆಗೆದು ನಕ್ಕುಬಿಟ್ಟಳು. ಆಮೇಲೆ 'ಸಾರಿ' ಕೇಳಿದಳು ಕೂಡ "ಸಾರಿ, ಮೇಡಮ್... ನನ್ನ ಬಣ್ಣಕ್ಕೆ ನಿಮ್ಮ ಬಣ್ಣನ ಹೋಲಿಸಿಕೊಂಡಾಗ ನಗು ಬಂತು. ನೀವು ಹಗಲಾದ್ರೆ, ನಾನು ಪೂರ್ತಿ ಕತ್ತಲೆ. ನನ್ನ ಅಣ್ಣ ತಮ್ಮನದು ಸುಮಾರಾದ ಬಣ್ಣ, ನಂದು ಪೂರ್ತಿ ಕಪ್ಪು. ಎಲ್ಲಾ ಗುಣಗಳ್ನ ಒಂದು ಅವಗುಣ ಮುಚ್ಚಿ ಹಾಕೋ ಹಾಗೇ ಈ ಬಣ್ಣ ನನ್ನ ಸೌಂದರ್ಯವನ್ನು ಮುಚ್ಚಿ ಹಾಕಿದೆ. ಕರೀ ಮುಸಡೀ, ಕರೀ ದೋಣಿ.... ಎಲ್ಲಾ ಕರೀಯಿಂದ್ಲೇ.... ನನ್ನ ಬಣ್ಣದಿಂದ್ಲೇ ಷುರುವಾಗುತ್ತೆ ಮೆಚ್ಚಿಗೆ, ಬೈಗಳು ಎಲ್ಲಾ" ಎಂದು ಮತ್ತಷ್ಟು ನಕ್ಕಾಗ ಅವಳ ಕಣ್ಣಲ್ಲಿ ನೀರು ತುಂಬಿಕೊಂಡು ಹೊರಬರಲು ಚಡಪಡಿಸಿತು.

ಕೆಡುಕೆನಿಸಿತು ಸಖೀಗೆ "ವೆರಿ ಸ್ಯಾಡ್, ಆ ರೀತಿ ಯಾಕೆ ಯೋಚ್ನೆಸ್ತೀರಾ, ಕರೀ ಬಣ್ಣದಲ್ಲಿರೋ ಚಾರ್ಮಿಂಗ್ ಬಿಳಿ ಬಣ್ಣಕ್ಕೆ ಇರೋಲ್ಲ. ಭಾರತೀಯ ಸ್ತ್ರೀಯರು ಹೆಚ್ಚು ರೂಪವಂತರೆನಿಸಿಕೊಳ್ಳೋದು ಉಜ್ವಲವಾದ ಸಂತೃಪ್ತಿಯ ಕಳೆಯಿಂದ. ಬಣ್ಣ ಕಪ್ಪಾದರೇನು ನೋಡೋಕೆ ಎಷ್ಟು ಬ್ಯೂಟಿಫುಲ್ಲಾಗಿ ಕಾಣ್ತೀರಾ!" ಮೆಚ್ಚಿಗೆಯಾಡಿದಾಗ ಅವಳ ಕಣ್ಣುಗಳು ಹೊಳೆದವು. ಇದು ಉತ್ಪ್ರೇಕ್ಷೆಯಲ್ಲ, ಲಕ್ಷ್ಮಿ ತುಂಬ ಲಕ್ಷಣವಾಗಿಯೇ ಇದ್ದಳು.

ಕಪ್ಪಗಿದ್ದರೂ ಉದ್ದವಾಗಿ, ಮಟ್ಟಸವಾಗಿ ಆರೋಗ್ಯದಿಂದ ಹೊಳೆಯುತ್ತಿದ್ದ ಲಕ್ಷ್ಮಿ ಸೌಂದರ್ಯವತಿಯೇ. ಯಾಕೋ ಏನೋ ಒಂದು ಚಿನ್ನಾಭರಣ ಅವಳ ಮೈಮೇಲಿಲ್ಲ. ಹಣೆಯಲ್ಲಿ ಪೈಸೆಗಿಂತ ಹೆಚ್ಚು ಅಗಲದ

ವುಡಿ ಕುಂಕುಮ, ಓಲೆಯೆನ್ನುವ ಒಡವೆ ಹಿಂದೆ ಇದ್ದಿದ್ದಕ್ಕೆ ಕಿವಿಯಲ್ಲಿನ ತೂತುಗಳು ಸಾಕ್ಷಿಯಾಗಿದ್ದವೇ ವಿನಃ ಅಲ್ಲೇನು ಇರಲಿಲ್ಲ. ಬಿಳಿ ಸೀರೆ, ಬಿಳಿ ರವಿಕೆಯಲ್ಲಿ ಕಪ್ಪು ಬಣ್ಣ ಎದ್ದು ಕಾಣುತ್ತಿತ್ತು.

ಮರದ ಕೆಳಗೆ ಹಾಕಿದ್ದ ಮರದ ದಿಮ್ಮಿಯ ಮೇಲೆ ಇಬ್ಬರು ಕೂತರು. ಹುಡುಗ ಹೋಗಿ ಸುದ್ದಿ ಮುಟ್ಟಿಸಿದನೇನೋ, ಅವನಮ್ಮ ಅಪ್ಪ ಬಂದರು.

ಕೈಯಲ್ಲಿ ಕುಡುಗೋಲು, ತಲೆಗೊಂದು ಮುಂಡು, ಧರಿಸಿದ್ದುದು ಒಂದು ಪಟ್ಟೆಪಟ್ಟೆ ನಿಕ್ಕರ್, ಮಾಸಲು ಬಣ್ಣದ ಷರಟು. ತಲೆಗೆ ಸುತ್ತಿದ್ದ ಮುಂಡನ್ನು ಹೆಗಲ ಮೇಲೆ ಹಾಕಿಕೊಳ್ಳುತ್ತ ಬಂದವನು ಆಶ್ಚರ್ಯದಿಂದ ನಿಂತ.

"ಏನು ನರ್ಸಮ್ಮ ಯಾರೋ ಹೊಸಬ್ರನ್ನ ಕರ್ಕೊಂಡ್ ತೋಟದವರ್ಗೂ ಬಂದ್ಬಿಟ್ಟಿದ್ದೀಯಾ. ನಿಮ್ಮ ಡಿಪಾರ್ಟ್‌ಮೆಂಟಿನ ಡಾಕ್ಟ್ರ?" ಕೇಳಿದ ಮುಗ್ಧವಾಗಿ. ನೋಟದಲ್ಲಿ ಕೂಡ ಯಾವುದೇ ಕಲ್ಮಷವಿರಲಿಲ್ಲ. ಹಗಲು ರಾತ್ರಿ ದುಡಿದ ಗಟ್ಟಿಮುಟ್ಟಾದ ಆರೋಗ್ಯಕರವಾದ ಅಂಗಾಂಗಗಳಲ್ಲಿ ಹೊಳಪಿತ್ತು.

ಲಕ್ಷ್ಮಿ ಪರಿಚಯಿಸಿದಾಗ ಬೆರಗುಗಣ್ಣುಗಳಿಂದ ನಿಂತ, ಕಟ್ಟುಮಸ್ತಾದ ಆಸಾಮಿ ಹಿಡಿಯಾದ. ಅಮೆರಿಕಾ ಶ್ರೀಮಂತಿಕೆಯ ಬಗ್ಗೆ ಭಾರತದ ಹಳ್ಳಿಯ ಮನುಷ್ಯ ಕೂಡ ನಿಬ್ಬೆರಗಾಗುತ್ತಾನೆನಿಸಿತು.

"ಬಂದಿದ್ದು ಒಳ್ಳೆದಾಯ್ತು. ನಮ್ಮ ತೋಟದ ಎಳೆನೀರು ಕುಡೀರಿ. ಅನಾಥಾಶ್ರಮ ಬಿಟ್ಟಂದು ಎಷ್ಟೋ ವರ್ಷವಾಯ್ತು, ಈಗೇನು ಹೇಳ್ತಾಳೆ, ಅವ್ವ! ಆ ವಿಷ್ಯ ಎತ್ತಿದ್ರೇನೇ ಸಿಡಿದುಬೀಳ್ತಾಳೆ" ಹಗುರವಾಗಿ ಮಾತುಗಳನ್ನು ಜಾರಿಸಿ ಎಳೆನೀರು ಕಿತ್ತು ತರಲು ಹೋದ. ಅನಾಥಾಶ್ರಮದ ಸುದ್ದಿ ತಾಯಿಯ ಬಳಿ ಎತ್ತುವುದು ಇಷ್ಟವಿಲ್ಲವೆಂದು ಅವನ ಮುಖವೇ ಹೇಳಿತು.

ಎಳೆನೀರು ಕೊಚ್ಚಿ ಕೊಟ್ಟ, ಹಲಸಿನ ಹಣ್ಣು ಬಿಡಿಸಿಟ್ಟ. ನಂತರ ವಿನಯದಿಂದ ಹೇಳಿದ ಕೈ ಜೋಡಿಸಿ "ಬೇಡ ಕಣ್ರವ್ವಾ, ಅವ್ವನ್ನ ಮುಂದೆ ಅನಾಥಾಲಯದ ಸುದ್ದಿ ಬೇಡ. ಅಲ್ಲಿಂದ್ಬಂದ್ಮೇಲೆ ಬಹಳ ನೊಂದವ್ಳೆ. ಪದೇ ಪದೇ ಪೊಲೀಸೋರು ಬಂದು ನಮ್ಮ ಮಾನನ ಮೂರ್ಕಾಸಿಗೆ ಮಾಡ್ಬಿಟ್ಟಿದ್ರು. ಈಚೆಗೇನೇ ತಲೆ ಎತ್ಕೊಂಡ್ ತಿರುಗಾಡ್ತ ಇರೋದು, ಮತ್ತದೇ ಪ್ರಸ್ತಾಪ ಬ್ಯಾಡ."

ಅವನ ಸ್ವರದಲ್ಲಿನ ದೃಢತೆಗೆ ಬೆಚ್ಚಿದಳು. ಬಹುಶಃ ಆಸಾಮಿ ಕೋಪ ಬಂದರೇ ಎಳನೀರು ಕೆತ್ತಿದಂತೆ ಎಲ್ಲಿ ಕೆತ್ತಿಬಿಡುವನೋ ಎಂದು ಸಖೀ ಹೆದರಿದಳು. ಹಿಂಜರಿಯಲಾರಳು. ಸಹಾಯಕ್ಕೆ ಲಕ್ಷ್ಮಿಯ ಕಡೆ ನೋಡಿದಳು. ಅವಳು ಊರಿನ ಜನ ವಿರುದ್ಧ ಹೋಗಳು. ಸಾಕಮ್ಮನ ಸಂತಾನ ಯಾರ ತಂಟೆಗೂ ಬರದ ಜನ. ಅವ್ರ ಕೆಲ್ಸವಾಯ್ತು ಅವರಾಯ್ತು. ಇನ್ನೊಬ್ಬರ ಊಸಾಬರಿಗೆ ಹೋಗರು. ಯಾರಾದ್ರೂ ಬಂದರೇ ಮಾತ್ರ ಮೂರು ಕೆರೆ ನೀರು ಕುಡಿಸಿಯಾರು — ಆ ವೈಕಿಯ ಜನ.

"ಈಯಮ್ಮ ಬಂದಿರೋದು ಅಮೆರಿಕಾದಿಂದ. ಪುಸ್ತಕ ಬರ್ಯೋದು ಕೂಡ ಅಲ್ಲೇ. ನಿಮ್ಗೆ ಯಾವ ತಾಪತ್ರಯ. ಸಾಕಮ್ಮನಿಗೆ ಗೊತ್ತಿರೋ ವಿಷ್ಯ ಹೇಳಿದ್ರೆ ಸಾಕು" ಮನವೊಲಿಸುವ ಪ್ರಯತ್ನ ಮಾಡಿದಳು. ಬಡಪೆಟ್ಟಿಗೂ ಬಗ್ಗಲಿಲ್ಲ ಆಸಾಮಿ ನೀವ್ಹೋಗ್ಬಿಡಿ, ತಾಯಿ. ಒರಟಾಗಿ ಮಾತಾಡೋಕೆ ಬಿಡ್ಬೇಡಿ" ತುಟಿ ಕಚ್ಚಿ ನಯವಾಗಿಯೇ ಹೇಳಿ ತೋಟದಿಂದ ಹೊರ ಹೋಗುವ ಹಾದಿ ತೋರಿಸಿದ. ಇಬ್ಬರು ಏಳುವುದು ಅನಿವಾರ್ಯವಾಯಿತು.

ತೋಟದ ಬಾಗಿಲವರೆಗೂ ಹೋದ ಸಖೀ ಹಿಂದಕ್ಕೆ ಬಂದಳು. "ಸ್ವಲ್ಪ, ನನ್ಮಾತು ಕೇಳಿ. ಇದ್ರಿಂದ ಖಂಡಿತ ನಿಮ್ಗೇನು ತೊಂದ್ರೆ ಇಲ್ಲ. ನಾನು ಯಾರ್ಮುಂದೂ ಹೇಳೋಲ್ಲ. ಯಾವ್ದೇ ರಹಸ್ಯಗಳು ಬೇಕಿಲ್ಲ. ಅಲ್ಲಿನ ಮಕ್ಳು ಬಗ್ಗೆ ಒಂದಿಷ್ಟು ವಿವರ" ರಿಕ್ವೆಸ್ಟ್ ಮಾಡಿಕೊಂಡಳು.

ಶರೀರ ಎಷ್ಟು ಗಟ್ಟಿಮುಟ್ಟೋ, ಮಾತಿನಲ್ಲಿ ಕೂಡ ಅಷ್ಟೇ ದೃಢತೆಯುಳ್ಳವ ಕೃಷ್ಣಪ್ಪ "ಅದು ಅವ್ವಾನ ಇಷ್ಟ, ಆದ್ರೂ ನಂಗೆ ಮಾತು ಕೊಡ್ಬೇಕು ಊರಿನ ಹನುಮಂತ ರಾಯನ ಮುಂದೆ ಅವ್ವಾ ಹೇಳೋ ವಿಷ್ಯಗಳು ಹೊರ ಬರ್ಬಾರ್ದು. ನಮ್ಗೇನಾದ್ರೂ ತೊಂದರೇ ಬಂದ್ರೆ...... ಅಮೆರಿಕಾದಲ್ಲಿದ್ರು ನಿಮ್ಮನ್ನ ಬಿಡೋಲ್ಲ" ಹಲ್ಲು ಕಚ್ಚಿಡಿದ. ಅವನ ಮುಖದಲ್ಲಿ ಕಠಿಣತೆ ಮಿನುಗಿತು.

ಹಿಂದಕ್ಕೆ ಸರಿಯುವಂತಿರಲಿಲ್ಲ. ಒಪ್ಪಿಗೆ ಸೂಚಿಸಿದಳು. ಗಾಬರಿಯಾದವಳು ಲಕ್ಷ್ಮಿ "ಈ ಜನಗಳ ಹತ್ರ ವ್ಯವಹಾರ ಕಷ್ಟ. ಎಷ್ಟು ಒಳ್ಳೆತನವಿದ್ಯೋ, ಅಷ್ಟೇ ಮುಂಗೋಪ. ಬೇರೆ ಯಾರ್ಹತ್ರನಾದ್ರೂ ಡೀಟೈಲ್ ತಿಳ್ಕೊಳ್ಳಿ, ಸುಮ್ನೇ ಯಾಕೆ ತೊಂದರೆಗೆ ಸಿಕ್ಕಿಹಾಕ್ಕೋತೀರಾ!" ಅಡ್ಡ ಬಂದಳು. ಒಂದು ರೀತಿಯ ಭಯ.

ಊರಿನ ಹನುಮಂತ ದೇವರು ಸತ್ಯದ ದೇವರೆಂದು ಸುತ್ತಮುತ್ತಲು ಪ್ರತೀತಿ. ಆಣೆ, ಪ್ರಮಾಣ ವ್ಯಾಜ್ಯಗಳ ಪರಿಹಾರ ನಡೆಯುತ್ತಿದ್ದುದು ಅಲ್ಲಿಂದಲೇ.

"ನಂಗೆ ಅವ್ರಿಗೆ ತೊಂದರೆ ಕೊಡೋ ಉದ್ದೇಶನೇ ಇಲ್ಲ. ಐ ವಾಂಟ್ ಸಮ್ ಡೀಟೈಲ್. ದಟ್ಸ್ ಆಲ್" ಎಂದಳು ಸರಳವಾಗಿ. ಲಕ್ಷ್ಮಿ ಕೈ ತಲೆಯ ಮೇಲೆ ಹೋಯಿತು. ಇಲ್ಲಿನ ಪದ್ಧತಿ ಆಚಾರ ವಿಚಾರಗಳು ಗೊತ್ತಿಲ್ಲವೆನಿಸಿತು "ಪ್ಲೀಸ್, ಮೇಡಮ್... ಅವ್ರುಗಳು ನಿಮ್ಮ ಅಂಗೈ ಮೇಲೆ ಕರ್ಪೂರ ಹಚ್ಚಿ ಪ್ರಮಾಣ ಮಾಡಿಸ್ತಾರೆ. ಹೇಗೆ ಸಹಿಸ್ಕೋತೀರಾ.... ಅದ್ನೆಲ್ಲ" ಮನದಟ್ಟು ಮಾಡಿಸಲು ಪ್ರಯತ್ನಿಸಿದಳು. ಅಲುಗಾಡಲಿಲ್ಲ ಅವಳು.

ಸಂಜೆಯ ವೇಳೆಗೆ ಸಾಕಮ್ಮ ಬಂದಳು. ಕೆನ್ನೆ ಊದಿಕೊಂಡಿತ್ತು. ಅಳುತ್ತಲೇ ಬಂದರೂ ಲಕ್ಷ್ಮಿನ ನೋಡಿದ ಕೂಡಲೇ "ಯಾವುದಾದ್ರೂ ಬೇಗ ನಿಲ್ಲೋಂಥ ಮಾತ್ರೆ ಕೊಡು. ಪಿರಾಣ ಹೋಗ್ತಾ ಇದೆ. ಒಂದು ಹಲ್ಲು ಕಿತ್ತೂಂದ್ರೇ, ಆ ಡಾಕ್ಟ್ರು ಮೂರು ಹಲ್ಲು ಕಿತ್ತುಬಿಟ್ಟ" ಕುಕ್ಕರುಗಾಲಿನಲ್ಲಿ ಕೂತು ನರಳತೊಡಗಿದಳು.

ಬ್ಯಾಗಿನಿಂದ ತನಗಾಗಿ ತಂದಿಟ್ಟುಕೊಂಡಿದ್ದ ಮಾತ್ರೆಯನ್ನು ಕೊಟ್ಟಳು. ಮಾತ್ರೆಗಿಂತ ಅವಳ ಆತ್ಮವಿಶ್ವಾಸ ಕೆಲಸ ಮಾಡಿರಬೇಕು. ಹಲ್ಲು ಕಿತ್ತು ನಾಲ್ಕು ಗಂಟೆ ಕಳೆದುಹೋಗಿದ್ದರಿಂದ ಸ್ವಲ್ಪ ತೊದಲಿದರೂ ಮಾತಾಡಲು ತೊಂದರೆ ಇರಲಿಲ್ಲ. ಅನಾಥಾಲಯದ ವಿಷಯ ಬಂದ ಕೂಡಲೇ ಮೊದಲು ಬೆಚ್ಚಿಬಿದ್ದರೂ ಆಮೇಲೆ ತರಾಟೆಗೆ ತಗೊಂಡಳು.

"ಯಾರು ನನ್ನವ್ವಾ ಹೇಳಿದ್ದು, ನಾನು ಅನಾಥಾಲಯದಲ್ಲಿ ಆಯಾ ಕೆಲ್ಸ ಮಾಡ್ದೇಂತ? ನಂಗೇನು ಅಂಥ ಕರ್ಮ ಬಂದಿದ್ದು. ತೋಟ, ಮನೆ, ಜಮೀನು, ಗಂಡ ಮಕ್ಳು ಇದ್ದೋಳು ನಾನು. ಹೇಳಿದೋರ ಮನೆ ಹಾಳಾಗ್ಲಿ" ಶಾಪನು ಹಾಕಿಬಿಟ್ಟಳು.

ಮಗ ಕೃಷ್ಣಪ್ಪ ಮಧ್ಯಕ್ಕೆ ಬಂದು ತಾಯಿಯನ್ನ ಸುಧಾರಿಸಿ ಒಪ್ಪಿಸಿದ ಬಹುಕಷ್ಟದಿಂದ. ಆಕೆಗೆ ಆಗಲೂ ಅರೆ ಮನಸ್ಸು. ಅನಾಥಾಶ್ರಮ ರೈಡ್ ಆದಾಗ ಆಕೆಯನ್ನು ಎಳೆದೊಯ್ದು ನಾಲ್ಕು ಒದ್ದಿದ್ದರು. ಈಗ ಬಿದ್ದ ಒದೆಗಳಂತೆ ಅವು ಇನ್ನು ನೋಯುತ್ತಿದ್ದವು. ಕೋರ್ಟು ಪೊಲೀಸ್ ಅಂತ ಅಲೆದು ಸಾಕಾಗಿತ್ತು. ಇಡೀ ಕುಟುಂಬ.

ಊರ ಆಂಜನೇಯ ಸ್ವಾಮಿ ಗುಡಿಗೆ ಕರೆದೊಯ್ದು ಸಖಿಯ ಬಲಗೈ ಅಂಗೈ ಮೇಲೆ ಕರ್ಪೂರ ಹಚ್ಚಿ ಪ್ರಮಾಣ ಮಾಡಿಸುವಾಗ ಗಲಾಟೆ ಮಾಡುತ್ತಿದ್ದ ಲಕ್ಷ್ಮಿಯನ್ನು ಒಯ್ದಿದ್ದರು ಹೊರಗೆ. ಒಮ್ಮೆ ಅವಳ ನರಗಳೆಲ್ಲ ಅಂಗೈಯೊಳಕ್ಕೆ ಬಂದು ಸಿಡಿದಂತಾಗಿತ್ತು.

ಹಿಂದೆಯೇ ಪೂಜಾರಿ ಅದಕ್ಕೆ ಬೆಣ್ಣೆ ಹಚ್ಚಿ "ನಿಮ್ಮ ಮನಸ್ಸಿನಲ್ಲಿ ಕಲ್ಮಷವಿಲ್ದಿದ್ರೆ, ಸತ್ಯವಂತರಾದ್ರೆ ನೋವೇ ಇರೋಲ್ಲ. ಬೇಗ ವಾಸಿಯಾಗುತ್ತೆ" ಎಂದು ದೇವರ ತೀರ್ಥವನ್ನು ಅವಳ ತಲೆಯ ಮೇಲೆ ಪ್ರೋಕ್ಷಿಸಿದರು.

ಯಾಕೋ ಸಾಕಮ್ಮನ ಕಣ್ಣಲ್ಲಿ ಕೂಡ ನೀರಾಡಿತು. ಹಿಂದೆ ಅನುಭವಿಸಿದ್ದ ತೊಂದರೆ, ಬವಣೆಯಲ್ಲ ಮರೆತುಬಿಟ್ಟಳು ಆ ಕ್ಷಣ. 'ಎಂಥ ಕಷ್ಟಕ್ಕೂ ಸೈ ಅಂದ್ಬಿಟ್ಟೆಯಲ್ಲೇ ನನ್ತಾಯಿ. ನಂಗೆ ಗೊತ್ತಿರೋ ವಿಷ್ಯ ಏನೇಳಿದ್ರೂ ಹೇಳ್ತೀನಿ' ರಾಜಿಯಾಗಿಬಿಟ್ಟಳು. ಒಳ್ಳೆ ಮನದಿಂದ ಕರ್ಪೂರ ಉರಿದು ಕಪ್ಪಾದ ಅಂಗೈಯನ್ನು ನೋಡುತ್ತ.

ಮರದ ಹಗ್ಗದ ಮಂಚ ತಂದು ಹೊರಗೆ ಹಾಕಿದ ಕೃಷ್ಣಪ್ಪ "ಅಮೇರಿಕಾದಿಂದ ಬಂದೋರು, ಇಲ್ಲಿನ ಸಿಟಿಯಲ್ಲಿನ ಜನನೇ ದೇವ್ರಿಲ್ಲ, ದಿಂಡಿರಿಲ್ಲಾಂತ ಭಾಷಣ ಮಾಡೋವಾಗ ನಿಮ್ಮಂಥವ್ರು ಒಗ್ಗಿಬಿಟ್ರಲ್ಲ" ಕಣ್ಣರಳಿಸಿದ. ತುಟಿಗಳ ಮೇಲಿನ ಮೀಸೆ ಕೂಡ ಆಶ್ಚರ್ಯ ಸೂಚಕವಾಗಿ ನಿಂತಿತು.

"ಎಲ್ಲೋ ಬಹಳ ಕಮ್ಮಿ ಜನ ಕಣ್ಣಣ್ಣ, ದೇವರು ಇಲ್ಲಾನ್ನೋದು. ಈಗ ಯಾವ ದೇವಸ್ಥಾನದ ಮುಂದೆ ನೋಡಿದ್ರೂ ಕ್ಯೂ. ಒಂದೊಂದು ದೇವಸ್ಥಾನನು ತಿರುಪತಿ, ಧರ್ಮಸ್ಥಳ ಆಗ್ತಾ ಇದೆ" ಲಕ್ಷ್ಮಿ ಸಮಾಜಾಯಿಷಿ ಹೇಳಿದಳು. ಅವಳು ರಾಘವೇಂದ್ರ ಗುರುಗಳ ಪರಮಭಕ್ತೆ. ಅಂದು ಒಪ್ಪತ್ತು ಊಟ. ನಿಸ್ವಾರ್ಥದಿಂದ ಸಿಡುಕಿಲ್ಲದೇ ಅಂದು ರೋಗಿಗಳನ್ನು ನೋಡುತ್ತಿದ್ದಳು.

"ಅನಾಥಾಲಯದಲ್ಲಿ ಎಷ್ಟು ವರ್ಷ ಕೆಲ್ಸ ಮಾಡ್ದೇ?" ಮೊದಲ ಪ್ರಶ್ನೆ. ಬ್ಯಾಗಿನಲ್ಲಿದ್ದ ಟೇಪ್‌ರೆಕಾರ್ಡರ್‌ನ ಆನ್‌ನಲ್ಲಿಟ್ಟಳು. ತುಂಬ ಪವರ್ ಫುಲ್ಲಾದ ಜಪಾನಿ ಸೆಟ್, ಹೊರಗೆ ತೆಗೆಯುವ ಧೈರ್ಯ ಮಾಡಲಿಲ್ಲ.

ಕೆನ್ನೆಯೊತ್ತಿಕೊಂಡು ಕೂತಿದ್ದ ಸಾಕಮ್ಮ ಎದ್ದು ಹೋಗಿ ಎಂಜಲು ಉಗಿದು ಬಂದಳು. ನೋವಿತ್ತು. ನೆನಸಿಕೊಂಡಳು ಕೂತು "ಏಳೆಂಟ್ವರ್ಷ

ಇರಬೌದು. ನಮ್ಮ ಕೃಷ್ಣಂಗೂ ಹದಿನೆಂಟು ಇಪ್ಪತ್ತು ನಡೀತಿತ್ತೇನೋ, ಆಗ ಕೆಲ್ಸಕ್ಕೆ ಸೇರ್ಕೊಂಡಿದ್ದು. ಶೀನಪ್ಪಯ್ಯ ಒಳ್ಳೆ ಮನುಷ್ಯ. ಅನಾಥ ಮಕ್ಳ ಬಗ್ಗೆ ಬೋ ಪಿರೀತಿ. ಎಲ್ಲಾ ಸರ್ಯಾಗೇ ನಡೀತಿತ್ತು. ವಾರ್ಡನಮ್ಮ ಬೋ ಚಾಲೂಕಿ ಹೆಣ್ಣು. ಕೆಲವು ಗೆಣೆಯರ್ನ ಸಂಪಾದ್ಸಿಕೊಂಡಿದ್ಲು. ಅವ್ರು ಬಂದ್ಹೋಗೋರು. ನನ್ನ ಚೆನ್ನಾಗಿ ನೋಡ್ಕೊಂಡಿದ್ಲು. ತೆಪ್ಪಗಿದ್ದೆ. ಹೊರ್ಗಿನಿಂದನೂ ಹುಡ್ಗೀರು ಬರೋರು. ಒಂದಿನ ಆಶ್ರಮದ ವಯಸ್ಸಿಗೆ ಬಾರ್ದ ಮಗುನೇ ರೂಮಿಗೆ ತಳ್ಳಿದ್ಲು. ಕುಡ್ದು ಮತ್ತಿನಲ್ಲಿದ್ದ ಆಸಾಮಿ, ಪಶುವಾದ, ರಾಕ್ಷಸನಾದ, ಇಡೀ ರಾತ್ರಿ ಮಗುನ ಕಿತ್ತುತಿಂದು ಸೂರ್ಯ ಹುಟ್ಟೋ ವೇಳೆಗೆ ಹೆಣ ಮಾಡ್ಬಿಟ್ಟಿದ್ದ. ನಡ್ಗಿ ನಾನು ಭೋರೆಂದು ಅಳ್ತಾ ಕೂತಾಗ ಹತ್ತು ಹೊಸ ನೋಟು ನನ್ಕೈಲಿ ಮಡ್ಗಿ ಅವ್ಳ ನೆಂಟನ ಕರೇತರೋಕೆ ನನ್ನ ಕಳ್ಸಿದ ಹೆಮ್ಮಾರಿ. ಕಣ್ಣಲ್ಲಿ ತೊಟ್ಟು ನೀರಿಲ್ಲ. ಎಲ್ಲಾ ಮುಗ್ಸಿಬಿಟ್ಲು. ಅಯ್ಯೋ ಆ ಕಂದ ಲೋಕನ ನೋಡೋಕೆ ಮೊದ್ಲೇ ಮಣ್ಣು ಸೇರೋಯ್ತು. ಆ ಸಾವು ನಡೆದಾಗ ಶೀನಪ್ಪಯ್ಯ ಊರಿನಲ್ಲಿ ಇರ್ಲಿಲ್ಲ, ಬಂದ ಕೂಡ್ಲೇ ದಿಗ್ಭ್ರಾಂತರಾದ್ರು. ದಿಕ್ಕು ತೋಚ್ದಂಗೆ ಕೂತ್ರು. ಪೇಪರ್‌ನೋರಿಗೆ ಸತ್ತ ಆ ಕಂದಮ್ಮನ ಬಗ್ಗೆ ಅನುಮಾನ ಬಂದು ಎಲ್ಲೋ ಒಂದ್ಕಡೆ ಪೇಪರ್‌ನಾಗೆ ಬರೆದ್ರು. ಯಜಮಾನ್ರ ಒಳ್ಳೆ ಹೆಸರು, ಆ ಚಾಲೂಕಿ ಸೂಳೆಯ ನಾಟ್ಕದಿಂದ ಮುಚ್ಹೋದ್ರು, ಎರಡೇ ತಿಂಗ್ಳಲ್ಲಿ ಸಿಕ್ಕಿಕೊಂಡ್ಲು. ಅಲ್ಲಿನ ಮಕ್ಳುನ ಬೇರೆ ಅನಾಥಾಶ್ರಮಕ್ಕೆ ಸೇರ್ಸಿ, ಆ ಬಿಲ್ಡಿಂಗ್‌ನ ಸೀಲ್ ಮಾಡಿ ನನ್ನ, ಅಯ್ಯಮ್ಮನ ಹಿಟ್ಕೊಂಡ್ಹೋದ್ರು. ಆಕೀಗೆ ದೊಡ್ಡ ಜನರ ಪರಿಚಯವಿದ್ದರಿಂದ ಹೊರ್ಗೇ ಬಂದ್ರೂ ಸುಮ್ನೇ ಕೂಡ್ದೇ ಅನಾಥಾಶ್ರಮದ ಬಿಲ್ಡಿಂಗ್, ಅದ್ರ ಸುತ್ತಮುತ್ತಲಿನ ಜಾಗ ನಂಗೆ ಸೇರ್ಬೇಕೂಂತ ಕೋರ್ಟ್ಗೆ ಹೋದ್ಲು. ಭೇಷರತ್ತಾಗಿ ನಂಗೂ ಯಜಮಾನ್ರಿಗೂ ಸಂಬಂಧ ಇತ್ತು. ಅವ್ರೇ ಅದ್ನ ನನ್ಹೆಸ್ರುಗೆ ಬರೆದಿದ್ದಾರೇಂತ ಗಲಾಟೆ ಮಾಡಿದ್ಲು. ಎಲ್ಲಾ ಮುಗ್ದೋಯ್ತು. ಇಷ್ಟೇ ಸಂಗ್ತೀ ಕಣ್ಣಮ್ಮ ನಂಗೆ ಗೊತ್ತಿರೋದು. ಆ ಪಾಪಿ ರಂಡೇ ಹಣ ಕೊಟ್ಟು ನನ್ಬಾಯಿ ಕೂಡ ಮುಚ್ಚಿಸಿದ್ಲು. ಮೇಲಿರೋನು ಕೇಳಿದ್ರೆ..... ಏನ್ಹೇಳ್ಲಿ?'' ಹಣೆ ಹಣೆ ಚಚ್ಚಿಕೊಂಡಳು. ಕೂದಲು ಕಿತ್ತುಕೊಂಡು ರೋಧಿಸಿದಳು. ಇದು ಪಶ್ಚಾತ್ತಾಪದ ಕಣ್ಣೀರು.

ಗಾಳಿ ಕೂಡ ಆ ದುರಂತದ ಕತೆ ಕೇಳಿ ಸ್ತಬ್ಧವಾದಂತಾಯಿತು. ಸತ್ತ ಹುಡುಗಿ ತಾನೇ ಆಗಿದ್ದರೇ, ಸಖೀ ಮೈ ಮೇಲೆ ಹಾವು ಚೇಳು

ಹರಿದಂತಾಯಿತು. ಬೆವತುಬಿಟ್ಟಳು. ಚೇತರಿಸಿಕೊಳ್ಳಲು ವೇಳೆ ಬೇಕಾಯಿತು. ಅನಿಕೇತ್‌ನ ತಾಯಿ, ಹೆಂಡತಿ ಅನಾಥಾಶ್ರಮದ ಬಗ್ಗೆ ಜಿಗುಪ್ಸೆಗೊಂಡಿರುವುದಕ್ಕೂ, ಸೀನಪ್ಪಯ್ಯ ದೇಶಾಂತರ ಹೋಗಿದ್ದಕ್ಕೂ ಕಾರಣ ಸಿಕ್ಕಿತು.

"ಎಷ್ಟು ಮಕ್ಳು ಇದ್ರು, ಅನಾಥಾಶ್ರಮದಲ್ಲಿ?" ಕೇಳಿದಳು. ಅದು ಮುಚ್ಚಿಹೋದುದರ ಬಗ್ಗೆ ಕೆದಕಿ ಕೆದಕಿ ಮತ್ತಷ್ಟು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವ ಇಚ್ಛೆಯಾಗಲಿಲ್ಲ ಸಖೀಗೆ "ಆ......" ಎಂದು ಮುಖ ಮೇಲಿಕ್ಕೆತ್ತಿ ಅರೆಬಾಯಿ ತೆರೆದ ಸಾಕಮ್ಮ ನೆನಪಿಕೊಂಡು ಮನದಲ್ಲಿಯೇ ಲೆಕ್ಕ ಹಾಕತೊಡಗಿದಳು "ಶೀಲಾ, ಪಾರ್ವತಿ, ಜಯ, ಕಮಲ....." ಚಂದ್ರಿಕಾ ಇಷ್ಟು ಹೆಸರ ಜೊತೆಗೆ ಇನ್ನೊಂದು ಹೆಸರು ನೆನಪಾಗಲಿಲ್ಲ 'ಒಂದು, ಎರಡು, ಮೂರು, ನಲ್ಕು, ಐದು' ಇಷ್ಟೇ ಜನವಾ ಇದ್ದಿದ್ದು? ಮುಖಗಳನ್ನು ನೆನಸಿಕೊಂಡಳು.

"ಸರ್ಯಾಗಿ ನೆಪ್ಪು ಬರಲೊಲ್ದು. ಶಿವನ ಪಾದ ಸೇರ್ಕೊಂಡ್‌ಳೇ ಆನಂದಿ. ಮೂರು ತಿಂಗ್ಳು ತೊಟ್ಟಲ ಮಗುವೊಂದಿತ್ತು ಅದೇ ಚಿಕ್ದು. ಯಾರೋ ತರಕಾರಿ ಮಾರ್ಕೆಂಟ್‌ನಲ್ಲಿ ಬಿಟ್ಹೋಗಿದ್ರಂತೆ. ತರಕಾರಿ ಕಂಟ್ರಾಕ್ಟರ್ ಅಬ್ದುಲ್ಲಾ ತಂದ್ಕೊಟ್ಹೋಗಿದ್ದ. ಚೋ ವೈನಾದ ಮಗು, ಕೈಯಲ್ಲಿ ಆರು ಬೆರಳು ಇತ್ತು" ನೆನಪಿಸಿಕೊಂಡು ಹೇಳಿದಳು.

ಕಥೆ ಕೇಳುತ್ತಿದ್ದಂಗೆ ಕೂತಿದ್ದ ಲಕ್ಷ್ಮಿ ಕೃಷ್ಣಪ್ಪ, ಅವನ ಹೆಂಡತಿ ಎರಡು ಮಕ್ಕಳತ್ತ ಒಮ್ಮೆ ನೋಡಿದವಳು.

"ಸಾಕಮ್ಮ ಅಲ್ಲಿಗೆ ಮಕ್ಳು ಹೇಗೆ ಬರ್ತಾ ಇದ್ರು?" ನೇರವಾಗಿ ವಿಷಯಕ್ಕೆ ಹೋಗುವ ಮುನ್ನ ಒಂದು ಸಣ್ಣ ಪೀಠಿಕೆ "ಒಂದು ಮೂಲಾನ ತಾಯಿ, ಕೆಲವರು ಕಾಂಪೌಂಡ್ ಮೇಲೆ ಮಲಗ್ಸಿ ಹೋಗೋರು. ಇಲ್ಲ, ಅಲ್ಲೋ ಇಲ್ಲೋ ಬಿಸುಟ್ಟ ಮಕ್ಳನ ನೋಡ್ದ ದಯಾವಂತ್ರು ತಂದು ಸೇರ್ಸಿ ಹೋಗೋರು. ಒಬ್ಬ ತಾಯಿಯಂತೂ ನಂಗೆ ಸಾಕಕ್ಕಾಗೋಲ್ಲಾಂತ ಎರ್ಡು ವರ್ಷದ ಮಗುನ ತಂದು ಬಿಟ್ಹೋದ್ಳು, ಹೀಗೆಯೇ" ಕೆಲವು ಮೂಲಗಳನ್ನು ಹೇಳಿದಳು.

"ಆಶ್ರಮದಿಂದ ಮಕ್ಳುನ ಸಾಕೋಕೆ ಕೆಲವರು ಅಂದರೆ ಮಕ್ಳು ಇಲ್ದ ತಾಯಿ ತಂದೆಯರು ದತ್ತು ತಗೊಂಡ್ ಹೋಗ್ತಾರಲ್ಲ, ಹಾಗೇ ನಿಮ್ಮ ಅಂದರೆ ಭೂತದಲ್ಲಿ ಸೇರ್ಹೋದ ಅನಾಥಾಶ್ರಮದಿಂದ ಯಾರಾದ್ರೂ ದತ್ತು

ತಗೊಂಡ್ಹೋಗಿದ್ರುಂಟಾ ?" ಕೇಳಿದಳು. ಎಷ್ಟೇ ಪ್ರಯತ್ನಪಟ್ಟರೂ ಎದೆಯ ಆವೇಗವನ್ನು ಮಾಮೂಲಿ ಸ್ಥಿತಿಯಲ್ಲಿ ಇಡಲು ಅವಳಿಂದಾಗಲಿಲ್ಲ. ಹೃದಯನ ಯಾರೋ ತಮ್ಮ ಮುಷ್ಟಿಯಲ್ಲಿಟ್ಟುಕೊಂಡು ಆಗಾಗ ಸಡಲಿಸುತ್ತ ಭಯಪಡಿಸುವಂತಾಗುತ್ತಿತ್ತು. ಸಖೀ ಅರಿವಿಗೆ ಬರದಂತೆ ಬೆವರುತ್ತಿದ್ದಳು.

ಸಾಕಮ್ಮ ತುಟಿ ಗದ್ದವನ್ನು ಎಡಗೈನಿಂದ ಒತ್ತಿಕೊಂಡಳು.

"ತಗೊಂಡ್ಹೋಗಿರ್ಬಹುದ್ದು. ಸರ್ಯಾಗಿ ನೆಪ್ಪಿಸಿ. ಒಂದ್ಸಗುನ ದತ್ತುಕ ತಗೊಂಡ್ಹೋಗಿ ಯಾರ್ಗೋ ಮಾರ್ಕೊಂಡ್, ವಿಷ್ಯ ಯಜಮಾನ್ರವರ್ಗೂ ಹೋಗಿ, ಕಡೆಗೆ ಪೋಲಿಸೋರು ಕರ್ಕೊಂಡ್ ಹೋಗಿ ಹಿಂದಕ್ಕೆ ತಂದ್ರು ಮಗಾನ. ಇನ್ನ ಮೂರ್ನಾಲ್ಕು ಮಕ್ಳನ ತಗೊಂಡ್ಹೋದ್ರು, ಎಂಗಾವ್ರೋ ಅದಲ್ಲ!" ಕೈಯಾಡಿಸಿದ ಸಾಕಮ್ಮ ಅಡಿಕೆಯೆಲೆ ಚೀಲಕ್ಕೆ ಕೈ ಹಾಕಿದಾಗ ಕಿತ್ತುಕೊಂಡಳು ಲಕ್ಷ್ಮಿ.

"ಎಂಥ ಗಟ್ಟಿ ಹೆಂಗ್ಸು ನೀನು, ಬೆಳಿಗ್ಗೆ ಮೂರು ಹಲ್ಲು ಕಿತ್ತಿಸ್ಕೊಂಡು ಬಂದ್ರು ಅಡಿಕೆಯೆಲೆ ತಿನ್ನೋ ಚಪಲ ಬಿಡ್ಲಿಲ್ಲ, ಹಲ್ಲೆಲ್ಲ ಹೋಯ್ತು. ಇನ್ನ ಕುಟ್ಟಾಣಿ ಇಟ್ಕೊಂಡ್ ಕುಟ್ಟಿ ಬಾಯಿಗೆ ತುಂಬಿಕೋಬೇಕು." ಹಂಗಿಸಿದ. ಲಕ್ಷ್ಮಿ ಅಡಿಕೆಲೆ ಚೀಲವನ್ನು ಅವಳ ಸೊಸೆಯ ಸುಪರ್ದಿಗೆ ಕೊಟ್ಟು "ಆ ವಸಡುನ ಹುಣ್ಣು ಮಾಯೋವರೆಗಾದ್ರೂ ಈ ಚೀಲ ಕೊಡ್ಬೇಡಿ" ಸೊಸೆ ಅದನ್ನು ಒಳಗೊಯ್ದಳು.

ಕೃಷ್ಣಪ್ಪ ಮೇಲೆದ್ದ "ಬರ್ತೀನಿ ಕಣವ್ವಾ, ನೀವು ಮಾತಾಡಿ" ಕೈಯಲ್ಲಿ ಕುಡ್ಲು ಹಿಡಿದು ಹೊರಟಾಗ ಲಕ್ಷ್ಮಿ "ಇಲ್ಲೇ ಪಕ್ಕದ ತೋಟದಲ್ಲಿ ದಿನ ತುಂಬಿದ ಒಂದು ಪ್ರೆಗ್ನೆಂಟ್ ಕೇಸ್ ಇದೆ. ನೋಡ್ಕೊಂಡ್... ಬಂದ್ಬಿಡ್ತೀನಿ" ಬ್ಯಾಗೆತ್ತಿಕೊಂಡು ಸೆರಗಿಗೆ ಸರಿಪಡಿಸಿಕೊಳ್ಳುತ್ತ ಹೊರಟಳು.

ಸ್ವಲ್ಪ ಉದ್ವೇಗ ತಗ್ಗಿ ಉಸಿರಾಟ ಸರಾಗವಾಯಿತು. ತನ್ನ ಹೃದಯವನ್ನು ಮುಷ್ಟಿಯಲ್ಲಿಟ್ಟುಕೊಂಡು ಆಗಾಗ ಸಡಲಿಸುತ್ತಿದ್ದವರು ಈ ಮೂವರಲ್ಲಿ ಒಬ್ಬಳೆಂದು ತೀರ್ಮಾನಿಸಿದಳು ಮಾನಸಿಕವಾಗಿ.

ಸಾಕಮ್ಮನ ಕೈಯನ್ನು ತನ್ನ ಕೈಯೊಳಗೆ ತಗೊಂಡ ಸಖೀ, ಹೇಗೆ ಕೇಳಬೇಕೆಂದು ಮನದಟ್ಟು ಮಾಡಿಕೊಂಡು, ಅದಕ್ಕೆ ಬೇಕಾದ ಪದಗಳನ್ನು ಸಂಗ್ರಹ ಮಾಡಿಕೊಂಡು ಸಿದ್ಧಳಾದಳು.

"ಇಂಗ್ಲೀಷ್‌ನೋರು, ಪರಂಗಿಯೋರು, ಬೇರೆ ದೇಶದೋರು,

ಅಂದರೆ ಒಂದು ತರಹ ಕೆಂಚುಗೂದಲ್ನ ಬಾಬ್ ಕಟ್ ಕತ್ತಿನವರ್ಗೂ ಕತ್ತರಿಸ್ಕೊಂಡ್ ಫ್ರಾಂಕ್ ಹಾಕ್ಕೊಂಡಿರೋ ಬಿಳಿ ಜನ ಅನಾಥಾಶ್ರಮದಿಂದ ಒಂದು ಮಗುನ ದತ್ತು ತಗೊಂಡ್ಹೋದ್ರು — ಅದು ನೆನಪಿದ್ಯಾ?" ಆತುರದಿಂದ ಪ್ರಶ್ನಿಸಿದಳು.

"ಓಹೋ.... ಓಹೋ.... ನೆಪ್ಪಿದೆಯವ್ವಾ, ನಂಗೂ ಕಾಸು ಕೊಟ್ರು ಅವ್ರು. ಒಂದೂವರೆ ವರ್ಷದ ಬೊಮ್ಮಟೆನ ತಗೊಂಡ್ಹೋಗೋವಾಗ ಬೇರೆ ಮಕ್ಳಿಗೂ ಬಟ್ಟೆ ಹೊಲ್ಸಿ ಕೊಟ್ರು. ಬೋ ಒಳ್ಳೆ ಜನ ಕಣ್ಣವ್ವಾ, ಒಂದಿಷ್ಟಾದ್ರೂ ಇರುಸು ಮುರ್ಸು ಇಲ್ದೇ ಎಲ್ಲಾ ಮಕ್ಳನ ಎತ್ತಿಕೊಳ್ಳೋರು, ಮಾತಾಡ್ಸೋರು" ಎಂದಳು. ಬೇರೆಯ ದೇಶದವರಾದ ಕ್ಲಿಂಟನ್, ಡಯಾನ ಬಣ್ಣ, ಉಡುಪಿನಿಂದ ಭಾರತೀಯರಾಗಿ ಕಾಣದೇ ಇದ್ದುದ್ದರಿಂದಲೇ ಅವರು ಸ್ಪಷ್ಟವಾಗಿ ಅವಳ ಮಸ್ತಿಷ್ಕದಲ್ಲಿ ಇರಲು ಸಾಧ್ಯವಾಗಿತ್ತು.

ಹಿಮಾಲಯದ ತುತ್ತ ತುದಿಯಲ್ಲಿನ ಗೌರಿಶಂಕರದ ಮೇಲೆ ಕಾಲೂರಿದಂತಾಯಿತು ಅವಳಿಗೆ. ಅಲೌಕಿಕವಾದ ಆನಂದ. ಬೆಳ್ಳನೆಯ ಸೂರ್ಯಪ್ರಕಾಶದಲ್ಲಿ ತನ್ನ ತಾಯ್ತಂದೆ ಗೋಚರಿಸಲಾರರೇ. ಬೆಳ್ಳಕ್ಕಿಗಳು ಸಾಲು ಸಾಲಾಗಿ ಆಕಾಶದಲ್ಲಿ ಹಾರಾಡಿದ ಸುಂದರ ದೃಶ್ಯ ಸಮೂಹ.

"ಆ ಮಗು ಎಲ್ಲಿಯದು? ಅದ್ರ ತಾಯ್ತಂದೆ ಯಾರು?" ಕೇಳಿದಳು ಆವೇಗದಿಂದ. "ಗೊತ್ತಿಲ್ಲ ಕಣ್ರವ್ವಾ, ಮಗು ಮಾತ್ರ ಬೋ ಮುದ್ದಾಗಿತ್ತು. ಎಂಥ ಬಣ್ಣ ನೋಡಿದೋರ್ಗೇ ಎತ್ಕೋಬೇಕೂಂತ ಅನ್ನಿಸ್ತ ಇತ್ತು. ಎಂಗ್ ನಗ್ತಾ ಇತ್ತು, ಕಣ್ಣವ್ವಾ!" ಒಂದೂವರೆ ವರ್ಷದ ಮಗುವನ್ನು ನೆನಪಿಕೊಂಡು ಆನಂದದ ಉದ್ಗಾರವೆತ್ತಿದಳು ಸಾಕಮ್ಮ. ನೆನ್ನೆ, ಮೊನ್ನೆ ನೋಡಿದಂಗಿತ್ತು ಅವಳಿಗೆ.

ಆಕಾಶದಲ್ಲಿ ಉಬ್ಬಿ ಹಾರಾಡುತ್ತಿದ್ದ ಬೆಲೂನ್‌ಗೆ, ಪಿನ್‌ನ ಸ್ಪರ್ಶವಾದಂತಾಯಿತು ಅವಳ ಮಾತುಗಳಿಂದ. ಅವಳ ಉತ್ಸಾಹ, ಸಂತಸವೆಲ್ಲ ಒಮ್ಮೆಲೇ ಭೂಶಾಯಿಯಾಗಿ ಹೋಯಿತು. ಬಿಕ್ಕಿ ಬಿಕ್ಕಿ ರೋಧಿಸಬೇಕೆನಿಸಿತು. ನಿರಾಶೆ ಮುಸುಕಿದ್ದರೂ ಹತಾಶೆಯ ಸ್ಥಿತಿಗೆ ಇಳಿದಿರಲಿಲ್ಲ.

"ಆ ಮಗು ಅನಾಥಾಶ್ರಮಕ್ಕೆ ಬಂದಾಗ ಎಷ್ಟು ವಯಸ್ಸಿನದು? ಯಾರು ತಂದು ಸೇರಿಸಿದ್ದು. ಅದನ್ನಾದ್ರೂ ಹೇಳು" ಅವಸರಿಸಿದಳು.

ಕೈಯಾಡಿಸಿ ಬಿಟ್ಟಳು ಸಾಕಮ್ಮ ಆರಾಮಾಗಿ "ಆ ಇಷ್ಯ ಗೊತ್ತಿಲ್ಲ, ಭೋರೆಂದು ಸುರ್ಯೋ ಮಳೆ ರಾತ್ರಿಯೆಲ್ಲ ಬಿದ್ದು ಒತ್ತಾರೆ ಕೂಡ ಹಾಗೇ ಇತ್ತು. ವಾರ್ಡನಮ್ಮ ಆ ಮಗುನ ಕೊಟ್ಟು ಸ್ನಾನ ಮಾಡ್ಸೋಕ್ಹೇಳಿದ್ರು, ಒಂದೆಂಟು ತಿಂಗಳ ಬೊಮ್ಮಟೆ ಇರ್ಬಹೂಂತ ಅಂತೀನಿ. ರಾತ್ರಿ ಯಾರೋ ಅನಾಥಾಲಯದ ಕಾಂಪೌಂಡ್‌ನಲ್ಲಿ ತಂದಿಕ್ಕಿರಬೇಕು. ಅಥ್ವಾ ಆಪಾಟಿ ಮಳೆಯಲ್ಲಿ ನೆನಕೊಂಡ್ಬಂದು ಕೊಟ್ಹೋಗಿರಬೇಕು. ನಂಗೆ ಅದ್ನೆಲ್ಲ ಹೇಳೋರ್ಯಾರು" ಎಂದಾಗ ವಿಷಯಕ್ಕೆ ಪರದೆ ಸರಿಸಿದಂತಾಯಿತು. ಸಾಕಮ್ಮನ ಕಣ್ಣಲ್ಲಿ ಕಣ್ಣಿಟ್ಟು ನೋಡಿದಳು ಏನಾದರೂ ಮುಚ್ಚಿಡುತ್ತಿದ್ದಾಳಾಂತ. ಹಾಗೇನು ಅನ್ನಿಸಲಿಲ್ಲ. ಆದರೂ ಯಾವುದೋ ಆಸೆ ಮಿಂಚನ್ನ ಬೆನ್ನಟ್ಟಿದ ಸ್ಥಿತಿ ಅವಳದು.

"ನೆನಪಿಸ್ಕೋ ಸಾಕಮ್ಮ ಆ ಮಳೆಯ ರಾತ್ರಿ ನೀನು ಅನಾಥಾಶ್ರಮದಲ್ಲೇ ತಾನೇ ಇದ್ದಿದ್ದು. ಯಾರಾದ್ರೂ ಬಂದಿದ್ರೆ, ಮಗು ಅತ್ತಿದ್ರೆ ನಿಂಗೆ ಎಚ್ಚರವಾಗ್ದೇ ಇರುತ್ತ?" ಅವಳ ಜ್ಞಾಪಕ ಶಕ್ತಿಯನ್ನು ಕೆದಕುವ ಕೊನೆಯ ಪ್ರಯತ್ನ ಮಾಡಿದಳು. ಕನಿಷ್ಟ ಸುಳಿವಿಗಾಗಿ ಅವಳ ಅನ್ವೇಷಣೆ.

ಕೈಯಿಂದ ಗದ್ದ ಒತ್ತಿಕೊಂಡವಳಿಗೂ ಎದ್ದು ಹೋಗಿ ನೀರು ಕುಡಿದು ಬಂದು ಅಲ್ಲೇ ಪಕ್ಕದಲ್ಲಿ ಬಾಳೆಯ ಬುಡಕ್ಕೆ ಉಗಿದು ಕೂತಳು ಕುಕ್ಕರುಗಾಲಿನಲ್ಲಿ.

"ಈ ಮೂಳಿ ತಲೆ ನೆಲಕ್ಕಿಟ್ರೆ ಮುಗ್ದೋಯ್ತು. ಬೆಳಕು ಹರಿಯೋಗಂಟ ಕಣ್ಣು ಬಿಡಾಕಿಲ್ಲ. ನಂಗೂ ಆ ವಿಷ್ಯಗಳ ಕಡೇ ಗಮನ ಕಮ್ಮಿ. ಬೋ ಕಷ್ಟದಲ್ಲಿರೋ ಸಮಯದಲ್ಲಿ ಯಜಮಾನ್ರು ಶೀನಪ್ಪಯ್ಯ ಕರ್ದು ಕೆಲ್ಸ ಕೊಟ್ಟಿದ್ರು. ಕಷ್ಟ ಸುಖ ವಿಚಾರಿಸೋರು, ದೇವರಂಥ ಮನ್ಸ್ಯಾ. ಆ ರಂಡೆ ಆ ಪುಣ್ಯಾತ್ಮನ ಮೇಲೆನೇ ಏನೇನೋ ಹೇಳಿದ್ಲು, ಅದ್ನ ಅನುಭೋಗಿಸ್ತಾಳೆ. ದೇವ್ರು ಕಣ್ಣು ಬಿಡ್ಕೊಂಡ್ ಸುಮ್ನೇ ಕುಂತಾನಾ! ಸಿಸುಪಾಲನ್ನ ಕೊಲ್ಲೋಕೆ ಕೃಷ್ಣ ಪರಮಾತ್ಮನೇ ನೂರು ತೆಪ್ಪು ಆಗೋಗಂಟ ಸುಮ್ಮನಿದ್ದ. ಅದೇ ಲೆಕ್ಕ ಈ ಮಾರಿಗೂ ಕೂಡ" ತನ್ನದೇ ಆದ ಫಿಲಾಸಫಿಯಲ್ಲಿ ನುಡಿದಳು. ಪಂಡಿತರಿಗೂ ಪಾಮರರಿಗೂ ಅನ್ವಯಿಸುವಂಥ ಫಿಲಾಸಫಿಯೇ ಇವಳು ಸರಳವಾಗಿ ಹೇಳಿದಳು ಅರ್ಥವಾಗುವಂತೆ, ಬುದ್ಧಿವಂತರೆನಿಸಿಕೊಂಡ ಕೆಲವು ಜನ ಕಬ್ಬಿಣದ

ಕಡಲೆಯನ್ನಾಗಿಸಿ ಸಾಮಾನ್ಯ ಜನರ ಗಂಟಲೊಳಗೆ ತುರುಕುವ ಪ್ರಯತ್ನ ಮಾಡುತ್ತಾರೆ.

ಈ ಸಾಕಮ್ಮ ಕೆಲವು ದಿನಗಳಾದರೂ ತನ್ನನ್ನು ಎತ್ತಿ ಸಾಕಿರಬೇಕು. ಮಮತೆಯನ್ನು ತೋರಿರಬೇಕೆನಿಸಿದಾಗ ಅವಳು ಬೇರೆಯವಳಾಗಿ ಕಾಣಲಿಲ್ಲ, ಬಂಧುವಾಗಿ ಕಂಡಳು. ತನ್ನ ಹ್ಯಾಂಡ್‌ಬ್ಯಾಗ್‌ನಲ್ಲಿದ್ದ ಎರಡು ಸೇಬು, ಒಂದು ಬಿಸ್ಕತ್ ಪೊಟ್ಟಣವನ್ನು ತೆಗೆದು ಅವಳ ಕೈಯಲ್ಲಿಟ್ಟು ಕಾಲಿಗೆ ನಮಸ್ಕರಿಸಿದಳು ಕಣ್ತುಂಬಿ.

"ಅವ್ವಾ, ಇದೇನು ಮಾಡ್ತೀರಾ" ಹಿಂದಕ್ಕೆ ಸರಿದಳು. ಗಾಬರಿಯಿಂದ, "ಓದಿದ ಜನ, ಏನು ತಿಳಿಯದ ಈ ಹಳ್ಳಿಮುಕ್ಕಿ ಕಾಲಿಗೆ ಬೀಳೋದಾ!" ಅವಳ ಕೈ ಹಿಡಿದುಕೊಂಡಳು. ಕರ್ಪೂರ ಉರಿದ ಅಂಗೈ ಊದಿತ್ತು, ಕಪ್ಪಗೆ ಹೊಗೆಯಾಗಿ ಸುತ್ತಲೂ ಕೆಂಪಾಗಿದ್ದನ್ನು ನೋಡಿ "ಹನುಮಪ್ಪ, ಈ ಮಗಾಗೆ ಏನು ನೋವು ಕೊಡ್ಬೇಡ" ಕಣ್ಣೀರು ಸುರಿಸಿದಳು.

ಆ ವೇಳೆಗೆ ಲಕ್ಷ್ಮಿನು ಬಂದಿದ್ದರಿಂದ ಮೇಲೆದ್ದಳು "ಬರ್ತೀನಿ, ತುಂಬ ಉಪಕಾರವಾಯ್ತು" ಬ್ಯಾಗನ್ನು ಹೆಗಲಿಗೇರಿಸಿಕೊಂಡಳು.

"ಎಲ್ಲಾದ್ರುಂಟ, ನಮ್ಮಲ್ಲೇನು ಉಣದೇ ನಾವು ಕಳ್ಸಿ ಕೊಡ್ತೀವಾ!" ಸಾಕಮ್ಮನ ಸೊಸೆ ಎರಡು ಕಂಚಿನ ತಾಟು ಹಿಡಿದು ಬಂದಳು. ಎರಡೆರಡು ಬಿಸಿ ರಾಗಿ ರೊಟ್ಟಿಗಳು, ಅದರ ಮೇಲೆ ನಿಂಬೆಗಾತ್ರದ ಬೆಣ್ಣೆ, ಅದರ ಪಕ್ಕ ಹೀರೆಕಾಯಿಯ ಪಲ್ಯ. ಇಷ್ಟುನೂ ತಿಂದೇ ಹೋಗ್ಬೇಕು ಕಣ್ಣವ್ವಾ!" ಸ್ವಲ್ಪ ಮೇಲಕ್ಕೆ ಒರಟಾದ "ಹತ್ತಿಯ ಚೌಕಳಿ ಸೀರೆಯುಟ್ಟ ಆಕೆಯ ಒತ್ತಾಯ. ಅಂಗೈ ನೋಡಿಕೊಂಡವಳು ನಗೆ ಬೀರುತ್ತ "ಏನು ಬೇಡ. ತಿನ್ನಬೇಕೂಂದ್ರು ಕಷ್ಟವೇ" ಎಂದಳು.

ಸಾಕಮ್ಮ ತೂರಾಡುತ್ತ ಹೋಗಿ ಕೈ ತೊಳೆದು ಬಂದು ಆ ತಾಟು ತಗೊಂಡ್ "ನಾನು ತಿನ್ನಿಸ್ತೀನಿ, ಬಿಡವ್ವಾ!" ರೊಟ್ಟಿಯನ್ನು ಮುರಿದು ಬೆಣ್ಣೆ ಪಲ್ಯದೊಂದಿಗೆ ಇವಳ ತುಟಿಯ ಬಳಿಗೆ ಬಂದಾಗ ಒಂದೂವರೆ ವರ್ಷದವರೆಗೂ ಸಾಕಮ್ಮ ಹೀಗೆಯೇ ತನ್ನನ್ನು ಜೋಪಾನ ಮಾಡಿದ್ದಾಳೆಂದುಕೊಂಡಾಗ ತಬ್ಬಿಕೊಂಡುಬಿಡಬೇಕೆನಿಸಿದರೂ ಸಂಯಮದಿಂದ ತುಟಿಗಳನ್ನು ತೆರೆದಳು. "ತಿನ್ನು ನನ್ನವ್ವಾ, ಬಿಂಕ ಬಿಗುಮಾನ ಇಲ್ದ ಹೆಣ್ಣುಗಳು ಈಗಿನ ಕಾಲದಲ್ಲಿ ಸಿಕ್ಕಿಯಾರೇ!" ಮಾತುಗಳಲ್ಲಿ ಮಮತೆಯನ್ನೇ ಸುರಿಸಿದಳು. ಅರ್ಧ ರೊಟ್ಟಿ ಪೂರಾ

ತಿನ್ನಲಾಗಲಿಲ್ಲ ಅವಳಿಗೆ. ಬೇಡವೆಂದು ಕೈಯಾಡಿಸಿ ನೀರು ಕುಡಿದು ಎದ್ದಳು.

ತೋಟ ದಾಟೋವರೆಗೂ ಅತ್ತೆ, ಸೊಸೆ, ಆ ಹುಡುಗರು ಬಂದು ಬೀಳ್ಕೊಟ್ಟರು. ಅಷ್ಟು ದೂರ ಹೋಗಿ ಹಿಂದಕ್ಕೆ ತಿರುಗಿ ನೋಡಿದಳು. ಯಾವುದೋ ಸೆಳೆತ, ಬಾಂಧವ್ಯ, ಪುಟ್ಟ ಮಗುವಾದಾಗ ತನ್ನನ್ನು ಪೋಷಿಸಿದ ಆಯಾನ ನೋಡಿದೆನೆನ್ನುವ ಸಂತೃಪ್ತಿ, ಆನಂದ.

"ನೋವಿದ್ಯಾ, ಮೇಡಮ್... ನೀವು ಇದ್ಕೆಲ್ಲ ಒಪ್ಕೋಬಾರ್ದಿತ್ತು. ಊರಿ, ನೋವು ಜಾಸ್ತಿ ಇದ್ಯಾ ? ಡಾಕ್ಟ್ರಗೆ ವಿಷ್ಯ ತಿಳಿದ್ರೆ ನನ್ನ ಬೈಯ್ತಾರೆ" ಲಕ್ಷ್ಮಿ ಕಕ್ಕುಲಾತಿ ವ್ಯಕ್ತಪಡಿಸಿದಳು. ಅವಳಿಗೆ ನಿಜಕ್ಕೂ ಭಯವಾಗಿತ್ತು.

ಆ ನೋವು ಮರೆತೇಹೋದಂತಾಗಿತ್ತು ಸಂತೋಷದಲ್ಲಿ. "ತುಂಬಾ ಮುಗ್ಧ ಜನ! ಆ ಪ್ರೀತಿಗೆ ಏನ್ಕೊಟ್ರೂ ಕಡ್ಮೇನೇ" ಆಕಾಶದಲ್ಲಿ ತೇಲಾಡಿದಂತೆ ಮಾತಾಡಿದಳು.

ಟ್ಯಾಕ್ಸಿ ಇದ್ದ ಜಾಗ ಖಾಲಿಯಾಗಿತ್ತು. ಅಲ್ಲೇ ಆಡುತ್ತಿದ್ದ ಹುಡುಗರು "ಅದ್ರಲ್ಲಿ ಗೌಡ್ರು ಹೋದ್ರು" ವಿಷಯ ಮುಟ್ಟಿಸಿ ತಮ್ಮ ಪಾಡಿಗೆ ತಾವು ಹೋಗಿಬಿಟ್ಟರು.

ದೂರದವರೆಗೂ ನೋಟ ಹರಿಸಿದಳು ಸಖೀ. ಕಿರು ರಸ್ತೆಯಿಂದ ಮೈನ್ ರಸ್ತೆ ದೂರವಿತ್ತು ಮಾತ್ರವಲ್ಲ, ನಡೆಯುವುದು ಕೂಡ ಪ್ರಯಾಸವೆನಿಸಿತು. 'ಈಗೇನು ಮಾಡೋದು'? ಎನ್ನುವಂತೆ ಲಕ್ಷ್ಮಿಯತ್ತ ನೋಡಿದಳು.

"ಒಂದು ಬಸ್ಸು ಬರುತ್ತೆ. ಅದ್ಕೂ ಎರ್ಡು ಗಂಟೆ ಕಾಯಬೇಕು. ರಸ್ತೆಯವರ್ಗೂ ನಡ್ದು ಹೋಗ್ಬೇಕು. ಈ ಸಂಕಷ್ಟದ ರೋಡಿನಲ್ಲಿ ಊರಲ್ಲಿ ಸಾಕಷ್ಟು ಕುಳಗಳು ಇರೋದ್ಮಾತ್ರವಲ್ಲ, ಗೌಡ್ರ ಎರಡನೇ ಮಗ ಪಾರ್ಲಿಮೆಂಟ್ ಮೆಂಬರ್. ಆದ್ರೂ ಸುಧಾರಣೆ ಇಲ್ಲ. ನಿಮ್ಮನ್ನ ಬಸ್ಸು ಹತ್ತಿಸಿಯೇ ಹೋಗ್ತೀನಿ" ಮುಂದಕ್ಕೆ ಹೆಜ್ಜೆ ಎತ್ತಿಟ್ಟಳು. ಸಖೀ ಹೈ ಹೀಲ್ಡ್ ಷೂಸ್ ಎರಡು ಸಲ ಮುಗ್ಗರಿಸುವಂತೆ ಮಾಡಿತು. ಅಮೆರಿಕಾ ರಸ್ತೆಗಳಿಗೆ ಹೊಂದಿಕೊಂಡಿದ್ದು ಇಲ್ಲಿ ಅದರ ಮುನಿಸು, ನಿರಾಕರಣೆ, ಮೊಂಡಾಟ — ರಸ್ತೆ ತಲುಪುವ ವೇಳೆಗೆ ಸಾಕಾದ ಸಖೀ ಕೆಳಗೆ ಕೂತೇಬಿಟ್ಟಳು.

ದೀರ್ಘ, ಅತಿ ದೀರ್ಘವಾದ ಎರಡು ಗಂಟೆ ಕಾಯಬೇಕಾಯಿತು. ಬದುಕಿನುದ್ದಕ್ಕೂ ಇಲ್ಲೇ ಕಾದು ನಿಂತಿದ್ದೀನಾ, ಮುಂದಿನ ಜೀವನವು

ಕಾಯುವುದರಲ್ಲಿಯೋ ಕಳೆದುಹೋಗುತ್ತಾ ಎನ್ನುವ ಭ್ರಮೆ ಅವಳನ್ನು ಕಾಡಿ ಕೆಲವು ನಿಮಿಷಗಳು ದಿಕ್ಕೆಡಿಸಿತ್ತು.

ಬಂದ ಬಸ್ಸಿಗೆ ಕೈ ಚಾಚಿ ನಿಲ್ಲಿಸಿದಳು ಲಕ್ಷ್ಮಿ. ಇಡೀ ಬಸ್ಸು ಓವರ್ ಲೋಡು. ಕೆಲವರು ಜೋಕಾಲಿಯಾಡುತ್ತಿದ್ದರೆ, ಮತ್ತೆ ಕೆಲವರು ಉಸಿರುಗಟ್ಟಿ ನಿಂತಿದ್ದ ಜನ, ಕೂತಿದ್ದವರನ್ನು ಕೂಡ ಆರಾಮವಾಗಿ ಬಿಡದೇ ಆಗಾಗ ಅವರ ಮೇಲೆ ವಾಲಿ ಬೀಳುತ್ತ, ತಮ್ಮ ಕೈಚೀಲಗಳನ್ನು ಅವರಿಗೆ ಡಿಕ್ಕಿಯೊಡೆಸುತ್ತ ಸರ್ಕಸ್ ಮಾಡುತ್ತಿದ್ದರು. ಹುಡುಗರು, ಸಾಹಸವಂತರೆನಿಸಿಕೊಂಡಿದ್ದ ಕೆಲವು ಯುವಕರು ಬಸ್ಸ್ ಟಾಪ್ ಏರಿ ಖುಷಿ ಪಡುತ್ತಿದ್ದರು, ದೊಡ್ಡ ಕೇಕೆಯೊಂದಿಗೆ, ಮುಂದಿನ ಅಪಾಯದ ಅರಿವಿಲ್ಲದಂತೆ.

"ರ್‍ರೀ ಕಂಡಕ್ಟರ್..." ದನಿಯೇರಿಸಿ ಕೂಗಿದಳು ಲಕ್ಷ್ಮಿ. ಇದೇ ರೋಡಿನಲ್ಲಿ ಓಡಾಡುವ ಸಿವಿಲ್ ಬಸ್‌ನ ಕಂಡಕ್ಟರ್ ಎಲ್ಲರಿಗೂ ಪರಿಚಯವೇ. "ನರ್ಸಮ್ಮ ಸೀಟಿಲ್ಲ, ತೀರಾ ಅರ್ಜೆಂಟಿದ್ರೆ ತೂರಿ ಬಂದ್ಬಿಡು, ಇಲ್ಲಾಂದ್ರೆ ಬೆಳಗಿನ ಬಸ್ಸಿಗೆ ಹೋಗು." ಅಷ್ಟು ಜನ ಮಧ್ಯದಿಂದ ಅವನ ಮಾತು ನುಸುಳಿ ಬಂದು ಇವಳಿಗೆ ತಲುಪಿತು. "ನಾನಾದ್ರೆ ಹೇಗೋ ಬರ್ತಾ ಇದ್ದ. ಒಬ್ಬ ಗೆಸ್ಟ್ ಇದ್ದಾರೆ, ಆಗೋಲ್ಲ ಹೋಗು" ಅವನ ಕಿವಿ ತಲುಪುವಂತೆ ಲಕ್ಷ್ಮಿ ಹೇಳಿ ಇವಳತ್ತ ತಿರುಗಿದಳು.

"ರೈಟ್, ರೈಟ್..." ಕೇಳಿಸಿತು. ಬಸುರಿ ಹೆಂಗಸಿನಂತೆ ಓಲಾಡುತ್ತ ಬಸ್ಸು ಮುಂದಕ್ಕೆ ಉರುಳಿತು. ಗೊಂಬೆಯಂತೆ ನಿಂತಿದ್ದ ಸಖೀಯಲ್ಲಿ ಚಲನೆ ಮಾಡಲು ನಿಮಿಷಗಳೇ ಬೇಕಾಯಿತು.

"ಮೇಡವಮ್, ಇದ್ರ ಹಿಂದೆ ಇನ್ನೆರಡು ಬಸ್ಸು ಇದೆ. ಅವು ಇದೇ ಸ್ಥಿತಿ. ಈಗ ಫರ್ಲಾಂಗ್ ಕೂಡ ನಡೆಯದ ಜನ. ಕೈ ತೋರ್ಸಿದ ಕಡೆಯಲ್ಲೆಲ್ಲ ನಿಲ್ಸಿ ಕಾಸು ವಸೂಲು ಮಾಡುವ ವ್ಯವಸ್ಥೆ ಇರೋವರ್ಗೂ ಇದೆಲ್ಲ ತಪ್ಪಿದ್ದಲ್ಲ. ಮೇಲೆ ಕೂತಿರೋ ಅಷ್ಟು ಮಂದಿ ಸಿನಿಮಾ ನೋಡಲು ಹೊರಟಿರೋ ಭೂಪರು. ಅದು ಬಿಟ್ಟು ಅಂಥ ಮಹತ್ವದ ಕೆಲ್ಸದ್ಮೇಲೇನು ಹೊರಟಿಲ್ಲ. ನಿಮ್ಗೆ ಅಭ್ಯಂತರವಿಲ್ದಿದ್ರೆ ಬೆಳಗಿನ ಬಸ್ಸಿಗೆ ಹೋಗ್ಬಹುದ್ದು" ಎಂದಳು ಲಕ್ಷ್ಮಿ. 'ಹೌದು, ಇಲ್ಲ' ಎನ್ನಲು ಸಮಯ ಬೇಕಾಯಿತು ಸಖೀಗೆ.

ಹಿಂದಿರುಗಿ ಹೊರಟಿದ್ದವರನ್ನು ಮೊಪೆಡ್ ಸದ್ದು ಹಿಡಿದು ನಿಲ್ಲಿಸಿತು. "ರ್‍ರೀ ನರ್ಸಮ್ಮ..." ಕೂಗಿಕೊಂಡ ಅದರ ಮೇಲೆ ಕೂತ ವ್ಯಕ್ತಿ

"ನಿಂತ್ಕೊಳ್ಳಿ, ನಿಮ್ಮನ್ನ ನೋಡೇ ತುಂಬ ದಿನವಾಯ್ತು" ವೆಹಿಕಲ್ ನಿಲ್ಲಿಸಿ ಇಳಿದ. ಜುಬ್ಬಾ, ಪೈಜಾಮ ಧರಿಸಿದ್ದ ವ್ಯಕ್ತಿ ಬೇರೆಯವರಿಗಿಂತ ಸ್ವಲ್ಪ ಡಿಫರೆಂಟಾಗಿ ಕಂಡ. ಸಣ್ಣ ಗಡ್ಡ, ಅಂಟಿಸಿದಂತೆ ಕಾಣುವ ಮೀಸೆ, ಕಣ್ಣಿಗೆ ಗ್ಲಾಸ್ ತಾನು ಸಾಮಾನ್ಯ ಜನರಿಗಿಂತ ಭಿನ್ನವಾಗಿ ಯೋಚಿಸಬಲ್ಲ ಸಾಮಾಜಿಕ ಕಳಕಳಿಯುಳ್ಳ, ಸಮಾಜ ಗೌರವಿಸಲ್ಪಡುವಂಥ ವ್ಯಕ್ತಿಯೆನ್ನುವ 'ಅಹಂ' ಮುಖದ ಮೇಲೆ.

"ನನ್ನ ನೋಡಿ ನಿಮ್ಗೆ ಪ್ರಯೋಜನವಾಯ್ತೋ ಇಲ್ವೋ, ನಂಗಂತು ನಿಮ್ಮಿಂದ ಒಂದು ಸಹಾಯವಾಗ್ಬೇಕಿದೆ. ಇವ್ರನ್ನ ಸ್ವಲ್ಪ ಸಿಟಿಗೆ ಡ್ರಾಪ್ ಮಾಡ್ತೀರಾ!" ಕೇಳಿದಳು. ವಿಪರೀತ ಮಾತಿನ ಮನುಷ್ಯನೆಂದು ಗೊತ್ತು, ಸದ್ಯಕ್ಕೆ ಮಾತು ಕೇಳೋ ಸ್ಥಿತಿಯಲ್ಲಿರಲಿಲ್ಲ ಅವಳು.

ತೆಳ್ಳಗೆ ಅತ್ಯಂತ ಚೆಲುವೆಯಾದ ಹೆಣ್ಣಿಗೆ ಡ್ರಾಪ್ ಕೊಡುವುದು ಸುಯೋಗ ಎನ್ನುವುದಕ್ಕಿಂತ ತನ್ನ ಸಾಧನೆ, ಶ್ರಮ ಹೇಳಿಕೊಳ್ಳಲು ಒಬ್ಬ ವ್ಯಕ್ತಿ ಸಿಕ್ಕರಲ್ಲ ಎನ್ನುವ ಸಮಾಧಾನದಿಂದ ಮೊಪೆಡ್‌ಯೇರಿದ ಚಾರು. ಅವನ ಒರಿಜಿನಲ್ ನೇಮ್ ಏನೋ, ಎಂತೋ. ಅಂತು ಎಲ್ಲರು ಕೂಗುವುದು ಅವನನ್ನು 'ಚಾರು' ಎಂದೇ. ವಿಲಕ್ಷಣದ ವಿಶಿಷ್ಟ ಕಲಾವಿದ.

ಒಂದು ಗಾರ್ಡನ್ ರೆಸ್ಟೋರೆಂಟ್ ಸಿಕ್ಕ ತಕ್ಷಣ ಚಾರು "ಒಂದು ಕಪ್ ಕಾಫೀ ಕುಡ್ಯೋಕೆ ತೊಂದರೆ ಇಲ್ಲ ತಾನೇ?" ಅಚ್ಚ ಕನ್ನಡದಲ್ಲಿ ಪದಗಳನ್ನು ಒತ್ತಿ ಒತ್ತಿ ಬಳಸಿದ ರೀತಿ ಮೋಡಿ ಹಾಕುವಂತಿತ್ತು. 'ಕಪ್' ಎನ್ನುವ ಪದವನ್ನು ಮಾತ್ರ ಆಂಗ್ಲ ಭಾಷೆಯಿಂದ ಎತ್ತಿಕೊಂಡಿದ್ದ ಅನಾಯಾಸವಾಗಿ.

ಒಂದು ಸಣ್ಣ ಪಂಜಾಬಿ ಡಾಬಾವನ್ನು ರೆಸ್ಟೋರೆಂಟ್ ಆಗಿ ಪರಿವರ್ತಿಸಿ, ಪುಟ್ಟ ಗಾರ್ಡನ್‌ನ ನಿರ್ಮಾಣ ಮಾಡಿದ್ದರು, ಸೊಗಸಾಗಿ ಗಿರಾಕಿಗಳನ್ನು ಆಕರ್ಷಿಸುವಂತೆ.

ಬಿಸಿಲು ಛತ್ರಿಯಡಿಯ ಖಾಲಿಯಾದ ಸೀಟು ಆಯ್ದುಕೊಂಡು ಕೂತರು. ಅಂಥ ಛತ್ರಿಯಡಿಯ ಆಸನ ವ್ಯವಸ್ಥೆ ಆರು ಇತ್ತು. ಅವೆಲ್ಲ ಭರ್ತಿಯಾಗಿ ಇದೊಂದೇ ಖಾಲಿ ಇದ್ದಿದ್ದು. ಒಂದು ಹಂತಕ್ಕೆ ಇಳಿದ ಸೂರ್ಯನ ಕೆಂಪು ಹೊಂಗಿರಣದಲ್ಲಿ ಆ ಪ್ರದೇಶ ಅತ್ಯಂತ ಸುಂದರವಾಗಿ ಕಂಡಿತು.

"ಬ್ಯೂಟಿಫುಲ್.... ಫಾಂಟಾಸ್ಟಿಕ್ ಪ್ಲೇಸ್, ತುಂಬ ಇಷ್ಟವಾಯ್ತು"

ಉದ್ಗರಿಸಿದಾಗ ಚಾರು ನಗೆ ಬೀರಿ ಭುಜಕ್ಕೆ ನೇತು ಹಾಕಿಕೊಂಡಿದ್ದ ಬ್ಯಾಗನ್ನು ತೆಗೆದು ಪಕ್ಕದ ಸೀಟು ಮೇಲಿಟ್ಟ. "ಇಲ್ಲಿ ಚಾ ಚೆನ್ನಾಗಿರುತ್ತೆ. ಕಾಫೀ ಅಷ್ಟಕಷ್ಟೆ. ನಂಗೆ ಕಾಫಿನೇ ಇಷ್ಟ, ನೀವು ಬೇಕಾದ್ರೆ ಚಾ ತಗೋಬಹ್ದು. ನನ್ನ ಪರಿಚಯ ಒಂದಿಷ್ಟು ಮಾಡ್ಕೊಡ್ತೀನಿ" ಬ್ಯಾಗ್‌ನಲ್ಲಿ ಹುಡುಕಿ ಹುಡುಕಿ ಒಂದು ಕಾರ್ಡು ತೆಗೆದುಕೊಟ್ಟ 'ಚಾರು, ನಟ, ನಿರ್ದೇಶಕ ರಂಗ, ಕಲಾವಿದ, ನಾಟಕಕಾರ ವ್ಯಂಗ್ಯ ಚಿತ್ರಕಾರ' – ಅಂತು ಆಲ್-ಇನ್-ಒನ್ ಎನ್ನುವ ಮನುಷ್ಯ.

"ನಿಮ್ಮ ಪರಿಚಯವಾದುದ್ದು ತುಂಬಾ ಸಂತೋಷ" ಕನ್ನಡದಲ್ಲಿಯೇ ಅತ್ಯಂತ ಸ್ಪಷ್ಟವಾಗಿ ಹೇಳಿದಳು. ಅಷ್ಟರಲ್ಲಿ ಗಡ್ಡ, ಪೇಟಾಧಾರಿಯು ಒಬ್ಬ ಸಿಖ್ ಬಂದು "ಸಲಾಂ ಸಾಬ್.... ಏನು ತರ್ಲೀ ನಿಮಗೋಸ್ಕರ ?" ನಗು ನಗುತ್ತ ಕೇಳಿದ. ಮನೆಗೆ ಬಂದ ಅತಿಥಿಯನ್ನು ಮಾತಾಡಿಸುವಂಥ ಮರ್ಯಾದೆ ಅವನ ದನಿಯಲ್ಲಿತ್ತು.

"ನಂಗೆ ಕಾಫೀ, ಇವ್ರಿಗೆ ಚಾ, ಪಕೋಡ" ಎಂದ ಚಾರು ಕೈಗಳನ್ನು ಉದ್ದ ಮಾಡಿ ಮಡಚಿಕೊಂಡವನು ಎರಡು ಮೊಣಕೈಗಳನ್ನು ಟೇಬಲ್ಲು ಮೇಲೂರಿ ಹಸ್ತಗಳನ್ನು ಬೆಸೆದು "ನಾನು ಘರ್ಷಣೆಯ ಹಾದಿಯ ಮನುಷ್ಯ. ಶೋಷಣೆ ಕಂಡಾಗ ನನ್ನ ಮನಸ್ಸು ಹೋರಾಡಲು ಪ್ರೇರೇಪಿಸುತ್ತೆ. ಈಗಿನ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳಲ್ಲಿ ವಿಷಮತೆ ತಲೆದೋರಿ ಮನುಷ್ಯನ ಬದ್ಕು ಮತ್ತಷ್ಟು ದುರ್ಭರವಾಗುತ್ತಿದೆ. ನಾವು ಒಪ್ಪಿಕೊಂಡು ಬಂದ ಸಾಮಾಜಿಕ ಸಂಪ್ರದಾಯಿಕ ಮೌಲ್ಯಗಳು ಮನುಷ್ಯ ಮನುಷ್ಯನನ್ನು ಗೌರವಿಸದೆ ಮನುಷ್ಯ ಮನುಷ್ಯನನ್ನು ಗುಲಾಮನನ್ನಾಗ ಮಾಡಿದಾಗ ವರ್ಗ ಸಂಘರ್ಷದ ಪ್ರಾರಂಭ. ಅಧಿಕಾರ, ಸಂಪತ್ತು ಪಡೆದುಕೊಂಡ ಒಂದು ವರ್ಗ ಮತ್ತೊಂದು ವರ್ಗವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ಬೌದ್ಧಿಕವಾಗಿ ಶೋಷಿಸಿದಾಗ ಒಂದು ಮಹಾ ಸಂಗ್ರಾಮವೇ ಏರ್ಪಡುತ್ತದೆ ಮನುಷ್ಯರ ನಡುವೆ. ಇದೊಂದು ದುರಂತ" ಮಾನವ ವರ್ಗದ ಅವಸಾನ ಆವೇಗದಿಂದ ನಾಟಕದ ಡೈಲಾಗ್‌ನಂತೆ ಹೇಳಿದ. ಗದ್ದಕ್ಕೆ ಕೈಯಾನಿಸಿ ಕೂತ ಸಖೀ ಎಚ್ಚರದಿಂದ ಆಲಿಸತೊಡಗಿದಳು ಚಾರು ಮಾತುಗಳನ್ನು. ಇಂಟರೆಸ್ಟಿಂಗ್ ವ್ಯಕ್ತಿಯೆಂದುಕೊಂಡಳು.

ತಂದಿಟ್ಟ ನೀರನ್ನು ಕುಡಿದಿಟ್ಟ ಚಾರು. ಅಂದಿನ ಇಂದಿನ ರಂಗ

ಅಭಿವ್ಯಕ್ತಿಯನ್ನು ಬೀದಿ ನಾಟಕದವರೆಗೂ ಒಯ್ದು ಪಾಶ್ಚಾತ್ಯ ದೇಶಗಳಲ್ಲಿ ನಾಟಕ ಒಂದು ವ್ಯವಸ್ಥಿತ (Well made drama)ದಿಂದ ಅಸಂಗತ ನಾಟಕ (adsurd drama)ದ ವರೆಗಿನ ಬದಲಾವಣೆ ಬಗ್ಗೆ ಹೇಳಿದ. ಕೆಲವು ಪ್ರಯೋಗಗಳನ್ನು ಮಾಡಿದ ಬ್ರೆಕ್ಟ್, ಡೆಲ್‌ಸಾರ್ಚ್, ಕೊರ್ನಿಲ್, ವೆನ್ಸಿಲ್, ಗೋಟೊಸ್ಕಿಯವರ ಬೌದ್ಧಿಕ ಪ್ರತಿಭೆ ಬದಲಾವಣೆ ಬಯಸುವ ಮನಸ್ಸುಗಳನ್ನು ಪ್ರಶಂಶಿಸಿದ. ಬೈರನ್‌ನ 'ಶೇನ್', ಕಾಳಿದಾಸನ 'ಶಾಕುಂತಲ' ನಾಟಕಗಳಲ್ಲಿನ ನಟ ಮತ್ತು ಪ್ರೇಕ್ಷಕರ ನಡುವಿನ ಸಂಬಂಧ ಹೇಗೆ ಭಿನ್ನವಾಗಿರುತ್ತದೆಯೆಂದು ಚರ್ಚಿಸಿದ. ರಂಗಸ್ಥಳ, ಬೆಳಕು, ದನಿ, ಶಬ್ದ ಜೊತೆ ಕಾಲದಿಂದ ಕಾಲಕ್ಕೆ ನಟವರ್ಗದ ಪ್ರಸಾಧನ, ಉಡುಗೆ ತೊಡುಗೆ ಹೇಗೆ ಬದಲಾಯಿತೆಂದು ಅತ್ಯಂತ ಸ್ಪಷ್ಟವಾಗಿ ವಿವರಿಸತೊಡಗಿದಾಗ ಚಾರು ಮಾತುಗಾರಿಕೆ, ವಿಡಂಬಣೆ ಹಿಂದಿನ ಅವನ ಕಳಕಳಿಗೆ ಬೆರಗಾದಳು ಸಖೀ.

ತಂದಿಟ್ಟ ಬಿಲ್‌ಗೆ ಸಖೀ ಹಣ ಕೊಡಲು ಹೋದಾಗ ತಡೆದ "ಬೇಡ ಮೇಡವ್, ನೀವು ನನ್ನ ಅತಿಥಿ. ನಿಮ್ಗೆ ನಾಟಕದ ಬಗ್ಗೆ ಒಲುವಿದ್ದುದ್ದರಿಂದ್ಲೇ ನನ್ನ ಇಷ್ಟೆಲ್ಲ ಮಾತುಗಳ್ನ ಕೇಳೋಕ ಸಾಧ್ಯವಾಯ್ತು. ತುಂಬ ಧನ್ಯವಾದಗಳು" ಎಂದು ತನ್ನ ಚೀಲದಿಂದ ಒಂದು ಪ್ರಕಟಣೆಯ ಪತ್ರಿಕೆ ಕೊಟ್ಟ "ನಾಟಕ ನೋಡುವುದು ಪ್ರೇಕ್ಷಕನಿಗೂ ದುಬಾರಿಯೆನಿಸಿದೆ. ಸಮುದಾಯದ ಸ್ಪಂದನವಿಲ್ದೇ ಈಗ ಬದುಕಲು ಸಾಧ್ಯವಿಲ್ಲ. ಜನಕ್ಕೆ ಸರಳವಾಗಿ ಸುಲಭವಾಗಿ ಕೈಗೆಟಕುವಂತಿರಬೇಕು. ದುಬಾರಿ ಖರ್ಚುಗಳನ್ನು ಬಿಟ್ಟು ಬೀದಿಗಿಳಿಯಬೇಕಾಗುತ್ತೆ ಕಲಾವಿದರು. ಇದು ತುಂಬ ಅನಿವಾರ್ಯ. ಇದನ್ನೇ ಗ್ರೊಟಸ್ಕಿ 'ಬಡ ರಂಗಮಂದಿರ' (Poor theatre) ಎಂದು ಕರೆದಿದ್ದು. ನೀವು ಖಂಡಿದ ನಾಳೆ ಸಂಜೆ ಬೀದಿ ನಾಟಕ ನೋಡಲು ಬನ್ನಿ. ಅದ್ರಲ್ಲಿ ನಾನೊಬ್ಬ ಮುಖ್ಯ ಕಲಾವಿದ" ಆಹ್ವಾನವಿತ್ತ.

ಹೊರಗೆ ಒಂದು ಖಾಲಿ ಟ್ಯಾಕ್ಸಿಯನ್ನು ನೋಡಿದ ಕೂಡಲೇ "ತುಂಬ ಉಪಕಾರವಾಯ್ತು. ಇನ್ನು ತೊಂದರೆ ಬೇಡ. ನಾನು ಟ್ಯಾಕ್ಸಿಯಲ್ಲಿ ಹೋಗ್ತೀನಿ" ಎಂದಳು ಕೃತಜ್ಞತೆ ಸಲ್ಲಿಸುತ್ತ.

ಟ್ಯಾಕ್ಸಿ ಹೊರಡುವ ಮುನ್ನ ಕೇಳಿದ "ನಿಮ್ಮ ಹೆಸರೇ ಹೇಳ್ಲಿಲ್ಲ ?" ಚಾರು ಕಣ್ಣುಗಳಲ್ಲಿ ತುಂಟತನವಿತ್ತು.

ಅಪ್ಪೊಲೋ ಹೋಟಲ್‌ನ ಕಾರ್ಡ್ ಕೊಟ್ಟು "ಸಖೀ ಅಂತ.... ಒಮ್ಮೆ ಬನ್ನಿ" ಕೈ ಜೋಡಿಸಿದಳು. ಟ್ಯಾಕ್ಸಿಯ ಚಕ್ರಗಳು ಮುಂದಕ್ಕೆ ಉರುಳಿದವು.

ಅವಳಿಗೆ ಆಶ್ಚರ್ಯವಾಯಿತು. ಅನಿಕೇತ್‌ನ ನಾಮಕರಣವನ್ನು ಅವಳ ಮನ ಒಪ್ಪಿಕೊಂಡಿತ್ತು. 'ಸಖೀ.... ಸಖೀ' ಎರಡು ಸಲ ಮೆಲುದನಿಯಲ್ಲಿ ಕರೆದುಕೊಂಡಳು. ಸ್ವಲ್ಪ ದಿನವಾದರೂ ರೂತ್ ಕ್ಲಿಂಟನ್ ಮರೆಯಾಗಿ ಸಖೀ ಆವಿರ್ಭವಿಸಿದ್ದಳು.

ಎರಡು ಸಲ ಅನಿಕೇತ್ ಹೋಟೆಲ್‌ಗೆ ಹುಡುಕಿಕೊಂಡು ಬಂದಿದ್ದ. 'ಮಾರ್ನಿಂಗ್ ಹೋದವ್ರು ಬಂದಿಲ್ಲ' ಇದೇ ಉತ್ತರವೇ ನವನೀತ್‌ಗೆ ಕೂಡ. ಅಂದು ಸಿಟಿಗೆ ಬಂದಿದ್ದ ಲಕ್ಷ್ಮಿ ಕೂಡ ಕೈ ಹೇಗಿದೆಯೆಂದು ವಿಚಾರಿಸಲು ಬಂದು ಹಿಂದಿರುಗಿದ್ದಳು. ಡಾಬಾದಲ್ಲಿ ಊದಿದ್ದ ಬಲಗೈ ಕರ್ಚಿಫ್ ಸುತ್ತಿಕೊಂಡಿದ್ದ ನೋಡಿ ಪ್ರಶ್ನಿಸಿದ್ದ ಚಾರು ಕೂಡ ವಿಚಾರಿಸಲೆಂದು ಬಂದು ಹೋಗಿದ್ದ. ಒಂಟಿಯಾಗಿ ತಾನು 'ಅನಾಥೆ'ಯೆಂದು ಬಂದು ಇಳಿದಿದ್ದ. ಹೆಣ್ಣಿಗೆ ಇಷ್ಟು ಜನ ಬಂಧುಗಳಾಗಿದ್ದರು.

"ಬಂದ ಕೂಡ್ಲೆ ಫೋನ್ ಮಾಡೋಕೆ ತಿಳ್ಸೀಂತ" ಮ್ಯಾಟರ್ ಕೊಟ್ಟು ಬಂದಿದ್ದ ಅನಿಕೇತ್ ಫೋನ್‌ನ ಬಳಿಯೇ ಕಾದು ಕೂತಿದ್ದ. ಸುಮಾರು ಒಂದು ಗಂಟೆಯಿಂದ ಎಲ್ಲಿ ಹೋಗಿರಬೇಕು. ಈ ಒಂಟಿ? ಅನಾಥಾಲಯದ ಅವಸಾನ ಕೂಡ ಒಳ್ಳೆಯ ರೀತಿಯಲ್ಲಿ ನಡೆದಿರಲಿಲ್ಲ. ಆ ಕೆಟ್ಟ ಬಳ್ಳಿ ಇವಳ ಕಾಲುಗಳಿಗೆ ಸುತ್ತಿಕೊಂಡು ಎಲ್ಲಿ ಪೇಚಾಟಕ್ಕೆ ಸಿಕ್ಕಿಕೊಳ್ಳುತ್ತಾಳೋ ಎನ್ನುವ ಭಯ.

"ಮಣಿಪತ್ರ.... ಬಂದಿದ್ದಾನೆ" ಮಾಲತಿ ಬಂದು ಹೇಳಿದಾಗ ಫೋನ್‌ನ ಕಡೆ ನೋಡಿದವನು, ಡಯಲ್ ತಿರುಗಿಸಿ ಹೋಟಲ್‌ನ ಸಂಪರ್ಕಿಸಿದ "ಅವ್ರು ಇನ್ನು ಬಂದಿಲ್ಲ" ಎಂದಾಗ ರಿಸೀವರ್‌ನ ಕುಕ್ಕಿ ಬಿಡಬೇಕೆನಿಸಿತು. 'ಹೆತ್ತು ಎಸಗ ಜನರ ಹುಡುಕಾಟ ಇವಳಿಗೇಕೆ?' ಕೋಪಗೊಂಡ ಕೂಡ.

ಅನಿಕೇತ್ ಮಣಿಪತ್ರೆಯೊಂದಿಗೆ ಮಾತಾಡಲು ಎದ್ದು ಹೋದಾಗ ಅದೇ ಸೀಟಿನಲ್ಲಿ ಕೂತ ಮಾಲತಿ ಮ್ಯಾಗಜೀನ್ ಎತ್ತಿಕೊಂಡಳು. ಫೋನ್

ಸದ್ದಾಯಿತು. ಎತ್ತಿಕೊಂಡವಳು "ಹಲೋ..." ಎಂದಾಗ 'ರಾಂಗ್ ನಂಬರ್" ಎಂದು ಇಡುವ ಹೊತ್ತಿಗೆ ಅನಿಕೇತ್ ಬಂದ.

"ಯಾರ್ದು ಫೋನ್ ?" ಕೇಳಿದ ಅವಸರದಿಂದ.

"ಯಾರ್ದೋ ಗೊತ್ತಿಲ್ಲ" ನಿರುತ್ಸಾಹದ ಉತ್ತರದಿಂದ ರೇಗಿದ "ಯಾರ್ದೋ ಗೋತ್ತಿಲ್ಲಾಂತ ಫೋನ್ ಇಟ್ಯಾ! ನಾನು ಆಗ್ಲಿಂದ ಒಂದು ಫೋನ್‌ಗೆ ಕಾಯ್ತ ಇದ್ದೆ, ನಿಂಗೆ ಆ ಬಗ್ಗೆ ಕಾಮನ್ ಸೆನ್ಸ್ ಇರ್ಬೇಕಿತ್ತು. ಯಾರ್ದು ಫೋನ್ ?" ಮತ್ತೆ ಗಟ್ಟಿಸಿ ಕೇಳಿದ.

ಮ್ಯಾಗಝೀನ್‌ನ ರಪ್ಪೆಂದು ಟೀಪಾಯಿ ಮೇಲೆಸೆದವಳು "ನಂಗೇನು ಗೊತ್ತು? ಯಾವ್ದೋ ಹೆಣ್ಣಿನ ದನಿ, ನಿಮ್ಗೇ ಗರ್ಲ್ ಫ್ರೆಂಡ್ಸ್ ಇಲ್ಲ. ನಂಗೆ ಅಷ್ಟು ನಯವಾಗಿ ಮಧುರವಾಗಿ ಮಾತಾಡೋ ಸ್ನೇಹಿತೆಯರಿಲ್ಲ. ಅದ್ಕೇ ರಾಂಗ್ ಫೋನ್ ಅಂದ್ಕೊಂಡಿಟ್ಟೆ" ಸರಳವಾಗಿ ಹೇಳಿದಳು. ಅವುಡು ಕಚ್ಚಿಡಿದ. ಮಾತಿನಿಂದ ಪ್ರಯೋಜನವಿಲ್ಲವೆನಿಸಿ ಮೌನ ವಹಿಸಿದವನು ಅಲ್ಲೇ ಕೂತ. ಹತ್ತು ನಿಮಿಷಗಳು ತೀರಾ ದೀರ್ಘವೆನಿಸಿತು.

ಕೆಲಸದ ಹುಡುಗಿ ಒಂದು ಬುಟ್ಟಿ ಬಿಡಿ ಹೂ ತುಂದು ಅಲ್ಲಿಟ್ಟಾಗ ಕಾರ್ಡ್‌ಲೆಸ್ ಫೋನಿಡಿದು ಹೊರಗೆ ಹೋದ. ಅವನಮ್ಮ ಇಡೀ ಬುಟ್ಟಿ ಹೂ ಕಟ್ಟುವವರೆಗೂ ಮೇಲೇಳರು. ಇದೊಂದು ಉತ್ತಮ ಅಭ್ಯಾಸವೇ, ಅತಿಯೆನಿಸಿ ಬುದ್ಧಿ ಸ್ವಾಸ್ಥದ ಬಗ್ಗೆ ಅನುಮಾನಪಡುವಂತಾಯಿತು.

ಎರಡು ಮೂರು ಸಲ ಹೋಟೆಲ್ ಅಪ್ಪೋಲೋ ಸಂಪರ್ಕಿಸಲು ಪ್ರಯತ್ನಪಟ್ಟು ನಿರಾಶನಾದ. ಅವನ ತಂದೆ ಕಟ್ಟಿ ಬೆಳೆಸಿ ಕಾಪಾಡಿದ ಅನಾಥಾಶ್ರಮದ ಒಂದು ಮಗು ಈಗ ಬೆಳೆದು ಉತ್ತಮ ಭವಿಷ್ಯ ಪಡೆದಿರುವವಳಲ್ಲ ಎನ್ನುವ ಅಭಿಮಾನದ ಜೊತೆ ಹೆತ್ತವರನ್ನು ಕಾಣಲು ನ್ಯೂ ಯಾರ್ಕ್‌ನಿಂದ ಬಂದಿದ್ದಾಳಲ್ಲ ಎನ್ನುವ ಗೌರವ.

ತೊಟ್ಟ ಬಟ್ಟೆಯಲ್ಲಿಯೇ ಜೀಪು ಹತ್ತಿದ. ಮಾಲತಿ ಹೊರಗೆ ಬರುವ ವೇಳೆಗೆ ಜೀಪು ಎಸ್ಟೇಟ್‌ನಿಂದ ಹೊರಗೆ ಹೋಗಿತ್ತು.

"ಇದೇ ಓಡಾಟ..... ಇದೇ ಓಡಾಟ..... ಅನಾಥಾಶ್ರಮ ಕಟ್ಕೊಂಡ್ ನಮ್ಮನ್ನ ಅನಾಥಾರನ್ನಾಗಿ ಮಾಡ್ಬಿಟ್ರು.... ಥೀ.... ಥೀ.... ಆ ಹಾಳು ಹೆಣ್ಣು ಸುಟ್ಟು ಭಸ್ಮವಾಗಿ, ನೆಲದಲ್ಲಿ ಸೇರ್ಹೋಗ್ಲಿ, ಬೂದಿಯಲ್ಲಿ ಹುದ್ಗಿ ಹೋಗ್ಲಿ" ಇಂಥದ್ದೇ ಗೊಣಗು ಷುರುವಾಗಿತ್ತು, ಮಾಲತಿ ಹೊರಗೆ ಬರುವ ವೇಳೆಗೆ. ಸದಾ ಇದೊಂದು ರೀತಿ ಭಜನೆ ಆಕೆಗೆ. ಬಹುಶಃ ಗಂಡನನ್ನಾದರೂ

ಮರೆತಿರಬಹುದು, ವಾರ್ಡನ್ ಆಗಿದ್ದ ಸಾವಿತ್ರಿನ ಮರೆಯರು. ಎಲ್ಲಕ್ಕೂ ಕಾರಣ ಅವಳೇ. ಅದರಲ್ಲಿ ಗಂಡನ ಅಪರಾಧವನ್ನು ಕಡಿಮೆಗೊಳಿಸರು.

"ಎಲ್ಹೋದ ಅವ್ಳು? ಆ ಸಾವಿತ್ರಿಗೆ ಫೋನ್ ಮಾಡಿ ಕರ್ಸಿಕೊಂಡಿರ್ತಾಳೆ. ಮಕ್ಳಿಗೆ ಜ್ವರ ಹಾಗೇ ಹೀಗೇಂತ ಫೋನ್ ಮಾಡಿ ಕರ್ಸೀಕೊಳ್ತೋಳು, ಹಾಳು ರಂಡೆ ನನ್ನ ಸಂಸಾರನ ಹಾಳು ಮಾಡಿಬಿಟ್ಲು" ಹೂ ಕಟ್ಟುತ್ತ ಶಾಪ ಹಾಕತೊಡಗಿದರು ಚಂಪಕವಲ್ಲಿ. ಸದ್ದಿಲ್ಲದೆ ಕೂತಳು ಮಾಲತಿ.

ಹಣ್ಣಿನ ಬುಟ್ಟಿ ಹಿಡಿದು ಬಂದ ಮಣಿಪತ್ರ "ಯಜಮಾನ್ರು ಬಾಳೆಗೊನೆಗಳ್ನ ಲಾರಿಗೆ ತುಂಬಿಸ್ತ ಇದ್ದಾರೆ. ಬರೋದು ಸ್ವಲ್ಪ ಲೇಟಾಗುತ್ತಂತೆ" ಹೇಳಿದಾಗ ಆಕೆಯ ಗೊಣಗುಟ್ಟುವಿಕೆ ನಿಂತಿತು. ಮಾಲತಿ ಸ್ವರಕ್ಕೆ ಸ್ವಲ್ಪ ಜೀವ ಬಂತು. ಇದು ಅನಿಕೇತನ್‌ನ ಪ್ಲಾನ್ ಅಷ್ಟೆ.

ಅನಿಕೇತ್ ಜೀಪು ಇಳಿದಾಗ, ಟ್ಯಾಕ್ಸಿಯಿಂದ ಇಳಿದಳು ಸಖೀ, ಸ್ವಲ್ಪ ಕಂಗೆಟ್ಟಂತೆ ಕಂಡಳು. ಇವೆಲ್ಲ ಮೂರ್ಖತನ ಎನಿಸಿತು ಒಂದು ಕ್ಷಣ.

"ಹಲೋ..." ಎಂದ, ಜೀಪ್‌ನ ಕೀಯನ್ನು ಮೇಲಕ್ಕೆಸೆದು ಹಿಡಿಯುತ್ತ. ಅವಳ ಮುಖ ಅರಳಿತು "ಹಲೋ, ಯಾವಾಗ್ಬಂದ್ರಿ? ಸ್ವಲ್ಪ ಮೊದ್ಲು ನಿಮ್ಮ ಮನೆಗೆ ಫೋನ್ ಮಾಡಿದ್ದೆ" ಎಂದಾಗ ಅವನೇನು ಪ್ರತಿಕ್ರಯಿಸಲಿಲ್ಲ. 'ರಾಂಗ್ ನಂಬರ್' ಎಂದು ಇಟ್ಟಿದ್ದು ಇವಳ ಫೋನೇ ಎಂದುಕೊಂಡ.

ಕೆನ್ನೆಗಳಿಗೆ ಮುತ್ತಿಕ್ಕುತ್ತಿದ್ದ ಕೂದಲನ್ನು ಹಿಂದಕ್ಕೆ ಸರಿಸುತ್ತ "ಬನ್ನಿ, ತುಂಬ..... ತುಂಬ ಸಂತೋಷ. ನಿಮ್ಮಿಂದ ಒಂದಿಷ್ಟು ಹೆಲ್ಪ್ ಬೇಕಿತ್ತು" ಎಂದಳು ಸಂತಸದಿಂದ.

ರೂಮಿಗೆ ಹೋದ ಕೂಡಲೇ ಬ್ಯಾಗ್‌ನ ಹಾಸಿಗೆಯ ಮೇಲೆಸೆದು "ತೀರಾ ಟಯರ್ಡ್. ಒಂದಿಷ್ಟು ಮುಖ ತೊಳ್ದು ಬಂದ್ಬಿಡ್ತೀನಿ". ಬಾತ್ ರೂಮಿಗೆ ಹೋದಳು. ಹೋದತ್ತಲೆ ನೋಡಿ ನಿಟ್ಟುಸಿರು ದಬ್ಬಿದ. 'ಇವಳ ಅಪ್ಪ ಅಮ್ಮ ಸಿಗಬಹುದಾ?' ಆ ಬಗ್ಗೆ ಅವನಿಗೆ ತುಂಬ ಅನುಮಾನವಿತ್ತು. ಸಮುದ್ರದಾಳಕ್ಕೆ ಇಳಿದು ಮುತ್ತು, ಹವಳ ಹುಡುಕುವುದು ಬುದ್ಧಿವಂತಿಕೆಯೇ ವಿನಃ ಇಲ್ಲದನ್ನು ಹುಡುಕಲು ಹೊರಡುವುದು ಮೂರ್ಖತನವೆನಿಸಿತು. ಅಂಥ ಮೂರ್ಖತನಗಳಲ್ಲಿ ಇವಳದು ಒಂದು ರೀತಿಯೆಂದುಕೊಂಡ.

ಒದ್ದೆಯ ಮುಖವನ್ನೊತ್ತುತ್ತ ಬಂದವಳು ಅವನ ಎದುರಿನಲ್ಲಿಯೇ ಕೂತು "ಹೇಗಿದ್ದಾರೆ ಅಮ್ಮ ನಿಮ್ಮ ಮಿಸಸ್ ಎಲ್ಲಾ? ನಿಮ್ಮ ಎಸ್ಟೇಟ್‌ಗೆ ಬರೋದಕ್ಕೆ ಹಿಂಜರಿದೆ. ಅನಾಥಾಲಯದ ಬಗ್ಗೆ ಪುಸ್ತಕ ಬರೀತಿನೀಂದರೇನೇ ಅವ್ರಿಗೆ ಇಷ್ಟವಾಗ್ಲಿಲ್ಲ. ನಾನು ಅದೇ ಅನಾಥಾಲಯದ ಹುಡ್ಗೀ ಅಂದ್ರೆ ಕಿಕ್ ಮಾಡ್ಬಿಡ್ತಾರೆ" ಹಾಸ್ಯವಾಗಿ ಹೇಳಿದರೂ ಅದರ ಅಂತರ್ಯದಲ್ಲಿ ಅಪಾರವಾದ ನೋವಿತ್ತು, ನಿರಾಶೆ ಇತ್ತು.

ನಕ್ಕರೂ ತಕ್ಷಣ ಸುಮ್ಮನಾದ ಅನಿಕೇತ್‌ನ ನೋಟ ಅವಳ ಕೈ ಕಡೆಗೆ ಹರಿಯಿತು. ತಕ್ಷಣ ಕೈ ಹಿಡಿದು ಆತಂಕದಿಂದ "ಇದೇನಿದು...?" ಕೇಳಿದ. ಯಾವುದೋ ಭಯ. ಸಾವಿತ್ರಿ ಈಗಲೂ ಪ್ರಭಾವಿ ಜನರ ಮಧ್ಯೆಯೇ ಇದ್ದಾಳೆಂದು ಗೊತ್ತು, ಅವಳಿಂದ ಏನಾದರೂ ಅಪಾಯ!

"ಏನಿಲ್ಲ.... ಹೀಗೇ..." ಎಂದು ನಗುನಗುತ್ತ ವಿವರಿಸಿದಾಗ ಅವಾಕ್ಕಾದ. ಕೆಲವು ನಿಮಿಷ ಮಾತನಾಡಲಾಗಲಿಲ್ಲ. ಈಗಲೂ ಬೊಬ್ಬೆಯೆದ್ದಿದ್ದ ಅವಳ ಅಂಗೈನಲ್ಲಿ ಕರ್ಪೂರ ಉರಿಯುತ್ತಿದೆಯೆನಿಸಿತು. "ಮೈ ಗಾಡ್, ಇದ್ಕೆ ನೀವ್ಹೇಗೆ ಒಪ್ಗೆ ಕೊಟ್ರಿ? ನಂಗಂತೂ ನೀವು ನ್ಯೂ ಯಾರ್ಕ್‌ನಲ್ಲಿದ್ದೀರೋ, ಅಥ್ವಾ ಭಾರತದ ಒಂದು ಮೂಲೆಯ ಹಳ್ಳಿಯಲ್ಲಿದ್ದೀರೊ. ದೇವರೂಂದ್ರೆ ನಮ್ಮ ಕಲ್ಪನೆಗೆ ಸಿಗದವ್ನು ಅಂದ್ಕೊಂಡ್ರೆ, ಹೀಗೆಲ್ಲ ನೋಯಿಸೋಕೆ ಹೇಗೆ ಒಪ್ಕೋತಾನೆ. ಉಫ್..." ಎಂದುಕೊಂಡವನು ಕ್ರಾಪನ್ನ ಹಿಂದಕ್ಕೆ ತಳ್ಳಿ "ಡಾಕ್ಟ್ರು ಹತ್ರ ಹೋಗ್ಬರೋಣ ನಡೀರಿ" ಕಕ್ಕುಲತೆ ವ್ಯಕ್ತಪಡಿಸಿದಾಗ ಅವಳ ಕಣ್ಣಲ್ಲಿ ನೀರಾಡಿತು. ದುರ್ಬಲತೆಯ ಪ್ರದರ್ಶನ ಮಾಡಬಾರದೆಂದು ಅಲ್ಲೇ ತಡೆದಿಟ್ಟಳು.

"ಈಗೇನಿಲ್ಲ, ಮುಕ್ಕಾಲು ವಾಸಿಯಾಗಿದೆ. ಆ ಪ್ರೀಸ್ಟ್ ಕೊಟ್ಟ ಬೆಣ್ಣೇ ಹಚ್ದೆ. ಆಂಜನೇಯ ತುಂಬ ಪವರ್‌ಫುಲ್ ದೇವರು" ಗೆಲುವಿನಿಂದ ಹೇಳಿದಳು.

ಟೋಮ್ಯಾಟೋ, ಆಮ್ಲೆಟ್, ಬರ್ಫಿ, ಟೀಯನಂತರ ಅನಿಕೇತ್ "ವೆಜಿಟೇರಿಯನ್ನ?" ಕೇಳಿದ. ಹೌದೆಂದು ಗೋಣಾಡಿಸಿದಳು. "ಡ್ಯಾಡಿ, ಮಮ್ಮಿ ಹತ್ರ ಇದ್ದಾಗ, ಇಲ್ಲಿಂದ ಬೋರ್ಡಿಂಗ್‌ಗೆ ಬಂದಾಗ ಮಮೂಲಿ ಅಮೆರಿಕನ್ ಫುಡ್ ತಗೋತಾ ಇದ್ದೆ. ಯಾಕೋ ಏನೋ ಒಮ್ಮೆ ಬಿಟ್ಟೆ, ನಂಗೆ ಭಾರತೀಯತೆಯ ಬಗ್ಗೆ ಅತ್ಯಂತ ಪೂಜ್ಯ ಭಾವನೆ. ಇಲ್ಲಿನ ಧರ್ಮ, ಸಂಸ್ಕೃತಿಗಳ ಬಗ್ಗೆ ಸಾಕಷ್ಟು ಪುಸ್ತಕಗಳನ್ನ ಓದಿದ್ದೀನಿ. ಹಿಂದೂ

ಧರ್ಮದಲ್ಲಿವಷ್ಟು ದೇವರ ಪ್ರತಿಪಾದನೆ ಯಾವ್ದೇ ಧರ್ಮದಲ್ಲಿಲ್ಲ" ಅತ್ಯಂತ ಪ್ರೌಢವಾಗಿ ಮಾತಾಡಿದಳು. ಅವನ ಅತ್ಯಂತ ಗಂಭೀರವಾದ ಮುಖದಲ್ಲಿ ನಿಧಾನವಾಗಿ ಹರಡಿಕೊಂಡಿತು ಮಂದಹಾಸ ಬೆರೆತ ಮೆಚ್ಚಿಗೆ ಅಭಿಮಾನ.

ಆಮೇಲೆ ಅನಿಕೇತ್ ವಿಷಯಕ್ಕೆ ಬಂದ "ಎಲ್ಲಿವರ್ಗೂ ಬಂದಿದೆ, ನಿನ್ನ ಸಂಶೋಧನೆ, ನಿನ್ನ ಮಿತಿಯಲ್ಲೇ ಮುಗಿಯುತ್ತ? ಯಾವುದಾದ್ರೂ ಡಿಟೆಕ್ಟಿವ್ ಸಂಸ್ಥೆಗೆ ವಹಿಸಿದ್ರೆ..." ಛೇಡಿಸುತ್ತ ಕೇಳಿದಾಗ ಅವಳ ಮುಖದಲ್ಲಿ ಖಿನ್ನತೆ ಮೂಡಿತು. ಹೆಚ್ಚು ಪ್ರಯೋಜನವಿಲ್ಲವೆನಿಸುವುದರ ಜೊತೆಗೆ ಕೆಲವರಿಗೆ ತೊಂದರೆ, ಅವಮಾನ ಅವೆಲ್ಲ ಬೇಡವೆನಿಸಿತು. ಸಮಾಜಕ್ಕೆ ಹೆದರಿಯೋ ಹೆತ್ತ ಮಗುವನ್ನು ಅನಾಥಾಶ್ರಮಕ್ಕೆ ಎಸೆದು ಗೌರವದಿಂದ ಬದುಕುತ್ತಿರುವ ಜನರನ್ನು ತಲೆ ತಗ್ಗಿಸುವಂತೆ ಮಾಡಲು ಸಾವಿರಾರು ಮೈಲಿಗಳ ಆಚೆಯಿಂದ ಬಂದಿರಲಿಲ್ಲ. ಬರೀ ನೋಡುವ ಉದ್ದೇಶ ಮಾತ್ರ ಅವಳದು.

"ಯಾಕೆ ಸುಮ್ಮನಾದ್ರಿ, ತುಂಬ ಫರ್‌ಫೆಕ್ಟಾಗಿ ಕಾರ್ಯ ನಿರ್ವಹಿಸೋ ಡಿಟೆಕ್ಟಿವ್ ಸಂಸ್ಥೆಗಳು ಇವೆ, ಅಲ್ದೇ ಇಂಥ ಅಪಾಯಕ್ಕೆ ಒಳಗಾಗೋದು ಕೂಡ ತಪ್ಪುತ್ತೆ" ತೀರಾ ಸರಳವಾಗಿ ಹೇಳಿದ. ಬೇಡವೆಂದು ತಲೆಯಾಡಿಸಿದಳು.

ಕೆಲವು ನಿಮಿಷಗಳು ಸುಮ್ಮನೆ ಕೂತ ನಂತರ ತುಟಿ ತೆರೆದಳು "ಕೆಲವು ಡೀಟೈಲ್ಸ್ ಅಂದಿನ ವಾರ್ಡನ್ ಸಾವಿತ್ರಿಯವ್ರಿಗೆ ಗೊತ್ತು. ಆಕೆ ಈಗ ದೊಡ್ಡ ಸಮಾಜ ಸೇವಕಿ, ಮಹಿಳಾ ಸಂಘಟನೆಯ ಅಧ್ಯಕ್ಷಳು. ಬಂಗ್ಲೆಯಲ್ಲಿ ವಾಸ, ಗೇಟಿನಲ್ಲಿ ಘೂರ್ಕ. ಭೇಟಿಗೆ ಮೊದ್ಲೇ ಅಪಾಯಿಂಟ್‌ಮೆಂಟ್ ಬೇಕು. ಅದ್ನ ಸಂಪಾದಿಸೋದು ಕೂಡ ಪ್ರಯಾಸವಾಗಿದೆ. ಕಾದು ಕಾದು ಬಂದೆ. ಯಾವ್ದೋ ಮೀಟಿಂಗ್‌ನಲ್ಲಿದ್ಲು" ಪ್ರೋಗ್ರೆಸ್‌ನ ವಿವರಿಸಿದಳು.

ಅಂದಿನ ವಾರ್ಡನ್ ಸಾವಿತ್ರಿಯೇ, ಇಂದಿನ ಹೆಸರಾಂತ ಸೋಷಿಯಲ್ ವರ್ಕರ್ ಸಾವಿತ್ರಿಯೆಂದು ಅವನಿಗೆ ಗೊತ್ತಿರಲಿಲ್ಲ.

"ಗುಡ್, ಅಂತು ಛಲದಲ್ಲಿ ನಿಮ್ಗೆ ನೀವೇ ಸಮ. ನಂಗೆ ವಾರ್ಡನ್ ಸಾವಿತ್ರಿಯ ಬಗ್ಗೆ ಏನೂ ಗೊತ್ತಿಲ್ಲ. ಅಂದು ಓಡಾಡಿದ್ದೋರು ಕೋರ್ಟಿಗೆ

ಹೋದೋರು ನಮ್ಮ ಮಾವ. ಆ ನೆನಪು ಕೂಡ ಇಷ್ಟಪಡೋಲ್ಲ ಅವ್ರು. ಇದು ವಸ್ತುಸ್ಥಿತಿ'' ಎಂದು ಮೇಲೆದ್ದ.

ಬಾಗಿಲವರೆಗೂ ಹೋದವನು ಹಿಂದಕ್ಕೆ ಬಂದು ಕೈಹಿಡಿದು ನೋಡಿದ ''ಇಂಥ ಅಪಾಯಕ್ಕೆ ನಿಮ್ಮನ್ನು ತಳ್ಳಿಕೋಬೇಡಿ. ನೀವು ಪ್ರಪಂಚಕ್ಕೆ ಬರೋಕೆ ಕಾರಣರು ಇರ್ಬೋದು. ಅಂಥವ್ರನ್ನ ನೋಡೋಕೆ ಇಷ್ಟೊಂದು ಶ್ರಮ ಯಾಕೆ ?'' ಸ್ವಲ್ಪ ಕೋಪದಿಂದಲೇ ಕೇಳಿದ.

ತುಟಿ ಕಚ್ಚಿಡಿದು ಅಳು ನುಂಗಿದಳು. 'ಯಾಕೆ ? ಯಾಕೆ ?' ಈ ಪ್ರಶ್ನೆಗೆ ಉತ್ತರಿಸುವುದು ಸುಲಭವೇ ?

''ನನ್ತಂದೆ ಮನೆ ಬಿಟ್ಹೋದ್ಮೇಲೆ ಜಗತ್ತೇ ಮುಳುಗಿದಂತೆ ಕಂಗೆಟ್ಟಿದ್ದೆ. ಸಾಕಷ್ಟು ಹುಡುಕಾಡಿದ್ವಿ. ದಿನಗಳು, ಕಳೆದಂತೆ ಮನದ ಒತ್ತಡ ಕಡ್ಮೆಯಾಯ್ತು. ಅವರೊಂದು ನೆನಪಷ್ಟೆ'' ಎಂದ ಸಹಜವಾಗಿ. ಆದರೆ ಸ್ವರದಲ್ಲಿ ದುಗುಡನ ಭಾರವಿದ್ದುದು ವ್ಯಕ್ತವಾಯಿತು.

ಎರಡು ಕೈಯಲ್ಲೂ ಮುಖ ಮುಚ್ಚಿಕೊಂಡಳು ಸಖೀ ''ನನ್ನ ಪಾಲಿಗೆ ಆ ನೆನಪು ಕೂಡ ಇಲ್ವಲ್ಲ. ಯಾವುದಕ್ಕೆ ಈ ಶಿಕ್ಷೆ. ಪ್ರತಿಯೊಂದು ಹುಟ್ಟೀಗೂ ತಾಯ್ತಂದೆ ಇರ್ತಾರೆ. ಕೆಲವರಿಗೆ ದಿನಗಳು, ವಾರಗಳು, ವರ್ಷಗಳು ಅವ್ರ ಮಮತೆಯಲ್ಲಿ ಬೆಳ್ಯೋ ಬಾಳೋ ಅವಕಾಶವಿರುತ್ತೆ. ನಂಗೆ ಅವೆಲ್ಲ ಇಲ್ಲ. ಕನಿಷ್ಟ ಅವ್ರು ಹೇಗಿದ್ದಾರೆ ಅನ್ನೋ ನೆನಪಾದ್ರೂ ಬೇಡ್ವಾ ಮಿಸ್ಟರ್, ನೀವು ನನ್ನ ಜಾಗದಲ್ಲಿ ನಿಂತು ಯೋಚ್ಸಿ, ಹುಟ್ಟುವ ಮಗುವಿನ ಬಗ್ಗೆ ತಾಯ್ತಂದೆಯರಿಗೆ ಇರೋ ಕುತೂಹಲ ಸಹಜ. ಅಷ್ಟೇ ಅದಕ್ಕೂ ನೂರುಪಟ್ಟು, ಸಾವಿರಪಟ್ಟು, ಸಹಸ್ರಪಟ್ಟು ಹೆತ್ತವರ ಬಗ್ಗೆ ಕುತೂಹಲವಿರುತ್ತೆ'' ಅಳುತ್ತ ಹೇಳಿದಳು. ಸಪ್ತಸಮುದ್ರಗಳು ದಿಕ್ಕಾಪಾಲಾದಂತೆ ಅತ್ತಳು. ಎಲ್ಲಾ ಕಳೆದುಕೊಂಡು ಭೂಮಿಯ ಅಂಚಿನಲ್ಲಿ ನಿಂತು ಒಂಟಿಯಾಗಿ ರೋಧಿಸಿದಂತೆ ಕಂಡಳು.

ಅನಿಕೇತ್ ತಡೆಯಲಾರದೆ ಹೋದ ''ಪ್ಲೀಸ್ ಸಖೀ, ಅಳೋದ್ನ ನಿಲ್ಸಿ, ನನ್ಕೈಲಿ ನೋಡೋಕ್ಕಾಗೋಲ್ಲ. ಖಂಡಿತ ನಿಮ್ಮ ತಾಯ್ತಂದೆನ ನೋಡ್ಕೊಂಡೇ ನ್ಯೂ ಯಾರ್ಕ್‌ಗೆ ಹೋಗ್ತೀರಾ. ಪ್ಲೀಸ್, ನನ್ಮಾತು ನಂಬಿ'' ಎದೆಗೊರಗಿಸಿಕೊಂಡು ಕಣ್ಣೀರು ತೊಡೆದು ಸಾಂತ್ವನಿಸಿದ. ಅವನ ಎದೆಯಾಸರೆಯಲ್ಲಿ ಕಣ್ಣೀರು ಸುರಿಸಿ ಮನದ ಒತ್ತಡವನ್ನು ಕಡಿಮೆ ಮಾಡಿಕೊಂಡಳು.

ಅರ್ಧ ಗಂಟೆಯಲ್ಲಿಯೇ ಹತ್ತಾರು ಕಡೆಗೆ ಫೋನ್ ಮಾಡಿ ಸಾವಿತ್ರಿಯ ವಿಷಯ ಸಂಗ್ರಹಿಸಿಕೊಂಡ. ವೇಲ್‌ಫೇರ್ ಮಿನಿಸ್ಟರ್ ಬಲಗೈ, ಸಾಕಷ್ಟು ಆಸ್ತಿಪಾಸ್ತಿ, ಕಾರು, ಬಂಗ್ಲೆಯುಳ್ಳ ಸಮಾಜ ಸೇವಕಿ. ಅವಳ ಮನೆಯ ಮುಂದೆ ತಮ್ಮ ಕೆಲಸಗಳಿಗಾಗಿಯೇ ಸಾಮಾನ್ಯ ಜನ ಸಾಲುಗಟ್ಟಿ ನಿಲ್ಲುತ್ತಾರೆ. ಅಂತು ತುಂಬ ಪ್ರಭಾವವುಳ್ಳವಳು.

ಫೋನಿಟ್ಟು ಹಣೆಯುಜ್ಜಿದ. ಅನಾಥಾಶ್ರಮದ ಬಗ್ಗೆ ಹೆಚ್ಚಿನ ಸಂಪರ್ಕವಿರಲಿಲ್ಲ. ಅವನಿನ್ನು ಕಿಶೋರಾವಸ್ಥೆಯಲ್ಲಿದ್ದ ದಿನಗಳಲ್ಲಿ ನೋಡಿದ್ದ ಸಾವಿತ್ರಿ ನೆನಪಿನಲ್ಲಿ ಇದ್ದಳು. ಮುವತ್ತರ ಪ್ರಾಯದ ಹೆಣ್ಣಿನ ಮುಖವು ಸದಾ ನಗುವಿನಿಂದ ಮುಕ್ಕಳಿಸುತ್ತಿತ್ತು. ಈಗಿನ ರೂಪವನ್ನು ಕಲ್ಪನೆಯಲ್ಲಿ ಚಿತ್ರಿಸುವುದು ಕಷ್ಟವೆನಿಸಿತು.

"ಯೂ ಡೂ ವನ್ ಥಿಂಗ್, ನಿನ್ನೆಸ್ರೇನು ಅಂದ್ರೆ ?" ತುಟಿ ಕಚ್ಚಿ ಅನಿಕೇತ್ ಮೇಲೆ ನೋಡಿದಾಗ "ಸಖೀ, ಅದೇ ನೇಮ್ ಸದ್ಯದಲ್ಲಿ ಚಾಲ್ತಿಯಲ್ಲಿರೋದು. ಪುಟ್ಟದಾಗಿ ಎರಡೇ ಅಕ್ಷರವಿರೋ ಹೆಸರು ನಂಗೂ ಇಷ್ಟವಾಯ್ತು. ಏರ್‌ಪೋರ್ಟ್ ತಲುಪೋವರ್ಗೂ ಅದೇ ಇದ್ರೆ ತೊಂದರೇಯೇನಿಲ್ಲ" ನವಿರಾಗಿ ಹೇಳಿದಾಗ ನಕ್ಕುಬಿಟ್ಟ.

ಮತ್ತೆ ಫೋನೆತ್ತಿ ಡಯಲ್ ತಿರುಗಿಸಿದವನು ಮಾತಾಡಿ ರಿಸೀವರ್‌ನ ಹುಕ್ ಮೇಲಿಟ್ಟು "ಸ್ವಲ್ಪ ಒಂದಿಷ್ಟು ಬದಲಾವಣೆ, ಪ್ರಗತಿಪಥ ಹಿಡಿದಿರುವ ಮಹಿಳೆಯರ ಬಗ್ಗೆ ಲೇಖನ ಬರೆಯಲು ನ್ಯೂಯಾರ್ಕ್‌ನಿಂದ ಬಂದಿರೋ ಒಬ್ಬ ಸ್ಟೂಡೆಂಟ್ ರಿಪೋರ್ಟರ್ ಇಷ್ಟು ಸಾಕು. ನಾಳೆ ಬೆಳಿಗ್ಗೆ ಅಪಾಯಿಂಟ್‌ಮೆಂಟ್ ಫಿಕ್ಸ್ ಆಗಿದೆ" ಉತ್ಸಾಹ ತೋರಿದ.

ಕೃತಜ್ಞತೆಯ ಕಣ್ಣೀರು ಬಂದರೂ ತಡೆದಿಟ್ಟು "ಥ್ಯಾಂಕ್ಯೂ ಥ್ಯಾಂಕ್ಯೂ ವೆರಿಮಚ್ ಸರ್...." ಎಂದಾಗ ಗಂಟಲುಬ್ಬಿ ಪದಗಳು ಹೊರದಬ್ಬಿದಂತೆ ಬಂದಿದ್ದವು.

"ನೋ, ನಂಗೇನು ಇದು ಹೆಲ್ಪ ಅಂತ ಕೂಡ ಅನ್ನಿಸೋಲ್ಲ! ನನ್ತಂದೆ ಇದ್ದಿದ್ರೆ ಇಷ್ಟು ಶ್ರಮದ ಅಗತ್ಯವೇ ಇರ್ಲಿಲ್ಲ. ಈ ಹುಡುಕಾಟಕ್ಕೆ ಅವ್ರೇ ಮುಂದಾಳತ್ವವಹಿಸ್ತಾ ಇದ್ರು" ರೆಪ್ಪೆಗಳನ್ನು ಮುಚ್ಚಿ ತೆಗೆದು ಹಸನ್ಮುಖತೆಯಿಂದ ನುಡಿದ.

ಅವಳೊಂದಿಗೆ ಲಂಚ್ ಮುಗಿಸಿಯೇ ಎಸ್ಟೇಟ್‌ಗೆ ಹಿಂದಿರುಗಿದ್ದು ಅನಿಕೇತ್. ಎಸ್ಟೇಟ್‌ನ ಆಚೆಯ ಹೊರ ಪ್ರಪಂಚದಿಂದ ಸದಾ

ದೂರವಾಗಿಡುವ ಪ್ರಯತ್ನವನ್ನು ಅತ್ತೆ, ಸೊಸೆ ನಡೆಸುತ್ತಿದ್ದರು. ಅದರಿಂದಲೇ ನೇರವಾಗಿ ಬಾಳೆಗೊನೆ ತುಂಬುತ್ತಿದ್ದ ಕಡೆ ಹೋಗಿ ಪಾರಾದ.

ರಿಸೆಪ್ಷನಿಸ್ಟ್‌ಗೆ ಫೋನ್ ಮಾಡಿದ್ದರಿಂದ ಟ್ಯಾಕ್ಸಿ ರೆಡಿಯಾಗಿತ್ತು ಇವಳು ಹೊಟೆಲ್‌ನಿಂದ ಹೊರಬರುವ ವೇಳೆಗೆ. ಅವರದ್ದೇ ಲಕ್ಷುರಿ ಟ್ಯಾಕ್ಸಿಗಳು ಇದ್ದವು. ಅಲ್ಲಿ ಲಾಡ್ಜಿಂಗ್ ಮಾಡುವವರಿಗೆ ಅವರೇ ಟ್ಯಾಕ್ಸಿಯ ಸೌಲಭ್ಯ ಒದಗಿಸಿ ಬಿಲ್‌ನಲ್ಲಿ ಸೇರಿಸುತ್ತಿದ್ದರು. ಕೆಲವೊಮ್ಮೆ ತೀರಾ ಬಿಜಿಯಾಗಿ ವಾಹನ ಸೌಲಭ್ಯ ಒದಗಿಸಲು ಸಾಧ್ಯವಾಗದಿದ್ದಾಗ ಟ್ಯಾಕ್ಸಿ ಸ್ಟ್ಯಾಂಡ್‌ನಿಂದ ಕರೆತರುತ್ತಿದ್ದರು.

ಟ್ಯಾಕ್ಸಿ ಸ್ಟ್ಯಾಂಡ್ ಬಳಿ ಬಂದಾಗ ಗ್ಲಾಸ್ ಸರಿಸಿ ನವನೀತ್‌ಗಾಗಿ ಹುಡುಕಾಡಿದಳು. ಸ್ವಲ್ಪ 'ಸ್ಲೋ' ಮಾಡುವಂತೆ ಡ್ರೈವರ್‌ಗೆ ಸೂಚಿಸಿ. ಎಲ್ಲೂ ಕಾಣದಿದ್ದಾಗ ಗ್ಲಾಸ್ ಮೇಲಕ್ಕೆ ಸರಿದು ಮುಚ್ಚಿಕೊಂಡಿತು.

ಸಮಾಜ ಸೇವಾಕರ್ತೆ ಸಾವಿತ್ರಿಯವರ ಬಂಗ್ಲೆ ತಲುಪಿದಾಗ ಹೊರಗೆ ಗಿಜಿಗಿಜಿಯನ್ನುವಷ್ಟು ಜನಸಂದಣಿ. ಕೆಲವರ ಕೈಯಲ್ಲಿ ಮನವಿ ಪತ್ರಗಳು. ಕೆಲವು ನಿರುದ್ಯೋಗಿ ಯುವಕರು ಸರ್ಕಾರದಿಂದ ಸಿಗುವ ಸೌಲಭ್ಯಕ್ಕಾಗಿಯೋ ಬ್ಯಾಂಕ್‌ನಿಂದ ಹಣ ಪಡೆದು ಸ್ವ ಉದ್ಯೋಗ ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಸಲುವಾಗಿಯೋ, ಸಣ್ಣ ರೆಕಮೆಂಡೇಷನ್‌ಗಾಗಿ ಕಾದು ನಿಂತಿದ್ದರು. ಕೆಲವು ಹರಟೆಯೊಡೆಯುವ, ಡೌಲು ಕೊಚ್ಚುತ್ತ ಕೆಲಸವಿಲ್ಲದ ಜನ ಕೂಡ ಇದ್ದರು.

ಹತ್ತು ನಿಮಿಷಗಳು ಎಲ್ಲರ ನಡುವೆ ಹುಡುಕುತ್ತ ಬಂದವನು ಇವಳ ಮುಂದೆ ನಿಂತು "ನೀವೇ ತಾನೇ ಸಖೀ ಫ್ರಮ್ ನ್ಯೂಯಾರ್ಕ್, ಮೇಡಮ್ ಕರೀತಾರೆ" ಒಳಗೆ ಕರೆದೊಯ್ದು ಬಂಗ್ಲೆಯ ಮುಂದಿನ ಕೊಠಡಿಗೆ ಅತ್ಯಂತ ವಿಶಾಲವಾದ ಕೋಣೆಯಲ್ಲಿ ಆಸನ ವ್ಯವಸ್ಥೆ ತೀರಾ ಸಂಪರ್ಕವಾಗಿ ಮೇಲ್ನೋಟಕ್ಕೆ ಸರಳವಾಗಿ ಕಂಡರೂ ಲಕ್ಷಾಂತರ ರೂಪಾಯಿ ವ್ಯಯಿಸಿದ್ದರು.

"ಬನ್ನಿ ಮೇಡಮ್......" ಅತ್ಯಂತ ನಮ್ರತೆ, ಗೌರವಪೂರ್ವಕ ಸ್ವಾಗತ ಆಶ್ಚರ್ಯ ತರಿಸಿತು. "ಈಗ್ಬಂದ್ಬಿಡ್ತಾರೆ ಮೇಡಮ್, ಕೂತ್ಕೊಳ್ಳಿ. ಏನು ತಗೋತೀರಾ, ಹಾಟ್ ಆರ್ ಕೋಲ್ಡ್?" ಕೇಳಿದ. ಅವನಿಗೆ ವಹಿಸಿದ್ದ ಕೆಲಸ ಇಷ್ಟೆ ಏನೋ, ಅತ್ಯಂತ ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತಿದ್ದ.

ತಣ್ಣನೆಯ ಕಿತ್ತಲೆಯ ರಸ ಬಂತು. ಕುಡಿದಿಟ್ಟು, ರೂಮ್‌ನ ಸುತ್ತಳತೆಯನ್ನು ಲೆಕ್ಕ ಹಾಕುವಂತೆ ನೋಟವರಿಸಿದಳು. ಒಂದಾರು ಕ್ಲಾಸ್ಸಿ ಪೇಯಿಂಟಿಂಗ್‌ಗಳಿತ್ತು. ಹಿತ್ತಾಳೆ ವಾಜ್‌ಗಳಲ್ಲಿ ಉದ್ಯಾನವನದ ವಿವಿಧ ಹೂಗಳ ಜೋಡನೆ. ಒಂದು ಅನಾಥಾಶ್ರಮದಲ್ಲಿ ವಾರ್ಡನ್ ಆಗಿದ್ದ ಹೆಣ್ಣು ಸ್ವಸಾಮರ್ಥ್ಯದಿಂದ ಇದನ್ನೆಲ್ಲ ಗಳಿಸಿಕೊಂಡಿದ್ದಳು. ಅವಳ ನೆರಳಲ್ಲಿ ಹಸುಗೂಸಾಗಿದ್ದಾಗ ಇದ್ದಿರಬಹುದೆಂದುಕೊಂಡು ಪುಳಕಿತಳಾದಳು. ಚಡಪಡಿಸಿತು ಅವನ ಮನ.

ಒಂದತ್ತು ನಿಮಿಷಗಳ ನಂತರ ಯಾರೊಂದಿಗೋ ಮಾತನಾಡಿಕೊಂಡು ಬಂದ ಸಾವಿತ್ರಿ ಹಾಕಿದ್ದ ಕನ್ನಡಕದ ಫ್ರೇಮನ್ನು ತೆಗೆದು ಹುಬ್ಬೇರಿಸಿ ಕಣ್ಣರಳಿಸಿದಳು. ನಾಜೋಕಾಗಿ ಬಳುಕುವ ಬಳ್ಳಿಯಂತಿದ್ದರು. ದಟ್ಟವಾದ ಕಪ್ಪುಗೂದಲು, ದುಂಡಾದ ಕೆನ್ನೆಗಳು, ಉಬ್ಬಿದ ಎದೆಯ ಮಾಟ ಹೆಣ್ಣಾದ ಅವಳಿಗೆ ಹುಚ್ಚು ಹಿಡಿಸಿದಂತಾಯಿತು. ರೋಮ್ಯಾಂಟಿಕ್ ಮೂಡ್‌ನ ಹೆಣ್ಣು.

"ಹಲೋ...." ಎಂದಳಷ್ಟೆ ಸಖೀ.

ಮುಖವನ್ನು ಮೊರದಗಲ ಮಾಡಿದ ಸಾವಿತ್ರಿ "ಕುತ್ಕೊಳ್ಳಿ, ನನ್ನ ಟೈಮ್ ತುಂಬ ವ್ಯಾಲ್ಯುಬಲ್. ಜನ ನಂಗಾಗಿ ಕಾಯ್ತ ಇರ್ತಾರೆ. ನೀವು ನ್ಯೂ ಯಾರ್ಕ್‌ನಲ್ಲಿ ಪತ್ರಿಕಾ ರಿಪೋರ್ಟರ್ ಅಂತ ಗೊತ್ತಾಯ್ತು. ನಂಗೆ ಪ್ರಸಿದ್ಧಿ ಯಾವಾಗ್ಲೂ ಇಷ್ಟವಾಗೋಲ್ಲ. 'ಜನ ಸೇವೆಯೇ ಜನಾರ್ಧನ ಸೇವೆ.' ಇದೇ ನನ್ನ ಪಾಲಿಸಿ" ಷುರು ಮಾಡಿದ ರೀತಿ ಆಕರ್ಷಕವಾಗಿಯೇನೋ ಇತ್ತು. ಯಾಕೋ ಸಖೀಗೆ ಹಿಡಿಸಲಿಲ್ಲ ಸಾವಿತ್ರಿಯ ಮಾತಿನ ವೈಖರಿ.

ಅಷ್ಟರಲ್ಲಿ ಒಬ್ಬ ವ್ಯಕ್ತಿ ಬಾಗಿಲಿನಿಂದ ಒಳಕ್ಕೆ ತಲೆ ಹಾಕಿ "ಫರ್‌ಗಿವ್ ಮೀ ಫಾರ್ ಇಂಟರಪ್ಟಿಂಗ್ ಯೂ, ಮೇಡಮ್" ಜೇನು ಸುರಿಸುವಂತೆ ಕ್ಷಮಾಪಣೆ ಕೇಳಿಕೊಂಡೇ ಮಧ್ಯ ಪ್ರವೇಶಿಸಿದ ವ್ಯಕ್ತಿ ದೇವದಾಸಿ ನಾಟಕದ ನಾಜೂಕಯ್ಯನಂತೆ ಕಂಡ.

"ಷಟಪ್, ನೀವೇನು ನೇರವಾಗಿ ಇಂಗ್ಲೆಂಡ್‌ನಿಂದ ಬರ್ತಾ ಇದ್ದೀರಾ, ಮಾತೃಭಾಷೆ ಬಗ್ಗೆ ಅಭಿಮಾನ ಇರಬೇಕ್ರಿ. ಎಂಥ ಸುಂದರವಾದ ಭಾಷೆ ನಮ್ದು" ಛೀಮಾರಿ ಹಾಕಿ ತಮ್ಮ ಭಾಷಾಭಿಮಾನ ಪ್ರದರ್ಶಿಸಿ ಅದಕ್ಕೆ

ಎಂತಹ ಪ್ರತಿಕ್ರಿಯೆ ಇದೆ ಸಖಿಯ ಮುಖದಲ್ಲಿ ಎದು ನೋಡಿದಳು ಸಾವಿತ್ರಿ.

ಬಗ್ಗಿ ಆ ವ್ಯಕ್ತಿ ಕಿವಿಯ ಬಳಿ ಏನೋ ಪಿಸುಗುಟ್ಟಿದ ಬುಸಬುಸ ಎನ್ನುವಂತೆ "ಈಗ್ಲೇ ಬಂದೆ, ನಂಗೆ ಅವೆಲ್ಲ ಇಷ್ಟವಾಗೋಲ್ಲ. ಈ ಸನ್ಮಾನಗಳೆಲ್ಲ ಯಾಕ್ಬೇಕು" ಮೇಲೆದ್ದವಳು ಇವಳತ್ತ ತಿರುಗಿ "ಜಸ್ಟ್ ಫೈವ್ ಮಿನಿಟ್ಸ್" ಆ ವ್ಯಕ್ತಿಯೊಂದಿಗೆ ಹೋದಳು.

ಅಂದಿನ ಸಾವಿತ್ರಿಯ ನೆನಪಿಲ್ಲ ಅವಳಿಗೆ. ಬಿಳಿಯ ಕೈ ಮಗ್ಗದ ಚಿನ್ನದ ಕಲರ್‌ನ ಅಂಗೈನಷ್ಟು ಅಗಲ ಬಾರ್ಡರ್ ಇರುವ ಪ್ಯೂರ್ ರೇಶಿಮೆ ಸೀರೆಯುಟ್ಟ ಆಕೆ, ಮುಂಗೈನವರೆಗೂ ಉದ್ದವಿದ್ದ ತೋಳಿನ ಬ್ಲೌಸ್ ತೊಟ್ಟಿದ್ದಳು. ಕಿವಿ, ಕುತ್ತಿಗೆ, ಕೈಗಳಲ್ಲಿ ಯಾವುದೇ ಚಿನ್ನಾಭರಣಗಳಿಲ್ಲ. ಆದರೆ ಎರಡು ಕೈಗಳ ತುಂಬ ಹಸಿರಿನ ಗಾಜಿನ ಬಳೆಗಳು. ಮುಖದಲ್ಲಿ ಅಗಲವಾದ ಕುಂಕುಮ. ವಯಸ್ಸಿಗಿಂತ ಒಂದು ಐದು ವರ್ಷ ಚಿಕ್ಕವಳಾಗಿ ಕಾಣುತ್ತಿದ್ದಳು. ಸಾವಿತ್ರಿ ವ್ಯಕ್ತಿತ್ವ ಆಕರ್ಷವಾದುದ್ದೇ.

ಬ್ಯಾಗ್‌ನಿಂದ ಟೇಪ್‌ರೆಕಾರ್ಡರ್ ತೆಗೆದು ಮುಂದಿನ ಟೀಪಾಯಿ ಮೇಲಿಟ್ಟಳು. ನೇರವಾಗಿ ವಿಷಯಕ್ಕೆ ಹೋಗುವುದರಿಂದ ಪ್ರಯೋಜನವಿಲ್ಲವೆಂದು ಮನವರಿಕೆ ಮಾಡಿಕೊಟ್ಟಿದ್ದ ಅನಿಕೇತ್.

ಹತ್ತು ನಿಮಿಷದ ನಂತರ ಹಿಂದಿರುಗಿದ ಆಕೆ ಸುಸ್ತನ್ನು ನಟಿಸಿದಳು. "ಮಾನವಿಯತೆಯೇ ಸತ್ತುಹೋಗಿದೆ. ಡಾಕ್ಟ್ರುಗಳಲ್ಲಿ ಡೆಡಿಕೆಟೇಡ್ ಮೈಂಡ್ ಇಲ್ಲ. ಬರೀ ಸೆಲ್ಫಿಷ್. ಹತ್ತು ಜನ ಶ್ರೀಮಂತ ರೋಗಿಗಳಿಂದ ಹಣ ಪಡೆಯುವ ಡಾಕ್ಟ್ರುಗಳು ಒಬ್ಬ ಕಾಸಿಲ್ಲದ ವ್ಯಕ್ತಿಗೆ ಸಕಾಲ ವೈದ್ಯೋಪಚಾರ ಮಾಡಿ ಪ್ರಾಣ ಉಳಿಸೋದು ಪುಣ್ಯದ ಕಾರ್ಯವಲ್ಲ" ಒಂದಿಷ್ಟು ಲೆಕ್ಚರ್ ಕೊಟ್ಟಳು. ಇದು ಆಕೆಯ ಸ್ಯಾಂಪಲ್ ಪ್ರದರ್ಶನಗಳು ಅನಿಸಿತವಳಿಗೆ.

"ಸಾರಿ, ಎಕ್ಸ್‌ಟ್ರೀಮ್ಲಿ ಸಾರಿ..... ನಾನೇ ಮಾತಾಡ್ದೇ. ನನ್ನ ಬಗ್ಗೆ ಏನು ಬರೀತೀರಾ. ನಾನೊಬ್ಬ ಸಿಂಪಲ್ ಹೆಣ್ಣು. ಚಿನ್ನಾಭರಣಗಳ ವ್ಯಾಮೋಹವಿಲ್ಲ. ನಾನು ಗಾಂಧಿವಾದಿ" ಮತ್ತಷ್ಟು ಹೇಳಿಕೊಂಡ ನಂತರವೇ ನಿಲ್ಲಿಸಿದ್ದು.

"ಪ್ರಸಕ್ತ ಸಾಮಾಜಕೀಯ, ರಾಜಕೀಯ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲ್ಸ ಮಾಡ್ತಾ ಇರೋ ಅಂದರೆ, ಡೆಡಿಕೇಷನ್ ನೇಚರ್ ಇರುವ ಕೆಲವು ಮಹಿಳೆಯರ್ನ ಇಂಟರ್‌ವ್ಯೂ ಮಾಡಿ, ಅವ್ರ ಬಗ್ಗೆ ಲೇಖನ ಬರೆಯಲೆಂದೇ

ಭಾರತಕ್ಕೆ ಬಂದಿದ್ದೀನಿ. ನಿಮ್ಮ ವಿಷ್ಯ ತಿಳೀತು. ನನ್ನ ಕೆಲವೇ ಕೆಲವು ಪ್ರಶ್ನೆಗಳಿಗೆ ಉತ್ತರಿಸಿದ್ರೆ ಸಾಕು" ಪುಟ್ಟ ಟೇಪ್‌ರೆಕಾರ್ಡರ್‌ನ ಆನ್ ಮಾಡಿದಳು.

"ನೀವು ಈ ಕ್ಷೇತ್ರಕ್ಕೆ ಬಂದು ಎಷ್ಟು ವರ್ಷವಾಯ್ತು. ಇದ್ಕೇ ಪ್ರೇರಣೆ ಯಾರು ? ಅಂಥ ಮುಖ್ಯವಾದ ವ್ಯಕ್ತಿ ಇದ್ರೆ ಹೆಸರಿಸಿ" ಷುರು ಮಾಡಿದಳು.

ಯೋಚಿಸುವಂತೆ ಮುಖ ಮಾಡಿದವಳು ನಗೆ ಚೆಲ್ಲಿದಳು ಸದ್ದಿಲ್ಲದೆ. ಇಡೀ ಹಲ್ಲಿನ ಪಂಕ್ತಿ ಮಿನುಗಿತು. "ಮುಖ್ಯ ವ್ಯಕ್ತಿಯೆಂದರೇ ದೇವರೇ. ರಾಮಕೃಷ್ಣ ಪರಮಹಂಸ, ವಿವೇಕಾನಂದರನ್ನು ಚೆನ್ನಾಗಿ ಓದಿಕೊಂಡಿದ್ದೆ. ಸಮಾಜಕ್ಕೆ ಉಪಯುಕ್ತವಾಗಿ ಬದ್ಕಲು ನಿರ್ಧರಿಸಿ ಈ ಕ್ಷೇತ್ರಕ್ಕೆ ಬಂದೆ" ಪ್ರತಿಯೊಂದು ಮಾತನ್ನು ಯೋಚಿಸಿ ಯೋಚಿಸಿ ಆಡಿದಂತೆ ಕಂಡಿತು.

"ಷುರು ಹೇಗೆ ? ನಿಮ್ಮ ಮನೆಯುವರು ಅಂದ್ರೆ.... ಮುಖ್ಯವಾಗಿ ತಾಯಿ ವಿರೋಧಿಸಲಿಲ್ವೆ ? ಯಾವ್ದೇ ತಾಯ್ತಂದೆ ತಮ್ಮ ಮಕ್ಳು ಸಂಸಾರದಿಂದ ವಂಚಿತರಾಗಿ ಸಮಾಜ ಸೇವೆ ಮಾಡ್ಲೀಂತ ಬಯಸೋಲ್ಲ" ಅನುಮಾನ ವ್ಯಕ್ತಪಡಿಸಿದಳು ಸಖೀ.

ಸಾವಿತ್ರಿಗೆ ಏನಾಯಿತೋ ಏನೋ ಉದ್ವೇಗದಿಂದ ಪಟಪಟ ಹೇಳತೊಡಗಿದಳು. ಆದರಲ್ಲಿ ಬಹಳಷ್ಟು ತನ್ನನ್ನು ವೈಭವೀಕರಿಸಿಕೊಂಡು ಹೇಳಿದ ಸುಳ್ಳು ಮಾತುಗಳೇ ಅನ್ನಿಸಿತು. ಅವೆಲ್ಲ ಮುಖ್ಯವಾಗಿರಲಿಲ್ಲ ಅವಳಿಗೆ.

"ಇನ್ನೊಂದ್ವಿಷ್ಯ ಮೇಡಮ್, ಹಿಂದೆ...... ಅಂದರೆ ನಿಮ್ಮ ಕಾರ್ಯಕ್ಷೇತ್ರ ವಿಸ್ತಾರವಾಗುವ ಮುನ್ನ ಒಂದು ಅನಾಥಾಶ್ರಮದಲ್ಲಿ ವಾರ್ಡನ್ ಆಗಿ ಕೆಲ್ಸ ಮಾಡ್ತಾ ಇದ್ರಿ ಅನ್ನೋ ವಿಷ್ಯ ತಿಳೀತು." ಸ್ವಲ್ಪ ಕೆದಕಿದಾಗ ಸಾವಿತ್ರಿ ಬೆಚ್ಚಿದಳು. ಆದರೂ ಹೆದರುವ ಹೆಣ್ಣಲ್ಲ, ಬೇರೆಯುವರನ್ನು ಹೆದರಿಸುವಂಥ ಚಾಲೂಕಿತನವಿತ್ತು.

ಸೋಫಾದ ಮೆತ್ತೆಗೆ ಪೂರ್ತಿ ಒರಗಿ ಕಣ್ಮುಚ್ಚಿದ ಸಾವಿತ್ರಿ "ದೇವರೇ.... ದೇವರೇ, ಜನ ನನ್ನ ಕಾರ್ಯಗಳ್ನ ನಾನು ಮರೆತ್ರೂ ಅವು ಗುರುತು ಇಟ್ಕೊಂಡಿದ್ದಾರೆ. ಆದೊಂದು ಆನರಬಲ್ ಜಾಬ್. ಇಷ್ಟಪಟ್ಟು ಮಕ್ಳ ಸೇವೆ ಮಾಡ್ದೇ, ಮೋಸ ಮಾಡಿ ಮುಚ್ಚಿ ಹಾಕಿದ್ರು, ಆ ಕಡೆ ತಲೆ ಹಾಕಲಿಲ್ಲ" ಸಂಕಟವನ್ನು ಪ್ರದರ್ಶಿಸಿದಳು. ಆದರೆ ವಿವರಗಳನ್ನು ಅವಳ ಬಾಯಿಂದ ಹೊರಡಿಸುವುದು ಸಂಭವವಲ್ಲವೆನಿಸಿತು.

"ಅಮ್ಮ ಫೋನ್..." ಆಕೆಯ ಪಿ.ಎ. ಒಳಗೆ ಬಂದ. "ಬಂದ ಕಾಲ್‌ಗಳನ್ನೆಲ್ಲ ನಾನೇ ರಿಸೀವ್ ಮಾಡ್ಕೊಂಡೆ. ಇದು ತೀರಾ ಅರ್ಜೆಂಟ್....." ಕಾರ್ಡ್‌ಲೆಸ್ ಫೋನನ್ನು ಸಾವಿತ್ರಿಯ ಮುಂದಿಡಿದಾಗ ಎದ್ದು ಹೋದಳು.

ಹತ್ತು ನಿಮಿಷದ ನಡುವೆ ಆಕೆಯ ಪಿ.ಎ. ಬಂದು "ಮೇಡಮ್ ಸಾರಿ ಕೇಳಿದ್ರು, ಯಾವ್ದೋ ಅರ್ಜೆಂಟ್ ಕೆಲ್ಸಕ್ಕೆ ಮಂತ್ರಿಗಳನ್ನ ಭೇಟಿ ಮಾಡೋಕೆ ಹೋಗಿದ್ದಾರೆ. ರಾತ್ರಿ ನೀವು ಫೋನ್ ಮಾಡಿದ್ರೆ ಅವ್ರೇ ಅಪಾಯಿಂಟ್‌ಮೆಂಟ್ ಫಿಕ್ಸ್ ಮಾಡ್ತಾರಂತೆ." ಸದ್ಯಕ್ಕೆ ತೆರೆ ಎಳೆದುಹೋದ. ಮೌನವಾಗಿದ್ದು ಹೊರಗೆ ಬಂದಳು. ಹೊರಗಿನ್ನ ಗಿಜಬಿಜಿ ಇದ್ದರೂ ಹೋಗುವ ಸನ್ನಾಹದಲ್ಲಿದ್ದರು. ಒಬ್ಬ ಸಾಧಾರಣ ಸೋಷಿಯಲ್ ವರ್ಕರ್ ಇಷ್ಟೊಂದು ಪ್ರಭಾವಿತಳಾಗಿದ್ದಳೆಂದರೆ ಅವಳಿಗೆ ಆಶ್ಚರ್ಯವೇ.

ಗೇಟಿನಿಂದ ಹೊರಗೆ ಬಂದವಳು ಸುತ್ತಲೂ ಕಣ್ಣಾಡಿಸಿದಳು. ಅಗಲ ಉದ್ದವಿರುವ ಸ್ವಚ್ಛವಾದ ರೋಡಿನ ವ್ಯವಸ್ಥೆ ರೋಡಿನ ಪೂರ್ತಿ ಅಂಚಿನವರೆಗೂ ಇಂಥ ಬಂಗ್ಲೆಗಳೇ. ಅಂತು ಇದೊಂದು ರೀತಿಯ ಪ್ರತಿಷ್ಟಿತ ಕಾಲೋನಿಯೆಂದುಕೊಂಡಳು.

"ಮೇಡಮ್...." ಪರಿಚಿತ ದನಿಯನಿಸಿ ತಿರುಗಿದರೆ ನವನೀತ್ ನಿಂತಿದ್ದ. ಅವಳ ತುಟಿಯಂಚಿನಲ್ಲಿ ನಗು ಮಿನುಗಿತು. "ಅರೇ, ಅಂತು ಸಿಕ್ದೇ.... ಬೆಳಿಗ್ಗೆ ನಿಂಗೋಸ್ಕರ ಟ್ಯಾಕ್ಸಿ ಸ್ಟಾಂಡ್‌ನಲ್ಲಿ ಕಣ್ಣು ಹಾಯಿಸಿದೆ. ಒಳ್ಳೆದೇ ಆಯ್ತು. ನಿನ್ನ ಫ್ರೆಂಡ್ ಟ್ಯಾಕ್ಸಿ ಬಾಡ್ಗೆ ಪಡೆಯದೆಯೇ ಬಂದ್ಬಿಟ್ಟಿದ್ದ. ಎಷ್ಟಾಗಿತ್ತು?" ಬ್ಯಾಗ್ ತೆಗೆದಾಗ ತಲೆ ತಗ್ಗಿಸಿದ. ಹಿಚ್ಚಿನ ಬಾಡಿಗೆ ಆಸೆಗೆ ಗೌಡರನ್ನು ಕರೆತಂದು ಮಾರನೆಯ ದಿನ ಇವನಿಂದ ಬೈಗಳು ತಿಂದಿದ್ದ.

"ಕ್ಷಮಿಸಿ ಮೇಡಮ್, ಅವನೊಬ್ಬ ಈಡಿಯಟ್. ಅಷ್ಟಕ್ಕೆ ಬಿಡಿ, ಬಾಡ್ಗೆಯೇನು ಕೊಡೋದ್ಬೇಡ" ಅವನೇ ತೀರ್ಮಾನ ತಗೊಂಡಾಗ ನಿರಾಕರಿಸಿದಳು. "ನಂಗಿಷ್ಟವಾಗೋಲ್ಲ, ನೀನೇ ವಿಚಾರ್ಸಿ ಕೊಟ್ಬಿಡು" ಒಂದು ಲೆಕ್ಕಾಚಾರ ಮನವಲ್ಲಿಟ್ಟುಕೊಂಡು ಹಣ ಕೊಟ್ಟಳು

ಅರೆ ಮನಸ್ಸಿನಿಂದಲೇ ಪಡೆಯುವ ವೇಳೆಗೆ "ಏಯ್ ನವನೀತ್ ನಾನ್ಹೋಗ್ತೀನಿ. ಸಿಕ್ಕಿದಾಗ ಬಾಡ್ಗೇ ಕೊಡ್ತೀನಿ" ಯಾರದೋ ಟ್ಯಾಕ್ಸಿ ಹತ್ತಿದ ಹುಡುಗ ಕೂಗಿ ಹೇಳಿದ.

"ಎಲ್ಹೋಗ್ಬೇಕು ಮೇಡಮ್, ನಾನೇ ಬರ್ತೀನಿ" ಹೇಳಿದಾಗ ಸುಮ್ಮನೆ ನಿಂತಳು. ಈಗೇನು ಮಾಡುವುದು? ರಾಮಾಚಾರಿಗಳನ್ನ ನೆನಪಿಸಿಕೊಂಡು ರಾಯ್ ಮನೆ ಅಡ್ರೆಸ್ ಹೇಳಿದಳು. "ನನ್ನ ಅಲ್ಲಿಬಿಟ್ರೆ ಸಾಕು..." ಟ್ಯಾಕ್ಸಿಯೇರಿದಳು. ಆಳಕ್ಕೆ ಇಳಿದಷ್ಟು ತೀರಾ ಜಟಿಲವೆನಿಸಿತು. ತಾನು ಇನ್ನು ಅರ್ಧ ದಾರಿ ಕೂಡ ತಲುಪಿಲ್ಲ!

ಅನ್ಯಮನಸ್ಕಳಾಗಿಯೇ ಅವರ ಮನೆಯ ಮುಂದೆ ಟ್ಯಾಕ್ಸಿಯಿಂದ ಇಳಿದಳು. ಅದೇ ನೋಟ, ಏನೇನು ಬದಲಾವಣೆ ಇಲ್ಲ. ಮುಚ್ಚಿದ ಬಾಗಿಲು, ರಾಮಾಚಾರಿಗಳು ಗೋಡೆಗೋ ಕಂಬಕ್ಕೋ ಒರಗಿ ತೂಕಡಿಸುತ್ತಿರಬೇಕು. ಕಾಲಿಂಗ್ ಬೆಲ್ ಒತ್ತಿದಳು. ಬಾಗಿಲು ತೆರೆದಿದ್ದು ರಾಯ್. ಅವಳಿಗೆ ಆಶ್ಚರ್ಯವಾಯಿತು.

ಕನ್ನಡಕ ಹಿಂದಿನ ಅವರ ಕಣ್ಣುಗಳು ತೀರಾ ಕಿರಿದಾಯಿತು. ಒಂದಿಷ್ಟು ಪ್ರಸನ್ನತೆ ಕೂಡ ಇದೆಯೆನಿಸಿತು ಅವರ ಮುಖದ ಮೇಲೆ.

"ನಾನು..... ನಾನು...." ಎಂದಳೇ ವಿನಃ ಏನು ಹೇಳಲಾಗಲಿಲ್ಲ ಅವಳಿಗೆ. ಸುಮ್ಮನೇ ಹೋಗಿಬಿಟ್ಟರು. ಸ್ವಲ್ಪ ಸಂಕೋಚ ಕಾಡಿತು ಮುಂದಕ್ಕೆ ಹೆಜ್ಜೆಯಿಡಲು. "ಓ, ನೀನಾ.... ಬಾ.... ಬಾ. ಒಳ್ಳೆ ದಿನನೇ ಬಂದೆ. ನಮ್ಮ ಪುಣ್ಯ, ಶ್ರೀರಾಮನ ದಯೆ. ಅಂತು ಈ ಮನೆಯ ಪುಣ್ಯ ಇನ್ನು ಮುಗ್ದಿಲ್ಲ, ಆಕಸ್ಮಿಕವಾಗಿ ಯಜಮಾನ್ರು ಕೂಡ ಬಂದ್ರು" ಸಂತೋಷ, ಸಂಭ್ರಮ ವ್ಯಕ್ತಪಡಿಸಿದಾಗ ಸರಾಗವಾಗಿ ಉಸಿರಾಡುವಂತಾಯಿತು ಅವಳಿಗೆ.

ಹಾಲ್‌ನೊಳಕ್ಕೆ ಅಡಿಯಿಟ್ಟಾಗ ಹೂವು, ದೀಪಾ, ಧೂಪದ ಸುವಾಸನೆ ಘಮಲು. ವಾತಾವರಣದಲ್ಲಿ ವಿಶೇಷತೆ ಇದೆಯೆನಿಸಿತು. ಟೇಬಲ್ಲು ಮೇಲೆ ಒಂದು ದೊಡ್ಡ ಫೋಟೋ ಇಟ್ಟು ಅದಕ್ಕೆ ಹಾರ ಹಾಕಿ ಮುಂದೆ ಹಣ್ಣು, ಹೂವಿನ ತಟ್ಟೆ ಇಟ್ಟಿದ್ದರು. ಅದು ರಾಯ್ ಹೆಂಡತಿಯ ಭಾವಚಿತ್ರ. ಹಣೆಯಲ್ಲಿ ಅಗಲವಾದ ಕುಂಕುಮ, ಕೊರಳಲ್ಲಿ ಬಂಗಾರದ ಸರಗಳು, ಹೊದ್ದ ಜರತಾರಿ ಸೀರೆಯ ಸೆರಗು. ಅಂತೂ ಲಕ್ಷಣವಾದ ಹೆಂಗಸು. ಈಕೆಯೇ ತನ್ನ ತಾಯಿಯಾಗಿರಕೂಡದೇ? ಈ ಭಾವಚಿತ್ರ ನೋಡಿದ ನೆನಪಿನಲ್ಲಿಯೇ ಸರಿಯಬಹುದಿತ್ತು ಪರದೆಯಿಂದ.

ಮೇಲುಕೋಟೆಯ ಅಂಚಿದ್ದ ಕಚ್ಚೆ ಪಂಚೆ, ಸೊಂಟಕ್ಕೊಂದು ಧೋತರ, ಹಿಂದೆ ಕೂದಲೆಲ್ಲ ಸೇರಿಸಿ ಕಟ್ಟಿದ್ದ ದೊಡ್ಡ ಸೈಜಿನ ನಿಂಬೆಹಣ್ಣಿನ

ಗಾತ್ರದ ಗಂಟು. ಮುಂದಲೆಯಲ್ಲಿ ಕೂದಲು, ಇಂದು ಹಣೆಯ ನಾಮಗಳಲ್ಲಿ ಕಾಂತಿ ಇತ್ತು.

"ಕೂತ್ಕೋಮ್ಮ ಇವತ್ತು ನಮ್ಮೆಜಮಾನ್ರ ಮದ್ವೆ ಆನಿವರ್ಸರಿ. ಅಮ್ಮ ಬದ್ಕಿದ್ದಾಗ ದೊಡ್ಡ ಹಬ್ಬ. ಮನೆಯಲ್ಲಿ ಮಕ್ಕಳು ಇರೋರು. ನೆಂಟರು ಸ್ನೇಹಿತರನ್ನು ಊಟಕ್ಕೆ ಕರ್ದು ಸಂತೋಷ ಹಂಚೋರು. ಅವೆಲ್ಲ ವೈಭವದ ನೆನಪಿನ ದಿನಗಳು. ಈಗೇನಿದೆ, ಸದ್ಯಕ್ಕೆ ನೀನು ಬಂದಿದ್ದೊಂದು ವಿಶೇಷ. ಬೆಳಕು ಹರಿಯೋವರ್ಗೂ ಅವ್ರು ಬರೋ ಗ್ಯಾರಂಟಿ ಇರ್ಲಿಲ್ಲ" ಕಣ್ಣೊತ್ತಿಕೊಂಡು ಒಳಗೆ ಹೋದವರು ಒಂದು ದೊಡ್ಡ ಬೆಳ್ಳಿಯ ಲೋಟದಲ್ಲಿ ನಿಂಬೆಹಣ್ಣಿನ ಪಾನಕ ತಂದಿತ್ತರು.

ಕೂತು ಅನೂ ಇದೂ ಹೇಳಿಕೊಂಡರು. ಇವಳನ್ನೇನು ಕೇಳಲಿಲ್ಲ. ಈ ಮನೆಗೆ ಬಂದಾಗಿನ ವೈಭವದ ಕನಸ್ಸಿನಿಂದ ಹೊರ ಬರಲಾರದ ಚಡಪಡಿಕೆ ಅವರದು. ಅತ್ಯಂತ ತ್ರಪ್ತಿಯಿಂದ ಆಲಿಸಿದಳು.

ರಾಯ್ ಜೊತೆಗೆ ಕೂಡಿಸಿ ಅವಳಿಗೂ ಬಡಿಸಿದರು. ಕುಡಿ ಬಾಳೆ ಎಲೆಯ ಮೇಲೆ ಎರಡು ಬಗೆಯ ಕೋಸಂಬರಿ, ಹುರುಳಿಕಾಳು, ಎಲೆಕೋಸಿನ ಪಲ್ಯದ ಜೊತೆ ಬಲಿತ ಬೂದುಕುಂಬಳಕಾಯಿ ಮಜ್ಜಿಗೆ ಹುಳಿ, ವಿಧವಿಧವಾದ ತರಕಾರಿಗಳನ್ನು ಹೆಚ್ಚಿಹಾಕಿ ಮಾಡಿದ ಕಲಸನ್ನದ ಜೊತೆ ಕೊಬ್ಬರಿ ಚಟ್ನಿ, ಪಾಯಸ ತೊವ್ವೆ, ಸಿಹಿಖಾರ ಭಕ್ಷ್ಯಗಳು. ಇಷ್ಟು ವೆರೈಟಿಯ ಊಟವನ್ನು ಎಲೆಯ ಮೇಲೆ ಕಂಡಾಗ ಭಾರತದ ವೈವಿಧ್ಯತೆಯ ಪರಿಚಯವಾಯಿತು. ಕುಡಿ ಬಾಳೆಯೆಲೆಯ ಮೃದುತ್ವ, ಬಡಿಸಿದ ಪದಾರ್ಥಗಳ ಹದವಾದ ಹಸನಾದ ಮೂಗು ಅರಳಿಸುವಂಥ ಘಮಲು.

ಅತ್ಯಂತ ಸಾವಕಾಶವಾಗಿ ತೃಪ್ತಿಯಾಗಿ ಊಟ ಮಾಡಿದಳು ರಾಯ್ ಜೊತೆ. ಅವರು ಮಾತುಕತೆ ಇಲ್ಲದೆ ಮೌನವಾಗಿ ಊಟ ಮಾಡುತ್ತಿದ್ದರು. ಬಹುಶಃ ಮದುವೆಯ ದಿನದ ಭೂಮದ ಊಟದ ನೆನಪಿರಬೇಕು. ಎರಡು ಸಲ ನೆತ್ತಿ ಹತ್ತಿ ನೀರು ಕುಡಿದು ಸುಧಾರಿಸಿಕೊಂಡರು.

ಊಟ ಮುಗಿಸಿ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡ ಮೇಲೆ ಕೆಲಸದವನಿಗೆ ಬಡಿಸಿ, ತಾವು ಊಟಕ್ಕೆ ಕೂತರು ರಾಮಾಚಾರಿ. ಆ ಮದುವೆಯ ದಿನ ಹುಡುಗನಾಗಿ ಓಡಾಡಿಕೊಂಡಿದ್ದರು. ಬಹಳ ಪುಟ್ಟ ವಯಸ್ಸು! ಹೆಚ್ಚು ತಿನ್ನಲಾಗಲಿಲ್ಲ ಅವರಿಂದ. ಉಳಿದಿದ್ದನ್ನು ಚೆಲ್ಲಿ ಮೇಲೆದ್ದರು.

ಹತ್ತೇ ನಿಮಿಷದಲ್ಲಿ ರಾಯ್‌ನಿಂದ ಬುಲಾವ್ ಬಂತು. ಲಗೇಜ್ ತಂದು ಹಾಲ್‌ನಲ್ಲಿಟ್ಟರು. ಪ್ರಯಾಣಕ್ಕೆ ಸನ್ನದ್ಧರಾಗಿ ಬಂದ ರಾಯ್ ಅವಳತ್ತ ಒಮ್ಮೆ ನೋಡಿದರಷ್ಟೆ, ತಮ್ಮ ಪಾಡಿಗೆ ತಾವು ಹೊರಟರು. ಒಂದು ರೀತಿಯ ವಿರಕ್ತಭಾವದಿಂದ.

"ಉರಿ ಬಿಸಿಲು, ಟ್ಯಾಕ್ಸಿ ಆಟೋನಾದ್ರೂ ತರಿಸ್ತೀನಿ!" ರಾಮಾಚಾರಿ ಹಿಂದೆಯೇ ಹೋದರು. ಬೇಡವೆಂದರು ಕೈ ಸನ್ನೆಯಿಂದ. ಪುಟ್ಟ ಲಗೇಜ್ ಹೊತ್ತ ಕೆಲಸದವನು ಮಾತ್ರ ಹೋದ ಅವರ ಹಿಂದೆ.

ಗೋಡೆಯ ಮೇಲಿದ್ದ ಶ್ರೀರಾಮಚಂದ್ರ ಸೀತಾ ಸಮೇತ ಆಂಜನೇಯನಿದ್ದ ಫೋಟೋಗೆ ಕೈ ಮುಗಿದರು. "ಆಂಡವನೇ, ಮತ್ತೆ ತಿರ್ಗೀ ಬರ್ಲೀ" ಬೇಡಿಕೊಂಡರು ಕಣ್ಣೊರೆಸಿಕೊಳ್ಳುತ್ತ. ಅದರಿಂದ ಹೊರ ಬರಬೇಕಾದರೇ ಅವರಿಗೆ ಸ್ವಲ್ಪ ಹೊತ್ತು ಹಿಡಿಸಿತು.

ಆಮೇಲೆ ವಿಚಾರಿಸಿಕೊಂಡವರು ನಿರಾಶೆ ಚೆಲ್ಲಿದರು. "ಸಾವಿತ್ರಿಬಾಯಿ ಹೆಸರು ಕೇಳಿದ್ದೀನಿ, ಒಳ್ಳೆ ಮಾತುಗಾತಿ. ಆಕೆ ಬಗ್ಗೆ ಒಂದಿಷ್ಟು ಪುಕಾರ್‌ಗಳು ಇವೆ. ಈಗ ಇರೋ ಸ್ಥಿತಿಯಲ್ಲಿ ಹಿಂದಿನದನ್ನ ನೆನಸ್ಕೋತಾಳಾ! ಒಂದಿಷ್ಟು ಗಲಾಟೆ ಅದೂ ಇದೂ ನಡೆದಿರೋದ್ರಿಂದ ಏನು ಹೇಳೋಲ್ಲ. ಕೇಳೋಕ್ಹೋದ್ರೆ ನಿಂಗೆ ಅಪಾಯ! ಆಕೆಯಿಂದ ದೂರ ಇರು" ಬುದ್ಧಿ ಹೇಳಿದರು. ಆಕೆಯ ವಿಷಯದಲ್ಲಿ ನಡೆದ ಕೆಲವು ಇತ್ತೀಚಿನ ಗಲಾಟೆ ತನಿಖೆ, ಮುಚ್ಚಿಹೋದುದ್ದನ್ನು ಪೇಪರ್‌ನಲ್ಲಿ ಓದಿದ್ದರು.

ಅನ್ಯಮನಸ್ಕತೆಯಿಂದ ಕೂತುಬಿಟ್ಟಳು ಸಖೀ! ಇದ್ದ ಒಂದು ದಾರಿ ಮುಚ್ಚಿ ಹೋದಂತಾಯಿತು. ಎಲ್ಲೆಡೆಯಿಂದ ಬಂದ ಕತ್ತಲು ಅವಳನ್ನು ಆವರಿಸಿದಂತಾಯಿತು. ಅಮ್ಮ ಒಳಗಿನ ಆಸೆ, ಆಕಾಂಕ್ಷೆ ಆ ಪದದ ಮೂಲಕ ಹೊರಹೊಮ್ಮಿತ್ತು. ಕರುಣೆಯಿಂದ ನೋಡಿದರು ರಾಮಾಚಾರಿ.

"ನೇರವಾಗಿ ನೋಡಿದ್ದಿಲ್ಲ, ಯಾವ್ದೋ ಒತ್ತಡ ತಂದು ಹೇಳ್ಸಿದ್ರು. ನಿಜ ಹೇಳ್ದೇ ಇರಬೋದು. ಸತ್ಯ ಸತ್ತುಹೋಗುತ್ತೆ. ನಿನ್ನ ನಿಜ್ವಾದ ತಾಯ್ತಿಂದೆ ಸಿಗ್ದೇ ಹೋಗ್ಬಹ್ದು. ಅಂಥ ಹೆಣ್ಣನ್ನು ಯಾವ ವಿಷ್ಯಕ್ಕೂ ನಂಬಬಾರ್ದು. ಆಕೆಯ ಹಿಂದೆ ಬಿದ್ದು ನಿನ್ನ ವೇಳೆಯನ್ಯಾಕೆ ಅಪವ್ಯಯ ಮಾಡ್ಕೋತೀಯ?" ತಿಳಿವಳಿಕೆ ಹೇಳಿದರು. ಕಾಂಪೌಂಡರ್ ಶಾಸ್ತ್ರಿ ಮಗಳು ಕೆಲಸ ಕೊಡಿಸುತ್ತಾಳೆಂದು ಅವಳ ಹಿಂದೆ ಬಿದ್ದು ಹೆಣವಾಗಿ ಆಕ್ಸಿಡೆಂಟ್

ಅಂತ ದಾಖಲಾದ ವಿಷಯ ಅವರಿಗೆ ಗೊತ್ತು. ಈ ಹುಡುಗಿ ಹಾಗೆಲ್ಲ ಬಲಿಯಾಗಿಬಿಡುವುದು ಇಷ್ಟವಾಗಲಿಲ್ಲ ಅವರಿಗೆ.

"ಈಗ ಮತ್ತೇನಾಡ್ಲಿ?" ಕೇಳಿದಳು. ಅಶ್ರುಧಾರೆ ಹರಿಯಲು ಸಿದ್ಧವಾಗಿತ್ತು. ತಕ್ಷಣ ಏನೋ ಹೊಳೆದವರಂತೆ "ಅಂದಿನ ಅನಾಥಾಶ್ರಮದ ರೆಕಾರ್ಡ್‌ಗಳಲ್ಲಿ ಒಂದಿಷ್ಟು ದಾಖಲಾತಿ ದಿನ, ವಾರ ಸಮಯ ಅಂಥದೇನಾದ್ರೂ ಇರ್ಬಹ್ದು" ಸ್ಪಷ್ಟವಾದ ದಾರಿಯನೇನೋ ಸೂಚಿಸಿದರು. ಆ ಬಗ್ಗೆ ಸ್ಪಷ್ಟವಾಗಿ ಅನಿಕೇತ್ ಹೇಳಿದ್ದ. ಬಹುಶಃ ನಾಶವಾಗಿರಬಹುದು ಅಥವಾ ಕೋರ್ಟ್, ಪೊಲೀಸ್ ಸ್ಟೇಷನ್ ಕಡತಗಳಲ್ಲಿ ಸೇರಿ ಮರೆಯಾಗಿರಬಹುದು.

ಖಿನ್ನಳಾಗಿ ಹೊರಟು ನಿಂತಾಗ ಹಣ್ಣು, ಹೂ, ಸೀರೆ, ರವಿಕೆ ಇರುವ ಒಂದು ತಟ್ಟೆಯನ್ನು ತಂದಿಟ್ಟರು ಅವಳ ಮುಂದೆ.

"ಯಜಮಾನ್ರೇ ಹೇಳಿದ್ರು ನಿಂಗೆ ಕೊಡೋಕೆ, ಲಕ್ಷಣವಾಗಿಟ್ಕೊಂಡ್, ಒಂದೆರಡು ಸಲ ಮನೆಯಲ್ಲೆಲ್ಲ ಓಡಾಡ್ತ, ಸತ್ತು ಸ್ವರ್ಗದಲ್ಲಿರೋ ಆಕೆಗೆ ಮನಶ್ಯಾಂತಿ, ಅಲ್ಲಿಂದ್ಲೇ ಹರಸ್ತಾಳೆ" ಗದ್ಗದ ಕಂಠದಿಂದ ಹೇಳಿದರು.

ಸಖೀ ಎತ್ತಿಕೊಂಡು ಕಣ್ಣಿಗೊತ್ತಿಕೊಂಡಳು. ಆ ಸೀರೆ ಅಮೂಲ್ಯವೆನಿಸಿತು. ಕೋಣೆಗೆ ಹೋಗಿ ಉಟ್ಟುಕೊಂಡು ಬಂದಾಗ ರಾಮಾಚಾರಿಗಳು ಕಣ್ಣೀರು ತೊಡೆದುಕೊಂಡರು.

"ಎಷ್ಟೊಂದು ಲಕ್ಷಣವಾಗಿದ್ದೀಯ! ಬಟ್ಟಲಿನಲ್ಲಿ ಕುಂಕುಮ ಇದೆ ಹಣೆಗೆ ಹಚ್ಕೋ" ಹೇಳಿದರು ಮನದುಂಬಿ. ಸ್ವಂತ ಹಿತಾಸಕ್ತಿ, ಸ್ವಾರ್ಥವಿಲ್ಲದ ಮನ. ಅವರ ಸಮಸ್ತವು ರಾಯ್, ಅವರೇ ವಿರಾಗಿಗಳಾಗಿ ಅಲೆಯುತ್ತಿರುವಾಗ ಇವರಿಗೆ ಯಾವ ರೀತಿಯ ಪ್ರಲೋಭ! ವ್ಯಕ್ತಿ ನಾರ್ಮಲ್ಲಾಗಿ ಬದಲಾಗಬೇಕಾದ ಸ್ಥಿತಿ ಇದು.

ಕುಂಕುಮ ಹಚ್ಚಿಕೊಂಡು ಆ ಫೋಟೋಗೆ ಕೈ ಮುಗಿದಳು. 'ಅಮ್ಮ' ಆಕ್ರಂದಿಸಿತು. ಹೆತ್ತಳವನ್ನು ಒಮ್ಮೆ ನೋಡುವಂತಾದರೆ ಇದು ಬರೀ ಆಸೆಯಾಗಿ ಉಳಿಯಲು ಬಿಡಲಾರಳು ಅವಳು.

"ಬಾ ಇಲ್ಲಿ..." ಹಿತ್ತಲಿಗೆ ಕರೆದೊಯ್ದರು.

ವಿಶಾಲವಾದ ಜಾಗ, ನಿಂಬೆ, ಸಪೋಟ ಮರಗಳಲ್ಲಿ ಎಳಸುಗಾಯಿ, ಹಣ್ಣುಗಳು ಜೋತಾಡುವುದನ್ನು ನೋಡುವುದೇ ಖುಷಿಯೆನಿಸಿತು.

ಒಂದಂಚಿಗೆ ಸಂಪಿಗೆ ಮರವಾದರೇ, ಇನ್ನೊಂದು ಕಡೆ ಮಾವಿನ ಮರವಿತ್ತು. ಅತ್ಯಂತ ಸುಂದರ, ಸಮೃದ್ಧ ತೋಟದ ಕಲ್ಪನೆ.

"ಪಂಕಜಾಗೆ ಗಿಡಗಳೂಂದ್ರೆ ಪ್ರಾಣ! ಇವೆಲ್ಲ ಆಕೆ ಹಾಕಿ ಬೆಳೆಸಿದ್ದು. ಮಕ್ಕಳನ್ನು ಪೋಷಿಸುವಂತೆ ಪೋಷಿಸಿದ್ದಳು. ನನ್ನ ಒಂಟಿತನಕ್ಕೆ ಜೊತೆಗಾರರು ಈಗ. ಅವುಗಳ ಕ್ಷೇಮ ನಾನು ವಿಚಾರಿಸಿದ್ರೆ, ನನ್ನ ಕ್ಷೇಮ ನೋಡೋದು ಅದೇ. ಇಲ್ಬಂದು ಕೂತರೇ ಹಾಯೆನಿಸುತ್ತೆ" ಎನ್ನುತ್ತಿದ್ದವರು ಫೋನಿನ ಸದ್ದು ಕೇಳಿ ಒಳಗೆ ಹೋದರು.

ಸಾಕಮ್ಮನ ತೋಟದ ನೆನಪಾಯಿತು. ಈ ಪರಿಸರದಲ್ಲಿ ಅವಳ ಮನಸ್ಸು ಅತ್ಯಂತ ಶಾಂತವಾಯಿತು. ಉದ್ವಿಗ್ನತೆ ಕಡಿಮೆಯಾಯಿತು. ಮನುಷ್ಯನ ಜೀವನಕ್ಕೂ ಸಸ್ಯ ಸಂಪತ್ತಿಗೂ ನಿಕಟವಾದ ಸಂಪರ್ಕ. ಮನುಷ್ಯನು ಹೊರ ಹಾಕುವ ಇಂಗಲಾಮ್ಲವನ್ನು ಪರಿಶುದ್ಧ ಮಾಡಿ ಮತ್ತೆ ವಾತಾವರಣಕ್ಕೆ ಆಮ್ಲಜನಕವನ್ನು ಒದಗಿಸುವ ಸಸ್ಯಸಂಪತ್ತು ಪ್ರಕೃತಿಯ ದೊಡ್ಡ ಕೊಡುಗೆ.

ಆರಾಮವಾಗಿ ಹೋಗಿ ಸಂಪಿಗೆಯ ಮರದ ಕೆಳಗೆ ಕೂತಳು. ಅಲ್ಲಲ್ಲಿ ಒಂದೊಂದು ಹೂ ಎಲೆಗಳ ನಡುವೆ ಇದ್ದುದ್ದರಿಂದ ಆ ವಾಸನೆ ಸುತ್ತಮುತ್ತಲೂ ಹರಡಿತ್ತು. ಮುದಗೊಂಡಿತು ಮನ. ಒಂದು ತಂಪು ಹೊತ್ತಿನ ಸಂಜೆಯಲ್ಲಿ ಇಂಥ ಮರದ ಕೆಳಗೆ ಕೂತು ಹೆತ್ತಮ್ಮನಿಂದ ಕೈ ತುತ್ತು ತಿನ್ನುವ ಭಾಗ್ಯ ತನ್ನದಾವರೇ!

"ಅಲ್ಲಿ ಕೂತ್ಕೊಂಡ್ರಾ?" ಎನ್ನುತ್ತ ಬಂದ ರಾಮಾಚಾರಿ. ಕತ್ತೆತ್ತಿ ಮರದ ಕಡೆ ನೋಡಿದರು. "ಗಿಡ ದೊಡ್ಡದಾಯ್ತು ವಿನಃ ಸಂಪಿಗೆ ಮರದಲ್ಲಿ ಮೊಗ್ಗೇ ಇರ್ಲಿಲ್ಲ. ಈಗೆರಡ್ವರ್ಷದಿಂದ ಹೂವಷ್ಟೆ. ಬರಡು ಗಿಡ ನೋಡಿ ನೋಡಿ ಸಾಕಾದ ನಾನೇ, ಹಳ್ಳಿಯಿಂದ ಬಂದ ಮಾಲಿಟನಿಗೆ ಹೋಗೋವಾಗ ಹೇಳ್ದೆ ಮೊಗ್ಗು, ಹೂ ಇಲ್ದ ಗಿಡನ ನೋಡೋಕೆ ಬೇಸರ. ಮುಂದಿನ ಸಲ ಬಂದಾಗ ತೆಗ್ದುಬಿಡು. ಇಷ್ಟೊಂದು ಮರ, ಗಿಡಗಳಲ್ಲಿ ಇದೇ ಗೊಡ್ಡು ಗಿಡ ಅಂದಿದ್ದೆ. ಆಮೇಲಿನ ಮೂವತ್ತು ದಿನಕ್ಕೆ ಹೂ ಕಂಡಿತು. ಅದಕ್ಕೂ ಜೀವದ ಮೇಲೆ ಭಯ" ತಾವು ಅಂದ ಮಾತುಗಳಿಗೆ ಸಂಪಿಗೆ ಗಿಡ ಪ್ರತಿಕ್ರಯಿಸಿದ ಬಗ್ಗೆ ಹೇಳಿಕೊಂಡರು.

ಒಂದೆರಡು ಗಂಟೆಗಳ ತರುವಾಯ ಸಂಜೆಯೇ ಹೊರಟಿದ್ದು. ಹೋಗುವ ಮುನ್ನ ಉತ್ಸಾಹದಿಂದ "ಸದ್ಯಕ್ಕೆ ನಾನು ರೂತ್ ಕ್ಲಿಂಟನ್

ಅಲ್ಲ, ಭಾರತದಲ್ಲಿ ಇರೋವರ್ಗೂ ಸಖೀ'' ಎಂದು ಹೇಳಿದಳು. ರಾಮಾಚಾರಿಗಳ ಮುಖ ಅರಳಿತು. ಸುಕ್ಕುಗಳಲ್ಲಿಯು ಸಂತಸ ಚಿಮ್ಮಿತು. “ತುಂಬ ಒಳ್ಳೆ ಹೆಸರು. ನಂಗೆ ಕೂಗೋದು ಹಿತವಾಯ್ತು...'' ಎಂದವರು ಚಿಂತಿತರಾದರು. ಯಾಕೋ ಸಾವಿತ್ರಿ ವಿಷಯದಲ್ಲಿ ಭಯ. ಆ ಹೆಣ್ಣಿನಿಂದ ಇವಳಿಗೆ ತೊಂದರೆಯಾಗಬಾರದಾದರೇ ಇವಳು ಮತ್ತೆ ಅವಳನ್ನು ಭೇಟಿ ಮಾಡಬಾರದು.

“ಒಂದ್ಮಾತು ಸಖೀ, ಅನಾಥಾಶ್ರಮದ ರೆಕಾರ್ಡ್ಸ್ ಎಲ್ಲಿದೆ ಎನ್ನುವುದರ ಬಗ್ಗೆ ಮುತುವರ್ಜಿವಹಿಸು. ಮತ್ತೆ ಆ ಸಾವಿತ್ರಿಬಾಯಿಯು ಭೇಟಿಗೆ ಹೋಗ್ಬೇಡ. ತಿಳಿದಿದ್ರೂ ನಿಜ ಹೇಳೋಲ್ಲ'' ಎಚ್ಚರಿಸುವುದರ ಜೊತೆಗೆ ಒಂದು ಗೆರೆ ಎಳೆದರು. ಅದು ಅವಳ ಪಾಲಿಗೆ ಲಕ್ಷ್ಮಣರೇಖೆ. ದಾಟಿದರೇ ಸೀತೆಯು ಸ್ಥಿತಿಯಂತೆ ಅಪಹರಣ, ಅಶೋಕವನದಲ್ಲಿ ಬಂಧಿತಳು.

ಹೋಟೆಲ್‌ಗೆ ಬಂದಾಗ ಅನಿಕೇತ್ ಅವಳಿಗಾಗಿ ಕಾದಿದ್ದ. ಅವನಿಗೇನು ಗೊತ್ತಿರಲಿಲ್ಲ. ಒಂದಿಷ್ಟು ದಿನ ತಿಳಿದ ಮೇಲೆ ತೀರಾ ಎಚ್ಚರವಹಿಸಲು ಹೇಳಿ ಹೋಗಲು ಬಂದಿದ್ದ.

“ಅಂತು ಮತ್ತೆ ಸಖೀನ ನೋಡೋ ಭಾಗ್ಯ ಸಿಕ್ಕಿದ್ದು ಪುಣ್ಯ. ಎಲ್ಲಿ ನ್ಯೂ ಯಾರ್ಕ್‌ಗೆ ದಾರಿ ಬಿಟ್ಟಿದೇಯೋಂತ ಹೆದರಿದ್ದೆ. ಕೆಲವರ ನೆನಪಿನಲ್ಲಿ ಉಳ್ಯೋ ಸ್ವಾರ್ಥ'' ಹುಬ್ಬು ಕುಣಿಸಿದ ನಗುತ್ತ. ಅವನ ನೋಟದಲ್ಲಿ ಮೋಹಕತೆ ಇತ್ತು. ಕಣ್ಣುಗಳು ಫಳಫಳ ಹೊಳೆಯುತ್ತಿದ್ದವು. ಸ್ನೇಹದಿಂದ ಅಣಕಿಸುವಂತೆ ಮುಗುಳ್ನಕ್ಕಳು, ತಾನಷ್ಟು ಸ್ವಾರ್ಥಿ ಅಲ್ಲವೆನ್ನುವಂತೆ.

ಸ್ವಂತದಾದ ಮೂರು ಕಾರುಗಳು ಇದ್ದರೂ ಬಸ್ಸು ಹತ್ತಿ ಬಂದಿದ್ದ ಜೈಲಿನಿಂದ ತಪ್ಪಿಸಿಕೊಂಡು ಬರುವ ಕಳ್ಳನಂತೆ. ಎರಡು ಹೆಣ್ಣುಗಳ ಮುಷ್ಟಿಯಲ್ಲಿ ಬಂಧಿತನಾಗಿದ್ದುದು ದುರ್ಬಲತೆಯಿಂದಲ್ಲ, ಕರುಣೆಯಿಂದ ಮರುಕದಿಂದ ಕುಸಿಯಲು ಸಿದ್ಧವಾದ ಮನೆಯನ್ನು ಉಳಿಸುವ ಸಲುವಾಗಿ.

“ಕೇಳೋದು, ಹೇಳೋದು ಎಲ್ಲಾ ಇದೆ'' ಎಂದು ಅತ್ತಿತ್ತ ನೋಡಿದನು. ಸದಾ ಅವನನ್ನು ಸಿ.ಐ.ಡಿ.ಗಳು ಅಂದರೆ ಅವನಮ್ಮ ಹೆಂಡತಿ ನೇಮಿಸಿದ ಜನ ಬೆನ್ನಟ್ಟುವುದರ ಜೊತೆಗೆ ಒಂದು ರೀತಿಯ ರಕ್ಷಣೆಯ ವ್ಯವಸ್ಥೆ ಅದನ್ನ ನೆನೆದರೆ ಅವನಿಗೆ ನಗು.

ರೂಮಿಗೆ ಕರೆದೊಯ್ದಳು. ಉಟ್ಟ ಆರೆಂಜ್ ಕಲರ್‌ನ ರೇಶಿಮೆಯ ಸೀರೆ, ಹಣೆಗೆ ಹಚ್ಚಿದ್ದ ಕುಂಕುಮದಲ್ಲಿ ತೀರಾ ಆಕರ್ಷಕವಾಗಿ ಕಂಡಳು.

"ವೆರಿ, ಬ್ಯೂಟಿಫುಲ್, ಯೂ ಲುಕ್ ಲೈಕ್ ಎನ್ ಎಂಜಲ್. ಸೀರೆ ನಿಮ್ಗೆ ತುಂಬ ಒಪ್ಪುತ್ತೆ. ಸೀರೆ ಹೆಣ್ಣಿಗೆ ಎಲ್ಲಾ ಉಡುಪುಗಳ್ಗಿಂತ ಹೆಚ್ಚು ಒಪ್ಪುತ್ತೆ" ಸಲಿಗೆಯಿಂದ ಹೇಳಿದ.

ಇಂಥ ಬೇಕಾದಷ್ಟು ಮಾತುಗಳನ್ನು ಅಂದರೆ ಸ್ವಲ್ಪ ಭಿನ್ನವಾಗಿ ಹೇಳಿದ್ದರೂ ಯೌವನಕ್ಕೆ ಕಾಲಿಟ್ಟನಂತರ ಸ್ಕೂಲ್ ಮೇಟ್ಸ್, ಕಾಲೇಜು ಮೇಟ್ಸ್ ನಂತರ ಕೋಲಿಗ್ಸ್. ಆ ಸಮಯದಲ್ಲಿ ನವಿರಾದ ಕಂಪನದ ಬದಲು ಅಂಜುತ್ತಿದ್ದಳು. ಅಂಥವರಿಂದ ದೂರವಿರಲು ಇಷ್ಟಪಡುತ್ತಿದ್ದಳು. ಆದರೆ ಇಂದು ಅನಿಕೇತ್‌ನ ಹೊಗಳಿಕೆಯಿಂದ ಅವನ ಗಲ್ಲದಲ್ಲಿ ಕೆಂಪು ಮೂಡಿ ಮುಖಕ್ಕೆ ಲಜ್ಜೆಯ ಆಭರಣವಾಯಿತು.

ದೀರ್ಘವಾಗಿ ನೋಡಿ ಅನಿಕೇತನ್ ಕಣ್ಣುಗಳು ಇದನ್ನೆಲ್ಲ ಗುರ್ತಿಸಿತು. ಅಮೆರಿಕದಲ್ಲಿ ಬೆಳೆದ ಈ ಹೆಣ್ಣು ಅಮೆರಿಕನೈಸ್ ಆಗಿಲ್ಲವೆಂದುಕೊಂಡ.

ಫ್ರಿಜ್‌ನಲ್ಲಿದ್ದ ಬಾಟಲ್‌ನಲ್ಲಿದ್ದ ನೀರನ್ನು ಕುಡಿದಿಟ್ಟು ಬಂದವನು ಕೂತ. "ಈಗ್ಹೇಳು ಸಖೀ, ಸಾವಿತ್ರಿಬಾಯಿನ ಭೇಟಿಯಾಗಿದ್ಯಾ?" ಬೇರೆ ಧಾಟಿಗೆ ಹೊರಳಿ ಬಹಳ ಗಂಭೀರವಾಗಿ ಕೇಳಿದ.

ಹ್ಯಾಂಡ್ ಬ್ಯಾಗ್‌ನ ಒಂದು ಕಡೆ ಇಟ್ಟವಳು ಮತ್ತೆ ಎತ್ತಿಕೊಂಡು ತೆರೆದು ಟೇಪ್‌ರೆಕಾರ್ಡರ್‌ನ ಅವನ ಮುಂದಿಟ್ಟು ಆನ್ ಮಾಡಿದಳು. ಬೆಳಿಗ್ಗೆ ನಡೆದ ಸಂಭಾಷಣೆಯ ವೈಯ್ಯಾರ ನಾಟಕೀಯ ಮಾತುಗಳು ಅವನನ್ನು ಕೆರಳಿಸಿತು. ಮುಷ್ಟಿ ಬಿಗಿ ಮಾಡಿ ಅವಡುಗಳನ್ನು ಕಚ್ಚಿದ. ದುಷ್ಟ ಹೆಣ್ಣು. ಮಗುವಿನಂಥ ಸ್ವಭಾವದ ಶೀನಪ್ಪಯ್ಯನನ್ನು ಗಪ್‌ಚಿಪ್ಪಾಗಿ ದೇಶಾಂತರಕ್ಕೆ ಅಟ್ಟಿ ಅದೇ ರೂಪದಲ್ಲಿ ಒಂದಿಷ್ಟು ಬದಲಾವಣೆ ಮಾಡಿಕೊಂಡು ಸಮಾಜವನ್ನು ಮೋಸಗೊಳಿಸುತ್ತಿದ್ದಾಳೆ.

ತುಟಿ ಕಚ್ಚಿ ಹಣೆಯೊತ್ತಿದವನು ಎ.ಸಿ.ಯನ್ನು ಆನ್ ಮಾಡಿ ಬಂದು ಮುಖದ ಬೆವರನ್ನೊತ್ತಿ "ಸಾವಿತ್ರಿಬಾಯಿ ಒಂದು ಲೆಕ್ಕಕ್ಕೆ ಸಿಗದ ಹೆಣ್ಣು. ಅಲರ್ಟ್ ಆಗಿರೋದು ಎಲ್ಲಾ ದೃಷ್ಟಿಯಿಂದ್ಲೂ ಒಳ್ಳೇದು. ಅವ್ಳ ಜನ ನಿನ್ನ ಭೂತ, ವರ್ತಮಾನದ ಒಂದು ಚಾರ್ಟ್ ತಯಾರ್ಸಿ ಆಕೆಯ ಮುಂದಿಟ್ಟಿದ್ರೂ ಹೆಚ್ಚಲ್ಲ. ನಿಂಗ್ಬೇಕಾದ ವಿಷ್ಯ ಅವ್ಳಿಂದ ತಿಳ್ಯೋ ಹಾಗಿದ್ರೆ

ಮಾತ್ರ ಭೇಟಿಯಾಗು ಮತ್ತೆ. ಇಲ್ಲ ಆ ಚಾಪ್ಟರ್ ಕ್ಲೋಸ್ ಮಾಡ್ಬಿಡು. ತುಂಬ ಸ್ಯಾಡಿಸ್ಟ್ ಮನೋಭಾವದ ಹೆಣ್ಣು" ಹಲ್ಲುಮಿಡಿ ಕಚ್ಚಿ ಹೇಳಿದ.

ರಾಮಾಚಾರಿಗಳು ಹೇಳಿದ್ದಕ್ಕೂ ಅನಿಕೇತ್ ಹೇಳುತ್ತಿರುವುದಕ್ಕೂ ಸಾಮ್ಯವಿತ್ತು. ಇಬ್ಬರ ದೃಷ್ಟಿಯಲ್ಲೂ ಸಾವಿತ್ರಿಬಾಯಿ 'ದುಷ್ಟ ಹೆಣ್ಣು, ಬ್ಯಾಡ್ ವಿಮನ್'.

"ಈಗೇನ್ಮಾಡೋದು ?" ಅವಳೇ ಕೇಳಿದಳು ಮುಗ್ಧವಾಗಿ. ಕರುಣೆಯುಕ್ಕಿದರೂ ಬೈಯ್ದು ಬುದ್ಧಿ ಹೇಳಿ ಹಿಂದಿರುಗುವಂತೆ ಹೇಳಬೇಕೆನಿಸಿತು ಕ್ಷಣ. "ನಾನು ಹೇಳೋದಿಷ್ಟೆ, ಸಾವಿತ್ರಿಬಾಯಿನ ಮತ್ತೆ ಭೇಟಿ ಮಾಡೋದ್ಬೇಡ. ಆ ಜೇನು ಮಾತುಗಳ ಹೆಣ್ಣು ರಾಕ್ಷಸ ಮನೋಭಾವದವಳು. ಕರುಣೆ ಮಾನವೀಯತೆ ಅನ್ನೋದು ಸ್ವಲ್ಪ ಕೂಡ ಇಲ್ಲಾಂತಾರೆ ಅವ್ಳನ್ನ ಅರಿತ ಜನ. ನಾವು ಈಗ ನಂಬ್ಬೇಬೇಕು ಅವ್ರ ಮಾತುಗಳ್ನ" ಸ್ವಲ್ಪ ಉದ್ವಿಗ್ನಗೊಂಡಂತೆ ನುಡಿದ. ಅಂದು ಅನಾಥಾಶ್ರಮದಲ್ಲಿ ನಡೆಸುತ್ತಿದ್ದ ದಂಧೆಯನ್ನು 'ಹೈಕ್ಲಾಸ್' ಲೆವಲ್‌ನಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದಾಳೆಂದು ಇವನ ಗೆಳೆಯ ಪತ್ರಿಕಾ ರಿಪೋರ್ಟರ್ ಮನದಟ್ಟು ಮಾಡಿದ್ದ.

"ಪ್ರೊಫೆಸರ್ ರಾಯ್ ಮನೆ ರಾಮಾಚಾರಿ ಅಂಕಲ್ ಕೂಡ ಅದ್ನೇ ಹೇಳಿದ್ರು. ಆಕೆ ಸುಳ್ಳು ಹೇಳಿ ನಿನ್ನ ದಾರಿ ತಪ್ಪಿ ಸತ್ಯ ಹುದುಗಿಬಿಡ್ಬಹುದು. ಅಂಥ ಅಪಾಯಗಳೇ ಹೆಚ್ಚೂಂದ್ರು." ತಣ್ಣನೆಯ ಸ್ವರದಲ್ಲಿ ಹೇಳಿದಳು.

"ಎಗ್ಸಾಟ್ಲೀ ಕರೆಕ್ಟ್. ಇನ್ನು ವಾರ್ಡನ್ ಸಾವಿತ್ರಿಬಾಯಿಯವ್ರ ವಿಷ್ಯ ಬಿಡು." ನಿಶ್ಚಿಂತೆಯಿಂದ ನುಡಿದವನು ಫೋನ್ ಎತ್ತಿ ಡಯಲ್ ತಿರುಗಿಸಿದವನು ಆ ನಂಬರ್‌ಗೆ ರಿಸೀವ್ ಆದ ಕೂಡಲೇ ಕಟ್ ಮಾಡಿದ, ಒಂದು ಸಲವಲ್ಲ, ಎರಡು ಸಲವಲ್ಲ, ಮೂರು ಸಲ. ನಂತರ ಫೋನಿಟ್ಟು ಬಂದು ಕೂತು ಅವಳ ಮುಖವನ್ನೆ ನೋಡಿದ. ನೆಲದಲ್ಲಿತ್ತು ಅವಳ ನೋಟ. "ರೆಕಾರ್ಡ್ಸ್ ಸಿಕ್ಕಿದ್ರೆ ಅದರಲ್ಲಿರೋ ಕನಿಷ್ಠ ಮಾಹಿತಿಯಿಂದ ಮುಂದುವರಿಬಹುದು."

ಸರಿಯಾಗಿ ಅರ್ಥವಾಯಿತು ಅವನಿಗೆ. ಎಷ್ಟೇ ಕಷ್ಟ ಪ್ರಯಾಸವಾದರೂ ಹಿಂದೆಗೆಯಲಾರಳು. 'ರೆಕಾರ್ಡ್ಸ್.....ರೆಕಾರ್ಡ್ಸ್... ಎಲ್ಲಿರಬಹುದು ? ಕೊಟ್ಟ ಮೇಲೆ ಕಟ್ಟೆಚ್ಚರ ವಹಿಸಿದ್ದ ಮಾವನನ್ನು ಪ್ರಶ್ನಿಸಿದರೇ, ಆ ದಾರಿ ಪೂರ್ತಿ ಮುಚ್ಚಿಬಿಡುವ ಭಯವಿತ್ತು.

"ಒಂದ್ಕೆಲ್ಸ ಮಾಡು ಸಖೀ, ನಾಳೆ ಸಂಜೆ ಬಂದು ನಿನ್ನ ಭೇಟಿ ಮಾಡ್ತೀನಿ, ಅವರ್ಗೂ ನೀನು ರೆಸ್ಟ್ ತಗೋ. ಆಮೇಲೆ ಡಿಸ್‌ಕಸ್ ಮಾಡೋಣ. ಡೋಂಟ್ ವರೀ, ನಿಂಗೆ ನನ್ಕೈಯಲ್ಲಾದ ಸಹಾಯ ಮಾಡ್ತೀನಿ" ಭರವಸೆಯನ್ನಿತ್ತ. ಸದ್ಯಕ್ಕೆ ಅವನು ಮಾಡಬಲ್ಲದ್ದು ಇಷ್ಟೆ.

ಹೊರಟು ನಿಂತಾಗ "ಡೋಂಟ್ ವೈಂಡ್, ಒಂದೇ ಒಂದು ಪ್ರಶ್ನೆ, ಮೂರ್ಸಲ ಫೋನ್ ಮಾಡಿ ಕಟ್ ಮಾಡಿದ್ರಲ್ಲ" ಕೇಳಿದಳು ಕುತೂಹಲದಿಂದ. ಜೋರಾಗಿ ನಕ್ಕುಬಿಟ್ಟ. "ಟ್ರೇಡ್ ಸೀಕ್ರೆಟ್, ನಮ್ಮನೆಗೆ ಫೋನ್ ಮಾಡಿದ್ದು, ಲೈನ್ ಕೂಡ ಸರಿಯಿತ್ತು. ಫೋನ್ ಎತ್ತಿದವ್ರು ಶ್ರೀಮತಿಯವ್ರು. ಆದಿರ್ಲಿ, ನಾನು ಭೇಟಿ ಮಾಡೋವರ್ಗೂ ನಿನ್ನ ಕಾರ್ಯಕ್ರಮಗಳೆಲ್ಲ ಸ್ಥಗಿತ. ಡೋಂಟ್ ಫರ್ಗೆಟ್ ಎಬೌಟ್ ಇಟ್" ಹೇಳಿ ಹೋದ.

ಕ್ಲಿಂಟನ್, ಡಯಾನ ದಂಪತಿಗಳು ತನ್ನನ್ನು ದತ್ತು ತೆಗೆದುಕೊಳ್ಳದಿದ್ದರೇ, ತನ್ನ ಭವಿಷ್ಯ ಏನಾಗುತ್ತಿತ್ತು? ಕಲ್ಪನೆಗೆ ಸಿಗದಂತಾಯಿತು.

ಅಂದು ಮೀಟಿಂಗ್‌ನಿಂದ ಸಾವಿತ್ರಿಬಾಯಿ ಬೇಗನೆ ಬಂದಳು ಬಂಗ್ಲೆಗೆ. ಪಿ.ಎ.ಗೆ ಆದೇಶಿಸಿದ್ದಳು. "ಆ ಹುಡ್ಗೀ, ಯುವತಿ ಬಂದಿದ್ದಳಲ್ಲ, ತೆಳ್ಳಗೆ ಬೆಳ್ಳಗೆ, ಫಾರಿನ್ ರಿಪೋರ್ಟರ್, ನನ್ನ ಬಗ್ಗೆ ಇಂಟರ್‌ವ್ಯೂ ಮಾಡಿ ಲೇಖನ ಬರೆಯಲು. ನಾಳಿದ್ದು ಇಡೀ ದಿನ ಎಲ್ಲಾ ಅಪಾಯಿಂಟ್‌ಮೆಂಟ್‌ಗಳು ಕ್ಯಾನ್ಸಲ್ ಮಾಡಿ ಮೂರೂವರೆ ಗಂಟೆ ಸಂದರ್ಶನ ನೀಡಲು ಸಿದ್ಧವೆಂದು ತಿಳ್ಸು. ಇದು ತುಂಬ ಇಂಪಾರ್ಟೆಂಟ್. ಇಲ್ಲಿನ ಪತ್ರಿಕೆಯವ್ರು ನನ್ನ ಬಗ್ಗೆ ನೆಗೆಟಿವ್ ಆಗಿ ಬರ್ದು ರಾಡಿ ಎಬ್ಬಿಬಿಟ್ಟಿದ್ದಾರೆ. ಅಲ್ಲಿನ ಪತ್ರಿಕೆಯಲ್ಲಾದ್ರೂ ನನ್ನ ಬಗ್ಗೆ ಒಳ್ಳೆ ರೀತಿಯಲ್ಲಿ ಬರಿಯಲಿ."

ಇಡೀ ದಿನ ಆ ರಿಪೋರ್ಟರ್ ಫೋನ್‌ಗಾಗಿ ಕಾದು ಕೂತಿದ್ದ. ಸ್ವತಃ ಬಂದು ಕಾಯಬಹುದು, ರಿಕ್ವೆಸ್ಟ್ ಮಾಡಿಕೊಳ್ಳಬಹುದೆಂದು ಅವನ ಅಭಿಪ್ರಾಯ. ಅದು ಅವನ ಬೌದ್ಧಿಕ ಬೆಳವಣಿಗೆಯನ್ನು ಸೂಚಿಸುತ್ತೆ.

ಕನ್ನಡಕ ತೆಗೆಯುತ್ತ "ಏನೀ ಇಂಪಾರ್ಟೆಂಟ್ ನ್ಯೂಸ್" ಎಂದಳು. ಕೂದಲಿಗೆ ಸಿಕ್ಕಿಸಿದ್ದ ಪಿನ್ ಬಿಚ್ಚುತ್ತ "ಎಲ್ಲಾ ಮಾಮೂಲೇ. ಆ

ರಿಪೋರ್ಟರ್‌ನಿಂದ ಯಾವ್ದೇ ಫೋನ್ ಇಲ್ಲ" ಕೈಕಟ್ಟಿ ನಿಂತ. ಸಾವಿತ್ರಿಬಾಯಿ ಕಣ್ಣುಗಳು ಕೆಂಪಾದವು. ಸ್ವಲ್ಪ ಉದಾಸೀನ ಮಾಡಿದ್ದು ತನ್ನ ತಪ್ಪಾಯಿತೇನೋ ಅಂದುಕೊಂಡ.

"ಅವ್ರು ಎಲ್ಲಿ ಲಾಡ್ಜ್ ಮಾಡಿದ್ದಾಳೆ ?" ಸ್ವರವೇರಿತು.

"ಗೊತ್ತಿಲ್ಲ, ಮೇಡಮ್..." ತಲೆ ಕೆರೆದುಕೊಂಡ.

ಮುಂದಿದ್ದ ಟೀಪಾಯಿನ ಅಷ್ಟು ದೂರಕ್ಕೆ ಒಬ್ಬ ಮೇಡಮ್ "ಈಡಿಯಟ್, ಯೂಸ್‌ಲೆಸ್ ಫೇಲೋ..... ಥೂ ನಿಂಗೆ ಜ್ಞಾನ ಬೇಡ. ನಾನಂತು ಅರ್ಜೆಂಟ್‌ನಲ್ಲಿದ್ದೆ" ಬೈಗಳು ಎರಚಾಡಿದವು.

ರಿಸೆಪ್ಷನಿಸ್ಟ್ ಶಂಕರಿ, ಇನ್ನೊಬ್ಬ ಪಿ.ಎಸ್. ಮಾರ್ಕಾಂಡ ಯಾರಿಗೂ ಅವಳ ಹೆಸರು ಕೂಡ ತಿಳಿಯದೇ ಹೋಯಿತು. ಇದು ರೂತ್ ಕ್ಲಿಂಟನ್‌ಳ ಅದೃಷ್ಟ.

"ನಾಯ್ಡುನ ಕಾಂಟಾಕ್ಟ್ ಮಾಡಿ ವಿಚಾರ್ಸು" ಗುಟುರು ಹಾಕಿದಳು. ನಂಬರ್ ಒತ್ತಿ ಲೈನ್‌ಗೆ ಬಂದ ಕೂಡಲೇ ನಮ್ರವಾಗಿ ಆಕೆಯ ಕೈಗೆ ಕೊಟ್ಟು ಸ್ವಲ್ಪ ಹಿಂದೆ ಹೋಗಿ ನಿಂತ. ಅದು ಸಂಪ್ರದಾಯ. "ಏಯ್ ನಾಯ್ಡು, ನೀನು ಕಳ್ಸಿದ ರಿಪೋರ್ಟರ್ ಎಲ್ಲಿ ?" ನಾಯ್ಡು ತಲೆ ಕೆರೆದುಕೊಂಡ. "ಬಂದಿಲ್ವಾ, ಮೇಡಮ್ ? ಗುಡ್ ರಿಪೋರ್ಟರ್, ಅವ್ರ ತಂದೆ ಒಂದು ದೊಡ್ಡ ಪತ್ರಿಕೆಗೆ ಎಡಿಟರ್ ಆಗಿದ್ದಾರೆ" ಹೇಳಿದ ಮಹಾ ಉಪಕಾರ ಮಾಡಿದಂತೆ.

"ಬಂದಿದ್ಲು, ಮತ್ತೆ ಪತ್ತೆ ಇಲ್ಲ. ಸ್ವಲ್ಪ ಒಳ್ಳೆ ರೀತಿ ಕನ್ವಿನ್ಸ್ ಮಾಡೋಕ್ಕಾಗಿಲ್ವಾ ? ಇದು ಕೂಡ ಇಂಪಾರ್ಟೆಂಟ್. ನ್ಯೂ ಯಾರ್ಕ್ ಪತ್ರಿಕೆಯಲ್ಲಿ ನನ್ನ ವಿಷ್ಯ ಬಂದ್ರೆ ವಿಶ್ವದಲ್ಲೇ ಮಾನ್ಯತೆ ಸಿಕ್ಕಿದಂತಾಗುತ್ತೆ, ಜುಜುಬಿ ಇಲ್ಲೇನು ? ಆ ಹುಡ್ಗೀ ಹತ್ರ ಮಾತಾಡೋಕೆ ನಾನು ಸಿದ್ಧ. ತಕ್ಷಣ ಕಳ್ಸಿಕೊಡು" ಎಂದಾಗ, 'ಹ್ಞೂ' ಗುಟ್ಟಿದವನು ನಕ್ಕ. ಎಂಥ ಹೆಸರಿನ ಹುಚ್ಚು, ಕರ್ನಾಟಕದ ಜನ ಈಕೆಯ ಬಗ್ಗೆ ತಿಳಿದಿದ್ದು ಸಾಲ್ದು, ವಿದೇಶಿಯರು ಕೂಡ ತಿಳೀಬೇಕು, ಏನು ಹೆಸರಿನ ಹುಚ್ಚು ಮನದಲ್ಲಿಯೇ ನಕ್ಕು ಸುಮ್ಮನಾದ 'ಹೋಗ್ತಾಳೆ' ಎಂದುಕೊಂಡು. ಮತ್ತೆ ಮಾರನೆಯ ದಿನ ವೇಳೆಗೆ ಮೂರು ಸಲ ಫೋನ್ ಬಂದಾಗ ವಿಪರೀತಕ್ಕೆ ಇಟ್ಟುಕೊಂಡಿತು ಎಂದುಕೊಂಡ.

"ಅವ್ರ ಹೆಸರೇನು ? ಎಲ್ಲಿ ಇಳ್ಕೊಂಡಿರೋದು ? ನಾನು

ಸಂಪರ್ಕಿಸ್ತೀನಿ, ಫೋನ್ ನಂಬರ್ ಕೊಡಿ, ಮೇಡಮ್ ರಾಂಗ್ ಆಗ್ಬಿಟ್ಟಿದ್ದಾರೆ'' ಒಂದೇ ಉಸಿರಿನಲ್ಲಿ ಸಾವಿತ್ರಿಬಾಯಿ ಪಿ.ಎ. ಕೇಳಿದಾಗ ನಾಯ್ಡು ಬೆವರೊತ್ತಿಕೊಂಡರು. ಅವರ ಹೆಸರು ಪ್ರೊಮೋಷನ್ ಲಿಸ್ಟ್‌ನಲ್ಲಿತ್ತು. 'ನಂಗೆ ಎಲ್ಲಿಯ ಗ್ರಹಚಾರ' ಎಂದುಕೊಂಡವರು ಫೋನ್‌ನ ಬಟನ್ ಒತ್ತಿ ಕಟ್ ಮಾಡಿ ಇಟ್ಟುಬಿಟ್ಟರು.

ಪರಮಪ್ಪನ ಮನೆಗೆ ಫೋನ್ ಮಾಡಿ ಮಾಡಿ ಸಿಕ್ಕದ ಕಾರಣ ಷೆಡ್‌ನಿಂದ ಕಾರು ಹೊರಗೆ ತೆಗೆದರು. "ಎಲ್ಲಿಗೆ, ಇವತ್ತೆಲ್ಲೂ ಹೋಗೋಲ್ಲಾಂತ ಒಂದು ಪಿಕ್‌ನಿಕ್ ಪ್ರೋಗ್ರಾಂ ಹಾಕಿದ್ರಲ್ಲ'' ಹೆಂಡತಿ ಕೇಳಿದಾಗ ಸಹನೆ ಕಳೆದುಕೊಂಡು ಕೆನ್ನೆಗೊಂದು ಬಿಗಿದುಬಿಟ್ಟರು. "ನಿಂಗೇನು ಗೊತ್ತು ಗಂಡಿನ ಕಷ್ಟ. ಸಿನಿಮಾ, ಪಿಕ್‌ನಿಕ್, ಷಾಪಿಂಗ್ ಇದ್ಕೆಲ್ಲ ಎಲ್ಲಿಂದ ಹೊಂಚುತ್ತಾರೇ, ಹಣ ಅನ್ನೋ ಜ್ಞಾನ ಇದ್ಯಾ? ಹೋಗಿ ಕೆಲ್ಸ ನೋಡು. ಪಿಕ್‌ನಿಕ್ ಅಂತೆ ಪಿಕ್‌ನಿಕ್'' ಷರಟಿನ ತೋಳುಗಳನ್ನು ಮೇಲಕ್ಕೆ ಮಡಚಿಕೊಂಡರು. ತೋಳುಗಳಲ್ಲಿನ ಮುಂಗೈನ ಬಟನ್ ಕಿತ್ತುಹೋಗಿತ್ತು. 'ಹಾಳು ಹೆಂಗಸರು, ಇವನ್ನಾದ್ರೂ ಮಾಡಲಾರದಷ್ಟು ಸೋಮಾರಿಗಳು' ಗೊಣಗಿ ಕಾರು ಏರಿ ತಪ್ಪನೆ ಬಾಗಿಲು ಹಾಕಿಕೊಂಡರು. 'ತನಗೆಲ್ಲಿಯ ತಲೆ ಬಿಸಿ' – ಬಿಸಿಯೇನು ಕಾದ ಹೆಂಚಾಗಿತ್ತು ತಲೆ. ಭತ್ತ ಎಸೆದರೆ ಅರಳಾಗುತ್ತಿತ್ತೇನೋ.

ಕಾರು ಪರಮಪ್ಪನ ಮನೆಯ ಮುಂದೆ ನಿಂತು ಹಾರನ್ ಮಾಡಿದಾಗ, ಪಕ್ಕದ ಮೈದಾನದಲ್ಲಿ ಕ್ರಿಕೆಟ್ ಆಡುತ್ತಿದ್ದ ಅವರ ಮಗ ಓಡಿ ಬಂದ "ಅಪ್ಪ, ಕ್ಲಬ್‌ಗೆ ಹೋದ್ರೂ ಅಮ್ಮನ ಜೊತೆ ಜಗ್ಳವಾಡಿಕೊಂಡು, ಇನ್ನು ಸಂಜೆನೇ ಸಿಕ್ಕೋದು. ಅಲ್ಲಿ ಇಲ್ಲಾಂದ್ರೆ ಗೊತ್ತಿಲ್ಲ....'' ಕಣ್ಣೊಡೆದ ಹನ್ನೆರಡು ವರ್ಷದ ಹುಡುಗ. ತಂದೆಯ ನಡವಳಿಕೆ ಅವನಿಗೆ ತಮಾಷೆ ವಿಷಯ, ಮಜಾ ತೆಗೆದುಕೊಳ್ಳುತ್ತಿದ್ದ.

ನಾಯ್ಡು ರಿವರ್ಸ್ ತೆಗೆದುಕೊಂಡು ಪಕ್ಕದ ರೋಡಿಗೆ ತಿರುಗಿಸಿದರು. ಕಾರನ್ನ 'ಏಯ್ ಒಂದು ಆಪರ್ಚುನಿಟಿ ಬದ್ಕಿ ಬಂದಿದೆ ನೋಡು. ವಿದೇಶದಿಂದ ನ್ಯೂ ಯಾರ್ಕ್ ಟೈಂಸ್‌ನ ಒಬ್ಬ ರಿಪೋರ್ಟರ್ ಬಂದಿದ್ದಾರೆ. ಇಲ್ಲಿನ ಸಮಾಜ ಸೇವಾಸಕ್ತ ಜಾಗೃತ ಮಹಿಳೆಯರ ಬಗ್ಗೆ ಆ ಪತ್ರಿಕೆಗೆ ಲೇಖನ ಬರೀತಾ ಇದ್ದಾರೆ. ನಾನು ತುಂಬ ಕನ್ವಿನ್ಸ್ ಮಾಡಿ ಹಿಡಿದಿದ್ದೀನಿ. ಹೆಂಗೂ ಮೇಡಮ್‌ನೋರಿಗೆ ಹೆಸರಿನ ಹುಚ್ಚು, ಇಲ್ಲಿನ ಪೇಪರ್‌ಗಳು

ಉಗಿದಿದ್ದು ಅಲ್ಲಿನ ಲೇಖನವಾದ್ರೂ ಒರೆಸ್ಲಿ. ಹೇಗೂ ಸ್ವಲ್ಪ ಫೇವರಾದ್ರೆ ನಮ್ಕೆಲ್ಲಸಗಳು ಆರಾಮ್' ಪರಮಪ್ಪ ಉಬ್ಬಿಸಿದ್ದ.

'ನೀನ್ನೊಂದ್ಮಾತು ಹೇಳು ಮಿಕ್ಕ ಡೀಟೈಲ್ಸ್ ನಂಗ್ಬಿಲ್ರಿ' ಭಾರವನ್ನು ತನ್ನ ಮೇಲೆ ಹಾಕಿಕೊಂಡಿದ್ದ. ಮಿಕ್ಕ ಕೆಲಸವನ್ನು ಬೇರೆಯವರ ಹೆಸರಲ್ಲಿ ಅನಿಕೇತ್ ಮಾಡಿದ್ದ.

ಆರಾಮಾಗಿ ತುಟಿಗಳ ಮಧ್ಯೆ ಸಿಗರೇಟು ಕಚ್ಚಿ ಇಸ್ಪೀಟು ಎಲೆಗಳನ್ನು ಹಿಡಿದಿದ್ದ ಪರಮಪ್ಪನನ್ನು ನೋಡಿದ ಕೂಡಲೇ ನಾಲ್ಕು ತದಕಬೇಕೆನಿಸಿತು. 'ಹೋಗೋ, ಬಾರೋ' ಎನ್ನುವಷ್ಟರ ಮಟ್ಟಿಗಿನ ಸಂಬಂಧ ಅವರಿಬ್ಬರ ಮಧ್ಯೆ.

ಭುಜದ ಮೇಲೆ ಕೈಯಿಟ್ಟ ನಾಯ್ಡು "ತೀರಾ ಅರ್ಜೆಂಟಿದೆ, ಮೇಲಕ್ಕೇಳು" ಬಲವಂತದಿಂದ ಎಬ್ಬಿಸಿಕೊಂಡು ಹೊರಬಂದವನು ಅವನ ತುಟಿಗಳ ಮಧ್ಯೆ ಇದ್ದ ಸಿಗರೇಟನ್ನು ಕಿತ್ತೆಸೆದ "ನಿಂಗೆ ವಾರಕ್ಕೆ ಆರು ಭಾನುವಾರ ಕೊಟ್ರೂ ಕ್ಲಬ್‌ನಲ್ಲಿ ಇದ್ಬಿಡ್ತೀಯಾ, ಈಡಿಯಟ್, ಎಲ್ಲೋ ಪ್ರೆಸ್ ರಿಪೋರ್ಟರ್ ?" ಗಟ್ಟಿಸಿ ಕೇಳಿದ.

ಆಟದ ಮಧ್ಯದಲ್ಲಿ ಎಬ್ಬಿಸಿಕೊಂಡಿದ್ದು ಬೇಸರವೇ. "ಏಯ್, ಯಾವ ರಿಪೋರ್ಟರೋ ? ಸಂಬ್ಳ ಕೊಡೋ ಸರ್ಕಾರನೆ ನನ್ನ ಪ್ರಶ್ನಿಸೋಲ್ಲ, ನೀನ್ಯಾರೋ.... ?" ಒರಟಾಗಿಯೇ ಕೇಳಿದ ಪರಮಪ್ಪ.

ನಾಯ್ಡು ಮುಖ ಗುಂ ಕೋಪದಿಂದ ಕೆಂಪಾಯಿತು "ಯಾರೂಂತ ನನ್ನ ಕೇಳ್ತೀಯಲ್ಲ ! ಅದೇ ಕಣೋ ನ್ಯೂಯಾರ್ಕ್ ರಿಪೋರ್ಟರ್, ಅದೇ ಸಾವಿತ್ರಿ ವಿಷ್ಯ ಬರ್ಯೋ ಬಗ್ಗೆ..." ವಟಗುಟ್ಟಿದ ತಾಳ್ಮೆ ಕಳೆದುಕೊಂಡು.

"ಓ, ಅಷ್ಟೇನಾ.... ಏನೋ ಅಂದ್ಕೊಂಡೇ ! ಈಗೇನಂತೆ ?" ಸಮಾಧಾನಕ್ಕೆ ಬಂದವನು "ತ್ರಿಬಲ್ ಫೈವ್ ಸಿಗರೇಟು ಕಣೋ, ಅದ್ರ ಬೆಲೆ ಎಷ್ಟೂಂತ ನಿಂಗೆ ಗೊತ್ತಿದ್ರೆ, ಬಿಸಾಕ್ತ ಇರ್ಲಿಲ್ಲ. ಹೊಟ್ಟೆ ಉರಿಯುತ್ತೆ" ಅಷ್ಟು ದೂರದಲ್ಲಿ ಬಿದ್ದ ಸಿಗರೇಟಿನ ಕಡೆ ಮರುಕದ ನೋಟ ಬೀರಿದ.

ನಾಯ್ಡು ಸ್ಥೂಲವಾಗಿ ವಿವರಿಸಿದ. "ಸಾವಿತ್ರಿಬಾಯಿ ತುಂಬ ಇಂಟರೆಸ್ಟಾಗಿದ್ದಾಳೆ ಸಂದರ್ಶನ ಕೊಡೋಕೆ. ಆದರೆ ರಿಪೋರ್ಟರ್ ಬಂದಿಲ್ಲಾನ್ನೋದೊಂದು ಸಮಸ್ಯೆ."

ಪರಮಪ್ಪನಿಗೆ ಇದು ತೀರಾ ತಮಾಷೆಯಾಗಿ ಕಂಡಿತು. ಸಿಗರೇಟು ಕೇಸ್ ತೆಗೆದು ಒಂದು ಸಿಗರೇಟನ್ನು ತುಟಿಗಳ ನಡುವೆ ಕಚ್ಚಿ ಅದಕ್ಕೆ ಲೈಟರ್

ಸೋಕಿಸಿದ. ಅವನು ಚೈನ್ ಸ್ಮೋಕರ್. ಹೆಂಡತಿನ್ನಾದರೂ ಬಿಟ್ಟಾನು ಸಿಗರೇಟನ್ನು ಬಿಡಲಾರದಷ್ಟು ಅದಕ್ಕೆ ಅಡಿಕ್ಟ್ ಆಗಿದ್ದ. ಎರಡು 'ಧಂ' ಹೊಡೆದ ನಂತರವೇ ವಿಷಯಕ್ಕೆ ಬಂದಿದ್ದು.

"ಈಗ ನಾನೇನ್ಮಾಡ್ಬೇಕು ?" ಹೊಗೆಯೂದುತ್ತ ಕೇಳಿದ ಹಗುರವಾಗಿ. ವಿಷಯ ಅವನಿಗೇನು ಅಷ್ಟು ಸೀರಿಯಸ್ಸಾಗಿ ಕಾಣಲಿಲ್ಲ. ನಾಯ್ಡು ಹಣೆ ಗಟ್ಟಿಸಿಕೊಂಡ "ಹೇಗೂ ನೀನು ಸೈಟಿಗೆ ಓಡಾಡ್ತಾ ಇದ್ದೀಯಾ, ಸಾವಿತ್ರಿಬಾಯಿ ಕೊಕ್ಕೆ ಹಾಕ್ಬಿಟ್ರೆ ಮುಗ್ದೇ ಹೋಯ್ತು. ಈಗ ರಿಪೋರ್ಟರ್‌ನ ಹಿಡೀಬೇಕು ಮೊದ್ಲು. ನಾವು ಮತ್ತಷ್ಟು ಫೇವರ್ ಆಗ್ತೀವಿ ಆಕೆಗೆ. ಅದ್ರಿಂದ ತುಂಬಾನೇ ಅನ್ಕೂಲ ಇದೆ. ನಡೀ ರಿಪೋರ್ಟರ್‌ನ ಕಂಡ್ಬರೋಣ" ಒತ್ತಾಯವೇರಿದ.

"ಸರಿ, ಆಯ್ತು..... ಅನ್ಕೂಲ ಯಾರ್ಗೇ ಬೇಡಾ ! ನಂಗೇನು ಗೊತ್ತು ಆ ರಿಪೋರ್ಟರ್ ? ನಚಿಕೇತ ಹೇಳಿದ್ನಾ, ನಿಂಗ್ಹೇಳಿ ಕೈ ತೊಳ್ಕೊಂಡೇ, ನಂಗೆ ಸಾಹೇಬರ ನೋಡೋದಿತ್ತು. ಅದ್ಕೇ ನಿಂಗೆ ನೇರವಾಗಿ ಫೋನ್ ಮಾಡೋಕ್ಹೇಳಿದ್ದೆ. ಆ ವಿಷ್ಯಗಳು ನಿಂಗೊತ್ತು" ಎಂದ ಸಹಜವಾಗಿ ಅದಕ್ಕೂ ತನಗೂ ಸಂಬಂಧವೇ ಇಲ್ಲವೆನ್ನುವಂತೆ.

ನಾಯ್ಡು ತಲೆ ಸಿಡಿಯತೊಡಗಿತು. ಎರಡು ಕೈಯಲ್ಲೂ ತಲೆ ಹಿಡಿದುಕೊಂಡು ಕೋಪದಿಂದ ಸುಟ್ಟುಬಿಡುವಂತೆ ನೋಡಿ, ಆಮೇಲೆ ಸಮಾಧಾನಕ್ಕೆ ಬಂದ.

"ಮಹಾರಾಯ, ನಂಗೇನು ಗೊತ್ತಿಲ್ಲ. ಆ ರಿಪೋರ್ಟರ್ ಮುಖ ನೋಡಿದೋನಲ್ಲ. ನ್ಯೂಯಾರ್ಕ್ ಟೈಂಸ್ ಅಂತ ಪತ್ರಿಕೆಯ ರಿಪೋರ್ಟರ್ ನನ್ಹತ್ರ ಯಾಕೆ ಬರ್ತಾರೆ ? ನಂಗೆ ಫೋನ್ ಮಾಡಿದ್ದು ನಚಿಕೇತ, ಅವ್ನ ಹಿಡಿದ್ರೆ ವಿಷ್ಯ ಹೊರಕ್ಕೆ ಬರುತ್ತೆ. ಅಕಸ್ಮಾತ್ ಬರ್ಲಿಲ್ಲಾನ್ನು, ಅದ್ರಿಂದ ನಷ್ಟವೇನು ? ಇಲ್ಲಿನ ಪತ್ರಿಕೆಗಳು ಹಾಡಿಹೊಗಳಿ ಆಗಿದೆಯಲ್ಲ, ತಾಯಿ ನಿಂತ್ಕಡೆ ಹುಲ್ಲು ಕೂಡ ಹುಟ್ಟೋಲ್ಲ" ಜಿಗುಪ್ಸೆಯ ಮುಖ ಮಾಡಿದ. ತೋರುವ ಗೌರವ ಕಪಟ, ತಮ್ಮ ಆಗುವ ಕೆಲಸಗಳ ಸಲುವಾಗಿ ಮಾತ್ರ. ಈ ಸಲ ಎಲೆಕ್ಷನ್‌ನಲ್ಲಿ ಸೀಟು ಸಿಗುವ ಪುಕಾರ್ ಇದ್ದರೂ ಅದು ಆಕೆಗೆ ಅಷ್ಟೇನು ಅಗತ್ಯವಿಲ್ಲ. ಅಧಿಕಾರವಿಲ್ಲದೆಯೇ ಆಡಿಸಬಲ್ಲಂಥ ಚಾಣಾಕ್ಷೆ.

ಹಣೆಯೊತ್ತಿಕೊಂಡ ನಾಯ್ಡು, ಅವನ ಸಿಗರೇಟು ಕೇಸ್‌ನಿಂದ ಒಂದು ಸಿಗರೇಟ್ ತಗೊಂಡಾಗ, ಲೈಟರ್ ಸೋಕಿಸಿದ "ಎಲ್ಲಾ ಮಾಡ್ಬಿಟ್ಟೆ,

ನಾನಂತೂ ಸಂಜೆವರ್ಗೂ ಎಳ್ಬಾರ್ದೂಂತಾನೆ ಬಂದಿದ್ದು" ಅಸಮಾಧಾನ ಪ್ರಕಟಿಸಿದಾಗ ಪರಮಪ್ಪನನ್ನು ಎಳೆದೊಯ್ದು ಕಾರ್ ಡೋರ್ ತೆರೆದು ಅದರೊಳಕ್ಕೆ ನೂಕಿ ಸಿಗರೇಟ್ ನೆಲಕ್ಕೆ ಹಾಕಿ ಬೂಟು ಕಾಲಿನಿಂದೊಸಕಿ ಹೋಗಿ ಸ್ಟೀರಿಂಗ್ ವೀಲ್ ಮುಂದೆ ಕೂತ. "ಆ ರಿಪೋರ್ಟರ್‌ನ ಹಿಡ್ದು ಶಭಾಷ್‌ಗಿರಿ ಪಡೀಲೇಬೇಕು. ನನ್ನ ಫೈಲು ಒಂದ್ಕಡೆ ಸಿಕ್ಕಿಹಾಕ್ಕೊಂಡಿದೆ. ಅದು ತೀರ್ಮಾನವಾಗ್ದ ಹೊರ್ತು, ಪ್ರಮೋಷನ್ ಇಲ್ಲ. ಆ ನಚಿಕೇತನನ್ನು ಕೂಡ ಎಳ್ದು ಕಾರಿಗೆ ದಬ್ಬುತೀನಿ" ಎಂದವ ಕಾರು ಸ್ಟಾರ್ಟ್ ಮಾಡಿದಾಗ ಆರಾಮಾಗಿ ಸೀಟಿಗೊರಗಿ ಸಿಗರೇಟು ಸೇದತೊಡಗಿದ.

ನಚಿಕೇತನ ಮನೆಯ ಮುಂದೆ ಕಾರು ನಿಂತಾಗ ಅವನ ವಯಸ್ಸಾದ ತಾಯಿ ಹೊರಬಂದವರೇ "ಮಾರ್ಕೆಟ್‌ಗೆ ಹೋಗವ್ನೇ" ವಿಷಯ ಮುಟ್ಟಿಸಿದರು. ನಾಯ್ಡು ತಲೆ ಚಚ್ಚಿಕೊಂಡರು. ಅವನ ಮಾರ್ಕೆಟ್‌ನ ವ್ಯಾಮೋಹ, ಬಾರ್‌ಗೈನ್ ಮಾಡೋ ವಿಧಾನ ನೆನಸಿಕೊಂಡರು. ಒಂದೆರಡು ಗಂಟೆಗಳು ಕೂಡ ಕಡಿಮೆಯೇ ಅವನ ವ್ಯಾಪಾರಕ್ಕೆ. "ಈಗೇನ್ಮಾಡ್ಬೋದು ?" ಪರಮಪ್ಪನತ್ತ ನೋಡಿದ. ಹಿಂದಕ್ಕೆ ತಿರುಗಿ ಕೈಯಾಡಿಸಿ ವಿಂಡ್‌ನ ಗ್ಲಾಸ್ ಇಳಿಸಿ ಸಿಗರೇಟಿನ ತುಂಡನ್ನು ಹೊರಗೆಸೆದ.

"ಸ್ವಲ್ಪ ಸೀರಿಯಸ್ಸಾಗಿ ತಗೋ ವಿಷ್ಯನ ! ಅವ್ನು ಟೆನ್ಷನ್‌ನಲ್ಲಿ ಫೋನ್ ಮಾಡಿದ್ದು ನೋಡಿದರೇ ಭಯವಾಗುತ್ತೆ. ನಚಿಕೇತ್ ಬರೋವರ್ಗೂ ಕಾಯ್ಲೇಬೇಕು" ಪರಮಪ್ಪನಿಗೆ ತಿಳಿಸಿದ ನಾಯ್ಡು.

ಪ್ಯಾಂಟ್ ಜೇಬು, ಷರಟು ಪ್ಯಾಕೆಟ್ ತಡಕಿ ನೋಡಿದ ಪರಮಪ್ಪ "ಇದ್ರ ಕ್ಲೂ ಏನಾದ್ರೂ ಸಿಕ್ಕಿದ್ರೆ..... ಒಂದು ಪ್ಯಾಕ್ ಕಾರ್ಡ್ಸ್ನ ಇಡ್ಕೊಂಡ್ಬರ್ತಾ ಇದ್ದೆ. ಇವ್ನು ವ್ಯಾಪಾರ ಮುಗ್ಸಿ ಬರೋವರ್ಗೂ ಒಂದೆರಡು ಆಟ ಆಡ್ಬೋದಿತ್ತು" ಕಸಿವಿಸಿ ವ್ಯಕ್ತಪಡಿಸಿದ ತರದ ಇಸ್ಪೇಟು ಎಲೆಗಳ ಬಗ್ಗೆ.

ಕೆಂಗಣ್ಣು ಬಿಟ್ಟ ನಾಯ್ಡು "ನಂಗೆ ಬರೋ ಕೋಪದಲ್ಲಿ ನಾಲ್ಕು ತದಕಿ ಬಿಡೋಣಾಂತ ಅನ್ನಿಸುತ್ತೆ. ನಿನ್ನಂಥವರ ಸಂಖ್ಯೆ ಜಾಸ್ತಿ ಆಗ್ಹೋಯ್ತು ! ಹೋಗಿ ಅವ್ನ ಹೆಂಡ್ತಿನಾದ್ರೂ ವಿಚಾರ್ಸು ಸರ್ಯಾಗಿ. ಬರೋದು ಎಷ್ಟೋತ್ತಾಗುತ್ತೆ, ಮಾರ್ಕೆಟ್‌ನ ಏನಾದ್ರೂ ಖರೀದಿಸ್ತಾನ ಮತ್ತೆ ಖರೀದಿಸಿದ್ದು ಮಾರಿ ಒಂದಿಷ್ಟು ಲಾಭ ತಗೊಂಡ್ ಮನೆಗೆ

ಬರ್ತಾನಾಂತ ?'' ಸಿಡಿದುಬಿದ್ದ. ಅಷ್ಟು ದೂರಕ್ಕೆ ಕೇಳೋ ಹಾಗೆ ಜೋರಾಗಿ ನಕ್ಕ ಪರಮಪ್ಪ ಗೆಳೆಯನ ಮಾತುಗಳಿಗೆ.

ತೀರಾ ಬಡತನದ ರೇಖೆಯಿಂದ ಮೇಲೆ ಬಂದಿದ್ದ ನಚಿಕೇತನಿಗೆ ಹಣವೆಂದರೆ ಪ್ರಾಣ, ಖರ್ಚು ಮಾಡುವಾಗ ಕಟ್ಟೆಚ್ಚರ. ಮನೆಗೆ ಬೇಕಾದ ಕೊತ್ತಂಬರಿ ಸೊಪ್ಪನ್ನು ಕೂಡ ತರೋನು ಅವನೇ. ಮನೆಯಲ್ಲಿರುವ ಬೇರೆಯವರಿಗೆ ಖಚಿತವಾದ ವ್ಯವಹಾರ ಜ್ಞಾನವಿಲ್ಲವೆಂಬ ಅಭಿಪ್ರಾಯ.

ಇಳಿದು ಹೋದ ಪರಮಪ್ಪ ಬಾಗಿಲಲ್ಲಿಯೇ ನಿಂತ. ಎಷ್ಟೇ ಸ್ನೇಹವಿದ್ದರೂ ಬಂದಾಗ ಹೊರಗಡೆಯೇ ನಿಂತು ಮಾತಾಡಿಸಿ ಕಳುಹಿಸಿ ಬಿಡುತ್ತಿದ್ದ. ಕಾಫೀ ತಿಂಡಿ ಉಪಚಾರ ಉಳಿಸಲು ಅದೊಂದು ಅಭ್ಯಾಸವಾಗಿ ಮುಂದುವರಿದಿತ್ತು.

ಅಲ್ಲೇ ವರಾಂಡದಲ್ಲಿ ಕೂತು ತಲೆ ಕೆರೆಯುತ್ತಿದ್ದ ಅವನ ತಾಯಿ ಮತ್ತೇನು ಎನ್ನುವಂತೆ ನೋಡಿ "ಆಗ್ಲೇ ಹೇಳಿದ್ನಲ್ಲ ಮಾರ್ಕೆಟ್‌ಗೆ ಹೋಗಿದ್ದಾನೆ, ಎಷ್ಟೊತ್ತಿಗೆ ಬರ್ತಾನೋ'' ರಾಗ ಹಾಡಿದಾಗ ಬಾಗಿಲು ಕಟ್ಟುಹಿಡಿದ ಪರಮಪ್ಪನ ಕೈಗಳು ಹಿಂದಕ್ಕೆ ಬಂದವು 'ಥೂ' ಎಂದುಕೊಂಡು ಬಂದ ಕಾರಿನಲ್ಲಿ ಕುಕ್ಕರಿಸಿ ಒರಟಾಗಿ ಡೋರ್ ಹಾಕಿಕೊಂಡು "ನಡೀ ಮಾರ್ಕೆಟ್ ಹತ್ರ ಅಷ್ಟು ಅರ್ಜೆಂಟ್ ಅಂದ್ಕೊಂಡ್ರೆ, ಇಲ್ದಿದ್ರೆ ನಾಳೆ ಆಫೀಸ್‌ನಲ್ಲಿ ನೋಡೋಣ'' ಎಂದ ಬೇಸರದಿಂದ.

ಕಾರು ಮಾರ್ಕೆಟ್ ಬಳಿಗೆ ದೌಡಾಯಿಸಿತು. "ಅವನನ್ನು ಹಿಡೀಲೇಬೇಕು, ಈಡಿಯಟ್ ತೆಪ್ಪಗಿದ್ರೂ ಆಗ್ತಾ ಇತ್ತು. ಅವ್ಳು ಇಂಟರ್‌ನ್ಯಾಷನಲ್ ಬಿಚ್.... ಸಮಾಜ ಸೇವೆ ಮಾಡ್ತಾಳಂತೆ..... ಎಷ್ಟು ಹೆಣ್ಣು ಮಕ್ಳು ಬಾಳು ಹಾಳು ಮಾಡಿದ್ದಾಳೋ, ನ್ಯೂಯಾರ್ಕ್ ಟೈಂಸ್‌ನಲ್ಲಿ ಬರ್ಬೇಕು, ಇವ್ಳ ಹಿಸ್ಟರಿ'' ಬೈಯ್ದುಬಿಟ್ಟ. ಯಾರು ಅಭಿಮಾನಿಸುವಂಥ ವ್ಯಕ್ತಿತ್ವವಲ್ಲ ಅವಳದು.

ನಾಯ್ಡು ಮಾತಿಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದೆ ಸಿಗರೇಟು ಹಚ್ಚಿದ ಪರಮಪ್ಪ.

ಮಾರ್ಕೆಟ್‌ಗೆ ಹತ್ತಿರವಾಗಿ ಕಾರು ಪಾರ್ಕ್ ಮಾಡಿದ ನಾಯ್ಡು ಗೆಳೆಯನತ್ತ ತಿರುಗಿದ "ಹೋಗಿ, ಅವ್ನ ಇಡಕೊಂಡ್ಬರ್ತೀಯಾ, ನಾನ್ಬರ್ಲಾ ಜೊತೆಗೆ ?'' ಕೇಳಿದ.

ಹಣೆ ಗಟ್ಟಿಸಿಕೊಳ್ಳುತ್ತಲೇ ಇಳಿದ ಪರಮಪ್ಪ "ಎಲ್ಲಿಂತ

ಹಿಡೀತೀಯಾ, ಅವನನ್ನ? ನಾನೊಂದ್ಕಡೆ ಹೋದ್ರೆ ಅವನೊಂದ್ಕಡೆಯಿಂದ ವ್ಯಾಪಾರ ಮುಗ್ಸಿಕೊಂಡ್ ಹೊರಟ್ಬಿಟ್ರೆ. ಹಾಗೇ ಆಗೋದ್ಬೇಡ; ಇಬ್ರೂ ಒಂದೊಂದ್ಕಡೆ ಹೋಗಿ ಹಿಡ್ಯೋಣ. ಅವ್ನು ಕಾಸ್ಟ್ಲಿ ತರಕಾರಿಗಳು ಇರೋ ಕಡೆ ಹೋಗೋಲ್ಲ. ಅದ್ನ ಗಮನದಲ್ಲಿ ಇಟ್ಕೋ." ಸಿಗರೇಟು ಎಸೆದ ದೂರಕ್ಕೆ.

ಇಬ್ಬರೂ ಒಂದೊಂದು ಕಡೆಯಿಂದ ಹುಡುಕಾಡಿದರೂ, ಎಲ್ಲೂ ನಾಪತ್ತೆ! ಒಂದು ನಾಲ್ಕು ಸಲ ಸುತ್ತಿ ಇಬ್ಬರು ವಾಪಸ್ಸು ಬರೋ ವೇಳೆಗೆ 'ಇನ್‌ಫರ್ಮೇಷನ್' ಮುಟ್ಟಿದನಂತೆ ಎರಡು ಬ್ಯಾಗ್‌ಗಳನ್ನು ಹಿಡಕೊಂಡು ಕಾರು ಬಳಿ ನಿಂತಿದ್ದು ಆಶ್ಚರ್ಯ ತರಿಸಿತು.

"ಮೈ ಗಾಡ್, ಸಿಕ್ಕೇಬಿಟ್ಟೆಯಲ್ಲ! ನಾವು ಹುಡುಕಾಡ್ತ ಇರೋ ಸಂಗ್ತಿಯೇನಾದ್ರೂ ಗಾಳಿ ಮುಟ್ಟಿಸ್ತಾ? ಮುಗಿತಾ ನಿನ್ನ ವ್ಯಾಪಾರ?" ಬ್ಯಾಗುಗಳತ್ತ ನೋಡಿದ. ಒಂದು ಬ್ಯಾಗ್‌ನ ಮೇಲ್ಭಾಗದಲ್ಲಿ ಇದ್ದಿದ್ದು ಸಣ್ಣ ಗೋಲಿಗಳಂಥ ಟೋಮಾಟೋಗಳು, ಇನ್ನೊಂದರ ಮೇಲ್ಭಾಗದಲ್ಲಿ ವಿಳೆದೆಲೆಯ ಕಟ್ಟುಗಳು ತೀರಾ ಬಲಿತದ್ದು. ಕೈಗೆತ್ತಿಕೊಂಡು ನೋಡಿ ಅಲ್ಲೇ ಇಟ್ಟ ನಾಯ್ಡು.

ನಚಿಕೇತ ಅಲ್ಲಿ ನಿಂತಿದ್ದ ದೃಷ್ಟಿಯೇ ಬೇರೆ. ಹೇಗೂ ಇವನ ಕಾರಿನಲ್ಲಿಯೇ ಮನೆ ಸೇರಬಹುದು. ನಾಯ್ಡು ಅಂಥ ಕಂಜೂಸ್ ಅಲ್ಲ, ಬಸ್ಸು ಖರ್ಚು 'ತಪ್ಪಿತು ಎನ್ನುವುದು.

ಡೋರ್ ತೆಗೆದ ನಾಯ್ಡು ಬ್ಯಾಗುಗಳೊಂದಿಗೆ ಅವನನ್ನ ಕಾರಿನೊಳಕ್ಕೆ ತುರುಕಿ ಡೋರ್ ಹಾಕಿದಾಗ ತಣ್ಣಗೆ ಹತ್ತಿ ಕೂತ ಪರಮಪ್ಪನಿಗೆ ಒಳಗೊಳಗೇ ನಗು. ನಕ್ಕು ಮುಂಗೋಪಿ ನಾಯ್ಡು ಕೈಯಲ್ಲಿ ಕೆನ್ನೆಗೆ ಇಕ್ಕಿಸಿಕೊಳ್ಳಲಾರ.

"ಅಬ್ಬಬ್ಬಬ್ಬ, ಏನು ಬೆಲೆ ಅಂತೀಯಾ! ಈ ಗುಜರಿ ಟಮೋಟೋಗೆ ಹತ್ರೂಪಾಯಿ ಕೊಟ್ಟೆ. ಹದಿನಾರು, ಹದಿನೆಂಟ್ರೂಪಾಯಿ ಕೆ.ಜಿ. ಮದ್ವೆ ಸೀಸನ್ ನೋಡು, ತರ್ಕಾರಿ ಬೆಲೆ ಯದ್ವಾತದ್ವಾ ಏರಿಬಿಟ್ಟಿದೆ. ವಿಳೆದೆಲೆ ಹೇಗೊಂತೀಯಾ..." ಎನ್ನುವ ವೇಳೆಗೆ ಸಹನೆ ಕಳೆದುಕೊಂಡ ಪರಮಪ್ಪ ಕೈನಿಂದ ಬಾಯಿ ಮುಚ್ಚಿದ "ಯಾವ್ನು ಎಲ್ಲಾದ್ರೂ ಹೋಗ್ಲಿ, ಈ ತರ್ಕಾರಿ, ರೇಷನ್ ಬಿಟ್ಟು ಬೇರೆ ಮಾತುಗಳೇ ಗೊತ್ತಿಲ್ಲ. ಸ್ವಲ್ಪ ಹೊತ್ತು ತೆಪ್ಪಗಿರು" ಗದರಿಸಿದ.

ತೀರಾ ಜನರ ಓಡಾಟ ಇಲ್ಲದೆ ಇರೋ ಕಡೆ ಕಾರು ನಿಲ್ಲಿಸಿದ ನಾಯ್ಡು ಹಿಂದಕ್ಕೆ ತಿರುಗಿದ "ಮಹರಾಯ, ನ್ಯೂಯಾರ್ಕ್‌ನಿಂದ ಬಂದಿರೋ ಪ್ರೆಸ್ ರಿಪೋರ್ಟರ್ ಯಾರು ? ಆ ಮಹಾರಾಯ ಮುಖ ತೋರ್ಸಿ ಹೋದವ್ನು, ಮತ್ತೆ ಅಲ್ಲಿಗೆ ಹೋಗಿಲ್ವಂತೆ, ಫೋನ್ ಮೇಲೆ ಫೋನ್..... ಇಡೀ ನನ್ನ ಭಾನುವಾರ ಹಾಳಾಯ್ತು" ಬಡಬಡಿಸಿದಾಗ ಹುಚ್ಚನನ್ನು ನೋಡುವಂತೆ ನೋಡಿದ ನಚಿಕೇತ. ಇವನ ಮಾತುಗಳು ತೀರಾ ಅಯೋಮಯವಾಗಿ ಕಂಡಿತು.

"ಯಾವ ನ್ಯೂಯಾರ್ಕ್, ಯಾವ ರಿಪೋರ್ಟರ್ ? ನಂಗೆ ಅಂಥ ಜನರ ಪರಿಚಯವೇ ಇಲ್ಲ. ನ್ಯೂಯಾರ್ಕ್ ಅಮೆರಿಕಾದಲ್ಲಿದೆ ಅನ್ನೋದ್ಬಿಟ್ಟು ಮತ್ತೇನು ಗೊತ್ತಿಲ್ಲ" ಎಂದ ಮುಖ ಗಂಟಿಕ್ಕಿ.

ನಾಯ್ಡು ಪರಮಪ್ಪನ ಕಡೆ ನೋಡಿದ, ಅವನ ಮುಖಾಂತರವೇ ವಿಷಯ ಬಂದಿದ್ದು. ಅವನು ನಚಿಕೇತ್‌ನ ಕುತ್ತಿಗೆ ಪಟ್ಟಿಗೆ ಕೈ ಹಾಕಿದ.

"ಏನೋ, ಯಮಾರಿಸೋ ಮಾತಾಡ್ತೀಯಾ, ನೀನೇ ಅಲ್ವೇನೋ ನಂಗೆ ಫೋನ್ ಮಾಡಿ ರಿಪೋರ್ಟರ್ ಬಗ್ಗೆ ತಿಳ್ಸಿದ್ದು. ಸಾವಿತ್ರಿಬಾಯಿ ಪಿ.ಎ. ಫೋನ್ ನಂಬರ್ ನಾನೇ ಕೊಟ್ಟು ಕಾಂಟ್ಯಾಕ್ಟ್ ಮಾಡೋಕೆ ತಿಳ್ಸಿದ್ದು" ದಬಾಯಿಸಿದ. ಅವನಿಗೆ ಗಾಬರಿಯೋ, ಗಾಬರಿ. ಅವನಿಗೆ ಇದು ಯಾವುದೇ ಸುದ್ದಿ ಗೊತ್ತಿಲ್ಲ.

"ಬಿಡೋ ಪರಮಪ್ಪ, ಕುತ್ತಿಗೆ ಪಟ್ಟಿ, ನಂಗೆ ನನ್ನಾಣೆ, ನಿನ್ನಾಣೆ ಈ ವಿಷ್ಯವೇನು ಗೊತ್ತಿಲ್ಲ. ನಾನು ಈ ಹದಿನೈದು ದಿನದಲ್ಲಿ ಒಂದ್ಸಲ ಕೂಡ ನಿಂಗೆ ಫೋನ್ ಮಾಡಿಲ್ಲ. ಇದು ಸತ್ಯವಾದ ವಿಷ್ಯ" ಎಂದು ನುಡಿದಾಗ ಕುತ್ತಿಗೆ ಪಟ್ಟಿ ಹಿಡಿದ ಪರಮಪ್ಪನ ಕೈ ಸಡಿಲವಾಯಿತು. ಜಡತೆ ತೊಲಗಿ ಚುರುಕಾದ. ಕಂಜೂಸ್ ಅನ್ನೋದು ಬಿಟ್ಟರೇ ನಚಿಕೇತ್ ತರಲೆ ಅಲ್ಲವೆಂದು ಅವನಿಗೆ ಗೊತ್ತು. ನಚಿಕೇತನ್ನ ಬಲ್ಲವರು ಕೂಡ ಈ ಬಗ್ಗೆ ಸಾಕ್ಷಿ ಹೇಳಬಲ್ಲರು.

"ತಮಾಷೆ ಬೇಡ, ಈ ವಿಷ್ಯದಲ್ಲಿ ನೀನು ನಂಗೆ ಫೋನ್ ಮಾಡಿರ್ಲಿಲ್ವಾ ? ನಾನು ಜಾಡ್ಸಿ ಒದ್ದು ಚರಂಡಿಯಲ್ಲಿ ಹಾಕಿ ತುಳ್ದುಬಿಡ್ತೀನಿ. ನಾಯ್ಡು ಎದುರು ನನ್ನ ಮಾನ ತೆಗೀಬೇಡ. ನ್ಯೂಯಾರ್ಕ್ ರಿಪೋರ್ಟರ್ ಬಗ್ಗೆ ನೀನು ನಂಗೆ ಫೋನ್ ಮಾಡ್ಲಿಲ್ವಾ ?" ಗದರಿಸಿ ಕೇಳಿದಾಗ ನಚಿಕೇತ ಅವನ ಕಾಲುಗಳನ್ನೆ ಹಿಡಿದುಬಿಟ್ಟ. 'ಬಲಾಢ್ಯ ವ್ಯಕ್ತಿಗಳ

ಜೊತೆ ಹೋರಾಟ ಬೇಡ' ಅವನಪ್ಪ ಹೇಳಿದ ಬುದ್ಧಿ ಮಾತು ಅವನನ್ನು ಬೇಕಾದಷ್ಟು ಸಲ ರಕ್ಷಣೆ ಮಾಡಿತ್ತು.

ಪರಮಪ್ಪ ಒರಟಾಗಿ ಅವನನ್ನು ಎಬ್ಬಿಸಿ ಚಿಂತೆಗೊಳಗಾದ. ಮತ್ತೆ ಫೋನ್ ಮಾಡಿದ್ದು ಯಾರು ? ನಚಿಕೇತ ಬೇರೆಯವರ ಒತ್ತಡಕ್ಕೆ ಮಣಿದು ಈ ರೀತಿ ನಟಿಸುತ್ತಿದ್ದಾನೆ ಎಂದು ಅವನನ್ನು ನೋಡಿದಾಗ ಕಣ್ಣೀರು ಸುರಿಸುತ್ತಿದ್ದ. 'ಅಯ್ಯೋ' ಎನಿಸಿದರೂ ನಾಯ್ಡು ಉರಿಯುತ್ತಿದ್ದ ಕಣ್ಣುಗಳನ್ನು ಕಂಡು ಅವನನ್ನು ಅವನು ಸಮರ್ಥಿಸಿಕೊಳ್ಳಬೇಕಿತ್ತು.

"ಏಯ್ ನಚಿಕೇತ, ನೀನೇನು ಹೆದರ್ಕೋಬೇಡ. ಎಂಥ ಸಮಯ ಬಂದ್ರೂ ನನ್ತಲೆ ಕೊಟ್ಟು ನಿನ್ತಲೆ ಉಳುಸ್ತೀನಿ. ಈ ತರಹ ನಾಟ್ಕ ಆಡೋಕೆ.... ಯಾರ್ಹೇಳಿದ್ದಾರೆ ?" ತೋಳಿಡಿದು ಅಲುಗಾಡಿಸಿದಾಗ ಅವನು ಅಳೋಕೆ ಷುರು ಮಾಡಿಬಿಟ್ಟ ಜೋರಾಗಿ. 'ಛೆ' ಪರಮಪ್ಪ ಕೈಯನ್ನು ತಗೊಂಡ "ಇದೊಂದು ಸಿಕ್ಕಾಗ್ಬಿಟ್ಟಿದೆ. ಅಳು ನಿಲ್ಸಿ ಹೇಳೋದು ಸರ್ಯಾಗಿ ಹೇಳು. ಹೇಗೂ ಭಾನುವಾರ ಸಂಜೆ ನೀನು ಕೇಳೋಷ್ಟು ಬೀರ್ ಕೊಡುಸ್ತೀನಿ" ಪುಸಲಾಯಿಸಿದ. ಜೋರಿನ ಹಾದಿ ಬಿಟ್ಟು ಪರಮಪ್ಪ ನಾಯ್ಡು ಬೆಂಕಿಯ ಮೇಲೆ ಕೂತಂತೆ ಚಡಪಡಿಸುತ್ತಿದ್ದ.

ಸ್ವಲ್ಪ ಸಮಾಧಾನವಾದರೂ ಪರಮಪ್ಪನಿಗೆ ಫೋನ್ ಬಂದ ದಿನ ನಚಿಕೇತ ಆಫೀಸ್‌ಗೆ ಬಂದಿರಲಿಲ್ಲ. ಜ್ವರದಿಂದ ಮನೆಯಲ್ಲೇ ಮಲಗಿದ್ದ. ಕಣ್ಣೀರು ಸುರಿಸುತ್ತಲೇ ಹೇಳಿಕೊಂಡ ಇವನ್ನೆಲ್ಲ.

"ಮದ್ವೆಯಾದ ಹತ್ತು ವರ್ಷಕ್ಕೆ ಒಂದು ಗಂಡು ಮಗು ಹುಟ್ಟಿದೆ. ಅದೇ ಸರ್ವಸ್ವ. ಆ ಮಗು ಮೇಲೆ ಆಣೆ ಇಟ್ಟು ಹೇಳ್ತಾ ಇದ್ದೀನಿ, ರಿಪೋರ್ಟರ್ ಬಗ್ಗೆ ನಂಗೇನು ಗೊತ್ತಿಲ್ಲ. ನಾನು ಫೋನ್ ಮಾಡಿಲ್ಲ" ಎಂದಾಗ ಪರಮಪ್ಪನಿಗೆ ಏನು ಮಾಡಬೇಕೋ ತಿಳಿಯಲಿಲ್ಲ.

ನಾಯ್ಡು ಭುಜದ ಮೇಲೆ ಕೈಯಿಟ್ಟ "ನಂಬಿಕೆ ಇಡು. ನಚಿಕೇತ ಫೇಸ್ ಮಾಡಿಲ್ಲಾಂತಾನೆ, ಹಾಗಾದ್ರೆ ಯಾರೋ ಅವ್ನ ಹೆಸ್ರಿನಲ್ಲಿ ಫೋನ್ ಮಾಡಿ ವಂಚಿಸಿದ್ದಾರೆ. ಅವ್ರು ಯಾರಾಗಿರ್ಬಹುದ್ದು ?" ಗೊಂದಲಕ್ಕೆ ಒಳಗಾದವನಂತೆ ಹೇಳಿದ ಪರಮಪ್ಪ. ಯಾಕೋ ಏನೋ ಎಲ್ಲಾ ಗೋಜಲು ಗೋಜಲಾಗಿ ಕಂಡಿತು.

ಮಾತಾಡದೇ ನಾಯ್ಡು ಕಾರು ಸ್ಟಾರ್ಟ್ ಮಾಡಿದ. ಅದು ನಿಂತಿದ್ದು ನಚಿಕೇತನ ಮನೆಯ ಮುಂದೆ. "ಕಣ್ಣು ಒರಸ್ಕೊಂಡ್ ಇಳಿ. ಹೇಗೂ

ಆಗ್ಲೇ ಹುಡ್ಕಿಕೊಂಡ್ ಬಂದಿದ್ವಿ. ನೀನು ಅತ್ಕೊಂಡ್ಹೋದ್ರೆ ನಿನ್ನಮ್ಮ ಹೆಂಡ್ತಿ ನಮ್ಮ ಮೇಲೆ ಕಂಪ್ಲೆಂಟ್ ಕೊಡ್ತಾರ್ದಲ್ಲ. ಸದ್ಯ ಇಳ್ಕೊಂಡ್ಬಿಡು, ನಮ್ಮ ಹಣೆಬರಹ ಏನಾದ್ರಾಗ್ಲೀ" ಎಂದ ಕಂಗೆಟ್ಟವನಂಗೆ ನಾಯ್ಡು. ಬ್ಯಾಗುಗಳನ್ನು ಹಿಡಿದೇ ನಚಿಕೇತ್ ಇಳಿದಿದ್ದು. ಕಾರು ರೊಯ್ಯನೇ ಧೂಳೆಬ್ಬಿಸುತ್ತ ಮುಂದಕ್ಕೆ ಹೋಯಿತು.

ಒಂದು ಬಾರ್ ಮುಂದೆ ಹೋಗಿ ನಿಂತಿತು ಕಾರು. ಇಬ್ಬರು ಮದಿರಾಭಕ್ತರೆ. ಸಂಜೆಯ ವೇಳೆ ಬರುತ್ತಿದ್ದವರು ಮಧ್ಯಾಹ್ನಕ್ಕೆ ಮುನ್ನವೇ ಬಂದಿದ್ದರು ಅಷ್ಟೆ. ಎರಡು ಪೆಗ್ ಹಾಕಿದನಂತರವೇ ಮಾತು ಷುರು ಮಾಡಿದ್ದು. ಪರಮಪ್ಪ ನಾಯ್ಡು ಕೈ ಹಿಡಿದುಕೊಂಡ.

"ನಚಿಕೇತ್ ಹೇಳಿದ್ಮೇಲೆ ನಂಗೆ ಅಯೋಮಯವಾಯ್ತು. ಸತ್ಯವಾಗ್ಲೂ, ನನ್ನ ಮನೆ ದೇವರಾಣೆಗೂ ನಚಿಕೇತನೇ ಫೋನ್ ಮಾಡಿದ್ದು ಅಂದ್ಕೊಂಡಿದ್ದೆ, ನಾನು ನಚಿಕೇತ ಅಂದ ಕೂಡ. ನಾನು ಬಸ್ಸಿನಲ್ಲಿದ್ದೆ. ನಾನು ನಾಯ್ಡುಗೆ ವಿಷ್ಯ ಮುಟ್ಟಿಸ್ತೀನಿ, ಮಿಕ್ಕ ಡೀಟೈಲ್ಸ್ ನೀನೇ ತಿಳ್ಸು ಅಂದಿದ್ದೆ" ಎಂದು ಕೂಡಲೇ ಅವನ ಮಾತು ನಾಯ್ಡು ತುಂಡರಿಸಿದ. "ನಾನು ಫೋನ್ ಬಂದಾಗ ನಿನ್ನ ವಿಷ್ಯ ಹೇಳ್ದ ಕೂಡ್ಲೇ 'ನಾನು ಮೇಡಮ್ ಪಿ.ಎ.ಗೆ ಹೇಳಿದ್ದೀನಿ ಮಿಕ್ಕಿದ್ದು ಅವರಲ್ಲೇ ಮಾತಾಡೂಂತ ಆಕೆಯ ಪರ್ಸನಲ್ ಫೋನ್ ನಂಬರ್ ಕೊಟ್ಟೆ. ಆಮೇಲೆ ಅಲ್ಲಿಗೆ ವಿಷ್ಯ ಹೋಗಿರ್ಬೇಕು. ಏನೋಪ್ಪ, ನಂಗಂತು ಏನು ಅರ್ಥವಾಗ್ತ ಇಲ್ಲ" ಕ್ರಾಪ್ ಕೂದಲಲ್ಲಿ ಕೈ ಹಾಕಿ ಕಿತ್ತ.

ಆಮೇಲೆ ಪರಮಪ್ಪ ಒಂದು ಸಲಹೆ ಕೊಟ್ಟ. "ಇಷ್ಟಾಯಿತಲ್ಲ, ಸುಮ್ಮನಿರು, ನೂರೆಂಟು ಕೆಲ್ಸದಲ್ಲಿ ಮರ್ತುಬಿಡ್ತಾಳೆ, ಅವ್ಳು. ಸದ್ಯಕ್ಕೆ ಅಲ್ಲಿ ಮುಖ ತೋರ್ಸೋಕೆ ಹೋಗ್ಬೇಡ. ವಿಷ್ಯ ಹಳೇದಾದ್ಮೇಲೆ ಏನಾದ್ರೂ ಹೇಳ್ಕೊಂಡರಾಯ್ತು."

ಅದು ಬಿಟ್ಟು ಪರಮಪ್ಪ ಕೂಡ ಏನು ಮಾಡುವಂತಿರಲಿಲ್ಲ. ಇಬ್ಬರು ಮೇಲೆದ್ದರು. ನಾಯ್ಡು ಜ್ಞಾಪಿಸಿಕೊಂಡಂತೆ "ಊಟ ಮುಗ್ಸಿಕೊಂಡ್ಹೋಗು, ನನ್ನ ಹೆಂಡ್ತಿ ಕೈನ ಬಿರಿಯಾನಿ ತುಂಬ ರುಚಿ. ಸ್ವಲ್ಪ ಧಾರಾಳದ ಹೆಂಗ್ಸು, ಜೊತೆಯಲ್ಲಿ ಒಂದೆರಡು ಪೆಗ್ಸ್ ಹಾಕ್ಕೊಂಡ್ರೂ.... ರಾಮಾಯಣ ರಾದ್ಧಾಂತ ಮಾಡೋಲ್ಲ" ಎಂದಾಗ ಪರಮಪ್ಪ ಕೂಡ ನಿರಾಕರಿಸಲಿಲ್ಲ.

ಇವರು ಕಾರು ಅಲ್ಲಿ ಹೋಗಿ ನಿಲ್ಲೋ ವೇಳೆಗೆ ಮತ್ತೊಂದು ಕಾರು

ನಿಂತಿದ್ದು ಕಂಡಿತು. ಸಾವಿತ್ರಿದೇವಿ ಪಿ.ಎ. ಇಳಿದು ಬಂದಾಗ 'ಧಸ್ಸಕ್' ಎಂದಿತು ಇಬ್ಬರ ಎದೆ. ನಾಯ್ಡು ಮತ್ತಷ್ಟು ದೂರ ನೋಟ ಹರಿಸಿದ. ಅದರ ಹಿಂದೇನಾದರೂ ಪೊಲೀಸ್ ಜೀಪು ಇದೆಯೇನೋಂತ ಆವಮಟ್ಟಿಗೆ ಹೆದರಿಬಿಟ್ಟಿದ್ದರು. ಮುಖದ ಬೆವರನ್ನೊತ್ತಿಯೇ ಕೆಳಗಿಳಿದಿದ್ದು.

ಪಿ.ಎ. ಸನ್ನೆ ಮಾಡಿ ಹತ್ತಿರಕ್ಕೆ ಕರೆದವನು ಮೂಗುಜ್ಜುತ್ತ "ಬೆಳಿಗ್ಗೆ ಬೆಳಿಗ್ಗೇನೇ ಹೋಗ್ಬಿಟ್ರಾ ಬಾರ್‌ಗೆ? ನಿಮ್ಮ ನೌಕರಿಯಲ್ಲಿ ಎಂಥ ಆರಾಮ್, ಅದಿರ್ಲಿ ಆ ರಿಪೋರ್ಟರ್ ಎಲ್ರಿ?" ಕೇಳಿದ ಜೋರಾಗಿಯೇ.

ಸ್ವಲ್ಪ ಪರಮಪ್ಪ ಚುರುಕಾದ "ಬಂದಿಲ್ವೇನು ಸರ್, ಬರ್ತಾರೆ ಬಿಡಿ. ಮೇಡಮ್ ಅಂಥ ಸಮಾಜಸೇವೆ ಮಾಡೋ ಮಂದಿ ಎಷ್ಟು ಸಿಕ್ತಾರೆ!" ಉಡಾಫೆಯಿಂದ ಮಾತಾಡಿದಾಗ ಪಿ.ಎ. ಮೂಗು ಕೆಂಪಗಾಯಿತು "ಅವೆಲ್ಲ ಇರ್ಲಿ, ಈಗ ಆ ರಿಪೋರ್ಟರ್ ಎಲ್ಲಿ? ಅಷ್ಟು ಹೇಳಿ. ಎಲ್ಲಾ ಪ್ರೋಗ್ರಾಂಗಳ್ನ ಕ್ಯಾನ್ಸಲ್ ಮಾಡ್ಕೊಂಡ್ ಕೂತಿದ್ದಾರೆ ಮೇಡಮ್" ಚಡಪಡಿಸುವಂತೆ ಮಾತಾಡಿದ.

"ನಿಮ್ಮ ಫೋನ್ ಬಂದ್ಮೇಲೆ ಆಕೆಯ ಹುಡುಕಾಟವೇ ನಡೆದಿದೆ. ಸಿಕ್ಕಿಲ್ಲ" ಏನೋ ಒಂದು ಹೇಳಿದರು. ಇದರಿಂದ ಪಾರಾದರೇ ಸಾಕಿತ್ತು. ಪಿ.ಎ. ಬೆಚ್ಚಿಬಿದ್ದ "ಏನಂತ ತಿಳ್ಕೊಂಡಿದ್ದೀರಾ, ಯಾವ ಹೋಟೆಲ್‌ನಲ್ಲಿ ಇಳ್ಕೊಂಡಿದ್ದಾರೆ?" ಪ್ರಶ್ನಿಸಿದಾಗ ನಾಯ್ಡು ಮಾತ್ರವಲ್ಲ ಪರಮಪ್ಪ ಕೂಡ ಬಿಳಿಚಿಕೊಂಡ.

"ಗೊತ್ತಿಲ್ಲ...." ಹೇಳಿದ ಪರಮಪ್ಪ ನಾಯ್ಡು ಕಿವಿಯಲ್ಲಿ ಉಸುರಿದ "ಏಯ್, ನಚಿಕೇತನ ಹೆಸರು ಹೇಳ್ಬೇಡ. ಪಾಪದ ಮನುಷ್ಯ. ಬಹಳ ಕಷ್ಟಪಟ್ಟು ಈಗ ನೆಮ್ದಿ ಮುಖ ನೋಡ್ತಾ ಇದ್ದಾನೆ, ನಮ್ಗೆ ಪಾಪ ಸುತ್ಕೊಳ್ಳುತ್ತೆ."

"ಏನ್ರೀ ಗುಸಗುಸ, ಪಿಸಿಪಿಸಿ? ಗೊತ್ತಿಲ್ಲಾಂದ್ರೆ ಏನರ್ಥ? ಮೇಡಮ್ ಆ ರಿಪೋರ್ಟರ್‌ನ ನೋಡ್ದಕೂಡ್ಲೇ ತುಂಬ ಇಂಪ್ರೆಸ್ಸಿವ್ ಆಗ್ಬಿಟ್ಟಿದ್ದಾರೆ. ಅದು ಈಗ ಒಂದು ತಲೆನೋವಾಗಿದೆ. ನ್ಯೂಯಾರ್ಕ್‌ನಿಂದ ಬಂದೋರೂಂದ್ರೆ ಸ್ಟಾರ್ ಹೋಟೆಲ್‌ನಲ್ಲೇ ಇಳ್ಕೊಳ್ಳೋದು. ಹೆಸರಾದ್ರೂ ಹೇಳಿ ತಲಾಷ್ ಮಾಡೋಣ" ಪಿ.ಎ. ರಾಜಿಯಾಗುವ ಪ್ರಯತ್ನ ಮಾಡಿದ. ಅವರುಗಳು ಹೇಗಾದರೂ ತಪ್ಪಿಸಿಕೊಳ್ಳಬಹುದು, ತನ್ನ ಸ್ಥಿತಿ ಮಾತ್ರ ಚಿಂತಾಜನಕವಾಗುತ್ತದೆಯೆಂದು ಅವನಿಗೆ ಗೊತ್ತು.

ಪರಮಪ್ಪ ನಾಯ್ಡು ಮುಖ ಮುಖ ನೋಡಿಕೊಂಡರು. ಸುಳ್ಳು ಹೇಳಿ ಅದಕ್ಕಾಗಿ ಮತ್ತೊಂದು ಸುಳ್ಳು, ಅಂಥದೆಲ್ಲ ಬೇಡವೆನಿಸಿದ ಪರಮಪ್ಪ ಸ್ವಲ್ಪ ಧೈರ್ಯವಹಿಸಿದ.

"ನಾವು ಏನೇನು ವಿಚಾರಿಸ್ಲಿಲ್ಲ, ಕಡೆಗೆ ಹೆಸರು ಕೂಡ ಗೊತ್ತಿಲ್ಲ. ಬಂದು ಕೇಳಿದ್ರು ನಾವು ಮೇಡಮ್‌ನವ್ರ ಹೆಸರು ಹೇಳಿ ನಿಮ್ಗೆ ಫೋನ್ ಮಾಡಿ ತಿಳ್ಸಿದ್ದು ಕೂಡ ಆ ರಿಪೋರ್ಟರ್ ರಿಕ್ವೆಸ್ಟ್‌ನಿಂದ — ಇಷ್ಟೇ ಗೊತ್ತಿರೋದು. ಬರ್ತಾರೆ ಬಿಡಿ, ಅದಕ್ಯಾಕೆ ನೀವು ಹುಡುಕಾಡಿಕೊಂಡ್ ತಿರ್ಗೋದು. ಹೇಗೂ ಹಣ ಇದೆ, ಪ್ರಭಾವ ಇದೆ, ನ್ಯೂಯಾರ್ಕ್‌ನಿಂದ ಇವ್ರ ಸಲುವಾಗಿಯೇ ಒಬ್ಬ ರಿಪೋರ್ಟರ್‌ನ ಕರ್ಸಿಬಿಡೋದು. ಆಗ ಇವರೊಬ್ಬರದೇ ಬರೀತಾರೆ. ದಯವಿಟ್ಟು ಸಂಡೇ ಹಾಲಿಡೇನ ಎಂಜಾಯ್ ಮಾಡೋಕೆ ನಮ್ಮನ್ನ ಬಿಡಿ" ನಾಯ್ಡು ಭುಜದ ಮೇಲೆ ಕೈ ಹಾಕಿದ.

ಪಿ.ಎ. ಹಣೆಗಟ್ಟಿಸಿಕೊಂಡ "ಎಷ್ಟೇ ಗಟ್ಟಿಯಾಗಿದ್ರೂ ಒಬ್ಬೊಬ್ಬರಿಗೆ ಒಂದೊಂದು ದೌರ್ಬಲ್ಯ ಇರುತ್ತೆ. ಈ ಮಹಾತಾಯಿಗೆ ಹೆಸರಿನ ಹುಚ್ಚು, ಈ ಸಂಪಾದ್ನೆ ಮಾಡಿರೋದೇ ಮೂರು ತಲೆಮಾರಿಗೂ ಸಾಕಾಗುತ್ತೆ. ಥೂ.... ಸಾಕಾಗುತ್ತೆ ಈ ಚಾಕರಿ. ಎಂದೋ ನೌಕರಿ ಬಿಟ್ಟು ನಲ್ಲಿಕಾಯಿ ವ್ಯಾಪಾರ ಷುರು ಮಾಡ್ಬಿಡ್ತೀನಿ" ಜಿಗುಪ್ಸೆಯಿಂದ ಹೇಳಿದ. ಆಕೆಯ ಚಾಕರಿಯಿಂದ ರೋಸಿಹೋಗಿದ್ದ.

ಪರಮಪ್ಪನ ಕಣ್ಣುಗಳು ಮಿನುಗಿ, ಹೊಟ್ಟೆಗೆ ಇಳಿದಿದ್ದ ವಿಸ್ಕಿ ಸ್ವಲ್ಪ ಅಲುಗಾಡಿದಾಗ ಹುಚ್ಚು ಧೈರ್ಯ ಮಾತಾಡಬೇಕೆಂಬ ಉತ್ಸಾಹ.

"ಅದೇನು ಸರ್, ನೆಲ್ಲಿಕಾಯಿ ವ್ಯಾಪಾರ. ಅದ್ರಲ್ಲಿ ಅಷ್ಟೊಂದು ಲಾಭ ಇದ್ಯಾ? ನಾವು ಕೂಡ ಕೆಲ್ಸ ಬಿಟ್ಟು ನಿಮ್ಗೆ ಪಾರ್ಟನರ್ ಆಗ್ತೀವಿ" ಮುಖದ ಮುಂದೆ ನುಡಿದಾಗ ಪಿ.ಎ. ಹಿಂದಕ್ಕೆ ಸರಿದು ಮುಖ ಸಿಂಡರಿಸಿ ಕೈಯಲ್ಲಿ ವಾಸನೆಯ ನೋಡಿಸುವಂತೆ ಅಲ್ಲಾಡಿಸಿ ಮೂತಿ ಉದ್ದ ಮಾಡಿದ.

"ಯಾಕ್ರೀ ಬೆಳಿಗ್ಗೆ ಬೆಳಿಗ್ಗೆ ಕುಡೀತೀರಾ! ನಿಮ್ಜೊತೆ ಮಾತಾಡೋ, ವ್ಯವಹಾರ ಮಾಡೋ ಜನಕ್ಕೆ ಇದ್ರಿಂದ ತಲೆ ಬಿಸಿ. ನಮ್ಮಪ್ಪ ನಾಲ್ಕು ನೆಲ್ಲಿ ಗಿಡ ತಂದು ಹಾಕಿದ್ರಂತೆ ಹಿತ್ತಲಲ್ಲಿ. ಈಗ ಬೆಳ್ದು ಮರಗಳಾಗಿ ಸೀಸನ್‌ನಲ್ಲಿ ಮಂಕರಿ ಮಂಕರಿ ಬಿಡುತ್ತೆ. ಆ ವ್ಯಾಪಾರಕ್ಕೆ ಕ್ಯಾಪಿಟಲ್ ಬೇಡಾಂತ ಆದ್ನ ಷುರು ಮಾಡೋದು. ನೀವು ಪಾರ್ಟನರ್ ಆಗ್ಬೇಕೂಂದರೇ, ಕಿಳೋಕೆ

ಸಾಗಿಸೋಕೆ ಇಟ್ಕೋಬೇಕಷ್ಟೆ." ರೇಗಿ ಹೋಗಿ ಕಾರು ಹತ್ತಿದ್ದ. 'ಯೂಸ್‌ಲೆಸ್ ಫೇಲೋಸ್' ಎಂದು ಗೊಣಗಿದ್ದು ಅವರಿಗೆ ಕೇಳಿಸಲಿಲ್ಲ.

ಎದೆಯ ಮೇಲಿನ ದೊಡ್ಡ ಭಾರ ಇಳಿದಂತಾಯಿತು. ಇಷ್ಟಕ್ಕೇ ಮುಗಿಯಿತು ಅಂದುಕೊಂಡಿದ್ದಕ್ಕೆ ಜೀವ ಇರುವುದು ಮಾತ್ರ ಇವರ ಚಿಂತನೆಗೆ ಸಿಕ್ಕಲಿಲ್ಲ.

ಅನಿಕೇತ್ ಎಲ್ಲಾ ರೀತಿಯ ತನಿಖೆ, ತಪಾಸಣೆ ಮುಗಿಸಿ ಒಮ್ಮೆ ತಮ್ಮ ಮೊದಲ್ಲಿದ್ದ ಅಂದರೆ ತಂದೆ ಕಾಣೆಯಾಗುವ ಮುನ್ನ ಇದ್ದ ಹಳೆಯ ಮನೆಯಲ್ಲಿ, ಮೇಲಾಗಿ ತಂದೆಯ ಪರ್ಸನಲ್ ರೂಮಿನಲ್ಲಿ ಅನಾಥಾಶ್ರಮಕ್ಕೆ ಸಂಬಂಧಪಟ್ಟ, ಮುಖ್ಯವಾಗಿ ಅಲ್ಲಿನ ಮಕ್ಕಳಿಗೆ ಸಂಬಂಧಪಟ್ಟ ವಿಷಯವಾಗಿ ಯಾವುದಾದರೂ ಕಡತ, ಡೈರಿ ಅಂಥದೇನಾದರೂ ಸಿಕ್ಕರೇ ಕೆಲಸ ಸುಲಭವಾಗುತ್ತದೆಯೆಂದುಕೊಂಡು ಹೋಟೆಲ್ ಅಪೋಲೊಗೆ ಬಂದ ಸಖಿಯನ್ನು ಭೇಟಿಯಾದಳು.

ಇವನ ದಾರಿಯನ್ನೇ ಕಾಯುತ್ತ ಹೊರಗಿನ ಸಿಟೌಟ್‌ನಲ್ಲಿ ಕೂತಿದ್ದ ಸಖೀ ಮೇಲೆದ್ದಳು ಸ್ವಲ್ಪ ಉತ್ಸಾಹದಿಂದ. ಯೋಚಿಸಿ ಯೋಚಿಸಿ ಸಾಕಾಗಿ ಅನಿಕೇತನ್ ಬರದಿದ್ದರೇ ನೇರವಾಗಿ ಹೋಗಿ ಸಾವಿತ್ರಿಬಾಯಿಯನ್ನು ಭೇಟಿ ಮಾಡಳು ತೀರ್ಮಾನಿಸಿದ್ದಳು.

ಅರ್ಥಪೂರ್ಣ ನಗೆಯನ್ನು ಬೀರಿದ ಅನಿಕೇತ್ "ಥ್ಯಾಂಕ್ಯೂ ವೆರಿಮಚ್, ನನ್ಮೇಲೇ ನಂಬ್ಕೇ ಇಟ್ಟೆಯಲ್ಲ" ಎಂದ ದೀರ್ಘನೋಟದೊಂದಿಗೆ ಅವಳ ಮುಖದ ಭಾವನೆಗಳ ಹಿಂದಿನ ಮನಸ್ಥಿತಿಯನ್ನು ಅಳೆಯುತ್ತ.

ನಿಧಾನವಾಗಿ ಆವರಿಸಿಕೊಂಡ ಮೋಡಗಳು ಬಿಳಿಯ ಹತ್ತಿಯ ಉಂಡೆಗಳ ಹಾಗೆ ಹಾರಿಹೋಯಿತು. "ದಡ ಕಾಣದೇ ಅಲೆಗಳ ಮಧ್ಯೆ ಬಿದ್ದ ನಂಗೆ ಒಂದು ಹುಲ್ಲುಕಡ್ಡಿಯ ಆಸರೆ, ನಿರಾಶೆಯ ಮಡಿಲಿಗೆ ಜಾರದಂತೆ ಕಾಪಾಡುತ್ತೆ" ಎಂದಾಗ ತಣ್ಣನೆಯ ನೋಟದಿಂದ ಅಳೆದ ಅವಳ ಮುಗ್ಧ ಮುಖದ ಹಿಂದಿನ ಮನಸ್ಸನ್ನು ಮಾತಾಡಲಿಲ್ಲ.

ಕಾಫೀ ಕುಡಿದು ಇಬ್ಬರು ಹೊರಗೆ ಬಂದಾಗ ಅಷ್ಟು ದೂರದಲ್ಲಿ ನಿಂತಿದ್ದ ನವನೀತ್ ಬಂದವನು "ಗುಡ್ ಮಾರ್ನಿಂಗ್ ಮೇಡಮ್,

ನಿಮ್ಹತ್ರ ಒಂದಿಷ್ಟು ಮಾತಾಡೋದಿದೆ" ಎಂದ ಅನುಮಾನಿಸುತ್ತ. ಅನಿಕೇತ್ ಜೀಪಿನ ಬಳಿಗೆ ಹೋದ ಅರ್ಥ ಮಾಡಿಕೊಂಡಂತೆ.

"ಬಂಗ್ಲೆ ಮೇಡಮ್ ಕಳಿಸಿದ್ರು ನನ್ನ ಟ್ಯಾಕ್ಸಿನ ಹುಡ್ಕಿಕೊಂಡ್ಬಂದು ನಿಮ್ಮನ್ನ ವಿಚಾರಿಸಿದ್ರು ?" ಎಂದ ಕೂಡಲೇ ಅವನನ್ನು ಇರುವಂತೆ ಹೇಳಿ ಜೀಪಿನ ಬಳಿಗೆ ಹೋಗಿ ಸುದ್ದಿ ಮುಟ್ಟಿಸಿದಳು. "ಈಗ ಹೋಗಿ ಭೇಟಿ ಮಾಡಿದ್ರೆ ಹೇಗೆ ? ಒಳ್ಳೆ ಮೂಡ್‌ನಲ್ಲಿದ್ರೆ ಏನಾದ್ರೂ ಹೇಳ್ಬಹ್ದು."

ಸ್ಟೀರಿಂಗ್ ವ್ಹೀಲ್ ಮುಂದೆ ಕೂತಿದ್ದ ಅನಿಕೇತ್ ಕೆಳಗಿಳಿದು ಅವಳನ್ನು ಅಲ್ಲೇ ಇರುವಂತೆ ಸನ್ನೆ ಮಾಡಿ ನವನೀತ್ ಬಳಿಗೆ ಹೋದ. ಒಂದತ್ತು ನಿಮಿಷ ಅವನ ಭುಜದ ಮೇಲೆ ಕೈ ಹಾಕಿ ಮಾತನಾಡುತ್ತಿದ್ದುದು ಕಾಣಿಸಿತು ಇವಳಿಗೆ.

ಬಂದ ಅನಿಕೇತ್ "ಬೇರೆ ಹೋಟೆಲ್‌ನಲ್ಲಿ ರೂಂ ಬುಕ್ ಆಗಿದೆ. ಇಲ್ಲಿ ಖಾಲಿ ಮಾಡಿ ಬಿಲ್ ಸೆಟಲ್ ರಿಸೆಪ್ಷನಿಸ್ಟ್ ಕೌಂಟರ್‌ನಲ್ಲಿ ನ್ಯೂಯಾರ್ಕ್‌ಗೆ ಹಿಂದಿರುಗೋ ವಿಷ್ಯ ಮುಟ್ಸಿ ಬಾ. ಇದೆಲ್ಲ ಕ್ವಿಕ್ ಆಗಿ ಆಗ್ಬೇಕು." ಸ್ನೇಹದಿಂದ ಅಧಿಕಾರದಿಂದ ಹೇಳಿದ. ಇದೆಲ್ಲ ಅರ್ಧ ಗಂಟೆಯಲ್ಲಿ ಮುಗಿದು ಸಖಿಯ ವಾಸ್ತವ ಬೇರೆ ಹೋಟೆಲ್‌ಗೆ ಶಿಫ್ಟ್ ಆಯಿತು.

ಜೀಪು ಒಂದು ಮನೆಯ ಮುಂದೆ ನಿಂತಿತು. ಸ್ವಲ್ಪ ಹಳೆಯದು ಎನಿಸುವಂಥ ಮುಂದುಗಡೆಯ ಎತ್ತರದ ಕಂಬಗಳು ಕಟ್ಟಡ ಸೂಚಿಸಿದರೂ ಗಟ್ಟಿಮುಟ್ಟಾಗಿ ಭವ್ಯವಾಗಿ ಕಾಣುತ್ತಿತ್ತು.

ಅನಿಕೇತ್ ಹೋಗಿ ಗೇಟಿಗೆ ಹಾಕಿದ್ದ ಹಿತ್ತಾಳೆಯ ಬೀಗ ತೆಗೆದು "ಬಾ ಸಖೀ, ಇದೇ ನಾವು ಇದ್ದ ಮನೆ" ಎಂದು ಭೂತವನ್ನು ನೆನಪಿಸಿಕೊಂಡ. ಆಡಿ ಬೆಳೆದ ಜಾಗದ ಮೇಲಿನ ಮಮತೆ ಅವನನ್ನ ಬಾಧಿಸಿತು.

ಅಂದು ಮನೆ ಬಿಡಬೇಕೆಂದಾಗ ವಿರೋಧಿಸಿದ್ದ "ನಾನು ಎಸ್ಟೇಟ್‌ಗೆ ಬರೋಲ್ಲ, ಇಲ್ಲೇ ಇರ್ತೀನಿ" ಎಂದು. ತಾಯಿಯ ನಿರ್ಧಾರ, ಹಟದ ಮುಂದೆ ಅವನ ತೀರ್ಮಾನವೇನು ನಡೆಯಲಿಲ್ಲ. ತಾಯಿ, ಮಗ, ಆಳುಕಾಳುಗಳು ಎಸ್ಟೇಟ್‌ಗೆ ಶಿಫ್ಟ್ ಆಗಿದ್ದರು. ಬರೀ ನೆನಪುಗಳಷ್ಟೆ. ಇಲ್ಲಿಗೆ ಹಿಂದಿರುಗಿಬಿಡಲು ಎಷ್ಟೋ ಸಲ ಸೂಚಿಸಿದ್ದ. ಮದುವೆಯಾದ ಮೇಲಂತು "ಮನೆಗೆ ಹೋಗ್ಬಿಡೋಣ. ಎಸ್ಟೇಟ್‌ಗೆ ಆಗಾಗ್ಬಂದ್ರೆ ಸಾಕು" ತಾಯಿ ಮಡದಿಯರ ಮನವೊಲಿಸಲು ಹೋಗಿ ಸೋತಿದ್ದ.

ಇಬ್ಬರು ತಳ್ಳಬೇಕಾದ ಮರದ ಬಾಗಿಲಿಗೆ ಹಾಕಿದ್ದ ಹಿತ್ತಾಳೆ ಬೀಗ ತೆಗೆದು ಸರಪಣಿಯನ್ನು ತೆಗೆದು ಹಿಂದಕ್ಕೆ ದೂಡಿದ. ವಾರಕ್ಕೊಮ್ಮೆ ವಾಸುದೇವಯ್ಯ ಆಳುಗಳೊಂದಿಗೆ ಬಂದು ಶುಚಿಗೊಳಿಸುತ್ತಿದ್ದರಿಂದ ಹೆಚ್ಚಿನ ಧೂಳೇನು ಇರಲಿಲ್ಲ. ಆದರೂ 'ಬಿಕೋ' ಎನ್ನುವಂಥ ಭಯವೆನಿಸುವಂಥ ವಾತಾವರಣ.

ಒಳಕ್ಕೆ ನಡೆದು ಕಿಟಕಿಗಳನ್ನು ತೆರೆದ ಮೇಲೆ ಗಾಳಿ, ಬೆಳಕು ಪ್ರವೇಶಿಸಿ ಯಾವ ಅಪಾಯವೂ ಇಲ್ಲವೆಂದು ಹೇಳಿದಂತಾಯಿತು. "ಬಾ.... ಸಖೀ" ಕರೆದವನು ಅಲ್ಲೇ ಇದ್ದ ಬಟ್ಟೆಯಿಂದ ಕರಿಯ ಮರದ ಛೇರಿನ ಮೇಲಿನ ಧೂಳನೊರಸಿ ಕೈ ಕೊಡವಿಕೊಂಡ. ಎಂದಾದರೂ ಬಂದಾಗ ಅವನೊಂದಿಗೆ ಆಳುಗಳು ವಾಸುದೇವಯ್ಯ ಇರುತ್ತಿದ್ದರು. ಸಿಟಿ ಬಿಟ್ಟು ಹೋದ ಅವನಮ್ಮ ಎಸ್ಟೇಟ್‌ನಿಂದ ಹೊರಗೆ ಹೆಜ್ಜೆ ಇಟ್ಟಿರಲಿಲ್ಲ.

"ಕೂತ್ಕೋ...." ಛೇರ್ ಕಡೆ ತೋರಿಸಿದ.

ಎತ್ತರದ ಕಟ್ಟಡ. ತಲೆಯೆತ್ತಿ ನೋಡಬೇಕಿತ್ತು ಮೇಲಿನಿಂದ ಬೆಳಕು ಪ್ರವಹಿಸಲು ಚಚ್ಚೌಕವಾಗಿ ಮಾಡಿ ಕಬ್ಬಿಣಗಳನ್ನು ಕೂಡಿಸಿ ಅದರ ಮೇಲೆ ಗಾಜನ್ನು ಹಾಸಿದ್ದರು, ಅಲಂಕಾರಿಕವಾಗಿಯೂ ಕಾಣುವಂತೆ.

"ತುಂಬ ಚೆನ್ನಾಗಿದೆ" ಎಂದಳು ಕೂಡುತ್ತ. ಕೈಗೆ ಅಂಟಿದ ಧೂಳನ್ನ ಕೊಡಹುತ್ತ "ಹಿಂದೆ ಚೆನ್ನಾಗಿತ್ತು, ಈಗೇನಿದೆ ಜೀವವೇ ಇಲ್ಲದಂಗಾಗಿದೆ. ಎಸ್ಟೇಟ್ ಬಿಟ್ಟು ಇಲ್ಲಿಗೆ ಬಂದ್ಬಿಡುವ ಆಸೆ ನಂಗೆ. ಸದ್ಯಕ್ಕೇನು ಎಂದಿಗೂ ಸಾಧ್ಯವಾಗಲ್ಲವೇನೋ. ಅಂತು ಇತಿಹಾಸಕ್ಕೆ ಸೇರಿ ಹೋದ ಮನೇ" ನೋವಿನಿಂದ ಹೇಳಿದ.

ಯಾಕೋ ಏನೋ ತೀರಾ ಉತ್ಸಾಹವಾಗಿ ಮಾತಾಡುವ, ಸರಳವಾಗಿ ವರ್ತಿಸುವ ಅನಿಕೇತ್ ಪೂರ್ತಿ ಸುಖಿಯಲ್ಲವೆನಿಸಿತು. ಯಾವುದೋ ಕೊರತೆ, ಕೈಗೆಟುಕದ ಆಸೆಗಳ ನಡುವೆ ಜೀವನ ಮುಗಿದುಹೋಗುತ್ತದೆ! ಇದರಲ್ಲಿ ಸುಖದ ದಿನಗಳು, ಸುಖದ ಗಂಟೆಗಳು, ಸುಖದ ನಿಮಿಷಗಳು, ಕ್ಷಣಗಳನ್ನು ಹೇಗೆ ಲೆಕ್ಕ ಹಾಕುವುದು ?

ಎಲ್ಲಾ ಕೋಣೆಗಳು ಹೆಚ್ಚು ಕಡಿಮೆ ಬೀಗ ಹಾಕಿತ್ತು, ಎಲ್ಲವನ್ನು ತೆರೆದು, ಕಿಟಕಿಗಳನ್ನು ತೆರೆದಿಟ್ಟು ಬಂದಾಗ ಗೂಬೆಯಂತೆ ಕೂತಿದ್ದ ಸಖಿ ಪ್ರಶ್ನಾರ್ಥಕವಾಗಿ ಅವನನ್ನು ನೋಡಿದಳು.

"ಅನಾಥಾಶ್ರಮಕ್ಕೆ ಸಂಬಂಧಪಟ್ಟದೇನಾದ್ರೂ ನಮ್ತಂದೆ ಪರ್ಸನಲ್

ರೂಂನಲ್ಲಿ ಸಿಕ್ಕುತ್ತೇನೋಂತ, ಸ್ವಲ್ಪ ಬಾ'' ಕರೆದೊಯ್ದು ಮುಂದಿನ ರೂಮಿಗೆ. ಅಷ್ಟಿಷ್ಟು ಧೂಳು ಬಿಟ್ಟರೇ ಒಂದು ರೀತಿಯಲ್ಲಿ ಎಲ್ಲಾ ಸರಿಯಾಗಿಯೇ ಇತ್ತು. ಕರೀ ಮರದ ಗಟ್ಟಿಮುಟ್ಟಾದ ಕುರ್ಚಿ, ಟೇಬಲ್ಲು, ಬೀರುವಿನ ಜೊತೆಗೆ ಮೂರಡಿ, ಏಳು ಅಡಿಯ ಮರದ ಬೀರುವನ್ನು ಗೋಡೆಯೊಳಗೆ ಸೇರಿಸಿ ಬೀಗ ಹಾಕಿತ್ತು. ಅದನ್ನು ಅನಿಕೇತ್ ಕೂಡ ತೆಗೆದಿರಲಿಕ್ಕಿಲ್ಲ. ಒಮ್ಮೆ ಅಂಥ ಪ್ರಯತ್ನ ಮಾಡಿದಾಗ ತಡೆದಿದ್ದ ಅವನ ಮಾವ.

"ಬೇಡ ಬೀಡು, ನಿಮ್ಮಪ್ಪನಿಗೆ ಚಿನ್ನ, ಹಣ ಆಸ್ತಿಯ ಬಗ್ಗೆ ವ್ಯಾಮೋಹವಿರ್ಲಿಲ್ಲ, ಯಾವಾಗ್ಲೂ ಆಧ್ಯಾತ್ಮಿಕಕ್ಕೆ ಸಂಬಂಧಪಟ್ಟ ಪುಸ್ತಕಗಳ್ನ ಇಟ್ಟು ಬೀಗ ಹಾಕ್ಕೊಂಡಿರ್ಬೇಕು. ಆ ಸಹವಾಸ ನಿಂಗ್ಬೇಡ. ನಂಗೆ ಫ್ರೀ ಇದ್ದಾಗ ತೆಗ್ದಿ ಯಾವುದಾದ್ರೂ ಆಶ್ರಮಕ್ಕೋ, ಲೈಬ್ರರಿಗೋ ಕೊಟ್ಬಿಡ್ತೀನಿ'' ಎಂದಿದ್ದರು. ಆದರೆ ಆ ಕೆಲಸ ಮಾಡಲು ಅವರಿಗೆ ಪುರುಸತ್ತು ಇಲ್ಲವೋ, ಆಸಕ್ತಿ ಇಲ್ಲವೋ ವರ್ಷಗಳು ಕಳೆದರೂ ಹಾಗೆಯೇ ಯಥಾಸ್ಥಿತಿಯಲ್ಲಿತ್ತು, ಬೀಗ ತೆರೆಯದೆ.

ಮೇಜಿನ ಡ್ರಾಯರ್‌ನಲ್ಲಿದ್ದ ಕೆಲವು ಪುಸ್ತಕಗಳನ್ನು ತೆಗೆದು ತೆಗೆದು ಅವಳ ಮುಂದೆ ಹಾಕಿದ "ಸ್ವಲ್ಪ ಕೇರ್‌ಫುಲ್ಲಾಗಿ ನೋಡು, ನಮ್ತಂದೆಗೆ ಮನೆ ಮನೆಯವ್ರನ್ನು ಪ್ರೀತಿಸುವಷ್ಟೇ ಅನಾಥಾಶ್ರಮ, ಅಲ್ಲಿನ ಮಕ್ಳು ಬಗ್ಗೆ ಆಸಕ್ತಿ ಇತ್ತಂತೆ'' ಹೇಳಿದ.

ಒಂದು ಕಡೆ ಬೀರುನಲ್ಲಿದ್ದ ಪುಸ್ತಕಗಳೆಲ್ಲ ಆಧ್ಯಾತ್ಮಿಕಕ್ಕೆ ಸಂಬಂಧಪಟ್ಟದ್ದು. ರಾಮಾಯಣ, ಮಹಾಭಾರತದ ಎಲ್ಲಾ ಲೇಖಕರ ಕೃತಿಗಳನ್ನು ಸಂಗ್ರಹಿಸಿಟ್ಟಿದ್ದರು ಅಮೂಲ್ಯವೆನ್ನುವಂತೆ. ಅಲ್ಲಲ್ಲಿ ಅವರ ಅಭಿಪ್ರಾಯಗಳನ್ನು ಗುರುತು ಹಾಕಿ ಆಯಾ ಪುಟಗಳಲ್ಲಿ ಇಟ್ಟಿದ್ದರು. ಅಚ್ಚರಿಯೆನಿಸಿತು. ಬಹುಶಃ ಅವರ ಮೇಲ್ಮಟ್ಟದ ಚಿಂತನೆಗಳು ಇಂದೇ ಅವನ ಅರಿವಿಗೆ ಬಂದಿದ್ದು 'ಗ್ರೇಟ್' ಎಂದುಕೊಂಡ. 'ಹುಟ್ಟಿದ್ದಕ್ಕಾಗಿಯೇ ಬದುಕಿಬಿಡುವುದಕ್ಕಿಂತ, ಬದುಕಲೇ ಹುಟ್ಟಿದ ಮನುಷ್ಯ ಎಂದುಕೊಂಡ'.

ಕೆಲವು ಬರವಣಿಗೆಗಳೆಲ್ಲ ಸಿಕ್ಕರೂ ಅನಾಥಾಶ್ರಮಕ್ಕೆ ಸಂಬಂಧಪಟ್ಟಂತೇನು ಸಿಗಲಿಲ್ಲ. ಸಖಿಯ ಕಡೆಗೆ ನೋಡಿದಾಗ ಶೂನ್ಯದಲ್ಲಿತ್ತು ಅವಳ ನೋಟ. ಹುಡುಕಾಟದಲ್ಲಿ ಎರಡು ತಿಂಗಳು ಮುಗಿದಿತ್ತು. ತಿಂಗಳ ಮೊದಲೇ ಇಲ್ಲಿಂದ ಹೊರಡಬೇಕಿತ್ತು. ಹೇಗೆ?

ಯಾಕೋ ಏನೋ ಹಲವು ವರ್ಷಗಳು ಇಲ್ಲೆ ಉಳಿದರೂ ಅವರನ್ನು ಕಾಣಲಾರೆನೇನೋ!

"ಈಗೇನ್ಮಾಡ್ತೀಯಾ?" ಅವಳ ಎದುರಿನಲ್ಲಿ ಕೂತ. "ಸಾವಿತ್ರಿಬಾಯಿನ ಭೇಟಿ ಮಾಡಿದ್ರೆ ಹೇಗೆ? ಸದ್ಯಕ್ಕೆ ಅದೊಂದೇ ದಾರೀಂತ ಕಾಣುತ್ತೆ" ಇನ್ನು ಅವಳಲ್ಲಿ ಆಸೆ ಉಳಿದಿತ್ತು.

"ಅಂಥ ತಪ್ಪೆನಾದ್ರೂ ಮಾಡಿದ್ರೆ ಅದ್ರಿಂದ ಪ್ರಯೋಜನವಾಗ್ಡಿದ್ರೂ ನಿನ್ನ ಬೆನ್ನ ಅಟ್ಟುತ್ತೆ. ಆ ಸಾವಿತ್ರಿಬಾಯಿ ಒಳ್ಳೆ ಹೆಣ್ಣು ಅಲ್ಲ. ಅವ್ಳ ಭೂತ ಹೊಕ್ಕು ವಿಶ್ಲೇಷಿಸಿದ್ರೆ ಅನಾಥಾಶ್ರಮದ ವಿಷ್ಯ ಒಂದು ಕಪ್ಪು ಚುಕ್ಕೆ. ಸ್ವಲ್ಪ ಡೀಪಾಗಿ ಥಿಂಕ್ ಮಾಡು. ಹೇಗೂ ಕೆಲವು ದಿನ ಇನ್ನು ಇಂಡಿಯಾದಲ್ಲಿ ಉಳ್ಯೋ ಪ್ರೋಗ್ರಾಂ ಇದೆ. ಟೂರಿಸ್ಟಾಗಿ ಸುತ್ತಾಡಿ ಹಿಂದಿರುಗು" ಕಡೆಯ ಮಾತು ಹೇಳುವಾಗ ಅವನ ಸ್ವರ ಭಾರವಾಯಿತು. ಒಳಗೆ ನೋವಿನ ಒತ್ತಡ ಅರ್ಥವಾಗದಂಥ ಚಡಪಡಿಕೆ.

ತುಟಿ ಕಚ್ಚಿ ಕೂತಳು ಸಖಿ. ಮಾತುಗಳು ಇಲ್ಲವೆನಿಸಿ ಬದುಕಿಗೆ ಇನ್ನು ಯಾವ ಅರ್ಥವು ಕಾಣಲಿಲ್ಲ. ನಿರಾಶೆಯನ್ನು ಗುರ್ತಿಸಿ ಮೇಲೆದ್ದ ಅನಿಕೇತ್ ಗೋಡೆಯೊಳಕ್ಕೆ ಸೇರಿಸಿದ ಕಪಾಟಿನಂಥ ಬೀರುವನ್ನು ತೆರೆಯಲು ಎಲ್ಲಾ ಕೀ ಉಪಯೋಗಿಸಿ ಸೋತ.

'ಅದ್ರ ಕೀ ನನ್ಹತ್ರನೇ ಇರ್ಲಿ, ಎಂದಾದ್ರೂ ಸೀನಪ್ಪಯ್ಯ ಹಿಂದಿರುಗಿ ಬಂದ್ರೆ ಜೋಪಾನವಾಗಿ ನಾನೇ ಕೊಟ್ಟು ಶಭಾಷ್‌ಗಿರಿ ಪಡ್ಯೋತೀನಿ' ಹೇಳಿದ್ದರು ಅವನ ಮಾವ. ದೂರದ ಯೋಚನೆಯಿಂದ ಅದರ ಕೀಯನ್ನು ಅವರೇ ಉಳಿಸಿಕೊಂಡಿದ್ದರು, ಆ ಉದ್ದೇಶವೇನು ಅವರಿಗೆ ಇರಲಿಲ್ಲವೆಂದು ಗೊತ್ತಿತ್ತು. ಒಮ್ಮೆ ವಾಸುದೇವಯ್ಯನಿಗೆ ಹೇಳಿದ್ದು ಕೇಳಿದ್ದ "ನಾನ್ಬಂದಾಗ ನೆನಪು ಮಾಡು, ಆ ಉದ್ದದ ಕಪಾಟಿನಲ್ಲಿರೋ ಪುಸ್ತಕ, ಕಡತಗಳ್ನ ಒಮ್ಮೆ ನೋಡಿ ವಿಲೇವಾರಿ ಮಾಡ್ಬಿಡ್ಬೇಕು" ಉದ್ದೇಶವಿದ್ದರೂ ಸಂದರ್ಭ ಕೂಡಿ ಬಂದಿರಲಿಲ್ಲ.

ಸದಾ ಹೊರಗೆ ಬಂದಾಗ ಪಿಸ್ತೂಲ್ ಅವನೊಡನೆ ಇರುತ್ತಿತ್ತು. ಲೈಸನ್ಸ್ ಕೂಡ ಇತ್ತು. ಬಹುಶಃ ಬೀಗದ ಕೈ ಪ್ರಯತ್ನದಲ್ಲಿ ಲಾಕ್ ಓಪನ್ ಆಗದಿದ್ದರೇ ಗುಂಡು ಉಪಯೋಗಿಸಬೇಕೆಂದುಕೊಂಡು. ಅದೂ ಸುಲಭದ ಹಾದಿಯಾದರೂ ಹಿಂದೆಗೆಯುತ್ತಿದ್ದ ವಿಷಯ ಮನೆಯವರೆಗೂ ಹೋಗಿ ಮುಟ್ಟುತ್ತದೆಯೆಂದು.

ಕೆಳ ಡ್ರಾಯರ್‌ನಲ್ಲಿ ಒಂದು ಸಣ್ಣ ಹಿತ್ತಾಳೆಯ ಬೀಗದ ಕೈ ಸಿಕ್ಕಿತ್ತು. ಅದು ಎಲ್ಲಾ ಕೀಗಳಂತಿರದೇ ಪುಟ್ಟ ಹಿತ್ತಾಳೆಯ ದೀಪದಂತೆ ಕಂಡಿತು. ಅದನ್ನು ಜೇಬಿಗೆ ಸೇರಿಸಿದವನು ಅವಳತ್ತ ನೋಡಿದ ಮರುಕದಿಂದ.

"ಡೋಂಟ್ ವರೀ, ಇನ್ನು ಒಂದಿಷ್ಟು ಹೋಪ್ಸ್ ಇದೆ. ಮೊದ್ಲು ಊಟ ಮುಗ್ಸಿಕೊಂಡ್ಬರೋಣ. ನಾನಂತು ಊಟ, ತಿಂಡಿಯ ಮನುಷ್ಯ" ಎಂದ ತಮಾಷೆಯಾಗಿ.

"ನಂಗ್ಬೇಡ, ನೀವ್ಹೋಗಿ, ಬನ್ನಿ" ಎಂದಳು ನಿರುತ್ಸಾಹದಿಂದ. ಕೈಹಿಡಿದು ಆತ್ಮೀಯವಾಗಿ "ನಿಮ್ಮನ್ನ ಬಿಟ್ಟು ಊಟ ಮಾಡೋಷ್ಟು ಕಟುಕತನವಿಲ್ಲ. ಪ್ಲೀಸ್ ಕಮ್..." ಕರೆದೊಯ್ದ.

ಊಟದ ನಡುವೆ ಅವನು ಹೇಳಿದ ವಿಷಯಕ್ಕೆ ದಂಗಾದಳು "ಈ ಮನೆಗೆ ಒಂದು ಕೆಟ್ಟ ಹೆಸರೇ ಬಂದ್ಬಿಟ್ಟಿದೆ. ನಮ್ತಂದೆ ಎಲ್ಲೂ ಹೋಗಿಲ್ಲ, ಸತ್ತು ಭೂತವಾಗಿ ಈ ಮನೆಯಲ್ಲಿ ಸುತ್ತಾಡ್ತ ಇದ್ದಾರೇಂತ ಯಾರೋ ಕುಹಕಿಗಳು ಹಬ್ಬಿಸಿದ ನ್ಯೂಸ್ ಎಲ್ಲಿವರ್ಗೂ ಬಂತೂಂದ್ರೆ, ಪೋಲೀಸ್ ಇನ್ಸ್‌ಪೆಕ್ಟರ್ ಎಸ್ಪ್ವೇಟ್‌ವರ್ಗೂ ಬಂದು ವಿಚಾರ್ಸೋವರ್ಗೂ ಆಯ್ತು. ಅದ್ಕೇ ನಾವು ಇಲ್ಲಿಗೆ ಬಂದ್ಬಿಟ್ರೆ ಈ ವಿಷ್ಯ ಸತ್ತುಹೋಗುತ್ತೆ. ಆದ್ರೆ ನಮ್ಮಮ್ಮ ಒಪ್ಪೋಲ್ಲ. ಕನಿಷ್ಟ ನಾನು ಮಾಲತಿಯಾದ್ರೂ ಇಲ್ಬಂದು ಇರೋಣಾಂದ್ರೆ ಒಪ್ಪೋಲ್ಲ. ಮನೆಯ ಮೇಲೆ ದ್ವೇಷ, ಸಮಾಜದ ಭಯ. ಒಂದು ರೀತಿಯಲ್ಲಿ ಅಂಜುಕುಳಿಗಳು. ಆದರೆ ಒಂದಲ್ಲ ಒಂದು ದಿನ ನಮ್ಮ ತಂದೆ ಹೆಸರಲ್ಲಿ ಇದ್ನ ಅನಾಥಾಶ್ರಮ ಮಾಡ್ತೀನಿ. ಆ ದಿನಕ್ಕಾಗಿ ಸಾಕಷ್ಟು ಸಹನೆಯಿಂದ ಕಾಯ್ತೀನಿ. ಬೀದಿಗೆಸೆದ ಮಕ್ಕಿಗೆ ಒಂದು ನೆಲೆ, ಭವಿಷ್ಯ ಇದಕ್ಕಾಗಿ ಏನು ರಿಸ್ಕ್ ತಗೋಳೋಕೂ ನಾನು ಸಿದ್ಧ." ಭಾವೋದ್ವೇಗದಿಂದ ಮನಬಿಚ್ಚಿ ಹೇಳಿಕೊಂಡ. ಅವನ ಮನದ ಆಶಯ ಕೇಳಿದ ಪ್ರಥಮ ವ್ಯಕ್ತಿ ಇವಳು.

ಅಭಿಮಾನ, ಗೌರವದಿಂದ ನೋಡಿದಳು ಅವನತ್ತ. ತಾನು ಕೂಡ 'ಬೀದಿಗೆ ಬಿಸುಟ್ಟ ಮಗು'. ತನ್ನ ಜೀವನ ಕೂಡ ರೂಪುಗೊಂಡಿದ್ದು ಬೇರೆಯವರ ಕರುಣೆಯಿಂದ.

ಹಿಂದಿರುಗಿದ ನಂತರ ಸ್ವಲ್ಪ ಉತ್ಸಾಹದಿಂದಲೇ ಹಿತ್ತಾಳೆ ಕೀಯಿಂದ ಓಪನ್ ಮಾಡಲು ಪ್ರಯತ್ನಿಸಿ ಆಯಾಸವಿಲ್ಲದೆ ಸಫಲನಾದ. ಹೆಚ್ಚಿಗಿದ್ದಿದ್ದೆಲ್ಲ ಪುಸ್ತಕಗಳು, ಅವುಗಳಲ್ಲಿ ಆಧ್ಯಾತ್ಮಿಕ ಗ್ರಂಥಗಳೇ ಹೆಚ್ಚು.

ಅದರ ಕೆಳಗಡೆ ಕಂದುಬಣ್ಣದ ಮೇಲು ಹೊದ್ದಿಕೆ ಇದ್ದ ದೊಡ್ಡ ಆಕಾರದ ಡೈರಿ ಕಂಡಾಗ ಅವನ ಕುತೂಹಲ ಕೆದರಿತು. ಮೊದಲ ಪುಟ ಮೊಗಚಿದಾಗಲೇ ಅನಾಥಾಶ್ರಮಕ್ಕೆ ಸಂಬಂಧಪಟ್ಟಿದ್ದೆಂದು ಅರಿವಾಗಿ ಆತುರದಿಂದ ಪುಟಗಳನ್ನು ತಿರುವಿದ. ಅನಾಥಾಶ್ರಮ ಷುರುವಾದಂದಿನಿಂದ ಮಕ್ಕಳ ಬಗೆಗಿನ ಸಂಪೂರ್ಣ ವಿವರ ಮಗು ಅನಾಥಾಶ್ರಮಕ್ಕೆ ಬಂದ ದಿನ, ವಾರ, ತಾರೀಖು, ಮಗುವಿನ ವಯಸ್ಸು, ಕಾರಣ, ತಂದು ಕೊಟ್ಟವರ ಮಾಹಿತಿ ಕೂಡ ಇತ್ತು.

ಆದರೆ ದತ್ತಕದ ಬಗ್ಗೆ ಮಾಹಿತಿ ಇದ್ದ ಯಾವ ವಿವರವು ಸಿಗಲಿಲ್ಲ.

ಡೈರಿಯನ್ನು ಮುಚ್ಚಿ ಅವಳೆಡೆ ನೋಡಿದ ತುಸು ಮರುಕ ಬೆರೆತ ನೋಟದಿಂದ. ಒಂದು ಹಂತಕ್ಕೆ ಬಂದರೂ ಈ ಜಾಡು ಹಿಡಿದು ಎಲ್ಲಿಗೆ ಹೋಗುವುದು? ಹೆಚ್ಚಿನ ಮಕ್ಕಳು ಅಲ್ಲಿ, ಇಲ್ಲಿ ಸಿಕ್ಕವು. ಅವರಿವರು ತಂದು ಒಪ್ಪಿಸಿದವೇ ಹೆಚ್ಚು. ದಿನದ, ವಾರದ ಮಕ್ಕಳ ಜೊತೆ ವರ್ಷಗಳ ಮಕ್ಕಳು ಕೂಡ ಬಂದಿದ್ದವು. ಇಂಥ ಮಕ್ಕಳ ಪೂರ್ವೋತ್ತರ ಕಂಡುಹಿಡಿಯುವುದು ಸುಲಭವೇ? ಇಷ್ಟು ಮಕ್ಕಳಲ್ಲಿ ಸಖಿ ಯಾವ ಮಗುವಾಗಿದ್ದಳೆಂದು ಗುರ್ತಿಸುವುದು ಹೇಗೆ? ತೀರಾ ತಲೆನೋವಿನ ಕೆಲಸವೆನಿಸಿತು.

ಇನ್ನೊಮ್ಮೆ ಡೈರಿ ತೆಗೆದು ಪೂರ್ತಿ ಕಣ್ಣಾಡಿಸಿದ. ಕಡೆಯ ಪುಟದಲ್ಲಿ ಒಂದು ಸೂಚನೆ ಇತ್ತು. ಮಗು ಅನಾಥಾಶ್ರಮ ತಲುಪಿದಾಗ ತೆಗೆದ ಫೋಟೋಗಳನ್ನು ಕೊಟ್ಟ ವಿವರಣೆ ಸಂಖ್ಯೆಗೆ ಅನುಗುಣವಾಗಿ ಶೇಖರಿಸಿ ಇಡಲಾಗಿದೆಯೆಂದು ಬರೆದಿತ್ತು.

"ಎಲ್ಲಾ ಡೀಟೈಲ್ಸ್ ಇದೆ, ನೀನು ಅಂದುಕೊಂಡಿದ್ದಿಕ್ಕಿಂತ ಹೆಚ್ಚು ವಿವರ ಸಿಕ್ಕಿದೆ. ಈಗ್ಲೂ ನಿನ್ನ ಹೆತ್ತವ್ರನ ಹುಡ್ಕೋದು ನಂಗೆ ಸುಲಭ ಅನ್ನಿಸೋಲ್ಲ, ಸೀ...." ಅವಳ ಕೈಗೆ ಡೈರಿಕೊಟ್ಟು ಫೋಟೋಗಳಿಗಾಗಿ ಹುಡುಕತೊಡಗಿದ.

ಇಡೀ ಬೀರುನ ಎಲ್ಲಾ ಜಾಲಾಡಿಬಿಟ್ಟ. ಯಾವುದೇ ಫೋಟೋಗಳು ಸಿಗಲಿಲ್ಲ. ಈ ಹುಡುಕಾಟದಲ್ಲಿ ಅವನ ಕೈಗೆ ಚುಚ್ಚಿಕೊಂಡ ಗುಂಡು ಪಿನ್ ಕೆಳಗೆ ಬಿತ್ತು. ಆಗ ಕೊನೆಯ ಕಪಾಟದ ಅಡಿಯನ್ನು ಕಬ್ಬಿಣದಿಂದ ನಿರ್ಮಿಸಿದ್ದು ಅವನ ಅರಿವಿಗೆ ಬಂತು. ಕೈನಿಂದ ಸವರಿದ, ಶಬ್ದ ಮಾಡಿದ. ನಂತರ ಅಲುಗಾಡಿಸಿದ ಹಿಂದಕ್ಕೆ ಮುಂದಕ್ಕೆ ಸರಿಸುವ ಪ್ರಯತ್ನ ಮಾಡಿದಾಗ ಹಿಂದಕ್ಕೆ ತೆರೆದುಕೊಂಡಿತು. ಅದರ ಒಳಾಯದಲ್ಲಿ ಒಂದು ಫೈಲು ಇತ್ತು.

ಅದನ್ನು ಹೊರ ತೆಗೆದು ತಿರುವಿದಾಗ ಅವನ ಕಣ್ಣುಗಳು ಮಿನುಗಿತು. ಅನಾಥಾಲಯದ ಮಕ್ಕಳ ಭಾವಚಿತ್ರಗಳು, ಆಗ ತಾನೇ ಹುಟ್ಟಿದ ಕೆಲವು ಮಕ್ಕಳು ಕಣ್ಣು ತೆರೆಯುವ ಮುನ್ನ ಅನಾಥಾಶ್ರಮ ಸೇರಿದ್ದವು. ಗುಂಡಿಗೆ ಒತ್ತಿ ಸಂಕಟದಿಂದ ಒದ್ದಾಡಿದ. ಗರ್ಭದಿಂದ ಹೊರಬಂದ ಚಿನ್ನಾರಿಗಳು ಹೆತ್ತವಳ ಸಂಬಂಧ ಕಡಿದುಕೊಂಡು ಅನ್ಯರ ಸಮಾಜದ ಕರುಣೆಯ ವಶಕ್ಕೆ – ಇದೊಂದು ದೊಡ್ಡ ದುರಂತವೆನಿಸಿತು.

ಆತುರಾತುರದಿಂದ ವಿವರಗಳನ್ನು ಓದುತ್ತಿದ್ದವಳ ಮುಂದೆ ಫೈಲ್ ಹಾಕಿದ. "ಇದ್ರಲ್ಲಿ ಕೆಲವು ಫೋಟೋಗಳು ಇದೆ" ಎಂದವನು ಮತ್ತೆ ಫೈಲ್‌ನ ಮುಂದಕ್ಕೆಳೆದುಕೊಂಡು "ಹಾಗೇ ನನ್ನಡೆ ನೋಡ್ಕೊಂಡ್ ಕೂತ್ಕೋ, ನಂಗೆ ಐಡೆಂಟಿಫೈ ಮಾಡೋಕೇ ಸಾಧ್ಯವೇನೋ ನೋಡ್ತೀನಿ" ಎಂದವ ಪ್ರತಿಯೊಂದು ಫೋಟೋ ನೋಡಿ ನಂತರ, ಅವಳನ್ನ ತೀಕ್ಷ್ಣವಾಗಿ ಆಳವಾಗಿ ನೋಡುತ್ತಿದ್ದವನ ಮುಖದಲ್ಲಿ ಮಿಂಚು ಹರಿದಾಡಿತು ಒಂದು ಕಡೆ. ಮುದ್ದು ಮುಖ ಕಪ್ಪು ಕಣ್ಣುಗಳು, ದಟ್ಟವಾದ ಕೂದಲು ತಲೆಯಲ್ಲಿ ಆ ಫೋಟೋ ಪಕ್ಕದಲ್ಲಿ ಮಾಹಿತಿಯ ನಂಬರ್ ಇದ್ದರೂ ಅದನ್ನು ಫೈಲಿನಿಂದ ಬೇರ್ಪಡಿಸಿ, ಅವಳ ಕೈಯಲ್ಲಿನ ಫೈಲು ತೆಗೆದುಕೊಂಡ.

ಆ ಮಗು ಅನಾಥಾಶ್ರಮಕ್ಕೆ ಬಂದಾಗ ಒಂಬತ್ತು ತಿಂಗಳು ಮೇಲೆ ಕೆಲವು ದಿನಗಳು, ಬಿಳಿ ಬಣ್ಣ, ಆರೋಗ್ಯವಾದ ಮಗು. ತಾಯಿ, ತಂದೆಯರು ಇಲ್ಲದ ಅನಾಥ ಮಗುವನ್ನು ಕರುಣೆಯಿಂದ, ಮಾನವೀಯತೆಯಿಂದ ಸಾಕುತ್ತಿದ್ದ ತುಳಜಾಬಾಯಿ ಎನ್ನುವ ಹೆಂಗಸು ಬಡತನದ ಬವಣೆ ತಡೆಯಲಾರದೆ ತಂದು ಒಪ್ಪಿಸಿದ್ದಳು. ದಿನ, ವಾರ, ಸಮಯ, ತಾರೀಖು, ವರ್ಷದ ಸಂಪೂರ್ಣ ಮಾಹಿತಿ ಇತ್ತು. ಮೆಲ್ಲಗೆ ತಲೆಯೆತ್ತಿ ಅವಳನ್ನು ದಿಟ್ಟಿಸಿದ ಸಖಿ ತಾಯಿ, ತಂದೆ ಇಲ್ಲದ ಅನಾಥ ಮಗು! ನೋವಿನ ನೆರಳಾಡಿತು ಮುಖದ ಮೇಲೆ. ಹೇಗೆ ಅವಳಿಗೆ ಹೇಳುವುದು ?

ಮಾಹಿತಿ ಪಕ್ಕ ಫೋಟೋ ಇಟ್ಟು ಅವಳ ಮುಂದೆ ತಳ್ಳಿ, "ಬಿ ಡೇರ್, ಏನು ಮಾಡದ ತಾಯ್ತಂದೆ ಇದ್ದರೂ ಅಷ್ಟೆ, ಇಲ್ದೇ ಹೋದ್ರೂ ಅಷ್ಟೆ. ಅದಕ್ಕಾಗಿ ವರೀ ಮಾಡ್ಕೋಬಾರ್ದು" ಎಂದು ಹೇಳಿದವನು ಕಿಟಕಿಯ ಬಳಿ ಹೋಗಿ ನಿಂತ. ಈ ಮನೆ ಅವನಿಗೆ ಅತ್ಯಂತ ಪ್ರಿಯ. ಅವನ ಬಾಲ್ಯದ ನೆನಪುಗಳ ಸಂಗ್ರಹ.

ತಂದೆ ಯಾಕೆ ಪಲಾಯನ ಮಾಡಿದರು ? ಸಮಾಜಕ್ಕೆ ಹೆದರಿಯಾ ? ಅಂತಹ ಪುಕ್ಕಲು ಮನುಷ್ಯನೆಂದುಕೊಳ್ಳುವುದು ಇಷ್ಟವಾಗಲಿಲ್ಲ. ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತವಾಗಿಯಾ ? ಮಾಡಿದ ತಪ್ಪಾದರೂ ಏನು ? ಸಾವಿತ್ರಿಬಾಯಿ ಕೋರ್ಟಿನಲ್ಲಿಯೇ ತನಗೂ ಶೀನಪ್ಪಯ್ಯನಿಗೂ ಸಂಬಂಧವಿದೆಯೆಂದು ಆ ಪ್ರೇಮದ ಸಲುವಾಗಿ ಅನಾಥಾಶ್ರಮದ ಕಟ್ಟಡ, ಅದರ ಸುತ್ತಲಿನ ಜಾಗ ತನ್ನ ಹೆಸರಿಗೆ ಬರೆದಿದ್ದಾರೆಂದು ಕೋರ್ಟಿನಲ್ಲಿ ಕಾಗದ ಪತ್ರಗಳನ್ನು ಹಾಜರುಪಡಿಸಿದ್ದಳು. ಅದು ಪಿತ್ರಾರ್ಜಿತವಾದುದ್ದರಿಂದ ಕೋರ್ಟು ಕಛೇರಿಗೆ ಅವನ ಮಾವ ಓಡಾಡಿದ್ದ.

ಆದರೆ ಅವನ ತಾಯಿ ಅಡ್ಡ ಬಂದಿದ್ದರು "ಬೇಡ, ಎಲ್ಲಾದ್ರೂ ಹಾಳಾಗ್ಲಿ. ನಮ್ಗೇ ಆ ಕಟ್ಟಡ, ಜಮೀನು ಯಾವ್ದು ಬೇಡ. ಎಲ್ಲಾ ಅವ್ಳೇ ಇಟ್ಕೊಳ್ಳಿ. ಈಗ್ಲೇ ಹಾದಿ ಬೀದಿ ಹಗರಣವಾಗಿದೆ. ದಯವಿಟ್ಟು ಬಿಟ್ಬಿಡಿ."

ಅಂಥ ಅಪಾರ ಆಸ್ತಿ ಕೆಲವು ವರ್ಷಗಳ ತಕರಾರಿನ ನಂತರವಾದರೂ ಸಾವಿತ್ರಿಬಾಯಿ ಕೈಸೇರಿತ್ತು !

ಬರೀ ಕಹಿ ನೆನಪುಗಳು. ಮುಖ ಸಿಂಡರಿಸಿಕೊಂಡು ಹಿಂದಕ್ಕೆ ತಿರುಗಿದ. ಆ ಫೋಟೋ ಪಕ್ಕ ಒಂದು ಫೋಟೋ ಹಿಡಿದು ನೋಡುತ್ತಿದ್ದಳು. ಕ್ಲಿಂಟನ್ ದಂಪತಿಗಳು ಒಯ್ದಿದ್ದು ಇದೇ ಮಗುವನ್ನು, ಸಂದೇಹವಿರಲಿಲ್ಲ. ಒಂಬತ್ತು ತಿಂಗಳಿಗೂ, ಒಂದೂವರೆ ವರ್ಷಕ್ಕೂ ಅಂಥ ಬದಲಾವಣೆಗಳೇನು ಇರಲಿಲ್ಲ.

"ನಂದೇ ಈ ಫೋಟೋ" ಎಂದಳು. ಅವಳ ಕಂಠ ಬಿಗಿದು ಶಬ್ದ ಪ್ರಯಾಸವಾಗಿ ಹೊರಬಂದಿತ್ತು. ತಂದು ಒಪ್ಪಿಸಿದ ತುಳಜಾಬಾಯಿ ಪ್ರಕಾರ ಅವಳಿಗೆ ತಾಯಿ ತಂದೆ ಇರಲಿಲ್ಲ. ಎರಡು ಕೈಯಲ್ಲು ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ಇಲ್ಲಿಗೆ ಅವಳ ಹುಡುಕಾಟ, ಹೋರಾಟ ಎಲ್ಲಾ ಮುಗಿದಿತ್ತು.

'ಒಂಟಿ, ಅನಾಥೆ' ಎನ್ನುವುದು ಅವಳನ್ನು ಕಾಡಬಾರದೆನಿಸಿ ಪಕ್ಕದಲ್ಲಿ ಕೂತು ಎದೆಗೊರಗಿಸಿಕೊಂಡು ಪ್ರೀತಿಯಿಂದ ಕೈಗಳನ್ನು ಬಿಡಿಸಿ ಕಣ್ಣೀರು ತೊಡೆದು ಅಳಬಾರದೆಂದು ಕಣ್ಸನ್ನೆಯಿಂದಲೇ ಹೇಳಿದ. ಎಷ್ಟೋ ಅಭಿಮಾನ, ಪ್ರೇಮದಿಂದ ಹೆತ್ತವರನ್ನು ಹುಡುಕಿಕೊಂಡು ಭಾರತಕ್ಕೆ ಬಂದ ಈ ಹೆಣ್ಣು ಕಣ್ಣೀರು ಹಾಕುವುದು ಸುತರಾಂ ಇಷ್ಟವಾಗಲಿಲ್ಲ.

"ತುಳಜಾಬಾಯಿ ಸುಳ್ಳು ಹೇಳಿರ್ಬಹುದು" ಅಂದ ಕೂಡಲೇ ಅವಳ

ಕಂಬನಿ ಅಲ್ಲಿಯೇ ನಿಂತಿತು, ಹೊಸ ಸಂಚಾರ ಮೈಯಲ್ಲಿ. ತಕ್ಷಣ ಕಣ್ಣೀರು ತೊಡೆದುಕೊಂಡು "ತುಳಜಾಬಾಯಿಯನ್ನು ಭೇಟಿ ಮಾಡಿದರೆ" ಎಂದ ಕೂಡಲೇ ಅನಿಕೇತ್ ಹೋಗಿ ಒಂದು ಕಡೆ ಕೂತುಬಿಟ್ಟ. ತನ್ನ ತಪ್ಪಿನ ಅರಿವಾಗಿತ್ತು ಅವನಿಗೆ. ಮುಗಿದು ಹೊಸ ಕತೆಗೆ ಮತ್ತೊಂದು ತಿರುವು ಕೊಟ್ಟಂತಾಗಿತ್ತು.

"ಥ್ಯಾಂಕ್ಸ್ ಫಾರ್ ದ ಲಾಟ್, ನಾನು ಹಿಂದಿರುಗೋ ನಿಶ್ಚಯ ಮಾಡ್ಬಿಟ್ಟಿದ್ದೆ. ಅಂತು ನನ್ನಾಸೆಗೆ ಜೀವ ಕೊಟ್ರಿ. ಐ ಯಾಮ್ ಗ್ರೇಟ್‌ಫುಲ್ ಟು ಯು ಸರ್" ಎಂದಳು ಹರ್ಷದಿಂದ.

ಹಣೆಯೊತ್ತಿಕೊಂಡು ಕಣ್ಮುಚ್ಚಿದ ಅನಿಕೇತ್. ತುಳಜಾಬಾಯಿ ಅನ್ನೋ ಹೆಣ್ಣನ್ನು ಕಂಡುಹಿಡಿಯಲು ಸಾಧ್ಯವೇ ? ಅವಳ ಹೆಸರಿನ ಕೆಳಗೆ ಯಾವುದೇ ವಿಳಾಸ ನಮೂದಾಗಿರಲಿಲ್ಲ. ಬಡತನದ ತೀರಾ ಕೆಳ ರೇಖೆಯಲ್ಲಿರುವ ಕೂಲಿ, ಆಯಾ ಕೆಲಸದ ಹೆಣ್ಣಾಗಿರಬೇಕು. ಆಗ ಈ ಸಿಟಿಯಲ್ಲಿ ಇದ್ದಿರಬಹುದು. ಈಗ ಇಲ್ಲಿರುವ ಬಗ್ಗೆ ನಂಬಿಕೆಯೇನು ? ಆಗ ಅವಳ ವಯಸ್ಸು ಎಷ್ಟಿತ್ತೋ ಏನೋ.... ಈಗ ಜೀವಂತವಾಗಿರುವ ಭರವಸೆ ಕೂಡ ಇಲ್ಲ.

"ಈಗೇನ್ಮಾಡೋದು ?" ಕೇಳಿದಳು.

ಮೇಲೆದ್ದ ಅನಿಕೇತ್ "ಪ್ಲೀಸ್ ಸಖೀ, ಸ್ವಲ್ಪ ಅರ್ಥ ಮಾಡ್ಕೋ. ಆ ತುಳಜಾಬಾಯನ್ನು ಹುಡುಕೋಕೆ ಸಾಧ್ಯನಾ ? ಸಿಕ್ರೂ ಅದ್ನೆ ಪುನರುಚ್ಚರಿಸಿದ್ರೇನ್ಮಾಡ್ತೀಯಾ ? ಇದ್ನೆಲ್ಲ ಯೋಚ್ನೆ ಮಾಡು" ತಿಳಿ ಹೇಳಿದವನು ಕಡತಗಳನ್ನೆಲ್ಲ ಅದೇ ಕಪಾಟಿಗೆ ತುಂಬಿ ಡೈರಿ, ಫೋಟೋ ಫೈಲು ಮಾತ್ರ ತನ್ನೊಂದಿಗೆ ಒಯ್ಯಲು ನಿರ್ಧರಿಸಿದ.

ಹೋಟೆಲ್ ಬಳಿ ಇಳಿಸಿದವನು "ಸಾರೀ, ಬಹುಶಃ ತುಳಜಾಬಾಯಿ ಸುದ್ದಿ ಹೇಳಿ ತಪ್ಪು ಮಾಡಿದ್ನೇನೋ. ಆಕೆ ಜೀವಂತವಾಗಿ ಇರ್ಬಹ್ದು, ಇಲ್ದೇ ಇರ್ಬಹ್ದು. ಕಂಡುಹಿಡ್ಯೋ ಪ್ರಯತ್ನ ಮಾತ್ರ ಮೂರ್ಖತನದ್ದು" ಹೇಳಿ ಹೊರಟುಬಿಟ್ಟ.

ರೂಮಿಗೆ ಬಂದವಳು ಒಂದೆಡೆ ಕುಸಿದಂತೆ ಕೂತಳು. ಮಾಲತಿ, ಚಂಪಕವಲ್ಲಿ, ನಸೀಮಾಬೀ, ಸಾಕಮ್ಮ, ಲಕ್ಷ್ಮಿ ಇವರಲ್ಲಿ ಯಾರಾದರೂ ಒಬ್ಬರು ತನ್ನ ತಾಯಿ ಆಗಿರಬಾರದಿತ್ತ ? ಸತ್ತ ರಾಯ್ ಪತ್ನಿ ತನ್ನ ತಾಯಿ ಆಗಿದ್ದರೇ ಕಲ್ಪನೆಯಲ್ಲಾದರೂ ತಾಯಿ ಪ್ರೇಮದಿಂದ ಸುಖಿಸುತ್ತಿದ್ದೆನಲ್ಲ !

ಅಂತೂ ತಾನೊಬ್ಬ ಅನಾಥೆ, ಪ್ರಕೃತಿಯ ಮಡಿಲಲ್ಲಿ ಹುಟ್ಟಿದ ಶಿಶು ಒಂಟಿಯಾಗಿ ಯಾವುದೇ 'ಕ್ಲೂ' ಇಲ್ಲದೇ ತುಳಜಾಬಾಯಿಯನ್ನು ಹುಡುಕಲು ಸಾಧ್ಯವಿರಲಿಲ್ಲ. ಬಹುಶಃ ಸಾವಿತ್ರಿಬಾಯಿಗೂ ಇಷ್ಟೇ ಗೊತ್ತಿರಬಹುದು.

ಎಂಟರ ಸುಮಾರಿಗೆ ಪರ್ಚೇಸಿಂಗ್‌ಗಾಗಿ ಹೋಟೆಲ್‌ನಿಂದ ಹೊರ ಬಂದವಳು ಷಾಪಿಂಗ್ ಸೆಂಟರ್‌ಗೆ ನಡೆಯುತ್ತ ಯೋಚಿಸಿದಳು. ಯಾಕೆ ದಿಢೀರೆಂದು ಅಪೋಲೋಯಿಂದ ನಿಶಾ ಹೋಟೆಲ್‌ಗೆ ತನ್ನ ಲಾಡ್ಜಿಂಗ್ ಬದಲಾಯಿಸಿದ್ದು? ಅಂತೂ ಅವಳಿದ್ದ ಮೂಡ್‌ನಲ್ಲಿ ಏನೇನು ಅರ್ಥವಾಗಿರಲಿಲ್ಲ.

ಒಂದಿಷ್ಟು ಹಣ್ಣು, ಬಿಸ್ಕತ್ ಪ್ಯಾಕೆಟ್ ಖರೀದಿಸಿ ಹಿಂದಿರುಗಿದಾಗ ನವನೀತ್ ನಿಂತಿದ್ದ "ಗುಡ್ ಇವ್ನಿಂಗ್ ಮೇಡಮ್, ಕೊಡಿ..." ಎಂದು ಕೈ ಮುಂದೆ ಮಾಡಿದಾಗ ನಿರಾಕರಿಸಿದಳು. "ನೋ ನೋ, ಇದೇನು ಹೆವೀಯೆನಿಸೋಲ್ಲ. ಹೇಗಿದ್ದಾರೆ ನಿಮ್ಮ ಮದರ್? ನಿಮ್ಮ ಮನೆಗೆ ಬರೋಣಾಂತ ಇದ್ದೆ, ಸರ್ಯಾಗಿ ವಿಳಾಸ ಗೊತ್ತಿಲ್ಲ" ಎಂದಳು ಸರಳವಾಗಿ.

ಯಾಕೋ ಅತ್ತಿತ್ತ ನೋಡಿ ಮಾತಾಡಲು ಅನುಮಾನಿಸಿದವನು "ನಿಮ್ಮನ್ನ ಹೋಟೆಲ್ ಬಳಿ ಡ್ರಾಪ್ ಮಾಡ್ತೀನಿ. ಒಂದಿಷ್ಟು ಮಾತಾಡೋದಿದೆ, ಪ್ಲೀಸ್.... ಸಣ್ಣ ರಿಕ್ವೆಸ್ಟ್" ಕೇಳಿಕೊಂಡ. ಅವಳ ಕಣ್ಣುಗಳಲ್ಲಿ ಅಚ್ಚರಿ ಅರಳಿತು. ನಸು ನಗೆಯಿಂದ ಟ್ಯಾಕ್ಸಿಯತ್ತ ನಡೆದಳು.

ಟ್ಯಾಕ್ಸಿ ಅಷ್ಟು ದೂರ ಹೋದ ಮೇಲೆ ಒಂದೆಡೆ ನಿಂತಿತು. ಸ್ವಲ್ಪ ಸಂಕೋಚಿಸುತ್ತಲೇ ಹಿಂದಕ್ಕೆ ತಿರುಗಿದ ನವನೀತ್ "ಬಂಗ್ಲೆ ಸಾವಿತ್ರಿಬಾಯಿ ಕಡೆ ಜನ ಎರಡೆರಡು ಸಲ ಬಂದು ನನ್ನ ಪ್ರಶ್ನಿಸಿದಾಗ ನಂಗೆ ಗಾಬರಿಯೇ ಆಯ್ತು. ಸಿನಿಮಾ ಥಿಯೇಟರ್ ಇದ್ದ ಜಾಗದ ಅನಾಥಾಶ್ರಮದಲ್ಲಿ ವಾರ್ಡನ್, ಆಗಿದ್ದ ಸಾವಿತ್ರಿಬಾಯಿ ಇವ್ಳೇನಂತೆ. ಆಕೆಯ ಇತಿಹಾಸ ಏನೇನು ಸರಿಯಲ್ಲ. ಈಗ್ಲೂ ಏನೇನೋ ನಡೆಸ್ತಾಳಂತೆ, ಸುಮ್ನೇ ನಿಮ್ಮಂಥವ್ರು ಅವ್ಳ ಜಾಲದಲ್ಲಿ ಬಿಳೋದ್ಬೇಡಾಂತ. ನೀವು ಯಾವ್ದೆಲ್ಲದ ಸಲುವಾಗಿ ಆಕೆಯಲ್ಲಿಗೆ ಹೋಗಿದ್ರೂ, ಮತ್ತೆ ಹೋಗೋದ್ಬೇಡ. ಅದ್ಕೇ ಸಾರ್, ತಕ್ಷಣ ಹೋಟೆಲ್ ಬದಲಾಯಿಸಿದ್ದು ಆಕೆಯೇನಾದ್ರೂ ಕರೆ

ಕಳ್ಳಿದ್ರೆ.... ಹೋಗ್ಬೇಡಿ" ವಿನಂತಿಸಿದ. ತೀರಾ ಈಚೆಗೆ ತಂಗಿಯನ್ನು ಕಳೆದುಕೊಂಡಿದ್ದ ಅವನಿಗೆ ಸಖಿಯ ಮೇಲೆ ಅಲೌಕಿಕವಾದ ಮಮತೆ. ಅದು ಲಾಜಿಕ್‌ಗೆ ಸಿಗದ್ದು.

ಹೋಟೆಲ್ ಮುಂದೆ ಇಳಿಯಲು ಹೋದಾಗ ಡೋರ್ ತೆರೆಯದಂತೆ ಹಿಡಿದು "ಮೇಡಮ್, ಈ ಎಚ್ಚರಿಕೆ ನಿಮ್ಮ ಗಮನದಲ್ಲಿ ಇರ್ಲಿ, ಯಾವಾಗ್ಬೇಕಾದ್ರೂ ಈ ನಂಬರ್‌ಗೆ ಫೋನ್ ಮಾಡಿ" ಜೇಬಿನಿಂದ ಒಂದು ಸ್ಲಿಪ್ ತೆಗೆದುಕೊಟ್ಟ.

ಟ್ಯಾಕ್ಸಿ ಮುಂದಕ್ಕೆ ಹೋಗುವವರೆಗೂ ಅಲ್ಲೇ ನಿಂತಳು. ಚಿಂತಿಸಿ ಚಿಂತಿಸಿ ಚಿತ್ತಾಗಿದ್ದಳೇ ವಿನಹ ಅವಳಿಗೇನು ತೋಚಿರಲಿಲ್ಲ. ಯಾಕೋ ಏನೋ ಅನಿಕೇತ್ ಮತ್ತು ನವನೀತ್ ಮಾತು ಮೀರಿ ಭೇಟಿ ಮಾಡಲು ಹಿಂದೆಗೆದರು. ಆ ಬಗೆಗಿನ ಅವಳ ನಿರ್ಧಾರವನ್ನು ಮುಚ್ಚಿಬಿಡಲಿಲ್ಲ. ತನ್ನ ಜನನದ ಬಗ್ಗೆ ಹೇಳಬೇಕಾದ ಒಬ್ಬೇ ಒಬ್ಬ ವ್ಯಕ್ತಿ ತುಳಜಾಬಾಯಿ.

ರಾತ್ರಿ ಊಟ ಕೂಡ ಬೇಡವೆಂದವಳು ತಾನು ಕೊಂಡು ತಂದಿದ್ದ ಹಣ್ಣನ್ನು ಮಾತ್ರ ತಿನ್ನುವ ವೇಳೆಗೆ ಫೋನ್ ಸದ್ದು ಮಾಡಿತು.

"ಹಲೋ..... ಸಖೀ" ಅನಿಕೇತ್ ಸ್ವರ.

"ಹಲೋ..." ಎಂದಳಷ್ಟೆ. ಹೇಳಲು ಕೇಳಲು ಏನು ಇಲ್ಲವೆನಿಸಿತು. "ನಾನು ಅನಿಕೇತ್, ಹೇಗಿದ್ದೀಯಾ? ಯಾವುದಾದ್ರೂ ಪ್ರೋಗ್ರಾಂ ಫಿಕ್ಸ್ ಮಾಡ್ಕೊಂಡ್ಯಾ? ನಾಳೆ ಮಧ್ಯಾಹ್ನ ನಮ್ಮ ಮನೆಗೆ ಊಟಕ್ಕೆ ಬಾ. ಎಲ್ಲಾ ಒಟ್ಟಿಗೆ ಊಟ ಮಾಡಿದಂಗಾಗುತ್ತೆ" ಹೇಳಿದ ಆತ್ಮೀಯ ದನಿಯಲ್ಲಿ.

ಎರಡು ನಿಮಿಷ ನಿಧಾನಿಸಿ "ಹಾ.....ಹ್ಞೂ.... ಬರ್ಬಹುದು. ಸದ್ಯಕ್ಕೆ ಯಾವ್ದೇ ಪ್ರೋಗ್ರಾಂ ಇಲ್ಲ. ಎಲ್ಲಾ ಹೇಗಿದ್ದಾರೆ?" ಸಹಜವಾಗಿ ವಿಚಾರಿಸಿದಾಗ ನೋವಿನ ನಿಟ್ಟುಸಿರು ಇಲ್ಲಿಯವರೆಗೂ ಹರಿದು ಬಂದಂತಾಯಿತು.

"ಒಂದ್ವಿಷ್ಯ, ತೀರಾ ಹೊರ್ಗೆ ಹೋಗೋದು ಅನಿವಾರ್ಯವಾದ್ರೆ ಮೊದ್ಲು ನಂಗೆ ರಿಂಗ್ ಮಾಡು. ಸ್ವಲ್ಪ ಅಲರ್ಟ್ ಆಗಿರು. ಟ್ಯಾಕ್ಸಿ ಡ್ರೈವರ್ ನವನೀತ್ ಕರ್ಸೀ ಸ್ವಂತಃ ಸಾವಿತ್ರಿಬಾಯಿಯೇ ಪ್ರಶ್ನಿಸಿದ್ದಾಳೆ ಅಂದಾಗ ಸ್ವಲ್ಪ ಅಲರ್ಟ್ ಆಗಿರೋದು ಒಳ್ಳೇದು" ಒತ್ತಿ ಹೇಳಿದ. ಈ ಸಾವಿತ್ರಿಬಾಯಿ ಇತಿಹಾಸವನ್ನು ಸಮಗ್ರವಾಗಿ ತರಿಸಿಕೊಂಡು ಅಭ್ಯಾಸ ಮಾಡುತ್ತಿದ್ದ.

'ಹ್ಲೊ'ಗುಟ್ಟಿ ಫೋನಿಟ್ಟಳು. ಸಾವಿತ್ರಿಬಾಯಿ ಬರೀ ಅಪಾಯದ ಹೆಣ್ಣು ಮಾತ್ರವಲ್ಲ ವರ್ಣಮಯ ವ್ಯಕ್ತಿತ್ವ ಹೊಂದಿದ್ದ ಮಹಿಳೆಯೆನಿಸಿತು.

ಹತ್ತು ನಿಮಿಷ ಕಳೆದಿರಬಹುದು ಇವಳು ಫೋನಿಟ್ಟು. ಬಾಗಿಲ ಮೇಲೆ ಟಿಕ್ ಟಿಕ್ ಬೆರಳಿನಿಂದ ಬಡಿದ ಸದ್ದು. 'ಯಾರು?' ರೂಂ ಬಾಯ್ ಎಂದುಕೊಂಡರು. ತಕ್ಷಣ ಬಾಗಿಲು ತೆರೆಯಲು ಹಿಂದೆಗೆದಳು. ನಂತರ ಫೋನ್ ರಿಂಗಾಯಿತು. ರಿಸೆಪ್ಷನಿಸ್ಟ್ "ಮೇಡಮ್, ಸಾರಿ ಫಾರಿ ದಿ ಡಿಸ್ಟರ್ಬ್. ನಿಮ್ಮೊಂದಿಗೆ ಯಾರೋ ಮಾತಾಡಲು ಬಂದಿದ್ದಾರೆ. ನೋಡಿ" ಫೋನ್ ಬಂದವರಿಗೆ ಕೊಟ್ಟಿರಬೇಕು.

"ಹಲೋ, ಮೇಡಮ್.... ನಾನು ಸಾವಿತ್ರಿಬಾಯಿಯವ್ರ ಪಿ.ಎ. ನಮ್ಮ ಮೇಡಮ್ ನಿಮ್ಮ ಭೇಟಿಯಿಂದ ತುಂಬ ಇಂಪ್ರೆಸ್ಸಿವ್ ಆಗಿದ್ದಾರೆ. ಬೆಳಿಗ್ಗೆ ನಿಮ್ಗೇ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ. ಎಷ್ಟೊತ್ತಿಗೆ ಬರ್ತೀರಾ, ಬ್ರೇಕ್‌ಫಾಸ್ಟ್‌ಗೆ ಆಹ್ವಾನವು ಇದೆ" ನಮ್ರತೆಯಿಂದ ಸೂಚಿಸಿದ.

"ನಾಳೇ ಇಡೀ ದಿನ ಎಂಗೇಜ್ ಆಗಿದೆ..." ರಾಗವೆಳೆದ ಕೂಡಲೇ "ಕ್ಯಾನ್ಸಲ್ ಮಾಡ್ಬಿಡಿ, ನಿಮ್ಮೆಲ್ಲಗಳು, ಟೂರ್ ವಿಷ್ಯ ನಾವು ನೋಡ್ಕೋತೀವಿ. ನಾಳೆ ಬ್ರೇಕ್‌ಫಾಸ್ಟ್‌ಗೆ ಅಲ್ಲಿಗೆ ಒಂದ್ಬಿಡಿ. ಕಾರು ಬಂದು ಒಂಬತ್ತರ ಹೊತ್ಗೇ ನಿಮಗಾಗಿ ಕಾಯ್ತಾ ಇರುತ್ತೆ. ಒಂದತ್ತು ನಿಮಿಷವಾದ್ರೆ ಅಡ್ಜೆಸ್ಟ್ ಮಾಡ್ಕೋಬಹ್ದು" ಫೋನ್ ಕಟ್ ಆಯಿತು. ಸುಮ್ಮನೆ ಫೋನಿಟ್ಟಳು.

ನವನೀತ್ ನೀಡಿದ ಎಚ್ಚರಿಕೆ, ಅನಿಕೇತ್ ಕೆಲವು ಮಾತುಗಳಿಗೆ ಈಗ ಅರ್ಥ ತುಂಬಿಕೊಂಡು ವಿಷಯದ ಆಳ ಪರಿಚಯವಾಯಿತು. ಈಗೇನು ಮಾಡುವುದು? 'ಅಪಾಯ ಬಂದಾಗ ಎದುರಾದರೇ ಕುಸಿಯುತ್ತೆ, ಇಲ್ಲದಿದ್ದರೇ ಬೆನ್ನಟ್ಟುತ್ತೆ' ಇದೊಂದು ಓದಿದ ಮಾತೋ, ಕೇಳಿದ ನುಡಿಯೋ, ಎರಡು ಅಲ್ಲದೆ ಅವಳ ಮಿದುಳಿನ ತೀರ್ಮಾನವೋ, ಅಂತು ಧೈರ್ಯವಾಗಿ ಎದುರಿಸಲು ಮಾನಸಿಕ ಸಿದ್ಧತೆ ನಡೆಸಿದಳು.

ಆದರೂ ಒಮ್ಮೆ ಅನಿಕೇತ್‌ಗೆ ಫೋನ್ ಮಾಡಬೇಕೆಂದು ನಂಬರ್‌ಗಳನ್ನೊತ್ತಿದಳು "ಹಲೋ..." ಎಂದ ಕೂಡಲೇ ಮುಖಕ್ಕೆ ಅಪ್ಪಳಿಸಿದಂತೆ ಮಾಲತಿ ಹೇಳಿದಳು "ಸಖೀ ತಾನೇ, ಆಗ್ಲೇ ಫೋನ್ ಮಾಡಿ ಮಾತಾಡಿದ್ರಂತಲ್ಲ, ಮತ್ತೆ ಯಾಕೆ ಫೋನ್ ಮಾಡ್ತಾ ಇದ್ದೀರಾ! ಊರಿನ ಉಸಾಬರಿ ಬೇಡಾಂತ ನಾವು ಎಸ್ಟೇಟ್‌ಗೆ ಬಂದಿರೋದು. ನೀವು ಯಾವ

ಆಶ್ರಮಗಳ ಬಗ್ಗೆಯಾದ್ರೂ ಲೇಖನ ಬರ್ದುಕೊಳ್ಳಿ, ಚಿಂತೆ ಇಲ್ಲ. ಇಲ್ಲಿಗೆ ಫೋನ್ ಮಾಡೋದು, ಅನಿಕೇತ್‌ನ ಮೀಟ್ ಮಾಡೋದು ಅಂಥದೇನ್ಬೇಡ. ಅವ್ರು ನಿಮ್ಮೊಂದಿಗೆ ಮಾತಾಡ್ತಾ ಇದ್ದಿದ್ನ ಪ್ಯಾರಲಲ್ ಫೋನ್‌ನಲ್ಲಿ ಕೇಳ್ಸಿಕೊಂಡೇ" ತಟ್ಟನೆ ಫೋನ್ ಕುಕ್ಕಿದಾಗ ಬೆವತು ಹೋಗಿದ್ದಳು ಸಖಿ, ದಬಾಯಿಸಿದ ರೀತಿಗೆ.

ಫೋನ್ ಹುಕ್ ಮೇಲಿಟ್ಟು ಮಂಚದ ಮೇಲೆ ಬಂದು ಮಲಗಿದಳು. ವಿಚಿತ್ರ ಮನಸ್ಥಿತಿಯ ಜನರ ನಡುವಿನ ಬದುಕು ಅನಿಕೇತ್‌ದು ಎಂದುಕೊಂಡಳು.

ಬಂದಿದ್ದು ಒಂಟಿಯಾಗಿ, ಈಗ ಒಬ್ಬಳೇ ಎದುರಾಗುವ ಸಮಸ್ಯೆಗಳನ್ನು ಎದುರಿಸಲು ನಿಶ್ಚಯಿಸಿದಳು. ಇಡೀ ರಾತ್ರಿ ಅವಳು ಯೋಚಿಸಿದ್ದು ಸಾವಿತ್ರಿಬಾಯಿಯವರ ವ್ಯಕ್ತಿತ್ವದ ಬಗ್ಗೆಯೇ.

ಬೆಳಿಗ್ಗೆ ಸ್ನಾನ ಮುಗಿಸುವ ವೇಳೆಗೆ ಫೋನ್ ಸದ್ದಾಯಿತು "ಹಲೋ ಮೇಡಮ್, ಈಗ ಎಂಟು ಇಪ್ಪತ್ತೈದು. ಈಗ ಕಾರು ಹೊರಟಿದೆ, ಒಂಬತ್ತರ ಸಮಯಕ್ಕೆ ಅಲ್ಲಿರುತ್ತೆ. ನೀವು ರೆಡಿಯಾಗಿದ್ರೆ ಸಾಕು" ಫೋನ್ ಕಟ್ ಆಯಿತು. ಯಾರದೆಂದು ಯೋಚಿಸಬೇಕಿರಲಿಲ್ಲ.

ಸಿದ್ಧವಾಗಿ ಕೆಳಗೆ ಬರುವ ಮುನ್ನ ನವನೀತ್ ಕೊಟ್ಟ ನಂಬರ್‌ಗೆ ರಿಂಗ್ ಮಾಡಿದಳು. ರಿಂಗಾದರೂ ಎತ್ತುವವರಿರಲಿಲ್ಲ. ಸುಮ್ಮನೆ ಇಟ್ಟು ಲಿಫ್ಟ್‌ಗಾಗಿ ಒಂದೆರಡು ನಿಮಿಷಗಳು ಕಾದಿದ್ದಳಷ್ಟೆ.

ಇವಳು ರಿಸೆಪ್ಷನಿಸ್ಟ್ ಕೌಂಟರ್ ದಾಟಿ ಹೊರಗೆ ಬಂದವಳು ವಾಚ್ ಕಡೆ ನೋಡಿದಳು, ಒಂಬತ್ತು ಗಂಟೆ ಎರಡು ನಿಮಿಷ ಇಪ್ಪತ್ತಾರು ಸೆಕೆಂಡುಗಳು. ಕ್ಲಿಂಟನ್ ಮಗಳ ಬರ್ತ್‌ಡೇಗೆ ಬಹುಮಾನಿಸಿ ಕಳುಹಿಸಿಕೊಟ್ಟಿದ್ದು. 'ಡ್ಯಾಡಿ' ತುಟಿಗೊತ್ತಿಕೊಂಡಳು ವಾಚ್‌ನ.

ಆಗ ತಾನೇ ಪಾರ್ಕ್ ಆಗುತ್ತಿದ್ದ ಕಾರು ಬಾಲ್ಕನಿಗೆ ಬಂದು ನಿಂತಿತು. ಇಳಿದ ಸಾವಿತ್ರಿದೇವಿಯ ಪಿ.ಎ. ಪರಿಚಯಿಸಿಕೊಂಡು ವಿನಯದಿಂದ ಡೋರ್ ತೆಗೆದು ಗೌರವ ಸೂಚಿಸಿದ. 'ಅಲರ್ಟ್' ಆಗಿಯೇ ಮುಂದಿನ ಪರಿಸ್ಥಿತಿ ಎದುರಿಸಲು ಸಿದ್ಧನಿದ್ದನು.

ಅದೇ ಬಂಗ್ಲೆ, ಅದೇ ಜನ ಎಲ್ಲಾ ವಿಚಿತ್ರವಾಗಿ ಕಂಡಿತು. ನವನೀತ್, ಅನಿಕೇತನ್‌ಗೆ ಗೊತ್ತಿರುವ ವಿಷಯಗಳು ಇವರುಗಳಿಗೆ ಗೊತ್ತಿಲ್ಲವಾ?

ಇಂಥ ಹೆಣ್ಣಿನ ಪ್ರಭಾವದ ಸಹಾಯ, ಸಹಕಾರ ಪಡೆಯಲು ಏಕೆ ಬರುತ್ತಾರೆ ?

ಮುಂದಿನ ಸಿಟ್ಟಿಂಗ್ ರೂಮಿನಲ್ಲಿ ಕೂಡಿಸಿ ವಿಷಯ ಮುಟ್ಟಿಸಲು ಹೋದವನು ಬರುವ ಮುನ್ನ ಕಾಫೀ, ನಿಂಬೆರಸ, ಕಿತ್ತಲೆಹಣ್ಣಿನ ರಸ ಸರಬರಾಜಾಗಿತ್ತು.

"ಏನ್ಬೇಕಾದ್ರೂ ತಗೊಳ್ಳಿ, ಮೇಡಮ್.... ಈಗ್ಬಂದ್ಬಿಡ್ತಾರೆ" ಹೋದ. ಈ ಸಾವಿತ್ರಿಬಾಯಿ ತನ್ನ ತಾಯಿ ತಂದೆಯರನ್ನು ತೋರಿಸುವಂತಿದ್ದರೆ ತುಳಜಾಬಾಯಿಯೇ ಅವರುಗಳು ಸತ್ತಿದ್ದಾರೆಂದು ತಿಳಿಸಿದ ಮೇಲೆ ಇವಳೆಲ್ಲಿ ತೋರಿಸಿಯಾಳು ? ಭೂಮಿಗಿಂತ ನಕ್ಷತ್ರಗಳ ಮಧ್ಯೆ ಅರಸಬೇಕು ? ಆ ಕೆಲಸ ಇಲ್ಲಿಂದ ಸಾಗದು. ಅಲ್ಲಿಗೆ ಪ್ರಯಾಣ ಬೆಳೆಸಬೇಕು ? ಆ ಪ್ರಯಾಣಕ್ಕೆ ಇರುವುದೊಂದೇ ದಾರಿ.

ಬಾಗಿಲು ತೆರೆದ ಕೂಡಲೇ ನವಿರಾಗಿ ಹರಿದು ಬಂತು ಮಲ್ಲಿಗೆಯ ಪರಿಮಳ. ಅದೇ ಸಾವಿತ್ರಿಬಾಯಿಯ ಪ್ರವೇಶವಾಗಿತ್ತು ನಗುಮುಖದೊಂದಿಗೆ. ಎದ್ದು 'ವಿಶ್' ಮಾಡಲು ಕೂಡ ತೋರಲಿಲ್ಲ ಆಕ್ಷಣ. ಆದರೆ ಅದನ್ನು ಸಮರ್ಥಿಸಿಕೊಳ್ಳಬೇಕಿತ್ತು.

"ಮೇಡಮ್ ಯಾವಾಗ್ಬರ್ತಾರೆ ?" ಕೇಳಿದಳು ಮುಗ್ಧವಾಗಿ. ಸ್ವಲ್ಪ ಅವಳ ಅವಿಧೇಯತೆಯಿಂದ ದುಸದುಸ ಎನ್ನುತ್ತಿದ್ದ ಸಾವಿತ್ರಿಬಾಯಿ ಮನ ಸ್ವಲ್ಪ ತಣ್ಣಗಾಯಿತು. "ನಾನೇ ಸಾವಿತ್ರಿಬಾಯಿ" ಪರಿಚಯ ಹೇಳಿಕೊಂಡಾಗ ತಟ್ಟನೇ ಎದ್ದು ಸಂಕೋಚ ತೋರಿ "ಸಾರಿ ಮೇಡಮ್, ಎಕ್ಸ್‌ಟ್ರೀಮ್ಲಿ ಸಾರಿ. ಮೊನ್ನೆ ಸ್ವಲ್ಪ ಬೇರೆ ರೀತಿಯಾಗಿ ಕಂಡ್ರಿ. ನಾನು ನಿಮ್ಮ ಸಿಸ್ಟರೋ, ಅಸಿಸ್ಟೆಂಟೋ ಇರ್ಬೇಕೂಂತ ಅಂದ್ಕೊಂಡೇ. ಐಯಾಮ್ ಸಾರಿ" ಇನ್ನೊಮ್ಮೆ 'ಸಾರಿ' ಹೇಳಿ ಆಕೆಯ ಕೋಪದಿಂದ ತಪ್ಪಿಸಿಕೊಂಡಳು. ಪೂರ್ತಿ ಪ್ರಸನ್ನವಾಗಿಬಿಟ್ಟಳು. ಅವಳ ಅಮೆರಿಕನ್ ಶೈಲಿಯ ಇಂಗ್ಲೀಷ್ ಕನ್ನಡದ ಉಚ್ಚಾರಣೆಗೆ ಬೇಸ್ತು ಬಿದ್ದಿದ್ದು ಇವಳಿಗೆ ಅನುಕೂಲವಾಯಿತು. ಯಾವುದೋ ಕಾಡಿದ ಅನುಮಾನ ಅರ್ಥ ಪರಿಹಾರವಾಯಿತು.

ಇವಳು ಕೇಳಿದ ನಾಲ್ಕು ತೀಕ್ಷ್ಣ ಪ್ರಶ್ನೆಗಳಿಗೆ ಸ್ವಲ್ಪ ದೀರ್ಘ ಉತ್ತರವಾದರೂ ಪ್ರಾರಂಭದ ಅನಾಥಾಶ್ರಮದ ವಿಷಯ ಬಂದಾಗ ಕೂಡ ಉದ್ವಿಗ್ನಗೊಳ್ಳಲಿಲ್ಲ.

"ಯಾರ್ಗೂ ಸೇವಾ ಮನೋಭಾವವಿಲ್ಲ. ನಾನು ಆಗ ಒಬ್ಬ ಮುಗ್ಧ

ಹೆಣ್ಣು, ಬರೀ ಆದರ್ಶ ತಲೆಯಲ್ಲಿ ತುಂಬಿಕೊಂಡಳು. ನೈಟಿಂಗ್‌ಗೇಲ್, ಮದರ್ ತೆರೆಸಾ ಆದರ್ಶ ನನ್ನದಾಗಿತ್ತು" ಇಷ್ಟೇ ಉಸುರಿದ್ದು. ಮತ್ತೆ ಅನಾಥಾಶ್ರಮಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳಿಗೂ 'ಗೊತ್ತಿಲ್ಲ, ನೆನಪಿಲ್ಲ' ಇಷ್ಟರಲ್ಲಿಯೇ ಮುಗಿಯಿತು. ಪ್ರಯೋಜನವಿಲ್ಲವೆಂದು ತಿಳಿದ ಮೇಲೆ ಹೆಚ್ಚು ಕೆದಕಲು ಹೋಗಲಿಲ್ಲ. ಅವಳೇ ತನ್ನ ಪುಟ್ಟ ಕ್ಯಾಮೆರಾದಿಂದ ಆಕೆಯ ಹಲವಾರು ಭಂಗಿಯ ಫೋಟೋಗಳನ್ನು ತೆಗೆದುಕೊಂಡು ಸಂದರ್ಶನಕ್ಕೆ ಮುಕ್ತಾಯ ಹಾಡಿದಳು.

ಒಂದು ಅಪಾಯದಿಂದ ಕೂಡ ಪಾರಾದಳು ಸಖೀ! ಜೀವನದಲ್ಲಿ ಬಹಳ ದಿಟ್ಟವಾಗಿ ರೋಮಾಂಚಕಾರಿಯಾಗಿ ಮೇಲೇರಿದ್ದಳು.

ಹೊರಗೆ ಬಂದವಳು ಬಂಗ್ಲೆಯ ಕಡೆ ತಿರುಗಿ ನೋಡಿದಳು. ಎಷ್ಟೋ ಜನರನ್ನು ಏರಲು ಮೆಟ್ಟಿಲುಗಳನ್ನಾಗಿ ಮಾಡಿಕೊಂಡ ಚಾಲಾಕಿ ಹೆಣ್ಣು ಸಾವಿತ್ರಿಬಾಯಿ ಸಮಾಜ ಸೇವಕಿಯಾಗಿ ಕಾಣಲಿಲ್ಲ.

ಅಂತು ಇಲ್ಲಿಗೆ ಒಂದು ಬಾಗಿಲು ಪೂರ್ತಿ ಮುಚ್ಚಿಹೋಗಿತ್ತು. ತೊಂಬತ್ತೆರಡು ಕೋಟಿ ಚಿಲ್ಲರೆ ಜನಸಂಖ್ಯೆಯಲ್ಲಿ ಒಬ್ಬ ತುಳಜಾಬಾಯಿಯನ್ನು ಕಂಡುಹಿಡಿಯುವುದು ಕಷ್ಟ. ಯಾಕೋ ಆಕೆ ಬದುಕಿರುವ ಬಗ್ಗೆಯೇ ಅನುಮಾನ ವ್ಯಕ್ತಪಡಿಸಿದ್ದ ಅನಿಕೇತ್.

ನಿರಾಶೆಯ ಮೋಡಗಳು ಎಲ್ಲೆಡೆ ಆವರಿಸಿ ಅವಳನ್ನು ನಿಧಾನವಾಗಿ ಅಪ್ಪಿಕೊಂಡವು.

ಎರಡು ದಿನ ಹೋಟೆಲ್‌ನಿಂದ ಕಾಲು ಹೊರಗೆ ಇಡಲಿಲ್ಲ. ಅವಳಲ್ಲಿನ ಆಸೆ ನಂದಿಹೋದರೂ ವಿಶಾಲ ಭಾರತದಲ್ಲಿ ಅವಳಿಗೆ ತಿಳಿದ ಗಣಪತಿ, ರಾಮಾಚಾರಿ, ನವನೀತ್, ಅನಿಕೇತ್, ಲಕ್ಷ್ಮಿ ಅಮ್ಮಿನಾಭಿ ಕುಟುಂಬ ಈಗ ಸಾವಿತ್ರಿಬಾಯಿ ಎಲ್ಲಾ ಇದ್ದರು. ಅವರನ್ನು ಬಂಧುಗಳು ಆತ್ಮೀಯರು ಅಂದುಕೊಂಡರೇ ತಪ್ಪಿಲ್ಲ. ಅವರೇ ತನ್ನವರು.

ನವನೀತ್ ರಿಸೆಪ್ಷನಿಸ್ಟ್ ಕೌಂಟರ್‌ನಿಂದ ಫೋನ್ ಮಾಡಿದಾಗ "ರೂಮಿಗೆ ಬನ್ನಿ" ಎಂದಳು. ಟೆಡ್ಡಿಗೆ ಪತ್ರ ಬರೆಯುತ್ತ, ತಾನು ಹಿಂದಿರುಗುವ ದಿನವನ್ನು ನಮೂದಿಸಿದ್ದಳು.

ಕಾಲಿಂಗ್ ಬೆಲ್ ಸದ್ದಾದ್ದಾಗ ಹೋಗಿ ಬಾಗಿಲು ತೆರೆದಳು "ಕಮೀನ್, ನವನೀತ್, ಹೇಗಿದ್ದಾರೆ ನಿಮ್ಮ ಮನೆಯಲ್ಲಿ?" ವಿಚಾರಿಸಿದಳು.

"ಓಕೆ ಮೇಡಮ್" ಎಂದ ಕೈಗಳನ್ನು ಹಿಂದಕ್ಕೆ ಸೇರಿಸುತ್ತ. "ಕೂತ್ಕೋ.... ಕೂತ್ಕೋ, ಯಾಕೆ ಇಷ್ಟೊಂದು ಸಂಕೋಚ ಬಲವಂತಪಡಿಸಿದನಂತರವೇ ಕೂತಿದ್ದು.

ಕಾಫೀ ತರಿಸಿಕೊಟ್ಟ ನಂತರ ಹೇಳಿದಳು "ನಂಗೆ ನಿಮ್ಮಿಂದ ತುಂಬ ಸಹಾಯನೇ ಆಯ್ತು. ನಾನು ನ್ಯೂಯಾರ್ಕ್‌ಗೆ ವಾಪಸ್ಸು ಹೋಗ್ತಾ ಇದ್ದೀನಿ."

ಸ್ತಬ್ಧವಾಗಿಬಿಟ್ಟ ನವನೀತ್. ಎಂತಹುದೋ ನೂರಾರು ಪ್ರಯಾಣಿಕರನ್ನು ತನ್ನ ಟ್ಯಾಕ್ಸಿಯಲ್ಲಿ ಕರೆದೊಯ್ದಿದ್ದ. ಅವರಲ್ಲಿ ಕೆಲವರೇ ಕೆಲವರು ಜ್ಞಾಪಕದಲ್ಲಿ ಉಳಿದವರು, ಕೆಲವರು ತಮ್ಮ ವಿಶಿಷ್ಟ ಒಳ್ಳೆಯತನದಿಂದ ಕೆಲವರು ತೀರಾ ಕೆಟ್ಟವರಾಗಿ ಆದರೆ ಅವರಿಬ್ಬರಿಗೂ ಮೀರಿ ನಿಂತಿದ್ದಳು ಸಖೀ ತನ್ನ ಸವಿನಯ ಸೌಜನ್ಯಪೂರಿತ ಸ್ವಭಾವದಿಂದ.

"ಇನ್ನ ಒಂದೆರಡು ತಿಂಗ್ಳು ಉಳಿಯಬಹುದಿತ್ತು. ಮೇಡಮ್, ಕರ್ನಾಟಕದ ಸುಂದರ ಪ್ರದೇಶಗಳನ್ನ ನಾನೇ ತೋರಿಸ್ತ ಇದ್ದೆ" ಮನದ ಮೂಲೆಯ ಆಸೆ ಅವನಿಂದ ಆ ಬೇಡಿಕೆಯನ್ನು ಮಂಡಿಸಿತು.

ಮೊಗ್ಗಿನಂತೆ ಕಂಡ ಅವಳ ಮುಖವೇನು ಅರಳಲಿಲ್ಲ. ನಿರಾಶೆಯ ದಟ್ಟವಾದ ಹೊಗೆಯಾವರಿಸಿತು. 'ಇಲ್ಲ'ವೆಂದು ತಲೆಯಾಡಿಸಿದಳು.

"ನನ್ನ ರಜ ಮುಗಿತಾ ಬಂದಿದೆ. ನನ್ತಂದೆ ಆರೋಗ್ಯ ಕೂಡ ಅಷ್ಟೊಂದು ಚೆನ್ನಾಗಿಲ್ಲ. ಈ ಸ್ಥಿತಿಯಲ್ಲಿ ನಂಗೇನು ನೋಡೋ ಮನಸ್ಸಿಲ್ಲ" ತಳ್ಳಿ ಹಾಕಿದಳು ನಯವಾಗಿ. ಅವಳ ಜೀವನದ ಮಹತ್ವದ ಆಕಾಂಕ್ಷೆಯೇ ಕೈಗೂಡದಿದ್ದಾಗ ಮತ್ತೇನು ನೋಡಬೇಕೆನಿಸಲಿಲ್ಲ ಅವಳಿಗೆ. ಈಗ ಆದಷ್ಟು ಬೇಗ ಹಿಂದಕ್ಕೆ ಮರಳುವ ಇಚ್ಛೆ ಮಾತ್ರ.

ನವನೀತ್ ಹೃದಯ ಒದ್ದೆಯಾಯಿತು. ಪರ್ಸ್ ತೆಗೆದು "ಅಂದು ನಿಮ್ಮ ಫ್ರೆಂಡ್ ನನ್ನಿಂದ ಬಾಡ್ಗೆ ಪಡೆದಿಲ್ಲ. ನಿಮ್ದು ಒಂದಷ್ಟು ಬಾಕಿ ಇದೆಯೆನಿಸುತ್ತೆ." ನೋಟುಗಳನ್ನು ಹೊರಗೆಳೆದಾಗ ಮೇಲೆತ್ತ ನವನೀತ್ "ಇನ್ನು ಒಂದ್ವಾರ ಅಂದ್ರೆ ಏಳು ದಿನ ಇರ್ತೀರಲ್ಲ, ಎಂಟನೆ ದಿನ ತಾನೇ ಪ್ರಯಾಣ? ನಾನೇ ನಿಮ್ಮನ್ನ ಏರ್‌ಪೋರ್ಟ್‌ಗೆ ಕರ್ಕೊಂಡ್ಹೋಗ್ತೀನಿ. ಅಂದ್ಕೊಳಿ. ಅದ್ಕೇ ಮೊದ್ಲು ಒಂದ್ಸಲ ನಮ್ಮ ಮನೆಗೆ ಬಂದ್ರೆ ದೊಡ್ಡ

ಉಪಕಾರ.'' ಕೈ ಜೋಡಿಸಿದಾಗ ಅವನ ಗಂಟಲುಬ್ಬಿತು. ಅವ್ಯಕ್ತವಾದ ಭಾವ ಸಂಘರ್ಷ.

``ಖಂಡಿತ ಬರ್ತೀನಿ, ನಂಗೂ ಅವ್ರನ್ನೆಲ್ಲ ನೋಡ್ಬೇಕೂಂತ ಅನ್ನಿಸಿದೆ. ಮತ್ತೆಂದೂ ಭಾರತಕ್ಕೆ ಬರೋ ಯೋಚ್ನೇ ಇಲ್ಲ'' ಪರ್ಸ್ ಮಂಚದ ಪಕ್ಕದ ಡ್ರೆಸ್ಸಿಂಗ್ ಟೇಬಲ್ ಮೇಲೆಸೆದು ಎದ್ದಳು.

ತುಟಿ ತೆರೆಯದೆ ಬಾಗಿಲತ್ತ ಹೊರಟ ನವನೀತ್‌ನ ತಡೆದಳು ``ನೀನು ಕೆಳಗಡೆ ವೆಯಿಟ್ ಮಾಡ್ತಾ ಇರು. ಒಂದಿಷ್ಟು ಎಸ್ಟೇಟ್‌ಗೆ ಹೋಗ್ಬರ್ಬೇಕು'' ಎಂದಾಗ ಸಮ್ಮತಿ ಸೂಚಿಸಿ ಹೋದ.

ಮಾಲತಿ ಬೇಸರದ ಮಾತಾಡಿದ ನಂತರ ಅಲ್ಲಿಗೆ ಫೋನ್ ಮಾಡಿರಲಿಲ್ಲ. ಇಷ್ಟೊಂದು ಸಹಾಯ, ಸಹಕಾರ ನೀಡಿದ ಅನಿಕೇತ್‌ಗೆ, 'ಥ್ಯಾಂಕ್ಸ್' ಹೇಳುವ ಉದ್ದೇಶ ಮಾತ್ರ ಅವಳದಷ್ಟೇ. ಯಾಕೋ ಇನ್ನೊಮ್ಮೆ ಮಾಲತಿ, ಅನಿಕೇತ್ ತಾಯಿನ ನೋಡಬೇಕೆನಿಸಿತ್ತು.

ತೆಳು ಹಳದಿ ಬಣ್ಣದ ಸೀರೆಯ ಮೇಲೆ ಅಲ್ಲಲ್ಲಿ ಹಕ್ಕಿಗಳಂತೆ ಗೋಚರಿಸುತ್ತಿದ್ದ ನೀಲಿ, ಗುಲಾಬಿ ಬಣ್ಣದ ಹೂಗಳ ಸೀರೆಯುಟ್ಟು, ಹಣೆಗೆ ಒಂದು ಸ್ಟಿಕ್ಕರ್ ಹಚ್ಚಿದಳು. ಭಾಷೆ, ರೀತಿ, ನೀತಿಗೆ ಅಮೇರಿಕನ್ ಟಚ್ ಇದ್ದರೂ ಅವಳು ಅಪ್ಪಟ ಭಾರತೀಯ ಹೆಣ್ಣು.

ಎಸ್ಟೇಟ್‌ಗೆ ಹೋದಾಗ ಆಗ ತಾನೇ ಜೀಪಿನಿಂದ ಇಳಿಯುತ್ತಿದ್ದ ಅನಿಕೇತ್ ಕಣ್ಣರಳಿಸಿದ. ಉರಿಯುತ್ತಿದ್ದ ಕಣ್ಣುಗಳಿಗೆ ಶೀತಲ ಸ್ಪರ್ಶ, ಆಕಾಲದಲ್ಲಿ ಮಳೆಯ ಧಾರೆಯಂಥ ಅದ್ಭುತ ಅನುಭವ. ಆದರೆ ತನ್ನ ಭಾವನೆಗಳನ್ನು ಹತ್ತಿಕ್ಕಿಕೊಂಡು ತಣ್ಣನೆಯ ಮುಗುಳ್ನಗೆಯಲ್ಲಿ ಅದ್ದಿದಂಥ ನೋಟ ಬೀರಿದ.

``ವೆಲ್‌ಕಮ್, ನಿಮ್ಮಂಥವ್ರ ಸ್ವಾಗತಕ್ಕೆ ನಮ್ಮ ಎಸ್ಟೇಟ್ ಹರ್ಷಿಸುತ್ತೆ'' ಎಂದವನು ಇನ್ನೊಂದು ಕಡೆಯಿಂದ ಇಳಿದು ಬಂದ ಮಾವನಿಗೆ ಪರಿಚಯಿಸಿದ ಅವಳನ್ನು ``ರೂತ್ ಕ್ಲಿಂಟನ್ ಅಂತ, ನ್ಯೂಯಾರ್ಕ್‌ನಲ್ಲಿ ಇವ್ರ ತಂದೆ ಪ್ರೊಫೆಸರ್, ಅಪ್ಪನಿಗೆ ಸ್ನೇಹಿತರಾಗಿದವ್ರ ಮಗ್ಳು. ಭಾರತದ ಅನಾಥಾಶ್ರಮಗಳ ಬಗ್ಗೆ ಲೇಖನ ಬರ್ಯೋಕೋಸ್ಕರ ಇಲ್ಲಿಗೆ ಬಂದಿರೋದು'' ಎಲ್ಲಾ ಹೇಳಿ ಒಂದೇ ಸಲಕ್ಕೆ ಪರಿಚಯ ಮಾಡಿಕೊಟ್ಟ. ಮಾವನ ವಕೀಲಿ ಮೈಂಡ್ ವಿಪರೀತ ಬುದ್ಧಿಯಲ್ಲಿ ನೂರು ಪ್ರಶ್ನೆಗಳು ಹುಟ್ಟಬಾರದೆಂದು ಅವನ ಅಭಿಮತ. ತಲೆದೂಗಿ ಒಂದು ತರಹ

ನೋಡಿದರೂ ನಾಲ್ಕು ಹೆಜ್ಜೆ ಮುಂದೆ ಬಂದು ನಸುನಗೆ ಬೀರಿದರು. "ಏನು ತೊಂದರೆ ಆಗಲಿಲ್ವಾ? ಏಷ್ಟೋ ಬ್ಯೂಟಿಫುಲ್ ಸಬ್ಜೆಕ್ಟ್‌ಗಳು ಇರೋವಾಗ ಈ ಸಬ್ಜೆಕ್ಟ್ ಯಾಕೆ ಆರ್ಸಿಕೊಂಡ್ರಿ?" ತೀಕ್ಷ್ಣ ದೃಷ್ಟಿ ಹರಿಸಿದರು.

"ಕೆಲವು ಪ್ರಶ್ನೆಗಳಿಗೆ ಯಾವಾಗ್ಲೂ ಉತ್ತರ ಸಿಗೋಲ್ಲ" ಎಂದಳು ಇಂಗ್ಲಿಷಿನಲ್ಲಿ "ಆಫ್‌ಕೋರ್ಸ್, ಎಲ್ಲಿಯವರ್ಗೂ ಬಂತು ಆರ್ಟಿಕಲ್?" ಎಂದಾಗ ನಿಟ್ಟುಸಿರು ಅವಳನ್ನು ವ್ಯಾಪಿಸಿದಂತಾಯಿತು. ವಿಷಯ ಸುಳ್ಳು ಇರಬಹುದು. ತನ್ನ ಅನ್ವೇಷಣೆಗೆ ಫಲ ಸಿಕ್ಕೀತೇ? ಒಂದು ರೀತಿಯಲ್ಲಿ ಮುಕ್ತಾಯವಾಯ್ತು ಅಂತ್ಲೇ ಲೆಕ್ಕ. ನ್ಯೂಯಾರ್ಕ್‌ಗೆ ವಾಪಸ್ಸು ಆಗ್ತಾ ಇದ್ದೀನಿ. ಇಲ್ಲೊಂದು ಸ್ವಲ್ಪ ಪರ್ಚೇಸಿಂಗ್ ಮುಗ್ಸಿ" ದೃಢವಾಗಿತ್ತು ಅವಳ ಸ್ವರ.

ಕುಚೇಲರಾಯರಿಗೆ ಹೋದ ಉಸಿರು ಬಂದಂತಾಯಿತು. ಮಗಳು ದಿನ ಫೋನ್ ಮಾಡಿ ಮಾಡಿ ಹೆದರಿಸಿಬಿಟ್ಟಿದ್ದಳು ಅವರನ್ನು. ಗಂಡಾಂತರದಿಂದ ಪಾರಾದಂತೆ ಹರ್ಷಿಸಿದ್ದರು.

"ಕಮಿನ್..... ಕಮಿನ್..." ಆಹ್ವಾನಿಸಿ ಒಳಗೆ ಕರೆದೊಯ್ದರು.

ಚಂಪಕವಲ್ಲಿ ಏನೋ ಗೊಣಗುತ್ತ ಹೂ ಕಟ್ಟುತ್ತಿದ್ದರು. ಕರಗದಷ್ಟು ರಾಶಿಯ ಕನಕಾಂಬರ ಹೂಗಳು. ಅನಿಕೇತ್ ಕಡೆ ನೋಡಿದಳು. ಅವನು ಮೇಲಕ್ಕೆ ನೋಟವೆತ್ತಿ ತೋರಿಸಿದ.

"ಚೆನ್ನಾಗಿದ್ದೀರಾ, ಅಮ್ಮ?" ಕೇಳಿದಳು ಅವರ ಎದುರು ಕೂತು. ನೋಟವೆತ್ತಿದವರು ದುರುದುರು ಅವಳತ್ತ ನೋಡಿದವರು "ನಿಮಗ್ಯಾಕೆ ಅನಾಥರ ಬಗ್ಗೆ ಕರುಣೆ? ಅವು ಪಾಪದ ಕೂಸುಗಳು. ಅದ್ರಿಂದ ಸಮಾಜಕ್ಕೇನು ಒಳ್ಳೆದಲ್ಲ. ಆ ಸಂತತಿನೇ ಬೆಳೀದೆ ನಿರ್ನಾಮವಾಗ್ಬೇಕು?" ಎಂದವರು ಎದ್ದುಹೋದರು. ಎಷ್ಟು ಕಟುವಾಗಿ ಅನ್ನಬಹುದೋ ಅಷ್ಟು ಕಟುವಾಗಿ ಅಂದು ದಿಗ್ಭ್ರಾಂತಳನ್ನಾಗಿ ಮಾಡಿದ್ದರು ಅವಳನ್ನು. ಕೊಚ್ಚೆಯ ರಾಡಿ ತಿಪ್ಪೆಗೆಸೆದಂತಾಗಿತ್ತು.

ಅನಿಕೇತ್ ಹಲ್ಲುಗಳನ್ನು ಕಚ್ಚಿಡಿದು ಕುಚೇಲರ ಕಡೆ ನೋಡಿದ. ಅವರು ಪಶ್ಚಾತ್ತಾಪದ ಮುಖ ಮಾಡಿ "ಸಾರಿ, ವೆರಿ ಸಾರಿ, ಎಕ್ಸ್‌ಟ್ರೀಮ್ಲಿ ಸಾರಿ... ಆಕೆ ಮೈಂಡ್ ನಾರ್ಮಲ್ ಆಗಿಲ್ಲ. ಗಂಡ ದೇಶಾಂತರ ಹೋದವರ ಜೊತೆಗೆ ಕೋಟ್ಯಾಂತರ ಆಸ್ತಿ ಹೋಯ್ತು, ಸಮಾಜದಲ್ಲಿ ಕೆಟ್ಟ ಹೆಸರು. ಇದೆಲ್ಲ ಆಕೆಯನ್ನು ಈ ಸ್ಥಿತಿಗೆ ದೂಡಿದೆಯಷ್ಟೆ. ನೀವೇನು

ಬೇಸರಪಟ್ಕೋಬೇಡಿ'' ಸಾಂತ್ವನಿಸಿದರು. ಆದರೂ ಅವಳಿಗೆ ಕೂಡಲು ಇಷ್ಟವಾಗಲಿಲ್ಲ. ಎದ್ದೇಬಿಟ್ಟಳು "ಏನು ಪರ್ವಾಗಿಲ್ಲ, ಹೋಗೋ ವಿಷ್ಯ ಹೇಳಿ ಹೋಗೋ ಸಲುವಾಗಿಯೇ ಬಂದಿದ್ದು. ನಮಸ್ಕಾರ'' ಕೈ ಜೋಡಿಸಿಬಿಟ್ಟಳು.

ಆಮೇಲಿನ ಅವರ ಅನುನಯ ಮಾಲತಿಯ ಒತ್ತಾಯ ಅವಳನ್ನು ನಿಲ್ಲಿಸಲು ಸಮರ್ಥವಾಗಲಿಲ್ಲ. ಅನಿಕೇತ್ ಒಂದು ಮಾತು ಕೂಡ ಆಡಲಿಲ್ಲ. ತಾಯಿಯ ನಡತೆ, ಅರ್ಥಹೀನ ಮಾತುಗಳು ನೋಯಿಸುತ್ತಿತ್ತು ಸದಾ.

ಟ್ಯಾಕ್ಸಿ ಎಸ್ಟೇಟ್ ಬಿಟ್ಟು ಹೊರಟಾಗ ಕೈ ಬೀಸಿ ಜೀಪು ಹತ್ತಿದ. ಅದು ಎಸ್ಟೇಟ್‌ನ ಇನ್ನೊಂದು ಭಾಗಕ್ಕೆ ಹೋಗಿ ಹಿಂಬಾಗಿಲಿನಿಂದ ಹೊರಬಿತ್ತು. ಹಿಂಬದಿಯ ದಾರಿ ಸ್ವಲ್ಪ ಸುತ್ತು ಬಳಸು. ಆದರೂ ಟ್ಯಾಕ್ಸಿಯನ್ನು ಸುಲಭವಾಗಿ ಹಿಡಿಯಬಹುದಿತ್ತು. ಆದರೆ ಅಂತರವಿಟ್ಟು ಹಿಂಬಾಲಿಸಿದ ಹೋಟೆಲ್‌ವರೆಗೂ.

ಲಿಫ್ಟ್ ಹತ್ತುವಾಗಲೇ ತಡೆದ "ಸಾರಿ, ಪ್ಲೀಸ್ ಈ ಮಧ್ಯಾಹ್ನದ ಲಂಚ್ ನನ್ನೊಂದಿಗೆ, ಒಂದಿಷ್ಟು ಮಾತಾಡೋದಿದೆ'' ಎಂದ. ಏನೋ ಹೇಳಬೇಕೆಂದು ನೋಟವೆತ್ತಿದವಳು ಅವನ ಆಯಾಸದ ಮುಖ, ಕಣ್ಣುಗಳಲ್ಲಿನ ವ್ಯಥೆಯುನ್ನು ಕಂಡು ಸುಮ್ಮನಾದಳು.

ವಾಚ್ ಕಡೆ ನೋಡಿದ ಸಖೀ ನೀರಾಳ ನಗೆ ಬೀರಿದಳು "ಇನ್ನು ಲಂಚ್‌ಗೆ ಸಮಯವಿದೆಯಲ್ಲ, ಅವಗರ್ೂ ಎಲ್ಲಿ ಸುತ್ತಾಡೋದು?'' ಹಸನ್ಮುಖಿತೆಯ ಪ್ರಶ್ನೆಗೆ ಕಣ್ಣಲ್ಲಿಯೇ ಸಮಾಧಾನ ನೀಡುವಂತೆ, "ಆ ವಗರ್ೂ ಹೇಳೋದಿದೆ. ಪ್ಲೀಸ್ ಬಾ ಸಖೀ'' ಎಂದ. ಆ ದನಿಯಲ್ಲಿ ಹರಿದು ಬಂದ ಜೇನಿಗೆ ಮೆತ್ತಗಾದಳು.

ಕರೆದೊಯ್ದಿದ್ದು ತೋಟಕ್ಕೆ. ಒಮ್ಮೆ ಅವನ ಕುಟುಂಬವನ್ನು ಅರಸಿಕೊಂಡು ಹೋಗಿದ್ದು ತೋಟಕ್ಕೆ. ಅಲ್ಲಲ್ಲಿ ಕೆಲಸ ಮಾಡುತ್ತಿದ್ದ ಕೂಲಿಗಳು ನಮಸ್ಕಾರ ಮಾಡಿದವರು ತಮ್ಮ ಕೆಲಸಗಳಲ್ಲಿ ತೊಡಗಿದರು, ಭಯಭಕ್ತಿಗಳನ್ನು ನಟಿಸುತ್ತ.

ಜೇಬಿನಲ್ಲಿದ್ದ ಕೀ ಬಂಚ್‌ನಿಂದ ಆಫೀಸ್‌ರೂಂ ಓಪನ್ ಮಾಡಿದ. ಶುಭ್ರವಾಗಿತ್ತು, ಸ್ವಚ್ಛವಾಗಿತ್ತು. ಛೇರ್ ಮೇಲಿದ್ದ ಒಂದೆರಡು ಫೈಲುಗಳನ್ನು ತೆಗೆದುಕೊಡುವಂತೆ ಸನ್ನೆ ಮಾಡಿದ ನಸುನಗೆಯಿಂದ.

ನೋಟವರಿಸಿದಳು ಶೀಬೆ, ಸಪೋಟಾಯಿಂದ ಹಿಡಿದು ವಿವಿಧ ಜಾತಿಯ ಹಣ್ಣುಗಳು ಸಿಗುವ ಸಮೃದ್ಧ ತೋಟ. ಲಕ್ಷಗಳ ಬೆಲೆ ಮೀರಿ ಹೋಗುವಂಥದ್ದು. ಮನಕ್ಕೆ ಮುದ ತರುವಂಥ ಬೊಕ್ಕಸಕ್ಕೆ ಹಣ ನೀಡುವಂಥ ಹತ್ತಾರು ಜನರನ್ನು ಪೋಷಿಸುವಂಥ ಸಮೃದ್ಧ ಆಸ್ತಿ.

"ಈ ತೋಟನ ಮಾರಿಬಿಡೋಣಾಂತ ಇದ್ದೀನಿ" ಎಂದ ಅತ್ಯಂತ ನೋವಿನ ದನಿಯಲ್ಲಿ. ಇದು ಅವನಿಗೆ ಬೇಡದ ವಿಷಯ, ಆದರೆ ಮಾರಾಟ ಅನಿವಾರ್ಯ, ಕೆಲವು ನೋವುಗಳಿಂದ ತಪ್ಪಿಸಿಕೊಳ್ಳಲು. ಇವಳೇನು ಮಾತಾಡಲಿಲ್ಲ.

ಕಿಟಕಿಯ ಸರಳುಗಳನ್ನಿಡಿದು ಹೊರ ನೋಡುತ್ತಿದ್ದವನು ಹಿಂದಕ್ಕೆ ಬಂದು ಉದ್ವಿಗ್ನನಾಗಿ ಅವಳ ಎರಡು ಕೈಗಳನ್ನು ಹಿಡಿದುಕೊಂಡ. "ಯಾಕೇಂತ ಕೇಳು ಸಖೀ... ಪ್ಲೀಸ್, ಪ್ರಿಯರಾದವರೊಂದಿಗೆ ಹೇಳ್ಕೊಂಡ್ರೆ ಒಂದಿಷ್ಟು ನೆಮ್ದಿಯಾದ್ರೂ ಸಿಕ್ಕುತ್ತೆ" ಎಂದ. ಅವನ ಕಣ್ಣುಗಳಲ್ಲಿ ಇದ್ದಿದ್ದು ಭಯಂಕರ ನಿಸ್ಸಹಾಯಕತೆ. ಪೂರ್ತಿ ಕರಗಿ ನೆಲದಲ್ಲಿ ಹರಿದುಹೋಯಿತು ಅವನ ಮನಸ್ಥಿತಿ. "ಹೇಳಿ, ಅನಿಕೇತ್...." ಎಂದಳು ಅವನ ಕೈಗಳಲ್ಲಿ ಭರವಸೆ ತುಂಬುವಂತೆ ಹಿಡಿದು.

ಎದುರಿನಲ್ಲಿ ಕೂತ ಅನಿಕೇತ್ "ನನ್ತಂದೆ ಎಲ್ಲೋ ಮುಂಬೈನಲ್ಲಿ ಒಂದು ಸೇವಾಶ್ರಮದಲ್ಲಿ ಇದ್ದಾರೇಂತ ಇನ್‌ಫಾರ್ಮೇಷನ್ ಸಿಕ್ಕಿ, ನಾನು ನಮ್ಮ ಮಾವ ಹೋಗಿದ್ವಿ. ಆ ವ್ಯಕ್ತಿ ಇರ್ಲಿಲ್ಲ. ಬಹುಶಃ ಆ ವ್ಯಕ್ತಿ ನನ್ನ ತಂದೆನೋ, ಅಲ್ವೋ ನಂಗಂತು ಗೊತ್ತಿಲ್ಲ. ಅಕಸ್ಮಾತ್ ನನ್ತಂದೆ ಆಗಿದ್ರೂ ಹಿಂದಕ್ಕೆ ಬರೋಕೆ ಒಪ್ಗೇ ಕೊಡ್ತಾ ಇರ್ಲಿಲ್ಲ. ನನ್ನ ತಾಯಿ ನನ್ತಂದೆ ಸುಸ್ವಭಾವ ಎಂದೂ ಅರ್ಥ ಮಾಡಿಕೊಳ್ಲಿಲ್ಲ. ಆಕೆಯದು ತೀರಾ ನ್ಯಾರೋ ಮೈಂಡ್. ತನ್ನ ಸಂಸಾರ ಬಿಟ್ಟು ಬೇರೆ ಯೋಚ್ಸೋ ಹೆಣ್ಣೇ ಅಲ್ಲ. ಈ ವ್ಯತ್ಯಾಸಗಳು ರಣರಂಗವನ್ನಾಗಿಸಿತ್ತು ಮನೆಯನ್ನು. ಹತ್ತು ಜನಕ್ಕೆ ತನ್ನಿಂದ ಉಪಕಾರವಾಗಬೇಕೆನ್ನೋ ಉದ್ದೇಶದಿಂದ ಅನಾಥಾಲಯ ಶುರು ಮಾಡಿದ್ದು. ಸಾವಿತ್ರಿಬಾಯಿ ದಿಕ್ಕಿಲ್ಲದ ಹೆಣ್ಣು. ಋಷಿಸದೃಶರಾದ ನನ್ತಂದೆ ಅವಳಲ್ಲಿ ಯಾವ್ದೇ ಅರ್ಥಹೀನ ಸಂಬಂಧ ಇಟ್ಕೊಳ್ಳೋಕೆ ಸಾಧ್ಯವಿರ್ಲಿಲ್ಲ" ಎಂದವ ನಂತರದ ಘಟನೆಗಳ ಸರಮಾಲೆಯನ್ನು ವಿವರಿಸಿದಾಗ ಹೆಣ್ಣು ಸ್ವಾರ್ಥ, ಸಂಕುಚಿತ ಸ್ವಭಾವದಿಂದಲೇ ಹೇಗೆ ಗಂಡನ್ನು ಛಿದ್ರ ಮಾಡಬಹುದೆನಿಸಿತು.

"ನನ್ನ ಸ್ಥಿತಿ ಕೂಡ ಬೇರೆಯಲ್ಲ. ನಾನು ಮಾಲತಿಯನ್ನು ಹೊಂದಿಕೊಂಡಷ್ಟು ಭಾವನಾತ್ಮಕವಾಗಿ ನನ್ನಿಂದ ದೂರನೇ ಇದ್ದಾಳೆ. ನಾನು ಸಮೀಪಿಸಿದಷ್ಟು ಒರಟು ಮಾತು, ಅನುಮಾನ ಪ್ರಕೃತಿ, ಅಸಭ್ಯ ವರ್ತನೆಯಿಂದ ಮತ್ತಷ್ಟು ದೂರವೇ ಉಳಿದಿದ್ದಾಳೆ. ನಾಲ್ಕು ಗೋಡೆಗಳ ಮಧ್ಯೆ ಬದ್ಕೋ ನಮ್ಮಿಬ್ಬರ ಮಧ್ಯೆ ದೇಹ ಸಂಬಂಧವೇ ವಿನಹ ಮಾನಸಿಕವಾಗಿ ಎಂದೂ ಬೆರೆತಿದ್ದಿಲ್ಲ. ಕೆಲವೊಮ್ಮೆ ಪಶುಸದೃಶವಾದ ಜೀವನವೆನಿಸುತ್ತೆ. ಆದ್ರೂ ಮನೆ ನರ್ಕವಾಗದಂತೆ ಕಾಪಾಡಲು ಒಂದೇ ದಾರಿ, ಹಿಂಸೆ. ನನ್ನ ನಾನು ಕೊಂದುಕೊಂಡು ಹೊರಟಿದ್ದೀನಿ.. ಮುಕ್ತಾಯ ಕೂಡ ದುಖಾಂತವೇ ಆಗಿರುತ್ತೆ" ಮುಖ ಹಿಂಡಿದಾಗ ಸಹಿಸದಾಯಿತು. ಸಖೀಗೆ ಅವನ ಎರಡು ಕೈಗಳನ್ನು ಹಿಡಿದುಕೊಂಡು "ಪ್ಲೀಸ್, ಹಾಗೆಲ್ಲ ಹೇಳ್ಬೇಡಿ; ಮಾಲತಿ ಮುಂದೆ ತಿದ್ದಿಕೊಳ್ತಾರೆ" ಎಂದಳು. ಕಣ್ಣೀರು ತೊಡೆದುಕೊಂಡು ನಸುನಕ್ಕ. ಆ ನಗೆಯಲ್ಲಿ ಬರೀ ನಿರಾಶೆಯ ಕಾರ್ಮೋಡಗಳು.

ಅಷ್ಟರಲ್ಲಿ ಫೋನ್ ಸದ್ದು ಮಾಡಿತು "ಹಲೋ..." ಎಂದ. ಆ ಕಡೆಯಲ್ಲಿದ್ದು ಮಾಲತಿಯೇ "ನೀವು, ಬಂಗ್ಲೆಯೊಳ್ಗೆ ಬರ್ದೇ ಹೋಗಿದ್ದೀರಾ?" ಅವಳ ಆರೋಪ. ಅವನ ಮುಖ ತೀರಾ ಭಾವವಿಕಾರವಾಯಿತು "ಬಂಗ್ಲೆಯೊಳ್ಗೆ ಬಂದಿದ್ದೆ. ಅಂತಃಪುರ ಪ್ರವೇಶವಾಗಿರ್ಲಿಲ್ಲ ಅಷ್ಟೆ. ನಂಗೆ ಒಂದಿಷ್ಟು ಕೆಲ್ಸ ಇತ್ತು ಬೇರೆ" ಎಂದ ಸ್ವಲ್ಪ ಗಡುಸಾಗಿ. ಮೃದುವಾಗಿ ಮಾತಾಡಿ ರಮಿಸಿ ಸೋತುಹೋಗಿದ್ದ. ಕೆಲವೊಮ್ಮೆ ತಾನು ಯಾಕೊ ನ್ಯೂರೋಸೆಂಟರ್‌ಗೆ ಹೋಗಿ ಅಡ್ಮಿಟ್ ಆಗಿಬಿಡಬಾರದೆಂದು ಯೋಚಿಸಿದ್ದುಂಟು.

"ತೋಟದ ಆಫೀಸ್‌ನಲ್ಲಿದ್ದೀರಾ?" ಕುಹಕ ಪ್ರಶ್ನೆ.

"ಹೌದು, ಈಗೇನ್ಮಾಡ್ಲೀ? ಬಾಡಿಗಾರ್ಡ್ಸ್‌ನ ಕಳ್ಸಿಕೊಡ್ತೀಯಾ? ಏನ್ಬೇಡ, ಒಂದೆರಡು ಗಂಟೆಯಲ್ಲಿ ಎಸ್ಟೇಟ್‌ನಲ್ಲಿ ಇರ್ತೀನಿ. ಅಕಸ್ಮಾತ್ ಬರ್ಲಿಲ್ಲಾಂದ್ರೆ.... ಒಂದೆರಡು ದಿನ ನೋಡಿ ಪೇಪರ್ ಅನೌನ್ಸ್‌ಮೆಂಟ್, ಟಿ.ವಿ. ಅನೌನ್ಸ್‌ಮೆಂಟ್ ಕೊಡು" ಫೋನ್ ಕುಕ್ಕಿದ.

ಆಮೇಲೆ ಅವಳಪ್ಪ ತೋಟದ ಮಾರಾಟದ ಬಗ್ಗೆ ಅಳಿಯ ತಲೆ ಕೆಡಿಸಿಕೊಂಡಿದ್ದಾನೆಂದು ಬುದ್ಧಿ ಹೇಳಿರಬೇಕು. ಇಲ್ಲದಿದ್ದರೇ ಪರಿಸ್ಥಿತಿ ಒಂದಿಷ್ಟು ಏರುಪೇರಾಗುತ್ತಿತ್ತಷ್ಟೆ.

"ಬಹಳ ಬುದ್ಧಿವಂತೆ" ಎಂದಳು ಸಖೀ ನಗುತ್ತ.

"ಇದೇ ಬುದ್ಧಿವಂತಿಕೆ ಅಂದ್ಕೊಂಡ್ರೆ ಯಾವ ಹೆಣ್ಣಿಗೂ ಬೇಡ. ಸಂಸಾರಗಳೆಲ್ಲ ಸಾಮರಸ್ಯ ಕಳ್ಕೊಂಡ್ ಬದ್ಕಿಗೆ ಅರ್ಥವೇ ಇಲ್ಲವಾಗಿಬಿಡುತ್ತೆ. ಲೀವ್ ಇಟ್. ಆ ವಿಷ್ಯದಿಂದ ಯಾವ್ದೇ ಪ್ರಯೋಜನವಿಲ್ಲ..ನಾನು, ಮಾವ ಅಪ್ಪನ ಹುಡ್ಗಾಟಕ್ಕೆ ಹೋಗಿದ್ವಿ. ಆದ್ರೂ ನಂಗೆ ನಿನ್ನ ಬಗ್ಗೆ ಭಯವೇ? ಸಾವಿತ್ರಿಬಾಯಿ ಹುಡುಕಿಸಿದ್ರಾ ನಿನ್ನ?" ಕೇಳಿದ ಆತುರಾತುರವಾಗಿ.

ಹೌದೆಂದು ತಲೆಯಾಡಿಸಿದವಳು "ರಾಮಾಚಾರಿಯ ಒಂದು ಬುದ್ಧಿ ಮಾತು, ಅದ್ಕೇ ನೀವು ಕೊಟ್ಟ ಅಲ್ಪಸ್ವಲ್ಪ ಬದಲಾವಣೆ ನನ್ನ ಬದ್ಕಿಸಿತು. ಇಲ್ದಿದ್ರೆ..." ಅವಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. 'ಅನಾಥೆ' ಎನ್ನುವ ಶಬ್ದ ಬಹಳ ಕೀಳಾಗಿ ಕಾಣುವ ಬಹುಸಂಖ್ಯಾತದ ಒಂದು ಜನಾಂಗವೇ ಇದೆಯೆನಿಸಿತು.

ಕಸಿವಿಸಿಗೊಂಡ ಅನಿಕೇತ್ ಕಣ್ಣೀರು ತೊಡೆದ "ರಿಲ್ಯಾಕ್ಸ್; ಕೆಲವು ಮೌಲ್ಯಗಳು ನಶಿಸಿ ಜನರು ಭ್ರಮೆಗಳಲ್ಲಿ ಬದುಕುತ್ತಿದ್ದಾರೆ. ಅದ್ರ ಬಗ್ಗೆ ತಲೆ ಕೆಡ್ಸಿಕೊಳ್ಳೋದ್ಬೇಡ. ಸಾವಿತ್ರಿಬಾಯಿ ವಿಷ್ಯ ಹೇಳು" ಎಂದ ಒತ್ತಾಯದ ದನಿಯಲ್ಲಿ.

ಅವಳು ಹೇಳಿದ ಮಾತುಗಳಲ್ಲಿ ಸಾವಿತ್ರಿಬಾಯಿ ತನ್ನ ಸೇವೆಯುನ್ನು ವೈಭವೀಕರಿಸಿಕೊಂಡಿದ್ದು ಅನಾಥಾಶ್ರಮದ ವಿಷಯದಲ್ಲಿ ಮುಗ್ಧಳಾಗಿ ತೀರಾ ಅಮಾಯಕಳಾಗಿ ರೂಪು ಬದಲಾಯಿಸಿ ಸಹಾನುಭೂತಿ ಪಡೆಯುವ ಪ್ರಯತ್ನ ಮಾತ್ರ ಮಾಡಿದ್ದಳಷ್ಟೆ.

"ನನ್ನ ಡ್ಯಾಡಿಗೆ ಹಾರ್ಟ್ ಅಟ್ಯಾಕ್ ಆಗಿದೆ. ಈಗಿನ ಹೆಂಡ್ತಿಯಿಂದ ಕೂಡ ದೂರವಿದ್ದಾರೆ. ನಾನು ನ್ಯೂಯಾರ್ಕ್‌ಗೆ ಹಿಂದಿರುಗಲು ನಿಶ್ಚಯಿಸಿದ್ದೀನಿ. ಟೆಡ್ಡಿ, ಮಮ್ಮಿ, ಡ್ಯಾಡಿಗಾಗಿ ಕೆಲವು ಗಿಫ್ಟ್‌ಗಳ್ನ ಕೊಳ್ಳೋ ಕೆಲ್ಸ ಮಾತ್ರ ಬಾಕಿ ಇದೆ. ನನ್ನ ಹುಟ್ಟೇ ದುರಾದೃಷ್ಟದ್ದು ಇರ್ಬಹುದು. ಕಡೆಗೂ ನನ್ನ ಜನನಕ್ಕೆ ಕಾರಣರಾದವ್ರನ್ನ ನೋಡೋಕ್ಕಾಗ್ಲಿಲ್ಲ. ಛೇ...." ನೋವಿನ ನಗೆ ಬೀರಿದಳು, ಆ ವಿಷಯಕ್ಕೆ ಮುಕ್ತಾಯವಾಗುವಂತೆ, ನಿಶ್ಯಬ್ದವಾಗಿ ಆರಿಸಿದ ಅವಳ ನಿರ್ಣಯ ಸರಿ ಇತ್ತು. ಆದರೆ ಹೃದಯ ತುಂಡುತುಂಡಾಗಿ ರೋಧಿಸಿತು 'ಸಖೀ'ಗಾಗಿ. 'ಆಲ್‌ರೈಟ್' ಎನ್ನುವ ಮುಗುಳ್ನಗೆ ಬೀರಿದ.

ನಗುತ್ತ, ಹರಟುತ್ತ, ಅವಳ ಜೊತೆ ಲಂಚ್ ತಗೊಂಡ. ಅಂದೇ

ರಾಮಾಚಾರಿ, ಗಣಪತಿಗೆ ತಾನು ಹೊರಡುವ ದಿನವನ್ನು ಫೋನ್‌ನಲ್ಲಿ ತಿಳಿಸಿದಳು.

ಕ್ರಾಫ್ಟ್ ಎಂಪೋರಿಯಂನಿಂದ ಕೆಲವು ಕಲಾಕೃತಿಗಳನ್ನು ಪ್ಯಾಕ್ ಮಾಡಿಸಿ ಹೊರಗೆ ಬರುವ ವೇಳೆಗೆ ಲಕ್ಷ್ಮಿ ಎದುರಾದದ್ದು ಆಕಸ್ಮಿಕವಾಗಿ.

"ಮೇಡಮ್...." ಎಂದವಳು ಸಂಕೋಚದಿಂದ ನಿಂತಾಗ ಪ್ಯಾಕೆಟ್‌ಗಳನ್ನು ಟ್ಯಾಕ್ಸಿಯಲ್ಲಿಡಲು ಹೇಳಿ ಕೈಹಿಡಿದುಕೊಂಡಳು ಆತ್ಮೀಯವಾಗಿ. "ಸರ್‌ಪ್ರೈಜ್ ವಿಸಿಟ್, ಐಯಾಮ್ ವೆರಿ ಹ್ಯಾಪಿ, ಸಾಧ್ಯವಾದ್ರೆ ನಿಮ್ಮನ್ನೆಲ್ಲ ನೋಡ್ಬೋಗೋ ಆಸೆ ಇತ್ತು, ಬನ್ನಿ" ವಿಶ್ವಾಸ ತೋರಿದಾಗ ಮೂಕಳಾದಳು. ಭಾರತೀಯಳಾದರೂ ಶ್ರೀಮಂತ ರಾಷ್ಟ್ರದಿಂದ ಬಂದ ಹೆಣ್ಣು ಇಷ್ಟೊಂದು ಸರಳವಾಗಿ ವರ್ತಿಸುವುದು ಅಂದಿಗಿಂತ ಇಂದು ಆಶ್ಚರ್ಯವೆನಿಸಿತು.

ಮುದುಡಿಯೇ ಅವಳೊಂದಿಗೆ ಟ್ಯಾಕ್ಸಿ ಹತ್ತಿದಳು ಲಕ್ಷ್ಮಿ. ಅವಳಮ್ಮ ಹತ್ತಿರದ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಳು ಅನಾರೋಗ್ಯದಿಂದ. ಅವಳು ಬಂದಿದ್ದು ಕೂಡ ಮೆಡಿಕಲ್ ಷಾಪ್‌ನಿಂದ ಔಷಧಕೊಳ್ಳುವ ಸಲುವಾಗಿ.

"ಒಂದತ್ತು ನಿಮಿಷ ನನ್ನೊತೆ ಕಳ್ಯೋಕೆ ತೊಂದರೆ ಇಲ್ಲ ತಾನೇ?" ಹೂ ಸುರಿಸಿದಂತೆ ಕೇಳಿದಾಗ ಲಕ್ಷ್ಮಿ ಲಜ್ಜೆಯಿಂದ "ಇಲ್ಲ ಮೇಡಮ್, ಅದು ನನ್ನ ಅದೃಷ್ಟ ಅಂದ್ಕೋಬೇಕು. ನೀವು ನನ್ನ ಮರೆತಿರಬಹುದು ಅಂದ್ಕೊಂಡಿದ್ದೆ" ಉಸುರಿದಳು ಮೆಲುವಾಗಿ.

ಅವಳಮ್ಮ ಡಯಾನಾಗೆ ಒಂದು ಮೈಸೂರು ಸಿಲ್ಕ್ ಖರೀದಿಸುವ ಉದ್ದೇಶ ಅವಳಿಗೆ ಇತ್ತು. ಅದಕ್ಕೆ ಲಕ್ಷ್ಮಿಯ ಸಲಹೆ,. ಸಹಕಾರ ಅಗತ್ಯವೆನಿಸಿತು.

ಹೋಟೆಲ್ ರೂಂನಲ್ಲಿ ಒಂದು ಸಣ್ಣ ಉಪಹಾರದ ನಂತರ ಸವೀ "ಒಂದು ಸಣ್ಣ ರಿಕ್ವೆಸ್ಟ್, ನನ್ನ ಮಮ್ಮಿಗೆ ಒಂದು ಸೀರೆ ಕೊಳ್ಳಬೇಕು. ಅದ್ಕೇ ನಿಮ್ಮ ಸಹಾಯ ಬೇಕು" ಎಂದಾಗ ಲಕ್ಷ್ಮಿಯಿಂದ ನಿರಾಕರಿಸಲಾಗಲಿಲ್ಲ. ಅಕಸ್ಮಾತ್ ನಿರಾಕರಿಸಿದ್ದರೇ ಕಾದಂಬರಿಯ ಮುಕ್ತಾಯದ ಚಿತ್ರವೇ ಪೂರ್ತಿ ಬದಲಾಗಿಬಿಡುತ್ತಿತ್ತು.

"ಖಂಡಿತ ಮೇಡಮ್, ಆದ್ರೂ ಅಷ್ಟೊಂದು ಕಾಸ್ಟ್ಲಿ ಸೀರೆಗಳ

ಆಯ್ಕೆಯಲ್ಲಿ ನಂಗೇನು ಅನುಭವವಿಲ್ಲ. ನನ್ನಮ್ಮನಿಗಾದ್ರೂ ಒಂದು ಮೈಸೂರು ಸಿಲ್ಕ್ ಸೀರೆ ಕೊಳ್ಳಬೇಕು'' ಎಂದಳು. ಆಸೆಯ ಹಿಂದೆ ಎಟುಕುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಕೂಡ ವ್ಯಕ್ತವಾಯಿತು.

ಸಖೀ ಒಂದಲ್ಲ ಐದು ಸೀರೆಗಳನ್ನು ಕೊಂಡಳು ಒಂದು ಅಳತೆಯಲ್ಲಿ ಯೋಚಿಸಿ. ಆದರೆ ಟ್ಯಾಕ್ಸಿ ಹತ್ತುವಾಗ ಲಕ್ಷ್ಮಿ ''ಸಾರಿ ಮೇಡಮ್, ಇನ್ನೊಮ್ಮೆ ನಿಮ್ಮನ್ನ ಭೇಟಿ ಮಾಡೋ ಅವಕಾಶವಾದ್ರೆ ಪುಣ್ಯ. ಈಗ ಒಂದಿಷ್ಟು ಮೆಡಿಕಲ್ ಷಾಪ್ ಕೆಲ್ಸ ಮುಗ್ಸಿಕೊಂಡು ಆಸ್ಪತ್ರೆಗೆ ಹೋಗ್ಬೇಕು, ನಮ್ಮಮ್ಮನ ಆರೋಗ್ಯ ಸರಿಯಿಲ್ಲ'' ಅಲ್ಲೇ ಬೀಳ್ಕೊಡಲು ಸಿದ್ಧವಾದಳು.

''ಅರೇ, ನಂಗೆ ತಿಳಿಸ್ಲೇ ಇಲ್ವಲ್ಲ. ನಂಗೂ ನಿಮ್ಮಮ್ಮನ್ನ ನೋಡೋ ಆಸೆ. 'ಅಮ್ಮ' ಅನ್ನುವುದೇ ರೋಮಾಂಚನ, ರೋಚಕ. ಆ ಪದವೇ ನನ್ನ ಪ್ರಫುಲ್ಲಿತಳನ್ನಾಗಿ ಮಾಡುತ್ತೆ'' ಎಂದಳು ಉದ್ವಿಗ್ನಳಾಗಿ. ಮರುಕ್ಷಣ ಸಾಮಾನ್ಯ ಸ್ಥಿತಿಗೆ ಮರಳಿದಳು.

ಮೆಡಿಕಲ್ ಸ್ಟೋರ್‌ನಲ್ಲಿ ಲಕ್ಷ್ಮಿ ಮಾತ್ರೆ, ಇಂಜಕ್ಷನ್ ಟ್ಯೂಬ್‌ಗಳನ್ನು ಖರೀದಿಸಿದಾಗ, ನವನೀತ್‌ನೊಂದಿಗೆ ಹೋಗಿ ಹಣ್ಣು, ಬಿಸ್ಕತ್ ಪ್ಯಾಕ್‌ಗಳನ್ನು ಖರೀದಿಸಿ ತಂದಳು.

ಜನರಲ್ ಆಸ್ಪತ್ರೆ ಸಾಮಾನ್ಯ ಸ್ಥಿತಿ ಒಂದು ರೀತಿಯಲ್ಲಿ ಅಯೋಮಯವೇ. ಹತ್ತನೇ ಬೆಡ್‌ನಲ್ಲಿದ್ದ ಲಕ್ಷ್ಮಿಯ ತಾಯಿಯ ಬಳಿಗೆ ಹೋದಾಗ ಖಾಲಿಯಾಗಿತ್ತು. ಪಕ್ಕದ ಬೆಡ್‌ನಲ್ಲಿದ್ದ ಒಬ್ಬ ಹಿರಿಯಾಕೆ ''ಬಾತ್ ರೂಂಗೆ ಹೋದ್ರು'' ವಿಷಯ ಮುಟ್ಟಿಸಿ ಕಣ್ಮುಚ್ಚಿ ಮಲಗಿದಳು.

''ಸಾರಿ ಮೇಡಮ್, ನಾನ್ಹೋಗಿ ಕರ್ಕೊಂಡ್ಬರ್ತೀನಿ'' ಒಂದು ಸ್ಟೂಲ್‌ನ ಸರಿಸಿ ಸರಸರ ಹೋದಾಗ ಕುತೂಹಲಕ್ಕಾಗಿ ಪೇಷಂಟ್ ಛಾರ್ಟ್ ತೆಗೆದುನೋಡಿದಳು. 'ತುಳಜಾಬಾಯಿ' ವಯಸ್ಸು 60. ಅವಳ ಮೈಯಲ್ಲಿ ಲಘುವಾದ ಕಂಪನವಾಯಿತು. ರೆಕಾರ್ಡ್ಸ್‌ನಲ್ಲಿದ್ದ ಅಕ್ಷರಗಳ ಪ್ರಕಾರ ತುಳಜಾಬಾಯಿ ಎನ್ನುವ ಹೆಣ್ಣು ಅವಳನ್ನು ತಂದು ಅನಾಥಾಶ್ರಮಕ್ಕೆ ಸೇರಿಸಿದ್ದಳು. ಅದೇ ತುಳಜಾಬಾಯಿ ಈಕೆನಾ ? ನೆಲಸಮವಾಗಿದ್ದ ಆಸೆಯ ಕಾರಂಜಿ ಮುಗಿಲಿನೆತ್ತರಕ್ಕೆ ಚಿಮ್ಮಿತು. ಚಿಮ್ಮಿದ ತುಂತುರುಗಳ ನಡುವೆ ಅಮ್ಮನನ್ನ ಕಂಡಂತಾಯಿತು ಅವಳಿಗೆ.

ಸಾಮಾನ್ಯ ಜ್ವರ, ಒಂದಿಷ್ಟು ಅನಿಮಿಕ್ ಎಂದೇ ನಮೂದಾಗಿತ್ತು ಛಾರ್ಟ್‌ನಲ್ಲಿ. ಅವಳ ನೋಟ ನಡೆಸಿಕೊಂಡು ಬರುತ್ತಿದ್ದ

ತುಳಜಾಬಾಯಿಯು ಕಡೆ ಹರಿದಾಗ ತನ್ನ ಆಸೆಯ ಹಣತೆಗೆ ಎಣ್ಣೆ ಹಾಕಲು ಬರುತ್ತಿರುವ ದೇವತೆಯಾಗಿ ಕಂಡಳು.

ಮಂಚದ ಮೇಲೆ ಕೂಡಿಸಿದನಂತರ ಲಕ್ಷ್ಮಿ ಪರಿಚಯಿಸಿದಳು "ಅಮ್ಮ ಇವ್ರು ನ್ಯೂಯಾರ್ಕ್‌ನೋರು, ನಿನ್ನ ನೋಡೋಕ್ಕೇಂತ್ಲೇ ಬಂದಿದ್ದಾರೆ." ಆಕೆ ಕೈ ಜೋಡಿಸುವ ಮುನ್ನವೇ ಕೈ ಮುಗಿದಳು, ಸ್ವರವೇಳಲಿಲ್ಲ. ಉದ್ವಿಗ್ನ ಸ್ಥಿತಿಯಲ್ಲಿ ಪದಗಳನ್ನು ಹುಡುಕುವುದು ಕಷ್ಟವೆನಿಸಿತು.

"ಪ್ಲೀಸ್ ಲಕ್ಷ್ಮಿ ಸ್ವಲ್ಪ ಬನ್ನಿ" ದರದರ ಎಳೆದೊಯ್ದಾಗ ಅವಳಿಗೆ ಗಾಬರಿ. ಡ್ಯೂಟಿ ಡಾಕ್ಟ್ರನ ಸಂಪರ್ಕಿಸಿ ಪ್ರಶ್ನಿಸಿದಾಗ "ನೋ ಪ್ರಾಬ್ಲಮ್, ಆರಾಮಾಗಿ ಮನೆಗೆ ಕರ್ಕೊಂಡ್ಹೋಗ್ಬಹ್ದು. ಆಕೆಯ ಡಾಟರ್ ಇನ್ನೆರಡು ದಿನ ಇಲ್ಲಿರಲೀಂತ ರಿಕ್ವೆಸ್ಟ್ ಮಾಡ್ಕೊಂಡ್ರು. ಸ್ವಲ್ಪ ಒಂದಿಷ್ಟು ರೆಸ್ಟ್, ಟಾನಿಕ್ ಜೊತೆ ಒಳ್ಳೆ ಆಹಾರ ಸಾಕು" ಅವರ ಸಲಹೆ ಇಷ್ಟೆ. ತುಳಜಾಬಾಯಿಯೊಂದಿಗೆ ಮಾತಾಡುವುದರಿಂದ ಆಕೆಯ ಆರೋಗ್ಯಕ್ಕೇನು ತೊಂದರೆ ಇಲ್ಲ. ಲಕ್ಷ್ಮಿಗೆ ಇವೆಲ್ಲ ಏನು ಅರ್ಥವಾಗಲಿಲ್ಲ. ಹೇಳಲು ಇಚ್ಛಿಸಲಿಲ್ಲ ಕೂಡ.

"ಏನು ಗಾಬ್ರಿ ಇಲ್ಲ. ಇನ್ನೆರಡು ದಿನ ಬಿಟ್ಟು ನೀನು ಕರ್ಕೊಂಡ್ಹೋಗ್ಬಹ್ದು" ಡಾಕ್ಟರ್ ಮಾತುಗಳನ್ನು ಅವಳಿಗೆ ಸಖೀ ಹೇಳಿದಾಗ ಅವಳು ಭಾವಿಸಿದ್ದೇ ಬೇರೆ. "ನಿಮ್ದು ಎಂಥ ಒಳ್ಳೆ ಮನಸ್ಸು ! ನನ್ನ ತಾಯಿ ಬಗ್ಗೇನೇ ನಿಮ್ಗೇ ಇಷ್ಟೊಂದು ಕಾಳಜಿ. ಅದೇ ನಿಮ್ಮ ತಾಯಿನ ಎಷ್ಟೊಂದು ಪ್ರೀತಿಸ್ತೀರಾ !" ಮನದುಂಬಿ ನುಡಿದಳು. ಆದರೆ ಅವಳಿದ್ದ ಸ್ಥಿತಿಯಲ್ಲಿ ಆ ಮಾತುಗಳೇನು ಅವಳ ಕಿವಿ ಸೇರಲಿಲ್ಲ.

ಹೊರಡುವಾಗ ಮಗಳ ಬಳಿ ಹಣಕ್ಕಾಗಿ ಪಿಸು ನುಡಿಯಲ್ಲಿ ಕಿತ್ತಾಡಿದ್ದು ಅವಳ ಗಮನಕ್ಕೆ ಬಂದಾಗ ಹಣದಿಂದ ಬಾಯಿ ಬಿಡಿಸುವುದು ಸುಲಭವೆನಿಸಿತು ಸಖೀಗೆ. ಅವಳ ಸಿಕ್ತ್ ಸೆನ್ಸ್ ಒತ್ತಿ ಒತ್ತಿ ಹೇಳುತ್ತಿತ್ತು 'ಅದೇ ತುಳಜಾಬಾಯಿ ಈಕೆ' ಎಂದು.

ಹೋಟೆಲ್‌ಗೆ ವಾಪಸು ಆದವಳು ಮೂರರ ಸಮಯಕ್ಕೆ ನಡೆದು ಆಟೋ ಸ್ಟಾಂಡ್‌ಗೆ ಬಂದು ಆಟೋ ಹತ್ತಿ ಆಸ್ಪತ್ರೆಯ ಬಳಿ ಇಳಿದಳು. ಈಗಲೂ ಬೆಡ್ ಖಾಲಿ ಇತ್ತು. ಆದರೆ ಹೊರಗೆ ಪೇಷಂಟ್ ಸಂಬಂಧಿಕರು ಕೂಡುವ ಬೆಂಚ್ ಮೇಲೆ ಕೂತಿದ್ದ ತುಳಜಾಬಾಯಿ ಆರಾಮಾಗಿ ಮೋಸಂಬಿ ತಿನ್ನುತ್ತಿದ್ದಳು.

"ನಮುಸ್ಕಾರ ತುಳಜಾಬಾಯಿ" ಎಂದಳು.

ಒಂದು ಕಾಲನ್ನು ಮೇಲೆತ್ತಿಕೊಂಡು ಕೂತವಳು ಕಾಲು ಇಳಿಸಿ ಮುಖದಲ್ಲಿ ಸಂಭ್ರಮ, ಹರ್ಷ ತೋರಿದಳು. ಇಷ್ಟೊಂದು ಹಣ್ಣುಗಳನ್ನು ಅವಳ ಯಾವ ಮಕ್ಕಳು ಇಂದಿನವರೆಗೂ ಹೊತ್ತು ತಂದಿರಲಿಲ್ಲ. ಶ್ರೀಮಂತರ ಜನರನ್ನು ಕಂಡರೆ ಆಸೆ, ಅಸೂಯೆ ಎರಡು ಕೂಡ. ಮುಖವನ್ನು ಮರದಗಲ ಮಾಡಿದಳು.

ಮೊದ ಮೊದಲು ಇವಳ ಅನುನಯ ಮಾತುಗಳಿಗೆ ತಾನು ಆ ತುಳಜಾಬಾಯಿ ಅಲ್ಲವೇ ಅಲ್ಲ, ತನಗೇ ಯಾವುದೇ ವಿಷಯ ಗೊತ್ತಿಲ್ಲವೆಂದು ನಿರಾಕರಿಸಿದರೂ ಕಡೆಗೆ ಒಪ್ಪಿಕೊಂಡಳು. ಲಕ್ಷ್ಮಿಪುರದ ಕೃಷ್ಣಶಾಸ್ತ್ರಿಗಳ ಒಬ್ಬಳೇ ಮಗಳು ಶ್ರೀದೇವಿಯ ಮಗುವೇ ಅಂದು ಅನಾಥಾಲಯಕ್ಕೆ ಒಪ್ಪಿಸಿದ ಮಗುವೆಂದು ಎಳೆದೆಲೆ ಮುಟ್ಟಿ ಪ್ರಮಾಣ ಮಾಡಿದಾಗ ಸಂಕಟದ ಕಣ್ಣೀರೋ ಹರ್ಷದ ಹನಿಗಳೋ ರೆಪ್ಪೆಗಳಿಂದ ಜಾರದಂತೆ ತಡೆದಿಟ್ಟ ಸಖೀ ಮಾತು ಕೊಟ್ಟಂತೆ ಹತ್ತು ಸಾವಿರ ರೂಪಾಯಿಗಳನ್ನು ಅವಳ ಕೈಯಲ್ಲಿಟ್ಟಳು.

"ಅಯ್ಯೋ ಆ ಮನೆಗೆ ಏನಾದ್ರೂ ಆದ್ರೆ ದೇವರು ಕೂಡ ನನ್ನ ಕ್ಷಮಿಸೋಲ್ಲ ತಾಯಿ. ಕೃಷ್ಣಶಾಸ್ತ್ರಿಗಳು ಸಾಕ್ಷಾತ್ ಬೆಂಕಿ. ಅಲ್ಪಸ್ವಲ್ಪ ತಮ್ಮ ಮನೆತನಕ್ಕೆ ಮಸಿ ಹಚ್ಚಿದೆಯೆಂದು ತಿಳಿದ್ರೆ ನಿಂತಲ್ಲೇ ಸುಟ್ಟುಹೋದಾರು. ಆ ಪಾಪ ನನ್ನ ಏಳೇಳು ಜನ್ಮಕ್ಕೂ ಬಿಡದು" ಗೋಳೋ ಎಂದು ಅತ್ತಳು. ಅಂಥದೇನು ಆಗದೆಂದು ಭರವಸೆ ಕೊಟ್ಟು ಅಷ್ಟು ದೂರ ಹೋದವಳು ಹಿಂದಕ್ಕೆ ಹೋದಳು. "ಆ ಮಗುನ ಶ್ರೀದೇವಿನ ಕೊಟ್ಟಿದ್ದು ಕೃಷ್ಣಶಾಸ್ತ್ರಿಗಳ ? ಇದೊಂದು ಪ್ರಶ್ನೆಗೆ ಉತ್ತರ ಸಾಕು. ನಾನು ಇನ್ನೆರಡು ದಿನದಲ್ಲಿ ನ್ಯೂಯಾರ್ಕ್‌ಗೆ ಹೊರಟ್ಹೋಗ್ತೀನಿ. ಯಾರ್ಗೂ ತಿಳಿಸೋ ಸಂಭವವಿಲ್ಲ. ಅನಾಥಾಶ್ರಮಕ್ಕೆ ಹರಿದು ಬರೋ ಮಕ್ಕ ಹಿಂದಿನ ಪೂರ್ವೋತ್ತರ ಸಾಕಷ್ಟು ಇರುತ್ತೆ. ಉತ್ತಮ ಕುಟುಂಬದ ಮಗು ಬೀದಿಗೆ ಬರ್ಬೇಕಾದ್ರೆ, ಆ ಶ್ರೀದೇವಿ ತಪ್ಪು ಮಾಡಿರ್ಬೇಕು !" ಎಂದಳು.

ತುಳಜಾಬಾಯಿ ಕೈ ಮುಗಿದುಕೊಂಡು ಮುಕ್ಕೋಟಿ ದೇವರ ಮೇಲೆ ಆಣೆ ಮಾಡಿ ಶ್ರೀದೇವಿಯನ್ನು ಸಾಕ್ಷಾತ್ ಸರ್ವಮಂಗಳೆಗೆ ಹೋಲಿಸಿಬಿಟ್ಟಳು.

"ನಾನು ಲಕ್ಷ್ಮಿಪುರದ ಸೊಸೆನೇ. ಆಕೆ ನಡ್ದು ಬರ್ತಾ ಇದ್ರೆ, ಸಾಕ್ಷಾತ್

ದೇವತೆಯೇ. ಆಕೆ ತಪ್ಪು ಮಾಡಿದ್ಲೂಂದ್ರೆ" ಕೆನ್ನೆಗೆ ಹೊಡೆದುಕೊಂಡ ನಂತರ ಪ್ರಯಾಸಪಡದೆಯೇ ನೈಜ ಕತೆಯನ್ನು ಬಿಚ್ಚಿಟ್ಟಳು.

ಚಿಕ್ಕಂದಿನಲ್ಲಿಯೇ ಕೃಷ್ಣಶಾಸ್ತ್ರಿಗಳು ಸೋದರಳಿಯ ಆದಿಕೇಶವನೊಂದಿಗೆ ಮದುವೆ ನಿಶ್ಚಯಿಸಿ, ನಂತರ ಲಗ್ನಪತ್ರಿಕೆ ಶಾಸ್ತ್ರ ಮುಗಿದ ಮೇಲೆ ಕೆಲವು ದಿನ ಲಕ್ಷ್ಮಿಪುರದಲ್ಲಿ ಉಳಿದ ವಿದ್ಯಾವಂತ ಯುವಕ, ಬಿಸಿರಕ್ತ, ರೋಮಾಂಚಕರಿ ಅನುಭವದ ಆತುರಕ್ಕೆ ಶ್ರೀದೇವಿ ಬಲಿಯಾಗಿದ್ದಳು. ಪತಿಯಾಗಬೇಕಿದ್ದವನು ಬಹುಶಃ ಭಯವಾದರೂ ದೊಡ್ಡ ತಪ್ಪಾಗಿ ಕಂಡಿರಲಿಲ್ಲ. ಮದುವೆಗೆ ಕೆಲವು ದಿನಗಳು ಇರುವಾಗ ರಸ್ತೆ ಅಪಘಾತದಲ್ಲಿ ಗತಿಸಿದ ಈ ಷಾಕ್‌ನೊಂದಿಗೆ ಮತ್ತೊಂದು ಆಘಾತ ಶ್ರೀದೇವಿ ಗರ್ಭಿಣಿಯಾಗಿದ್ದಳು.

ಆದರೆ ಇದೇನಾದರೂ ಕೃಷ್ಣಶಾಸ್ತ್ರಿ ದಂಪತಿಗಳಿಗೆ ಗೊತ್ತಾದರೇ ಸ್ವತಃ ಅಗ್ನಿಪ್ರವೇಶ ಮಾಡುವಂಥ ಜನ. ಬಹಳ ಪವಿತ್ರವಾಗಿ ಬದುಕಿದವರು. ನೇಮ, ನಿಷ್ಠೆ ಬಿಟ್ಟ ಜೀವನ ಜೀವನವಲ್ಲವೆನ್ನುವಂಥ ಜನ. ಆಗ ಮನೆಯಲ್ಲೇ ಇದ್ದ ಸೋದರತ್ತೆ ವಿಷಯನ ಮುಚ್ಚಿಟ್ಟು ಸಂಪೂರ್ಣ ಹೊಣೆಯೊತ್ತು ತಮ್ಮ ಮನೆಗೆ ಕರೆದೊಯ್ದು ಮಗು ಹುಟ್ಟಿದ ತಕ್ಷಣ ತುಳಜಾಬಾಯಿ ಮಡಿಲಿಗೆ ಹಾಕಿ ಶ್ರೀದೇವಿಗೆ ಸತ್ತಿತೆಂದು ತಿಳಿಸಿದ್ದರು. ಆ ಮನೆಯ ಉಳಿವಿಗಾಗಿ ಪಟ್ಟ ಪಾಡಂತೂ ಅಸಾಧಾರಣವಾದುದ್ದು.

ಕೃಷ್ಣಶಾಸ್ತ್ರಿಗಳು ಮತ್ತೆ ಮಗಳಿಗೆ ಮದುವೆ ನಿಶ್ಚಯಿಸಿದಾಗ ಶ್ರೀದೇವಿಯ ಪ್ರತಿಭಟನೆ ಸೌಮ್ಯವಾಗಿದ್ದರೂ ಆತ್ಮಹತ್ಯೆಗೆ ಪ್ರಯತ್ನಿಸಿ ವಿಫಲಳಾಗಿದ್ದಳು. ಆದರೆ ಅವಳ ಸೋದರತ್ತೆ ತಾನು ಮಾಡಿದ ಪಾಪಕ್ಕೆ ನೊಂದು ಬೆಂದು ಕಣ್ಮುಚ್ಚುವ ಮುನ್ನ ತುಳಜಾಬಾಯಿಯಿಂದ ವಚನ ಪಡೆದು ಯಾವುದಾದರೂ ಅನಾಥಾಶ್ರಮಕ್ಕೆ ಮಗುವನ್ನು ಸೇರಿಸಬೇಕೆಂದು ಕೇಳಿಕೊಂಡಿದ್ದಳು.

ಇಷ್ಟು ಕೇಳಿ ಎದ್ದಾಗ ಯಾರನ್ನು ನಿಂದಿಸಲು ಅವಳ ಮನ ಒಪ್ಪಲಿಲ್ಲ. ಆಸ್ಪತ್ರೆಯಿಂದ ಹೊರ ಬಂದಾಗ ಅಥಳ ಜನ್ಮಕ್ಕೆ ಕಾರಣರಾದ ತಂದೆ ಬದುಕಿರದಿದ್ದರೂ ತಾಯಿ ಇದ್ದಳು. ಅವಳನ್ನು ಒಂದೇ ಒಂದು ಸಲ ನೋಡುವ ಬಯಕೆ. ಆಕೆ ಇಚ್ಛಿಸಿದರೇ ಮಾತ್ರ 'ಅಮ್ಮ' ಎಂದು ಕರೆದಾಳಷ್ಟೆ.

ಟ್ಯಾಕ್ಸಿಯಲ್ಲಿ ಬಂದು ಕುಸಿದವಳು ನವನೀತ್ ಕಡೆ ನೋಡಿದಳು

"ನಿಂಗೆ ಲಕ್ಷ್ಮೀಪುರ ಗೊತ್ತಾ?" ಕೇಳಿದಳು. ಅವನ ಕಣ್ಣಲ್ಲಿ ಅಚ್ಚರಿ ಅರಳಿದರೂ ಬಹಳ ಬೇಗ ವಿಮೋಚನೆಗೊಂಡಿತು "ಒಂದು ಲಕ್ಷ್ಮೀಪುರ ಗೊತ್ತು, ಕೃಷ್ಣಶಾಸ್ತ್ರಿಗಳ ಲಕ್ಷ್ಮೀಪುರ ಆಮನೆಗೆ ಸಾಕಷ್ಟು ಸಲ ಹೋಗಿದ್ದೀನಿ. ಅವ್ರ ಅಳಿಯಂದಿರು ಇಲ್ಲಿ ಪ್ರೊಫೆಸರ್ ಆಗಿದ್ರೂ.... ಸಂಸಾರ ಇರೋದು ಅಲ್ಲೇ. ನಾನೇ ಎಷ್ಟೋ ಸಲ ಅವ್ರನ್ನ ಕರ್ಕೊಂಡ್ಹೋಗಿದ್ದೀನಿ, ಹೋದಾಗ ಊಟ ಹಾಕ್ದೇ ಕಳಿಸೋಲ್ಲ. ಒಂದು ರೀತಿಯಲ್ಲಿ ಋಷ್ಯಾಶ್ರಮ, ಪರ್ಣಶಾಲೆ ಹಾಗೇ" ಭಕ್ತಿ ಅಭಿಮಾನ ಸೇರಿಸಿ ಹೇಳಿದಾಗ ಕುಣಿದಾಡುವಂತಾಯಿತು ಅವಳಿಗೆ. ಸಂತೋಷವನ್ನು ಹತ್ತಿಕ್ಕಿ ಎಚ್ಚರವಹಿಸಿದಳು.

"ಆ ಸಂಸಾರನ ಒಮ್ಮೆ ನೋಡ್ಬೇಕು" ಎಂದಳು. ದಾರಿಯಲ್ಲಿ ಹೂಗಳನ್ನ ಮಾತ್ರ ಖರೀದಿಸಿದಳು. ನಿಮಿಷಗಳು ಕ್ಷಣಗಳೆನಿಸಿತು. "ನವನೀತ್ ವೆಹಿಕಲ್‌ನಲ್ಲಿ ಏನಾದ್ರೂ ತೊಂದರೆ ಇದ್ಯಾ? ಯಾಕೆ ಇಷ್ಟೊಂದು ನಿಧಾನ?" ಒಂದೆರಡು ಸಲ ಕೇಳಿಬಿಟ್ಟಾಗ 'ಮೇಡಮ್'ನ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡ.

ಲಕ್ಷ್ಮೀಪುರದ ಮುಂಭಾಗದಲ್ಲಿಯೇ ಕೃಷ್ಣಶಾಸ್ತ್ರಿಗಳ ಮನೆ. ದೊಡ್ಡ ಹಳೆಯದಾದ ಅಂಗಳದ ಮಧ್ಯಭಾಗದಲ್ಲಿ ಬೃಂದಾವನ, ಮಧ್ಯಕ್ಕೆ ಪೂರ್ತಿ ನೆಲ ಹಾಸು. ಶುಭ್ರಕೊಂಡು ಹೊಳೆಯುತ್ತಿದ್ದ ಕಲ್ಲುಹಾಸಿನ ಮೇಲೆ ದೊಡ್ಡದಾದ ಚಿತ್ತಾರ ಬಿಳಿಯ ರಂಗೋಲಿ. ಅದಕ್ಕೆ ಕೆಮ್ಮಣ್ಣಿನ ಗೆರೆ ಬಿಟ್ಟು ಅಲಂಕರಿಸಿದ್ದರು. ಎರಡು ಕಡೆಯ ಗಾರೆಯ ಜಗುಲಿಗೂ ರಂಗೋಲಿಯ ಅಲಂಕಾರ. ದೊಡ್ಡದಾದ ಎತ್ತರ ಚಿತ್ತಾರದ ಮುಂಬಾಗಿಲು. ಮೇಲ್ಭಾಗಕ್ಕೆ ಹರಿಶಿನ, ಕುಂಕುಮ ಹಚ್ಚಿ ಸಿಂಗರಿಸಿದ್ದರು. ಒಳಗಿನ ಕೆಂಪು ನೆಲಹಾಸು ಫಳಫಳ ಹೊಳೆಯುತ್ತಿತ್ತು ಮುಖ ಕಾಣುವಂತೆ. ಮಧ್ಯದಲ್ಲಿ ಒಂದು ಮರದ ಹಲಗೆ ಸೇರಿಸಿದ ಕಬ್ಬಿಣದ ಸರಪಣಿಗಳ ತೂಗೂಯ್ಯಾಲೆ ಇಡೀ ಮನೆ ಪೂರ್ತಿ ರಂಗೋಲಿಯಿಂದ ಸಿಂಗರಿಸಿದ್ದರು.

ನವನೀತ್ ಕೂಗಿಗೆ ಹೊರ ಬಂದರು ಶಾಸ್ತ್ರಿಗಳು. ವಯೋಧರ್ಮಕ್ಕೆ ಅನುಗುಣವಾಗಿ ಶರೀರ ಸ್ವಲ್ಪ ಜೀರ್ಣವಾದಂತೆ ಕಂಡರೂ ತೇಜೋಪುಂಜವಾದ ಮುಖ ಹಣೆಯಲ್ಲಿ ಗಂಧ, ಕುಂಕುಮ, ಕುತ್ತಿಗೆಯಲ್ಲಿ ರುದ್ರಾಕ್ಷಿ ಮಾಲೆ, ಹೆಬ್ಬೆಟ್ಟು ಗಾತ್ರದ ಜನಿವಾರ ಭುಜದಿಂದ ತೂಗಿ ಅಲಂಕಾರ ಪ್ರಾಯವಾಗಿತ್ತು. ಕಣ್ಣು ಕಿರಿದುಗೊಳಿಸಿ ನೋಡಿದರು.

"ಅಮೆರಿಕಾ, ನ್ಯೂಯಾರ್ಕ್‌ನಿಂದ ಬಂದಿದ್ದಾರೆ, ಇಲ್ಲಿನ ವಿಷಯಗಳ

ಬಗ್ಗೆ ಪುಸ್ತಕ ಬರೆಯಲು ನಿಮ್ಮನ್ನು ಮನೆಯನ್ನು ಒಮ್ಮೆ ನೋಡ್ಬೇಕೂಂದ್ರು. ಅದ್ಕೇ ಕರ್ಕೊಂಡ್ಬಂದೆ'' ಹೇಳಿದ ಅವರ ಮುಂದೆ ಕೈಕಟ್ಟಿ.

ತನ್ನ ನ್ಯೂಯಾರ್ಕ್ ವಿಳಾಸದ ಕಾರ್ಡನ್ನು ತೆಗೆದು ಶಾಸ್ತ್ರಿಗಳಿಗೆ ಕೊಟ್ಟಳು. ಓದಬಲ್ಲ ಶಕ್ತಿ ಇತ್ತು ಕಣ್ಣುಗಳಿಗೆ. ನಸು ನಕ್ಕು ಒಳಗೆ ಬರುವಂತೆ ಸನ್ನೆ ಮಾಡಿ ಹೋದರು.

ಮರದ ತೂಗುಯ್ಯಾಲೆಯ ಮೇಲೆ ಕೂಡುತ್ತ "ಶ್ರೀದೇವಿ..... ಇಲ್ಬಾ'' ಕೂಗಿದರು ಮಗಳನ್ನ. ರೋಮಾಂಚನವಾಯಿತು ಅವಳಿಗೆ. ಕೆಲವು ಕ್ಷಣಗಳಿಗೆ ಅಥವಾ ನಿಮಿಷಗಳಲ್ಲಿ ತನ್ನನ್ನು ಹೆತ್ತವಳನ್ನ ನೋಡಬಹುದು. ಎಷ್ಟೊಂದು ಪುಲಕಿತಳಾಗಿದ್ದಳೆಂದರೆ ಅವಳ ಮೈ ಕಂಪಿಸುತ್ತಿತ್ತು ಮೃದುವಾಗಿ ಹೇಗಿರಬಹುದು? ಹೇಗಿರಬಹುದು? ಆ ಕ್ಷಣ ಬಂದೇ ಬಂತು.

ಕೈಯೊರೆಸುತ್ತ ಬಂದ ಶ್ರೀದೇವಿಯನ್ನು ನೋಡಿದ ಕೂಡಲೇ ಸಾವಿರ ವರ್ಷ ಅನ್ನ ನೀರು ಬಿಟ್ಟು ತಪಸ್ಸು ಮಾಡಿದ ಒಬ್ಬ ತಪಸ್ವಿಗೆ ದೈವ ಸಾಕ್ಷಾತ್ಕಾರವಾದಂತೆ, ಕುರುಕ್ಷೇತ್ರದಲ್ಲಿ ಕೃಷ್ಣನ ವಿಶ್ವರೂಪದರ್ಶನ ಕಂಡು ದಿಗ್ಭ್ರಾಂತನಾದ ರೋಮಾಂಚಿತನಾದ ಅರ್ಜುನನಿಗೆ ಆದ ಅನುಭವದಂತೆ. ಸಖೀಯ ಕಣ್ಣೆವೆಗಳು ಚಲಿಸದಂತೆ ನಿಂತವು. ಶ್ರೀದೇವಿ ಎತ್ತರಕ್ಕೆ ಬಹು ಎತ್ತರಕ್ಕೆ ಬೆಳೆದಂತೆ.

"ಯಾಕಪ್ಪ?'' ಮಧುರ ಸ್ವರ ಎಚ್ಚರಿಸಿತು ಅವಳನ್ನು. ಇದೇನು ಶ್ರೀದೇವಿಗೆ ಅಪರೂಪವಲ್ಲ; ಯಾರೇ ಊರಿಗೆ ಬಂದರೂ ಶಾಸ್ತ್ರಿಗಳನ್ನು ನೋಡಲು ಬರುವುದು, ಊಟ ಉಪಚಾರಗಳು ಇವೆಲ್ಲ ಮಾಮೂಲೇ. ಶಾಸ್ತ್ರಿಗಳು ದೀರ್ಘವಾಗಿ ಉಸಿರೆಳೆದುಕೊಂಡು "ಕೂತ್ಕೋ.... ಮಗು'' ಎಂದು ಸಖೀಗೆ ಹೇಳಿದನಂತರವೇ "ಅಮೆರಿಕಾದಿಂದ ಬಂದಿದೆಯಂತೆ ಈ ಹುಡ್ಗೀ ಭಾರತ ನೋಡಲು. ನಮ್ಮ ಲಕ್ಷ್ಮೀಪುರ ಕೂಡ ಇಷ್ಟವಾಗಿರ್ಬಹ್ದು'' ಅಷ್ಟು ಹೇಳಿ ಮಲಗಿಕೊಂಡರು ಉಯ್ಯಾಲೆಯ ಮೇಲೆ ಕಾಲು ಚಾಚಿ. ಶ್ರೀದೇವಿ ಕತ್ತಿನವರೆಗೂ ಶಾಲು ಹೊದ್ದಿಸಿದಳು.

"ಅವ್ರ ಊಟ ಮುಗಿದೆದ ಒಂದ್ಗಂಟೆ ವಿಶ್ರಾಂತಿ ಬೇಕು. ನೀವೇನು ತಗೋತೀರಾ?'' ಹತ್ತಿರ ಬಂದು ಕೇಳಿದಾಗ ಅವಳಿಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ ನೀರು ಬೇಕೆಂದು ಸನ್ನೆಯ ಮುಖಾಂತರ ಹೇಳಿದಳು.

ನೀರನ್ನು ಎತ್ತಿ ಕುಡಿದು ಲೋಟ ಹಿಂದಿರುಗಿಸಿ ಶ್ರೀದೇವಿಯನ್ನು

ನೋಡಿದಳು. ಚೆಲುವಿನ ಖನಿ. ಯಾವುದೇ ಮೇಕಪ್ ಇಲ್ಲದೆ ವಜ್ರದ ಹರಳಿನಂತೆ ಪ್ರಕಾಶಿಸುತ್ತಿದ್ದಳು. ಕೈಹಿಡಿದು ಮೈ ಮುಟ್ಟಿ, ಅಪ್ಪಿಕೊಂಡು ಆನಂದಿಸಬೇಕೆನಿಸಿತು ಅವಳಿಗೆ.

"ಕೂತ್ಕೊಳ್ಳಿ, ಯಾಕೆ ನಿಂತಿದ್ದೀರಾ ?" ಹೇಳಿದ ಶ್ರೀದೇವಿ "ಈ ಮನೆ ನೋಡೋಕೋಸ್ಕರ ಬಂದಿರ್ಬಹುದು, ಸ್ವಲ್ಪ ಕೂತು ಸುಧಾರಿಸಿಕೊಳ್ಳಿ, ಪಾನಕ ಕೊಡ್ತೀನಿ. ಕುಡಿದನಂತರ ನೋಡ್ಬಹುದು" ಅಡಿಗೆ ಮನೆ ಕಡೆಗೆ ಹೋದಾಗ ವಿಶಾಲವಾದ ಮರದ ಕುರ್ಚಿಯ ಮೇಲೆ ಕೂತಳು.

ತಲೆಯೆತ್ತಿ ಸೂರನ್ನು ದಿಟ್ಟಿಸಿದಳು. ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ಹಾಸಿದ್ದರು. ಕಲಾತ್ಮಕವಾಗಿ ಅದಕ್ಕೂ ಸಣ್ಣನೆಯ ಕುಸುರಿ ಕೆಲಸ. ಇಡೀ ನಡು ಮನೆಯ ಛಾವಣಿ ನಾಲ್ಕು ದೊಡ್ಡ ಕಂಬಗಳ ಮೇಲೆ ನಿಂತಂತಿತ್ತು. ಅಭಿಮಾನ, ಆವೇದನೆ, ಹರ್ಷದಿಂದ ತುಂಬಿಹೋಯಿತು ಅವಳ ಮನ.

ಈ ಕಂಬಗಳ ನಡುವೆ ಆಟವಾಡುತ್ತ ಬೆಳೆಯಬೇಕಿತ್ತು ತಾನು. ಆದರೆ ಎಂಥ ದುರಾದೃಷ್ಟ. ಕಳೆದುಕೊಂಡಿದ್ದು ಎಷ್ಟು ? ಮರಳಿ ಪಡೆಯಲು ಸಾಧ್ಯವೇ ? ಅಮ್ಮನ ಮುಂದೆ ಕೂತು ಕೇದಿಗೆ ಹೂವನ್ನು ಜಡೆಗಿಟ್ಟು ಹೆಣೆಸಿಕೊಳ್ಳುವ ಚಿತ್ರ ಕಲ್ಪಿಸಿಕೊಂಡಾಗ ಕಣ್ಣಲ್ಲಿ ನೀರೂರಿತು.

ಕಣ್ಣೊರೆಸಿಕೊಳ್ಳುತ್ತಿದ್ದಾಗ ಬಂದ ಶ್ರೀದೇವಿ "ಯಾಕಮ್ಮ ಕಣ್ಣಲ್ಲಿ ಏನಾದ್ರೂ ಬಿತ್ತಾ ?" ಪಾನಕದ ಲೋಟನ ಅಲ್ಲಿಟ್ಟು ಕೆನ್ನೆ ಮುಟ್ಟಲು ಬಂದಾಗ ಅದೃಷ್ಟವೆಂದು ಭಾವಿಸಿದಳು. ಕಣ್ಣು ತೆರೆದು, ರೆಪ್ಪೆ ಹಿಡಿದು ಊದಿದ ಶ್ರೀದೇವಿ ಸೆರಗಿನಿಂದ ಮೃದುವಾಗಿ ಕಣ್ಣೊರೆಸಿದಳು. ಯಾವುದೋ ಅಂತಃಕರಣದ ಸೆಳೆತ, ಅರ್ಥವಾಗದು ಈ ಕರುಳಿನ ಸಂಬಂಧದ ಮಿಡಿತ.

"ಈಗ ಎಲ್ಲಾ ಸರಿಹೋಯ್ತು ?" ಎಂದಳು ಬಿಡಿಬಿಡಿಯಾಗಿ ಪಾನಕ ಕೊಟ್ಟ ಶ್ರೀದೇವಿ ಕಂಬಕ್ಕೊರಗಿ ನೆಲದ ಮೇಲೆ ಕೂತಾಗ ತಾನು ಕೆಳಗೆ ಕೂತಳು. "ಅಯ್ಯೋ ನೀವು ಯಾಕೆ ಕೆಳಗೆ ಕೂತಿದ್ದು ? ನಂಗಂತು ಇದೇ ಅಭ್ಯಾಸ. ಬಹುಶಃ ಮದ್ವೆಯಾದ್ಮೇಲೆ ಬೇರೆ ಹೋಗಿದ್ರೆ ಅಲ್ಪ ಸ್ವಲ್ಪ ಬದಲಾವಣೆ ಬರ್ತಾ ಇತ್ತೇನೋ. ಅವ್ರು ಒದಿನ ಸಲುವಾಗಿ ನನ್ನ ಇಲ್ಲೇ ಬಿಟ್ರು. ಅಮ್ಮ ತೀರಿಕೊಂಡ್ರು. ಅಪ್ಪನ ಸಲುವಾಗಿ ಮನೆ ಸಲುವಾಗಿ ಇಲ್ಲೇ ಉಳ್ದುಕೊಂಡ್ವಿ. ಟ್ರಾನ್ಸ್‌ಫರ್ ಆದ್ರೂ ಅವ್ರೆ ಹೋಗ್ಬರೋರು, ಈಗ

ಸಿಟಿಯ ಕಾಲೇಜಿನಲ್ಲಿ ಪ್ರೊಫೆಸರ್ ಓಡಾಡಿಕೊಂಡಿದ್ದಾರೆ. ನಂಗಿಂತ ಅವ್ರಿಗೆ ಅಪ್ಪನ ಮೇಲೆ ಕಾಳಜಿ, ಗೌರವ'' ಹೇಳಿಕೊಂಡ ಶ್ರೀದೇವಿಯ ಮಾತುಗಳಲ್ಲಿ ಸಂತೃಪ್ತಭಾವನೆ ಇತ್ತು. ಗಂಡನ ಬಗೆಗಿನ ಗೌರವ ವ್ಯಕ್ತವಾಗಿತ್ತು ದನಿಯಲ್ಲಿ. 'ಇದೆಲ್ಲದರ ನಡುವೆ ಆದಿಕೇಶ ಅವನ ಸಂತಾನ ಮರೆಯಾಗಿಹೋಗಿತ್ತು'.

ಅಪ್ಪರಲ್ಲಿ ಎದ್ದುಕೂತರು ಕೃಷ್ಣಶಾಸ್ತ್ರಿಗಳು. ಮನೆತನದ ಬಗ್ಗೆ, ತಂದೆಯ ಬಗ್ಗೆ ಹೆಂಡತಿಯ ಬಗ್ಗೆ ಎಲ್ಲಕ್ಕಿಂತ ಮಿಗಿಲಾಗಿ ಮಗಳು, ಅಳಿಯನ ಬಗ್ಗೆ ಹೇಳಿಕೊಂಡರು.

ಗೋಡೆಯ ಮೇಲಿದ್ದ ಒಂದು ಹಳೆಯ ಫೋಟೋ ಅವಳನ್ನು ಸೆಳೆಯಿತು. ಹಳೆಯದಾದ ಕಟ್ಟು, ಕಪ್ಪು ಬಿಳಿ ವರ್ಣದ '6 × 8' ಸೈಜ್‌ನ ಚಿತ್ರ.

"ಆ ಚಿತ್ರನ ನೋಡ್ಲಾ ?'' ಎಂದಳು.

"ಬಹಳ ಕುತೂಹಲದ ಹುಡ್ಗೀ, ಕುತೂಹಲ ಹುಟ್ಟಿದಾಗ್ಲೇ ಸಂಶೋಧನೆಗೆ ದಾರಿ'' ಎಂದ ಶಾಸ್ತ್ರಿಗಳು ಆ ಫೋಟೋವನ್ನು ತರಿಸಿ ಪ್ರತಿಯೊಬ್ಬರ ಪರಿಚಯ ಮಾಡಿಕೊಟ್ಟರು. ಶಾಸ್ತ್ರಿಗಳು ಅವರ ಹೆಂಡತಿ, ಲಂಗದ ಹುಡುಗಿ ಶ್ರೀದೇವಿ. ಸತ್ತ ಅವಳಕ್ಕ ಭೂದೇವಿ ಅವಳ ಪಕ್ಕ ನಿಂತ ಆದಿಕೇಶ ಮತ್ತು ಕೂತ ಅವನ ತಾಯಿ, ತಂದೆ.

ಸಂತೋಷ, ದುಃಖದಿಂದ ತಬ್ಬಿಬ್ಬಾದಳು. ಜೀವಂತವಾಗಿ ತಂದೆಯನ್ನು ನೋಡುವ ಯೋಗವಿಲ್ಲದಿದ್ದರೂ, ಆ ವ್ಯಕ್ತಿಯನ್ನು ಫೋಟೋದಲ್ಲಿಯಾದರೂ ನೋಡುವ ಯೋಗ ಒದಗಿಬಂದಿತ್ತು. ಪಕ್ಕಕ್ಕೆ ತಿರುಗಿ ಕಣ್ಣೀರು ತೊಡೆದುಕೊಂಡಳು. ಇಷ್ಟೆಲ್ಲದಿದ್ದರಿಂದ ತಾನು ವಂಚಿತಳಾಗಲು ಕಾರಣರಾರು ? ಶಾಸ್ತ್ರಿಗಳ ಕಡೆ ನೋಡಿದಳು. ಕಪಟವಿಲ್ಲ ದೈವಾಂಶಸಂಭೂತ ವ್ಯಕ್ತಿ, ಭಾರತದ ಸಂಸ್ಕೃತಿಗೆ ಪ್ರತಿರೂಪವೆಂಬಂತೆ ಕಂಡರು. ಇನ್ನು ಶ್ರೀದೇವಿ, ನಿರ್ಮಲ ಮನಸ್ಸಿನ ದೇವರ ಮುಂದೆ ಹಚ್ಚಿಟ್ಟ ನಂದಾದೀಪದಂತೆ ಕಂಡರು.

ಅರ್ಧ ಗಂಟೆ ಕೂತು ಭಾರತದ ಸಂಸ್ಕೃತಿ, ಹಿಂದೂ ಧರ್ಮ ಮುಂತಾದ ವಿಷಯಗಳನ್ನು ಚರ್ಚಿಸಿ ಅವರಿಂದ ತಿಳಿದುಕೊಂಡದ್ದು ವಿಪುಲ.

"ನಿಮ್ಮನ್ನ ತಾತ ಅಂತ ಕೂಗ್ಲಾ ?'' ಕೇಳಿದಳು.

ತಟ್ಟನೇ ಅವರ ಮುಖದ ಮೇಲೆ ವಿಷಾದ ಮೂಡಿತು. "ಜೀವ್ನದಲ್ಲಿ

ಅದೊಂದೇ ದೊಡ್ಡ ಕೊರತೆಯಾಗಿದ್ದು. ಭೂದೇವಿ ಸತ್ಲು, ಶ್ರೀದೇವಿಗೆ ಮಕ್ಳೇ ಆಗಿಲ್ಲ. ಒಂದ್ಮಗುನ ದತ್ತು ಪಡಕೊಂಡಿದ್ದೀವಿ. ಅವ್ನು ಈಗ ಅವನ ತಂದೆ ಜೊತೆ ಹೈದರಾಬಾದ್‌ಗೆ ಹೋಗಿದ್ದಾನೆ. ಅಲ್ಲೊಂದು ಸೆಮಿನಾರ್‌ನಲ್ಲಿ ನನ್ನ ಅಳಿಯ ಪ್ರಬಂಧ ಮಂಡಿಸಲಿದ್ದಾನೆ. ಬಹಳ ಓದಿಕೊಂಡ ವ್ಯಕ್ತಿ. ಲಿಟರೇಚರ್ ಫೀಲ್ಡ್‌ನಲ್ಲಿ ಒಳ್ಳೆ ಹೆಸರಿದೆ'' ಎಂದರು. ಆ ಮನೆಗೆ ಸ್ವಂತ ಮಗುವಿಲ್ಲದ್ದು ದೊಡ್ಡ ಕೊರತೆ, ನೋವು. ಇದೊಂದು ವಿಪರ್ಯಾಸವೆನಿಸಿತು. ಇಲ್ಲಿ ಹುಟ್ಟಿ ಬೆಳೆಯಬೇಕಾದ ಮಗು ಅನಾಥಾಶ್ರಮ ಸೇರಿ ಅಲ್ಲಿಂದ ದೂರದ ಅಮೆರಿಕಾದಲ್ಲಿ ಅವಳ ಜೀವನ. ಎಲ್ಲೋ ಹುಟ್ಟಿದ ಒಂದು ಸಂತಾನ ಈ ಮನೆಗೆ ಬೆಳಕು.

ಫೋಟೋನೆ ನೋಡುತ್ತ ಕೂತಿದ್ದವಳು ತಲೆಯೆತ್ತಿ ಶ್ರೀದೇವಿಯ ಕಡೆ ನೋಡಿದಳು "ಅಮ್ಮ ಹಸಿವಾಗುತ್ತೆ.'' ಅರಿವಾಗದಂತೆ ಬಂದ ಮಾತಿಗೆ ಬೆಚ್ಚಿ ಸಮರ್ಥಿಸಿಕೊಂಡಳು. "ತಾತ, ನಮ್ಮುಂದೆ ಹೇಳಿದ್ದು ಓದಿದ್ದು ತೀರಾ ಎತ್ತರಕ್ಕೆ, ಬೆಳೆದ ಮಕ್ಳಿಗೂ ತಾಯಿ, ಅಜ್ಜಿ ಮುಂದೆ ಕೂಡಿಸಿಕೊಂಡು ಕೈ ತುತ್ತು ಹಾಕುತ್ತಾರಂತೆ, ಆ ಸಂದರ್ಭದ ನೆನಪೇ ಕಲ್ಪನೆಯೋ ಹಿತವಾಗುತ್ತೆ. ಇನ್ನು ಅನುಭವಕ್ಕೆ ಬಂದರೆ...'' ಕಣ್ಣುಗಳಲ್ಲಿ ಆಸೆ ತುಂಬಿಕೊಂಡು ಅವರತ್ತ ನೋಡಿದಾಗ ನಕ್ಕುಬಿಟ್ಟರು ಜೋರಾಗಿ. ಶುಭ್ರ ಮನಸ್ಸಿನ ಪರಿಶುದ್ಧ ನಗೆ. ಮಲ್ಲಿಗೆ ಅರಳಿದಂತಿತ್ತು. ಬೆಳದಿಂಗಳು ಚೆಲ್ಲಾಡಿದಂತಿತ್ತು ಮುಖದ ಮೇಲೆ. ವಯಸ್ಸಿನ ಪಕ್ವತೆಯ ಸುಕ್ಕುಗಳು ಕೂಡ ಮುಖದ ತೇಜಸ್ಸನ್ನು ಹೆಚ್ಚಿಸಿತ್ತು. ಯೌವನದ ಓಜಸ್ಸಿಗಿಂತ ಮುಪ್ಪಿನ ತೇಜಸ್ಸೇ ಹೆಚ್ಚು ಮುದವೆನಿಸಿತು.

"ಇದೊಂದು ಫೋಟೋ ತಗೊಂಡ್ಹೋಗ್ತಾ, ನಾನು ಬರೋ ಪುಸ್ತಕದಲ್ಲಿ ಅಚ್ಚಾಗುತ್ತೆ. ಅದರ ಪ್ರತಿಯೊಂದನ್ನು ನಿಮ್ಗೇ ಕಳಿಸ್ತೀನಿ'' ಎನ್ನುವ ವೇಳೆಗೆ ಯಾರೋ ಬಂದಿದ್ದರಿಂದ ಎದ್ದು ಹೋದರು ಶಾಸ್ತ್ರಿಗಳು.

ಮಾಡಿದ್ದ ಸಜ್ಜಿಗೆಯ ಪಾತ್ರೆಯನ್ನು ಮುಂದಿಟ್ಟುಕೊಂಡು ಶ್ರೀದೇವಿ ಒಂದೊಂದೇ ಹಿಡಚೇ ಮಾಡಿ ಅವಳ ಅಂಗೈಯಲ್ಲಿಟ್ಟಳು. 'ಆಗಿದ್ದು ಹೆಣ್ಣು ಮಗು, ಸತ್ತುಹೋಯ್ತು' ಸೊದರತ್ತೆ ಪ್ರಜ್ಞೆ ಬಂದ ಮೇಲೆ ಹೇಳಿ ಕಣ್ಣೀರೊರೆಸಿಕೊಂಡು ಇವಳಿಂದ ಭಾಷೆ ಪಡೆದುಕೊಂಡಿದ್ದಳು. 'ಈ ವಿಷ್ಯ ಇಲ್ಲಿಗೇ ಸತ್ತು ಹೋಯ್ತು. ಶಾಸ್ತ್ರಿಗಳ ಮಾನ, ಮರ್ಯಾದೆ ಪವಿತ್ರವಾಗಿರ್ಲಿ, ಬೇರೆಯವ್ರಿಗೆ ಆದರ್ಶವಾಗಿರ್ಲಿ.' ಆಗ ಬಾಯಿಗೆ ಬೀಗ ಹಾಕಿಕೊಂಡು ನೋವು ನುಂಗಿಕೊಂಡವಳು ಯಾರಿಗೂ ಹೇಳಿರಲಿಲ್ಲ.

ಅವಳು ಬೆಳೆದು ದೊಡ್ಡವಳಾಗಿದ್ದರೇ ಹೀಗೆ ಇರುತ್ತಿದ್ದಳು, ಇದೇ ರೂಪು.... ಆದಿಕೇಶವನನ್ನು ನೆನಪಿಸಿಕೊಳ್ಳಲು ಇಷ್ಟಪಡಲಿಲ್ಲ. ಮದುವೆಯ ನಂತರ ಅವಳ ಪರಿಪೂರ್ಣ ಬದುಕು ಗಂಡನಿಗೆ ಮೀಸಲಾಗಿತ್ತು. ಆ ಕ್ಷಣಗಳ ನೆನಪನ್ನು ಕೂಡ ಇಷ್ಟಪಡದಂಥ ಸಾಧ್ವಿ ಆದರೆ ಅವು ಬೆನ್ನಟ್ಟದೇ ಬಿಟ್ಟೀತೆ ?

ಅಂಗೈಯಲ್ಲಿಟ್ಟ ಸಜ್ಜಿಗೆಯ ಉಂಡೆಗಳನ್ನು ಹರ್ಷದಿಂದ ಗಬಗಬ ತಿಂದಳು. ಈ ಅವಕಾಶ, ಸಂದರ್ಭ ಜೀವನದಲ್ಲಿ ಮೊದಲ ಮತ್ತು ಕೊನೆಯ ಸಲ ಮತ್ತೆಂದು ಶ್ರೀದೇವಿಯವರ ವೈಯಕ್ತಿಕ ಬದುಕಿನಲ್ಲಿ ಪ್ರವೇಶಿಸಲಾರಳು.

ಹೊರಡುವ ಮುನ್ನ ಅನುಮಾನಿಸುತ್ತಲೇ ಶ್ರೀದೇವಿಯ ಕೈಯಲ್ಲಿಟ್ಟು ಬಾಗಿಲವರೆಗೂ ಹೋದವಳು ಒಮ್ಮೆ ಹಿಂದಿರುಗಿ ನೋಡಿದಳು ಇಡೀ ಮನೆಯನ್ನು ತನ್ನ ಮನದಲ್ಲಿ ತುಂಬಿಕೊಳ್ಳುವಂತೆ. ಬಂದ ಕೃಷ್ಣಶಾಸ್ತ್ರಿಗಳ ಎರಡು ಪಾದಗಳನ್ನು ಮುಟ್ಟಿ ನಮಸ್ಕರಿಸಿದಾಗ ತುಂಬು ಅಂತಃಕರಣದಿಂದ ಮೇಲೆತ್ತಿ ಆಶೀರ್ವದಿಸಿದರು.

"ಅಮೆರಿಕಾ ದೊಡ್ಡ ದೇಶ, ಶ್ರೀಮಂತ ರಾಷ್ಟ್ರ. ತಂತ್ರಜ್ಞಾನದಲ್ಲಿ ಮುಂದುವರಿದ ನಾಡು. ಆದ್ರೂ 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಅಂತ. ಈ ಮಣ್ಣು ಅತ್ಯಂತ ಪವಿತ್ರ. ಯಾಕೆ ಡಾಲರ್‌ನ ವ್ಯಾಮೋಹ ? ನಿಮ್ಮ ಹುಟ್ಟು ಇಲ್ಲಿ. ಇದು ಸ್ವರ್ಗಕ್ಕಿಂತ ಹೆಚ್ಚು. ಮರ್ಯಾದೆ ಪುರುಷ ಶ್ರೀರಾಮಚಂದ್ರ ಕೂಡ ವಿಮಾನದಲ್ಲಿ ಅಯೋಧ್ಯೆಗೆ ಹಿಂದಿರುಗಿದಾಗ 'ಅಯೋಧ್ಯಾಂಕುರು ವೈದೇಹಿ ಪ್ರಣಾಮಂ ಪುನರಾಗತ (ಸೀತೆ ! ಅಯೋಧ್ಯೆಗೆ ನಮಸ್ಕಾರ ಮಾಡು, ಹಿಂದಿರುಗಿ ಬಂದಿರುವೆ) ಎನ್ನುತ್ತಾನೆ. ತನ್ನ ಮಾತೃಭೂಮಿಗೆ ವಂದಿಸುತ್ತ ಲಕ್ಷ್ಮಣನಿಗೆ ಹೇಳುವ ಮಾಂತು ಅತ್ಯಮೂಲ್ಯ.

ಅಪಿ ಸ್ವರ್ಣಮಯೀ ಲಂಕಾ ನ. ಮೇ ಲಕ್ಷ್ಮಣ ರೋಚಕ
ಜನನೀ ಜನ್ಮಭೂಮಿಶ್ಚ ಸ್ವರ್ಗದಪಿ ಗರೀಯಸಿ ॥

(ಲಕ್ಷ್ಮಣ ! ಲಂಕೆಯು ಬಂಗಾರದಿಂದಲೇ ನಿರ್ಮಿತವಾಗಿದ್ದರೂ ನನಗದು ರುಚಿಸದು. ತಾಯಿಯೂ ತಾಯ್ನೆಲವೂ ಸ್ವರ್ಗಕ್ಕಿಂತ ಹಿರಿದು.)

ಅವರ ಮಾತುಗಳನ್ನು ಪೂರ್ತಿ ಕೇಳಲಾರದೆ ಕಣ್ಮುಚ್ಚಿ ಹೊರಗೆ ಬಂದವಳು ಬೃಂದಾವನದಲ್ಲಿನ, ಹಿಡಿ ಮಣ್ಣನ್ನು ತೆಗೆದುಕೊಂಡು ಕಣ್ಣಿಗೊತ್ತಿಕೊಂಡು ಕರ್ಚಿಫ್‌ನಲ್ಲಿ ಕಟ್ಟಿಕೊಂಡು

ಪರ್ಸ್‌ನಲ್ಲಿಟ್ಟುಕೊಂಡಳು. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪೀ ಗರೀಯಸಿ' ಎಂಥ ಮಾತು. ಶ್ರೀಮಂತ ಅಮೆರಿಕಾಗಿಂತ ಹಿತವೆನಿಸಿತು. ಇಲ್ಲೇ ಇದ್ದುಬಿಡುವ ಬಯಕೆ. ಆದರೆ ಅಂಥ ಒಲವನ್ನೊತ್ತು ಭಾರತಕ್ಕೆ ಬಂದಿರಲಿಲ್ಲ. ತಾನು ಇಲ್ಲಿದ್ದರೇ ಬಹುಶಃ ಭವಿಷ್ಯದಲ್ಲಿ ಈ ಮನೆ ನೆಮ್ಮದಿ ಹಾಳಾಗಬಹುದು. ಇಲ್ಲಿನ ಆಕರ್ಷಣೆಯಿಂದ ತಾನು ಪದೇ ಪದೇ ಬರಬಹುದು. ಕ್ಲಿಂಟನ್ ವ್ಯಕ್ತಿತ್ವ ಕಣ್ಮುಂದೆ ಬಂದಾಗ ಆ ವಿಷಯವನ್ನು ಪಕ್ಕಕ್ಕೆ ತಳ್ಳಿದಳು.

ಊರಾಚೆ ಇದ್ದ ಒಂದು ಸಣ್ಣ ದೇವಸ್ಥಾನದ ಮುಂದೆ ಟ್ಯಾಕ್ಸಿ ನಿಲ್ಲಿಸುವಂತೆ ಹೇಳಿದವಳು ಇಳಿದಳು. ತಾನು ಮಾಡಿದ್ದು ತಪ್ಪೋ ಸರಿಯೋ ಕ್ಷೋಭೆಗೆ ಸಿಲುಕಿಸಬಾರದಾಗಿತ್ತೆಂದುಕೊಂಡರೂ ಒಂದೇ ಒಂದು ಸಲ ಹೆತ್ತ ತಾಯಿಯ ಅಪ್ಪುಗೆಯಲ್ಲಿ ನಲಿದು ಮಮತೆಯನ್ನು ಆಸ್ವಾದಿಸುವ ಕ್ಷಣ ಅವಳ ಜೀವನದಲ್ಲಿ ತೀರಾ ಅಮೂಲ್ಯ. ಅಷ್ಟು ಸಾಕಿತ್ತು ಉಳಿದ ಜೀವನಕ್ಕೆ.

ಜಗುಲಿಯ ಮೇಲೆ ಕೂತು ಆಕಾಶದತ್ತ ನೋಡಿದಳು ಮುಸ್ಸಂಜೆಯ ಹೊತ್ತು. ಇನ್ನು ಸ್ವಲ್ಪ ಹೊತ್ತಿನಲ್ಲಿ ಕತ್ತಲಿನ ಚಾದರ ಎಲ್ಲೆಡೆ ಹರಡಬಹುದು. 'ಅರ್ಧ ಗಂಟೆಯಲ್ಲಿ ಬಂದರೇ ನಿಮ್ಮ ಸೋದರತ್ತೆ ತುಳಜಾಬಾಯಿಗೆ ಕೊಟ್ಟ ನಿಮ್ಮ ಮಡಲಿನ ಕುಡಿಯನ್ನು ನೋಡಬಹುದು' ಎಂದು ಮಾತ್ರ ಬರೆದಿದ್ದಳು ಆ ಚೀಟಿಯಲ್ಲಿ. ಇಪ್ಪತ್ತು ನಿಮಿಷಗಳು ಸರಾಗವಾಗಿ ಕಳೆದರೂ, ನಂತರದ ಕ್ಷಣಗಳು ಅವಳನ್ನು ಚಿತ್ತಕ್ಷೋಭೆಗೊಳಿಸಿಬಿಟ್ಟವು. ಮೂವತ್ತು ನಿಮಿಷಗಳಲ್ಲಿ ಇಪ್ಪತ್ತೆಂಟು ನಿಮಿಷಗಳು ಕಳೆದುಹೋಗಿದ್ದವು. ಬರೀ ಎರಡೇ ನಿಮಿಷ, ತನ್ನದು ದುರಾಸೆಯಾಯಿತೆಂದುಕೊಂಡು ಜಗುಲಿಯಿಂದ ಇಳಿಯುವ ವೇಳೆಗೆ ಮೈತುಂಬ ಸೆರಗೊದ್ದು ಕಣ್ಣಲ್ಲಿ ಕಂಬನಿ ತುಂಬಿದ ಶ್ರೀದೇವಿ.

"ಅಮ್ಮ...." ಹೋಗಿ ಅಪ್ಪಿಕೊಂಡುಬಿಟ್ಟಳು.

ಶ್ರೀದೇವಿ ಕಣ್ಣೀರು ಸುರಿಸುತ್ತ ಮುಖದ ತುಂಬ ಮುತ್ತಿನ ಮಳೆಗಳೆದರು, ಬಹುಶಃ ತನ್ನ ಮಡಿಲಿನಲ್ಲಿ ಅವಳನ್ನು ಹುದುಗಿಸಿಕೊಳ್ಳುವುದು ಸಾಧ್ಯವಿದ್ದಿದ್ದರೇ ಬಹುಶಃ ಆ ತಾಯಿ ತನ್ನ ಪ್ರಾಣ ಕೊಟ್ಟಾದರೂ ಅದಕ್ಕೆ ಸಿದ್ಧವಾಗುತ್ತಿದ್ದಳೇನೋ.

ಆದರೆ ಯಾವುದೇ ಅನಾಹುತವಾಗದಂತೆ ಮೊದಲು

ಚೇತರಿಸಿಕೊಂಡು ತಾನೇ ಆಕೆಯ ಕಣ್ಣೀರು ತೊಡೆದು ಸಂತೈಸಿದಳು. ಧೈರ್ಯ ಹೇಳಿದಳು. ನ್ಯೂಯಾರ್ಕ್ ತನ್ನ ತಾಯಿತಂದೆಯರ ಬಗ್ಗೆ ಬಡಬಡನೆ ಹೇಳಿದಳು.

ಶ್ರೀದೇವಿ ಬಾಯಿಂದ ಮಾತುಗಳೇ ಹೊರಡಲಿಲ್ಲ. ತುಂಬು ಅಪರಾಧ ಪ್ರಜ್ಞೆ ಒಂದು ಕಡೆಯಾದರೇ ತಂದೆ, ಮನೆತನ, ಪತಿ ಅರ್ಥವಾಗದ ಮನಸ್ಥಿತಿ.

ಅದನ್ನ ಸರಿಯಾಗಿ ಅರ್ಥ ಮಾಡಿಕೊಂಡ ಸಖೀ 'ಅಮ್ಮ ಇಷ್ಟು ಸಾಕು ! ಶ್ರೀದೇವಿಯವ್ರಿಗೆ. ಮಕ್ಳೇ ಆಗ್ಲಿಲ್ಲ. ದತ್ತು ಸಂತಾನವೊಂದೆ. ಈಗ ನೋಡ್ತಾ ಇರೋದೆಲ್ಲ ಕನಸು ಅಷ್ಟೆ. ಇಷ್ಟರಿಂದ ಬದ್ಕು, ಭವಿಷ್ಯ ಎಲ್ಲಾ ಭದ್ರ. ತಾತ ಅಂಥವ್ರ ಕಡೆಯ ದಿನಗಳು ನೆಮ್ದಿಯಾಗಿರ್ಬೇಕು. ಮತ್ತೇನು ನಡದೇ ಇಲ್ಲ, ನಡಿಲೇಬಾರ್ದು'' ದೂರದೃಷ್ಟಿಯಿಂದ ತಾಯಿಯನ್ನು ಸಂತೈಸಿದಳು.

ಅಲ್ಲಿ ಗಿಡಗಳಲ್ಲಿ ಅರಳಿದ್ದ ಹೂಗಳನ್ನು ತಂದು ಆಕೆಯ ಪಾದಗಳ ಮೇಲಿಟ್ಟು ನಮಸ್ಕರಿಸಿದಳು.

''ಅಮ್ಮ ನೀನಿನ್ನು ಹೋಗು. ನನ್ನ ಬದ್ಕಿನ ಆಕಾಂಕ್ಷೆ ಪೂರ್ತಿಯಾಯ್ತು. ಲೋಕಕ್ಕೆ ಗೊತ್ತಿಲ್ಲದಿದ್ರೂ ನಾನು ಶ್ರೀದೇವಿ, ಆದಿಕೇಶವರ ಪವಿತ್ರ ಸಂತಾನ, ಶಾಪದ ದೃಷ್ಟಿಯಲ್ಲ, ಕೃಷ್ಣಶಾಸ್ತ್ರಿಗಳ ಮೊಮ್ಮಗ್ಳು ಇದು ನನ್ನೊಬ್ಬಳಿಗೆ ಗೊತ್ತು ಇಷ್ಟು ಸಾಕು. ಮತ್ತೆಂದೂ ಭಾರತಕ್ಕೆ ಬರುವ ಇಚ್ಛೆಯಾಗ್ಲೀ, ನಿಮ್ಮನ್ನ ನೋಡಿ ಕಾವ್ಯಮಯವಾಗಿರೋ ನಿಮ್ಮ ದಾಂಪತ್ಯ ಬದ್ಕಿನಲ್ಲಿ ಬಿರುಗಾಳಿ ಎಬ್ಬಿಸೋಕಾಗ್ಲೀ ನಂಗಿಷ್ಟವಿಲ್ಲ'' ಸ್ವರ ಕಂಪನವಿಲ್ಲದೆ ಸ್ಪಷ್ಟವಾಗಿ ಹೇಳಿದಳು.

ಶ್ರೀದೇವಿ ಏನು ಹೇಳುವ ಸ್ಥಿತಿಯಲ್ಲಿರಲಿಲ್ಲ. ಕತ್ತಿನಲ್ಲಿದ್ದ ಮೂರೆಳೆಯ ಸರವನ್ನು ತೆಗೆದು ಅವಳ ಕುತ್ತಿಗೆಗೆ ಹಾಕಿ ಮಾತನಾಡಬಾರದೆಂದು ತುಟಿಯ ಮೇಲೆ ಬೆರಳಿಟ್ಟು ಹಣೆಗೆ ಚುಂಬಿಸಿ ಸರಸರ ಹೊರಟುಬಿಟ್ಟರು ಮೈತುಂಬ ಸೆರಗೊದ್ದು.

ಟ್ಯಾಕ್ಸಿ ಲಕ್ಷ್ಮೀಪುರದ ಹೊರವಲಯ ದಾಟುವ ವೇಳೆಗೆ ಪೂರ್ತಿ ಕತ್ತಲಾಗಿತ್ತು.

ದೆಹಲಿಗೆ ಹೋಗಿ ಅಲ್ಲಿಂದ ಅಮೆರಿಕನ್ ಪ್ಯಾನ್ ವಿಮಾನದಲ್ಲಿ ನ್ಯೂಯಾರ್ಕ್‌ಗೆ ಹೋಗುವ ಟಿಕೆಟ್ ಬುಕ್ ಆಗಿತ್ತು. ಲಗೇಜ್ ಪ್ಯಾಕ್ ಆಗಿತ್ತು. ಹೋಟೆಲ್ ಬಿಲ್ ಸೆಟಲ್ ಮಾಡಿಯೇ ಅನಿಕೇತ್ ಇವಳ ರೂಮಿಗೆ ಬಂದಿದ್ದು.

"ಹಲೋ ಸಖೀ, ಭಾರತದಿಂದ ಹಾರಿದ ಕೂಡ್ಲೇ ರೂತ್ ಕ್ಲಿಂಟನ್..." ಎಂದು ಉಸುರುತ್ತ ಕೂತ ಅನಿಕೇತನ್‌ನ ಮುಖದಲ್ಲಿ ದಟ್ಟವಾದ ನೋವಿತ್ತು. ಅವಳೆದೆ ಕೂಡ ಭಾರವಾಯಿತು. "ಹಾಗೇನಿಲ್ಲ, ನಂಗೆ ಆ ಹೆಸರು ಇಷ್ಟ. ಆ ಭಾರತೀಯ ಹೆಸರು ನನ್ನದಾಗೇ ಇರುತ್ತೆ" ಎಂದಳು.

ಕೂತವನು ಎದ್ದ. ಹೋಟೆಲ್ ಸರ್ವೆಂಟ್ ಬಂದು ಲಗೇಜ್ ಒಯ್ದ. ಆಡಾಡಿದ, ಏನೋ ಹೇಳಬೇಕೆಂಬ ತಳಮಳ. ಆದರೆ ಹೇಳಲಾರದ ಸ್ಥಿರ ಚಡಪಡಿಕೆಯ ಸ್ಥಿತಿಯಲ್ಲೂ ಅವನ ಗಮನ ಸೆಳೆದಿದ್ದು ನಾಲ್ಕು ಸ್ಯಾರಿ ಪ್ಯಾಕೆಟ್‌ಗಳು.

ಅಷ್ಟರಲ್ಲಿ ಕಾಲಿಂಗ್ ಬೆಲ್ ಸದ್ದು ಆಯಿತು. ಸಖಿ ಹೋಗಿ ಬಾಗಿಲು ಓಪನ್ ಮಾಡಿ "ಬಾ ನವನೀತ್, ನಿನ್ನಿಂದ ಒಂದಿಷ್ಟು ಹೆಲ್ಪ್ ಆಗೋದಿದೆ" ಎಂದವಳು ಒಂದು ಸೀರೆಯ ಪ್ಯಾಕೆಟ್‌ನ ಅವನ ಕೈಗೆ ಕೊಟ್ಟಳು. "ಇದು ನಿನ್ನಮ್ಮನಿಗೆ ಈ ನ್ಯೂಯಾರ್ಕ್ ಹುಡ್ಗಿಯ ಉಡುಗೊರೆ ನಮಸ್ಕಾರಗಳೊಂದಿಗೆ. ಆಕೆ ಕಳ್ದುಕೊಂಡ ಮಗ್ಳನ ನನ್ನಲ್ಲಿ ಸ್ವಲ್ಪ ಸಮಯವಾದ್ರು ನೋಡಿದ್ದಾಳೆ. ಆಗ ನಂಗೆ ಸಿಕ್ಕ ತಾಯಿ ಪ್ರೀತಿ, ಅಗಾಧ. ಈ ಮಗ್ಳ ಪುಟ್ಟ ಕಾಣಿಕೆ ಅನ್ನು" ಹೇಳಿದಳು. ಅವನು ದಿಗ್ಭ್ರಾಂತನಾದ ಮಾತುಗಳಿಗಾಗಿ ತಡಕಾಡಿದ. "ಏನು ಹೇಳೋದ್ಬೇಡ, ಇದೊಂದು ಹೆಲ್ಪ್ ಮಾಡು ಸಾಕು" ಅವನು ಕಣ್ಣೀರು ತೊಡೆದುಕೊಂಡು ಹೊರಗೆ ಹೋಗಿಬಿಟ್ಟ.

ಮೂರು ಗಂಟೆಯ ಸಮಯವಿತ್ತು ಫ್ಲೈಟ್‌ಗೆ. ಪದೇ ಪದೇ ವಾಚ್ ನೋಡುತ್ತಿದ್ದ ಸಖೀ "ಅನಿಕೇತ್, ಸಣ್ಣ ರಿಕ್ವೆಸ್ಟ್, ಇದ್ನ ನಿಮ್ಮ ತಾಯಿಗೆ ಕೊಡಿ. ಆಕೆ ಹೂ ಕಟ್ಟುತ್ತ ಕೂತಿದ್ದಾಗ ನನ್ನ ತಾಯಿಯೇ ಎನ್ನುವಂತೆ ಸಂತೋಷಿಸಿದ್ದೀನಿ, ಪ್ಲೀಸ್" ದೈನ್ಯತೆಯಿಂದ ಕೇಳಿಕೊಂಡಳು. ನೆಲದಲ್ಲಿದ್ದ ನೋಟವನ್ನು ಮೇಲೆತ್ತಿದ್ದ. ಪ್ರೀತಿಯ ಮಕರಂದ ಪುಷ್ಪಗಳ ಸುರಿಮಳೆ. ಹತ್ತಿಕ್ಕದ ಆವೇದನೆ "ಸಖೀ..." ಎಂದು ಬಾಚಿ ತಬ್ಬಿಕೊಂಡು ತನ್ನ

ಹೃದಯದಲ್ಲಿ ಹುದುಗಿಸಿಕೊಂಡ "ಐ ಲವ್ ಯು, ಐ ಲವ್ ಯು ಸಖೀ.... ಮೈ ಪ್ರಿಯ ಸಖೀ, ಪ್ರೀತಿಗೆ ಅಗತ್ಯವಾದದ್ದು ದೇಹಗಳ ಮಿಲನವಲ್ಲ, ಆತ್ಮಗಳ ಬಂಧನ" ಅವನ ಕಣ್ಣಿಂದ ಹರಿದ ಭಾವೋದ್ವೇಗದ ಹನಿಗಳು ನಿಧಾನವಾಗಿ ಅವಳ ಕೆನ್ನೆಯ ಮೇಲಕ್ಕೆ ಇಳಿದು ಅವಳ ಕಣ್ಣೀರ ಕೋಡಿಯೊಂದಿಗೆ ಒಂದಾಯಿತು.

ಫೋನ್ ರಿಂಗಾದಾಗಲೇ ಬಾಹ್ಯಲೋಕಕ್ಕೆ ಹೊರಳಿದ್ದು ರಿಸೆಪ್ಷನಿಸ್ಟ್ ಶಾಂತಿ "ಮೇಡಮ್, ಲಕ್ಷ್ಮಿ ಅನ್ನೋರು ಬಂದಿದ್ದಾರೆ, ರೂಮಿಗೆ ಕಳಿಸ್ಲಾ?" ಕೇಳಿದಳು. "ಕಳ್ಸೀ" ಎಂದು ಫೋನಿಟ್ಟಳು. ಅವಳಿಗಾಗಿ ಕಾಯುತ್ತಿದ್ದಳು ಕೂಡ.

ಹೂವಿನ ಬೊಕ್ಕೆ ಹಿಡಿದು ಬಂದ ಲಕ್ಷ್ಮೀ ಮುದುಡಿ ಮುದ್ದೆಯಾಗಿ "ಹ್ಯಾಪಿ ಜರ್ನಿ" ಕೋರಿದಳು.

"ಥ್ಯಾಂಕ್ಯೂ ಲಕ್ಷ್ಮಿ ಬಹುಶಃ ನಾನು ನಿನ್ನ ಮದ್ವೆಗೆ ಬರೋಕ್ಕಾಗೋಲ್ಲ. ಅದ್ಕೇ ಈಗ್ಲೇ ಪ್ರಸೆಂಟೇಷನ್ ಕೊಡ್ತಾ ಇದ್ದೀನಿ" ಸೀರೆಯ ಪ್ಯಾಕೆಟ್‌ನ ಕೈಯಲ್ಲಿಟ್ಟಾಗ ಅತ್ತುಬಿಟ್ಟಳು. ತಟ್ಟನೆ ನೆನಪಿಸಿಕೊಂಡವಳಂತೆ "ಸಾಕಮ್ಮನಿಗೆ ಕೊಡು, ನನ್ನ ಪರವಾಗಿ" ಇನ್ನೊಂದು ಪ್ಯಾಕೆಟ್‌ನ ಕೂಡ ಅವಳಿಗೆ ಕೊಟ್ಟಳು "ನನೆಪಿರ್ಲೀ......" ಅಷ್ಟೇ ಹೇಳಿದ್ದು.

ಫ್ಲೈಟ್‌ಗೆ ಹೊತ್ತಾಗುತ್ತಿತ್ತು. ಲಕ್ಷ್ಮಿ ಹೊರಟ ಮೇಲೆ ಅನ್ಯಮನಸ್ಕತೆಯಿಂದ ಕೂತಿದ್ದ ಅನಿಕೇತ್ ಒಂದು ಸಣ್ಣ ವೆಲ್‌ವೆಟ್ ಕೇಸ್ ತೆಗೆದು ಅವಳ ಮುಂದಿಡಿದ.... ಬೆಳ್ಳಿಯ ಕಾಲು ಚೈನ್‌ಗಳು.

"ಇದು ನನ್ನ ಪ್ರೆಸೆಂಟೇಷನ್" ಅವಳ ಕಾಲುಗಳಿಗೆ ತಾನೇ ಅಲಂಕರಿಸಿದ "ಈ ಅನಿಕೇತನ್‌ನ ನೆನಪು ಸ್ವಲ್ಪವಾದ್ರೂ ಇರಲೀ ಅನ್ನೋ ಸ್ವಾರ್ಥ" ಎಂದಾಗ ಅವನ ಮಡಿಲಲ್ಲಿ ಮುಖವಿಟ್ಟು ಬಿಕ್ಕಿದಳು. ಪ್ರೀತಿಯೋ, ಪ್ರೇಮವೋ ಆಕರ್ಷಣೆಯೋ ಅನಿಕೇತ್ ತನ್ನ ಸುಸ್ವಭಾವದಿಂದ ಅವಳ ಹೃದಯವನ್ನು ಗೆದ್ದಿದ್ದ.

ಟೆಡ್ಡಿಯ ಫೋನ್ ಕನೆಕ್ಟ್ ಮಾಡಿದ್ದಳು ರಿಸೆಪ್ಷನಿಸ್ಟ್. "ವಿಮಾನದ ವೇಳೆ ಸಮೀಪಿಸುತಿರ್ಬೇಕು. ಯಾವ್ದೇ ಕಾರಣಕ್ಕೆ ಪ್ರಯಾಣ ಮುಂದೂಡ್ಬಾರ್ದೂಂತ ಮಿಸ್ಟರ್ ಕ್ಲಿಂಟನ್ ಹೇಳಿದ್ದಾರೆ. ನನ್ನ ಆರ್ಡರ್ ಕೂಡ ಸೇರಿಸಿದ. ಅವನ ಆಂಗ್ಲ ಅಮೆರಿಕನ್ ಶೈಲಿಯ ಇಂಗ್ಲೀಷ್‌ನಲ್ಲಿದ್ದ ಆತ್ಮೀಯತೆ ತೀರಾ ಹಿತವಾಗಿತ್ತು.

ರೂಮಿನಿಂದ ಹೊರಬರುವ ಮುನ್ನ ಅನಿಕೇತ್ ಅವಳ ಕೈ ಹಿಡಿದು ತುಟಿಗೊತ್ತಿಕೊಂಡ "ಹತ್ತಿರವಿರೋ ಹೆಣ್ಣು ಪ್ರೀತಿಗೆ ಅರ್ಹಳಲ್ಲ, ಕೈಹಿಡಿದವರೆಲ್ಲ ಸಂಗಾತಿಗಳಾಗೋಲ್ಲ. ಇದೊಂದು ದುರಂತ. ನನ್ನ ಪ್ರಿಯ ಸಖಿಯ ನೆನಪು ಜೀವನದುದ್ದಕ್ಕೂ ಇರುತ್ತೆ" ಎಂದ ಆರ್ದ್ರತೆ ದನಿಯಲ್ಲಿ ಹನಿಗಣ್ಣಾಗಿ. ತುಟಿ ಕಚ್ಚಿ ಭಾವೋದ್ವೇಗ ನುಂಗಿದಳು.

ಹೊರಗೆ ಬಂದಾಗ ನವನೀತ್ ನಿಂತಿದ್ದ ಪೆಚ್ಚು ಮುಖದಿಂದ. ಎಷ್ಟೋ ಜನ ಪ್ರಯಾಣಿಕರನ್ನು ಒಯ್ದಿದ್ದ ಡ್ರೈವರ್ ಹೃದಯದಲ್ಲಿ ಆತ್ಮೀಯತೆಯ ಗಿಡ ನೆಟ್ಟು ಬೆಳೆಸಿದ್ದಳು.

"ಮೇಡಮ್, ಹೊತ್ತಾಯ್ತು" ಎಂದ ಎಂದಿನ ನಮ್ರತೆಯಿಂದಲೇ. ಅನಿಕೇತ್ ಅಡ್ಡ ಬಂದ. "ನಾನು ಏರ್‌ಪೋರ್ಟ್ ಮುಟ್ಟಿಸ್ತೀನಿ" ಜೀಪಿನತ್ತ ಬಂದಾಗ ವಾಸುದೇವಯ್ಯ ಜಾರುವ ಕಚ್ಚೆಯನ್ನು ಸಿಕ್ಕಿಸಿಕೊಳ್ಳುತ್ತ ಬಂದವನು "ಅಮ್ಮಾವ್ರು ಬೇಗ್ಬಾಂದ್ರು, ಚಿಕ್ಕಮ್ಮಾ ತುಂಬ ಹೆದ್ರಿಕೊಂಡಿದ್ದಾರೆ."

"ಅನಿಕೇತ್ ಬೇಡ, ನೀವು ಎಸ್ಟೇಟ್‌ಗೆ ಹೋಗಿ ನಾನು ನವನೀತ್ ಟ್ಯಾಕ್ಸಿಯಲ್ಲಿ ಹೋಗ್ತೀನಿ. ಯಾವ್ದೇ ಅನಾಹುತ ಬೇಡ" ಅವನ ಕೈ ಹಿಡಿದು ಹೇಳಿದಳು. ತುಟಿ ಕಚ್ಚಿ 'ಹ್ಞೂ' ಗುಟ್ಟಿದವನ ಕಣ್ಣುಗಳಲ್ಲಿ ತೆಳುವಾದ ಪೊರೆ ಇತ್ತು.

"ಪ್ರಿಯ ಸಖೀ, ಆಕಸ್ಮಾತ್ ಮತ್ತೊಮ್ಮೆ ನೀನೇನಾದ್ರೂ ಭಾರತಕ್ಕೆ ಬಂದ್ರೆ ಈ ಅನಿಕೇತ್ ಹಿಮಾಲಯದ ತಪ್ಪಲಲ್ಲಿ ಸನ್ಯಾಸಿಗಳ ನುಡ್ವೇ ಕಾವಿ ವಸ್ತ್ರಧಾರಿಯಾಗಿ ಆರಾಮಾಗಿರ್ತಾನೆ, ಯಾವ ತಂಟೆ, ತಾಪತ್ರಯ ಇಲ್ದೇ. ಆಗ ಅದು ನನ್ನ ಸ್ವಂತ ಬದ್ಕು ಆಗುತ್ತೆ. ಪಕ್ಷಿಯ ಹಾಗೆ, ಗಿಡ, ಮರದ ಪ್ರಕೃತಿಯ ನಡುವಿನ ಜೀವನ ಬಹು ರಮ್ಯ" ನಗುತ್ತಾ ಹೇಳಿದ, ಅದರಲ್ಲಿನ ನೋವು ಅವಳಿಗೆ ಅರ್ಥವಾಯಿತು.

ಜೀಪಿನಲ್ಲಿ ಕೂತವನು ಉಳಿದ ಅವಳ ಕೈಯಲ್ಲಿನ ಸೀರೆಯ ಪ್ಯಾಕೆಟ್‌ನ ಯಾರಿಗೆಂದು ಪ್ರಶ್ನಾರ್ಥಕವಾಗಿ ನೋಡಿದಾಗ ನಸುನಕ್ಕಳು.

ವಾಸುದೇವಯ್ಯನನ್ನು ಕೂಡಿಸಿಕೊಂಡ ಜೀಪು ಮುಂದಕ್ಕೆ ಹೊರಟನಂತರವೇ ಟ್ಯಾಕ್ಸಿ ಹತ್ತಿದ್ದು. ಏರ್‌ಪೋರ್ಟ್‌ನಲ್ಲಿ ಟ್ಯಾಕ್ಸಿ ಇಳಿಯುವಾಗ ಸೀರೆಯ ಪ್ಯಾಕೆಟ್‌ನ ನವನೀತ್‌ನ ವಶಕ್ಕೆ ಕೊಟ್ಟಳು.

"ನವನೀತ್, ಈ ಪ್ಯಾಕೆಟ್‌ನ ಲಕ್ಷ್ಮೀಪುರದ ಕೃಷ್ಣಶಾಸ್ತ್ರಿಗಳ ಮಗಳು

ಶ್ರೀದೇವಿಯಮ್ಮನಿಗೆ ಕೊಡು, ತಾತನ ಎದುರು. ಈ ನ್ಯೂಯಾರ್ಕ್ ಹುಡ್ಗಿಯ ಜ್ಞಾಪಕಾರ್ಥವಾಗಿ ಇಟ್ಕೊಬೇಕೂಂತ ಹೇಳು. ತುಂಬ ಒಳ್ಳೆ ಜನ. ದೇಗುಲವನ್ನೇ ಹೊಕ್ಕು ಬಂದಂತಾಯಿತು." ವೈಮರೆತಂತೆ ಹೇಳಿದಳು.

ಲಗೇಜ್‌ನೊಂದಿಗೆ ಒಂದು ಗುಲಾಬಿ ಬೊಕ್ಕೆಯನ್ನು ಕೊಟ್ಟ. ಎಸ್ಟೇಟ್‌ನ ಯಜಮಾನ್ರು ಇಟ್ಕರಬೇಕು 'ಪ್ರಿಯ ಸಖೀಗೆ' ಅನಿಕೇತ್ ಎನ್ನುವ ವಿಸಿಟಿಂಗ್ ಕಾರ್ಡು ಇತ್ತು ಅದರೊಂದಿಗೆ.